ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ದೀಪಗಳ ಸಾಲು,
ಹೊಸ ಬಟ್ಟೆ,
ಹೊಸ ಆಭರಣ
ಇವೆಲ್ಲಕ್ಕೂ ಭಿನ್ನವಾಗಿ
ನೆಲದ ಸಂಸ್ಕೃತಿಯ
ದೀವಳಿಗೆ ಇದೆ



ಕರ್ನಾಟಕ 50 25 ವರ್ಷಗಳ ಮುನ್ನೋಟ 11
ಸಮಸ್ಯೆಗಳು ಗೌಣ, ಜಾತಿಯೇ ಪ್ರಧಾನ 7
ಬರ ಪರಿಹಾರ: ಫ್ರೂಟ್ಸ್ ದತ್ತಾಂಶ ಆಧಾರ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
64,904 ▲	19,425 ▲	₹62,300 (ಬೆಂಗಳೂರು) ▲	₹72,900 (ಬೆಂಗಳೂರು) ▲	83.28 ▲

ಹೊಸ ವರ್ಷಕ್ಕೆ ಹಾಲಿನ ದರ ಹೆಚ್ಚಳ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ಪಾದನಾ ವೆಚ್ಚ ಹೆಚ್ಚಾಗಿರುವುದರಿಂದ ಹಾಲಿನ ದರ ಹೆಚ್ಚಳ ಮಾಡುವಂತೆ ಕರ್ನಾಟಕ ಹಾಲು ಮಹಾಮಂಡಳ (ಕೆಎಂಎಫ್) ಮತ್ತು ಹಾಲು ಉತ್ಪಾದಕರ ಒಕ್ಕೂಟಗಳು ಪಶುಸಂಗೋಪನಾ ಇಲಾಖೆಗೆ ಬೇಡಿಕೆ ಇಟ್ಟಿವೆ. ಹೊಸ ವರ್ಷದ ವೇಳೆಗೆ ದರ ಹೆಚ್ಚಳವಾಗುವ ಸಾಧ್ಯತೆ ಇದೆ.

ಆರ್ಥಿಕ ಸ್ಥಿತಿಗತಿಗಳನ್ನು ಆಧರಿಸಿ ಪ್ರತಿ ಆರು ತಿಂಗಳಿಗೊಮ್ಮೆ ಗರಿಷ್ಠ ಶೇಕಡ 5ರವರೆಗೆ ಹಾಲಿನ ದರ ಹೆಚ್ಚಳಕ್ಕೆ ಅನುಮತಿ ನೀಡುವಂತೆ ಕೋರಿ ಪಶುಸಂಗೋಪನಾ ಇಲಾಖೆಯು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪ್ರಸ್ತಾವ ಸಲ್ಲಿಸಿದೆ. ಕೆಎಂಎಫ್ ಹಂತದಲ್ಲೇ ಹಾಲಿನ ದರ ಪರಿಷ್ಕರಣೆಗೆ ಅನುಮತಿ ನೀಡಬೇಕು ಎಂದು ಪ್ರಸ್ತಾವದಲ್ಲಿ ಕೋರಲಾಗಿದೆ.

6ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಮಸೂದೆಗೆ ಅನುಮೋದನೆ ವಿಳಂಬ: ಪಂಜಾಬ್ ರಾಜ್ಯಪಾಲರ ನಡೆಗೆ ಕಿಡಿ

ಬೆಂಕಿ ಜೊತೆ ಆಟ: 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ವಿಧಾನಸಭೆ ಅಧಿವೇಶನದ ಸಿಂಧುತ್ವವನ್ನೇ ಅನುಮಾನಿಸುವ ಯಾವುದೇ ನಡೆಯು ಪ್ರಜಾಪ್ರಭುತ್ವ ವ್ಯವಸ್ಥೆಗೆ ಗಂಭೀರ ಅಪಾಯವನ್ನು ಉಂಟುಮಾಡಲಿದೆ. ನೀವು ಬೆಂಕಿಯೊಂದಿಗೆ ಆಟವಾಡುತ್ತಿದ್ದೀರಿ' ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಪಂಜಾಬ್ ರಾಜ್ಯಪಾಲರಿಗೆ ಕಟುಮಾತುಗಳಲ್ಲಿ ತರಾಟೆಗೆ ತೆಗೆದುಕೊಂಡಿತು.

'ಪಂಜಾಬ್ ವಿಧಾನಸಭೆಯು ಜೂನ್ 19, 20ರಂದು ನಡೆದಿದ್ದ ಅಧಿವೇಶನದಲ್ಲಿ ಅಂಗೀಕರಿಸಿ, ಅನುಮೋದನೆಗಾಗಿ ಕಳುಹಿಸಿರುವ ಮಸೂದೆಗಳ ಕುರಿತು ತೀರ್ಮಾನಿಸಬೇಕು' ಎಂದು ರಾಜ್ಯಪಾಲ ಬನ್ವಾರಿಲಾಲ್ ಪುರೋಹಿತ್ ಅವರಿಗೆ ತಾಕೀತು ಮಾಡಿತು.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ತ್ರಿಸದಸ್ಯರ ನ್ಯಾಯಪೀಠವು, 'ಜೂನ್ 19 ಮತ್ತು 20ರಂದು ನಡೆದಿದ್ದ ಪಂಜಾಬ್ ವಿಧಾನಸಭೆಯ ಅಧಿವೇಶನವು ಸಾಂವಿಧಾನಿಕವಾಗಿ ಕ್ರಮಬದ್ಧವಾಗಿದೆ' ಎಂದು ಘೋಷಿಸಿತು. ಮಸೂದೆಗಳಿಗೆ ಸಂಬಂಧಿಸಿದಂತೆ ಕಡ್ಡಾಯವಾಗಿ ತೀರ್ಮಾನ ತೆಗೆದುಕೊಳ್ಳಬೇಕು ಎಂದೂ ರಾಜ್ಯಪಾಲರಿಗೆ ಸ್ಪಷ್ಟನಿರ್ದೇಶನ ನೀಡಿತು.

ರಾಜ್ಯಪಾಲರ ಧೋರಣೆಯನ್ನು ಪ್ರಶ್ನಿಸಿ ಪಂಜಾಬ್ ಸರ್ಕಾರ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಮುಂದುವರಿಸಿದ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರಿದ್ದ ಪೀಠವು, ಈ ಕುರಿತು ಕಠಿಣ ಅಭಿಪ್ರಾಯಗಳನ್ನು ದಾಖಲಿಸಿತು.

ರಾಜ್ಯಪಾಲರನ್ನು ಪ್ರತಿನಿಧಿಸಿದ್ದ ವಕೀಲ ಸತ್ಯಪಾಲ್ ಜೈನ್ ಅವರಿಗೆ, 'ನಿಮಗೆ ಪರಿಸ್ಥಿತಿಯ ಗಾಂಭೀರ್ಯದ ಅರಿವಿದೆಯೇ? ನೀವು ಬೆಂಕಿಯೊಂದಿಗೆ ಆಟವಾಡುತ್ತಿದ್ದೀರಿ' ಎಂದು ನೇರವಾಗಿ ತರಾಟೆಗೆ ತೆಗೆದುಕೊಂಡಿತು.

5ನೇ ಪುಟ ನೋಡಿ

'ರಾಜ್ಯಪಾಲರಿಂದ ವಿಳಂಬ, ಗಂಭೀರ ವಿಷಯ'

'12 ಮಸೂದೆಗಳು ಸೇರಿದಂತೆ ವಿವಿಧ ಪ್ರಸ್ತಾವಗಳ ಕುರಿತು ತೀರ್ಮಾನ ಕೈಗೊಳ್ಳದೇ ತಡೆಹಿಡಿದಿರುವ ತಮಿಳುನಾಡು ರಾಜ್ಯಪಾಲರ ನಡೆಯು ಗಂಭೀರವಾಗಿ ಪರಿಗಣಿಸಬೇಕಾದ ವಿಷಯ' ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿತು.

12 ಮಸೂದೆಗಳು, ಬಂಧಿತರ ಅವಧಿಪೂರ್ಣ ಬಿಡುಗಡೆಗೆ ಸಂಬಂಧಿಸಿದ 54 ಪ್ರಸ್ತಾವಗಳು, ಲೋಕಸೇವಾ ಆಯೋಗಕ್ಕೆ 10 ಜನರ ನೇಮಕ ಕುರಿತ ಪ್ರಸ್ತಾವ, ಸರ್ಕಾರಿ ನೌಕರರನ್ನು ಶಿಕ್ಷೆಗೊಳಪಡಿಸುವ ವಿವಿಧ ಪ್ರಸ್ತಾವಗಳನ್ನು ರಾಜ್ಯಪಾಲರು ನಿರ್ಧಾರ ಕೈಗೊಳ್ಳದೆ ತಡೆಹಿಡಿದಿದ್ದಾರೆ ಎಂಬದನ್ನು ಕೋರ್ಟ್ ಗಮನಿಸಿತು.



ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ತ್ರಿಸದಸ್ಯರ ಪೀಠ ಈ ಕುರಿತು ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿತು. ರಾಜ್ಯಪಾಲರ ನಡೆ ಪ್ರಶ್ನಿಸಿ ತಮಿಳುನಾಡು ಸರ್ಕಾರ ಅರ್ಜಿ ಸಲ್ಲಿಸಿತ್ತು.

ತಮಿಳುನಾಡು ಸರ್ಕಾರವನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲರಾದ ಎ.ಎಂ.ಸಿಂಘ್ವಿ, ಮುಕುಲ್ ರೋಹಟಗಿ, ಪಿ.ವಿಲ್ಸನ್ ವಾದವನ್ನು ಆಲಿಸಿದ ಪೀಠವು, 'ಇದು ಗಂಭೀರವಾಗಿ ಪರಿಗಣಿಸಬೇಕಾದ ವಿಷಯ' ಎಂದಿತು.

ಕೇಂದ್ರ ಸರ್ಕಾರ ಈ ಸಂಬಂಧ ಪ್ರತಿಕ್ರಿಯೆ ದಾಖಲಿಸಬೇಕು ಎಂದು ಸೂಚಿಸಿದ ಪೀಠವು, ವಿಚಾರಣೆಯನ್ನು ನವೆಂಬರ್ 20ಕ್ಕೆ ಮುಂದೂಡಿತು. ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಅಥವಾ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಇದಕ್ಕೆ ನೆರವಾಗಬೇಕು ಎಂದು ಪೀಠ ಬಯಸಿತು.

'ಬಿಕ್ಕಟ್ಟು ಸೃಷ್ಟಿಸಿದ್ದೇನೆ ಎಂಬುದಕ್ಕೆ ಸಾಕ್ಷ್ಯ ಇದೆಯೇ?'

ತಿರುವನಂತಪುರ (ಪಿಟಿಐ): 'ಸಂವಿಧಾನದ ಪ್ರಕಾರವೇ ಕಾರ್ಯನಿರ್ವಹಿಸುತ್ತಿದ್ದೇನೆ. ರಾಜ್ಯದಲ್ಲಿ ನಾನು ಬಿಕ್ಕಟ್ಟು ಸೃಷ್ಟಿಸಿದ್ದೇನೆ ಎಂಬುದಕ್ಕೆ ಸಾಕ್ಷ್ಯ ಇದೆಯೇ' ಎಂದು ಕೇರಳದ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಶುಕ್ರವಾರ ಪ್ರಶ್ನಿಸಿದರು.


ಆರಿಫ್ ಮೊಹಮ್ಮದ್

ನವದೆಹಲಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ರಾಜ್ಯ ಸರ್ಕಾರ ಹಲವು ಸಂದರ್ಭಗಳಲ್ಲಿ ಗಡಿ ದಾಟಿದೆ' ಎಂದರು. ಮಸೂದೆಗಳಿಗೆ ಅನುಮೋದನೆ ಕುರಿತು ಸರ್ಕಾರ ಮತ್ತು ರಾಜಭವನದ ನಡುವಿನ ತಿಕ್ಕಾಟದ ಹಿನ್ನೆಲೆಯಲ್ಲಿ ಈ ಮಾತು ಹೇಳಿದರು.

'ನಾನು ಬಿಕ್ಕಟ್ಟು ಸೃಷ್ಟಿಸಿದ್ದೇನೆ ಎಂಬುದಕ್ಕೆ ಅವರು (ಸರ್ಕಾರ) ಏನಾದರೂ ಸಾಕ್ಷ್ಯ ನೀಡಿದ್ದಾರೆಯೆ? ಸುಮ್ಮನೆ ಹೇಳಿಕೆ ನೀಡಿದರಾಗದು. ಬಿಕ್ಕಟ್ಟು ಎಂದರೆ ಸಂವಿಧಾನ ನೀಡಿರುವ ಅಧಿಕಾರವನ್ನು ಮೀರಿ ನಡೆಯುವುದು. ಈ ಕುರಿತ ಒಂದಾದರೂ ಸಾಕ್ಷ್ಯ ನೀಡಿ' ಎಂದು ಹೇಳಿದರು. 'ಆದರೆ, ಸರ್ಕಾರ ತನ್ನ ಮಿತಿ ಮೀರಿ ನಡೆದಿದೆ ಎಂಬುದಕ್ಕೆ ದೊಡ್ಡ ಪಟ್ಟಿಯೇ ಇದೆ. ಬಿಕ್ಕಟ್ಟು ಸೃಷ್ಟಿಸುತ್ತಿರುವವರಾರು?' ಎಂದು ಪ್ರಶ್ನಿಸಿದರು.

'ರಾಜ್ಯದಲ್ಲಿ ಪಿಂಚಣಿ, ವೇತನ ಪಾವತಿಯಾಗುತ್ತಿಲ್ಲ. ಆದರೆ, ದೊಡ್ಡ ಸಂಭ್ರಮಾಚರಣೆಗಳು ನಡೆದಿವೆ' ಎಂದು ಇತ್ತೀಚಿನ 'ಕೇರಳೀಯಂ' ಉತ್ಸವವನ್ನು ಉಲ್ಲೇಖಿಸಿ ಹೇಳಿದರು. 'ನಾವು ಸಂಭ್ರಮಿಸುತ್ತಿದ್ದೇವೆ. ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಈಜುಕೊಳ ನಿರ್ಮಿಸಿದ್ದೇವೆ' ಎಂದರು.

ಮಸೂದೆಗಳಿಗೆ ಅನುಮೋದನೆ ನೀಡುವಲ್ಲಿ ವಿಳಂಬವಾಗುತ್ತಿದೆ ಎಂದು ರಾಜ್ಯಪಾಲರ ವಿರುದ್ಧ ಕೇರಳ ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ. ರಾಜ್ಯಪಾಲರು ಸಂವಿಧಾನದ ಅನುಸಾರ ಕಾರ್ಯನಿರ್ವಹಿಸಬೇಕು ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಆಗ್ರಹಿಸಿದ್ದರು.

ಮಸೂದೆಗೆ ಅಂಗೀಕಾರ ನೀಡದಿರುವ ಕುರಿತ ಪ್ರಶ್ನೆಗೆ, ಕಾನೂನು ಉಲ್ಲಂಘಿಸುವ ಕೆಲಸ ಮಾಡಬೇಡಿ ಎಂದು ಸಹಜವಾಗಿ ಯಾರೂ ಹೇಳುವುದಿಲ್ಲ. ನಾನು ಮತ್ತೆ ಮತ್ತೆ ಅದನ್ನೇ ಮಾಡುತ್ತಿದ್ದೇನೆ ಎಂದರು. ಲೋಕಾಯುಕ್ತ ತಿದ್ದುಪಡಿ ಮಸೂದೆ ಹಾಗೂ ವಿಶ್ವವಿದ್ಯಾಲಯಗಳ ಕಾಯ್ದೆ ತಿದ್ದುಪಡಿ ಎರಡು ಮಸೂದೆಗಳಿಗೆ ಅಂಗೀಕಾರ ನೀಡದೇ ರಾಜ್ಯಪಾಲರು ತಡೆಹಿಡಿದಿದ್ದಾರೆ.

> **ನಾವು ಯಾರೊಬ್ಬರ ವಿರುದ್ಧವಾಗಿಲ್ಲ. ನಾವು ಆಟ ಆಡುತ್ತಿಲ್ಲ. ಇದು, ಯಾರ ಗೆಲುವು ಅಲ್ಲ, ಸೋಲೂ ಅಲ್ಲ. ಕಾಯ್ದೆಯ ಪ್ರಕಾರ ನಾನು ಕಾರ್ಯನಿರ್ವಹಿಸುತ್ತಿದ್ದೇನೆ. ಅದೇ ರೀತಿ ರಾಜ್ಯಪಾಲರೂ ಅವರ ಕರ್ತವ್ಯವನ್ನು ನಿರ್ವಹಿಸಲಿ**
> **ಭಗವಂತ್ ಮಾನ್,** ಮುಖ್ಯಮಂತ್ರಿ, ಪಂಜಾಬ್

ಬಿಜೆಪಿಗೆ ವಿಜಯೇಂದ್ರ ಸಾರಥಿ

ಬಿಎಸ್‌ವೈ ಹಟಕ್ಕೆ ಬಾಗಿದ ವರಿಷ್ಠರು • ಚುನಾವಣೆ ಮೇಲೆ ಕಣ್ಣು

• ಮಂಜುನಾಥ ಹೆಬ್ಬಾರ್

ನವದೆಹಲಿ: ಬಿಜೆಪಿಯ ಹಿರಿಯ ನಾಯಕ ಬಿ.ಎಸ್.ಯಡಿಯೂರಪ್ಪ ಅವರ ಪಟ್ಟುಗಳಿಗೆ ಬಾಗಿರುವ ಕಮಲ ಪಡೆಯ ವರಿಷ್ಠರು, ಆಕಾಂಕ್ಷಿಗಳಾಗಿದ್ದ ಹಿರಿತಲೆಗಳನ್ನು ಬದಿಗಿಟ್ಟು, ಶಿಕಾರಿಪುರ ಶಾಸಕ ಬಿ.ವೈ. ವಿಜಯೇಂದ್ರಗೆ ರಾಜ್ಯ ಘಟಕದ ಅಧ್ಯಕ್ಷ ಪಟ್ಟ ಕಟ್ಟಿದ್ದಾರೆ.

ಐದುರಾಜ್ಯಗಳ ಚುನಾವಣಾ ಪ್ರಚಾರದ ಭರಾಟೆಯ ನಡುವೆಯೇ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು, ರಾಜ್ಯ ಘಟಕದ ಉಪಾಧ್ಯಕ್ಷರಾಗಿದ್ದ ವಿಜಯೇಂದ್ರ ಅವರಿಗೆ ಭಾರಿ ಬಡ್ತಿ ನೀಡಿ ಶುಕ್ರವಾರ ಸಂಜೆ ಆದೇಶ ಹೊರಡಿಸಿದ್ದಾರೆ. 47ರ ಹರೆಯದ ವಿಜಯೇಂದ್ರ ಅವರು ಪಕ್ಷದ ಕಿರಿಯ ವಯಸ್ಸಿನ ಅಧ್ಯಕ್ಷ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ.

2019ರಲ್ಲಿ 'ವಾಮಮಾರ್ಗ'ದಿಂದ ಪಕ್ಷವನ್ನು ರಾಜ್ಯದಲ್ಲಿ ಯಡಿಯೂರಪ್ಪ ಅಧಿಕಾರಕ್ಕೆ ತಂದಿದ್ದರು. ಅಧಿಕಾರದಲ್ಲಿ ಅವರ ಪುತ್ರ ವಿಜಯೇಂದ್ರ ಹಾಗೂ ಕುಟುಂಬದವರ ಹಸ್ತಕ್ಷೇಪ ಹೆಚ್ಚಾಗಿದೆ ಎಂಬ ಕಾರಣ ಮುಂದೊಡ್ಡಿ, ಕೇವಲ ಎರಡೇ ವರ್ಷದಲ್ಲಿ ಅಧಿಕಾರದಿಂದ ಕೆಳಗಿಳಿಯುವಂತೆ ಮಾಡಲಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರ ಈ ನಿರ್ಧಾರವು ವಿಧಾನಸಭೆ ಚುನಾವಣೆಯಲ್ಲಿ ಪಕ್ಷದ ಭಾರಿ ಹಿನ್ನಡೆಗೆ ಕಾರಣವಾದ ಒಂದು ಅಂಶವಾಗಿತ್ತು.


ಬಿ.ವೈ.ವಿಜಯೇಂದ್ರ ಅವರಿಗೆ ಬಿ.ಎಸ್. ಯಡಿಯೂರಪ್ಪ ಅವರು ಸಿಹಿ ತಿನಿಸಿದರು

5ನೇ ಪುಟ ನೋಡಿ

ಪಿಎಸ್‌ಐ ಅಕ್ರಮ: ಮರು ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಹುದ್ದೆಗಳ ನೇಮಕಾತಿಗೆ ರಾಜ್ಯ ಸರ್ಕಾರ ಸ್ವತಂತ್ರ ಸಂಸ್ಥೆಯಿಂದ ಹೊಸದಾಗಿ ಪರೀಕ್ಷೆ ನಡೆಸಬಹುದು. ಈ ವೇಳೆ ಅಭ್ಯರ್ಥಿಗಳಿಗೆ ಯಾವುದೇ ಹೊಸ ಶುಲ್ಕ ವಿಧಿಸಬಾರದು. ಮರುಪರೀಕ್ಷೆ ನ್ಯಾಯಸಮ್ಮತವಾಗಿ ನಡೆಯುತ್ತದೆ ಎಂಬುದನ್ನು ಸರ್ಕಾರ ಖಾತರಿಪಡಿಸಬೇಕು' ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಮೂಲಕ ಪಿಎಸ್‌ಐ ಹುದ್ದೆಗಳಿಗೆ ಈ ಮೊದಲು ನಡೆಸಿದ್ದ ಲಿಖಿತ ಪರೀಕ್ಷೆ ರದ್ದುಪಡಿಸಿ, ಹೊಸದಾಗಿ ಪರೀಕ್ಷೆ ನಡೆಸಲು ಈ ಹಿಂದಿನ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನು ಎತ್ತಿಹಿಡಿದಿದೆ.

ಸರ್ಕಾರದ ಆದೇಶ ರದ್ದು ಕೋರಿ ಎನ್.ವಿ.ಚಂದನ್ ಸೇರಿದಂತೆ ಆಯ್ಕೆ ಪಟ್ಟಿಯಲ್ಲಿ ಹೆಸರಿದ್ದ 100ಕ್ಕೂ ಹೆಚ್ಚು ಅಭ್ಯರ್ಥಿಗಳು ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ವಜಾಗೊಳಿಸಿರುವ ನ್ಯಾಯಮೂರ್ತಿ ಪಿ.ಎಸ್.ದಿನೇಶ್ ಕುಮಾರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಶುಕ್ರವಾರ ಆದೇಶಿಸಿದೆ.

'ಅಕ್ರಮಕ್ಕೆ ಸಂಬಂಧಿಸಿದಂತೆ ಬ್ಲೂ ಟೂತ್ ಬಳಕೆ ಥಿಯರಿಯನ್ನು ಈ ಹಂತದಲ್ಲಿ ಸಂಪೂರ್ಣವಾಗಿ ತಳ್ಳಿಹಾಕಲಾಗದು' ಎಂದು ಹೇಳಿರುವ ನ್ಯಾಯಪೀಠ, ಪರೀಕ್ಷೆಯಲ್ಲಿನ ಅಕ್ರಮ ಆರೋಪಗಳ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಮರುಪರೀಕ್ಷೆ ಬದಲು ಕಳಂಕಿತರನ್ನು ಪ್ರತ್ಯೇಕಿಸಿ, ಅರ್ಹರನ್ನು ಆಯ್ಕೆ ಮಾಡಬೇಕೆಂಬ ಅಭ್ಯರ್ಥಿಗಳ ವಾದವನ್ನು ತಿರಸ್ಕರಿಸಿದೆ.



ಆರ್‌.ಡಿ. ಪಾಟೀಲ ಬಂಧನ

ಕಲಬುರಗಿ: ಕೆಇಎ ಪರೀಕ್ಷಾ ನೇಮಕಾತಿ ಅಕ್ರಮದ ಪ್ರಮುಖ ಆರೋಪಿ, ಕಿಂಗ್‌ಪಿನ್ ಆರ್‌.ಡಿ. ಪಾಟೀಲನನ್ನು ಕಲಬುರಗಿ ನಗರ ಪೊಲೀಸರು ಶುಕ್ರವಾರ ಮಧ್ಯಾಹ್ನ ನೆರೆಯ ಮಹಾರಾಷ್ಟ್ರದ ಅಕ್ಕಲಕೋಟ ಬಳಿ ಬಂಧಿಸಿದ್ದಾರೆ. 5

5ನೇ ಪುಟ ನೋಡಿ



ಚರ್ಚೆಗೆ ಆಗ್ರಹ

ಬೆಂಗಳೂರು: ಅರಣ್ಯವಾಸಿಗಳ ಸಮಸ್ಯೆ ಹಾಗೂ ಕಸ್ತೂರಿರಂಗನ್ ವರದಿ ಕುರಿತು ಬೆಳಗಾವಿಯಲ್ಲಿ ನಡೆಯುವ ಚಳಿಗಾಲದಲ್ಲಿ ಅಧಿವೇಶನದಲ್ಲಿ ಚರ್ಚಿಸಿ, ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು ಎಂದು ರಾಜ್ಯ ಅರಣ್ಯಭೂಮಿ ಹಕ್ಕು ಹೋರಾಟಗಾರರ ವೇದಿಕೆ ಅಧ್ಯಕ್ಷ ರವೀಂದ್ರ ನಾಯ್ಕ ಒತ್ತಾಯಿಸಿದರು. ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಮನವಿ ಸಲ್ಲಿಸಿದರು.

ಕಥಾಸಂಕ್ರಾಂತಿ: ರವಿಕುಮಾರಗೆ ಪ್ರಥಮ ಬಹುಮಾನ

ಪ್ರಜಾವಾಣಿ ವಾರ್ತೆ


ರವಿಕುಮಾರ ನೀಹ


ಎ.ಎಸ್‌.ಜಿ. ಶಶಿಕುಮಾರ್


ಭಾಗ್ಯಜ್ಯೋತಿ ಗುಡಗೇರಿ

ಬೆಂಗಳೂರು: ವೀರಲೋಕ ಪ್ರಕಾಶನ ಹಮ್ಮಿಕೊಂಡಿದ್ದ 'ಕಥಾಸಂಕ್ರಾಂತಿ 2024' ಕಥಾ ಸ್ಪರ್ಧೆಯ ಫಲಿತಾಂಶ ಪ್ರಕಟವಾಗಿದ್ದು, ತುಮಕೂರಿನ ರವಿ ಕುಮಾರ ನೀಹ ಅವರ 'ಕಿರುಬುನ್ಕಲ್' ಕಥೆ ಮೊದಲ ಬಹುಮಾನಕ್ಕೆ ಆಯ್ಕೆಯಾಗಿದೆ.

ಪ್ರಥಮ ಬಹುಮಾನ ₹ 55 ಸಾವಿರ ನಗದು ಒಳಗೊಂಡಿದೆ. ಎರಡನೆಯ ಬಹುಮಾನಕ್ಕೆ ಹಾಸನದ ಎ.ಎಸ್.ಜಿ. ಶಶಿಕುಮಾರ್ ಅವರ 'ಕಡ್ಲೇಪಿಪಿಪಿ ಮಿಠಾಯ್' (₹ 30 ಸಾವಿರ) ಹಾಗೂ ಮೂರನೆಯ ಬಹುಮಾನಕ್ಕೆ ಹುಬ್ಬಳ್ಳಿಯ ಭಾಗ್ಯಜ್ಯೋತಿ ಗುಡಗೇರಿ ಅವರ 'ಗೋಳಗುಂಬಜ್ ಎಕ್ಸ್‌ಪ್ರೆಸ್ 16536' (₹ 20 ಸಾವಿರ) ಆಯ್ಕೆಯಾಗಿದೆ. ತೀರ್ಪುಗಾರರ ಮೆಚ್ಚುಗೆ ಪಡೆದ ಏಳು ಕಥೆಗಳಿಗೆ ತಲಾ ₹ 3 ಸಾವಿರ ನಗದು ಬಹುಮಾನ ಲಭಿಸಲಿದೆ.

ದೇವು ಪತ್ತಾರ, ಮಂಜುನಾಥ ಲತಾ, ಮಂಜುನಾಯಕ ಚೆಳ್ಳೂರು ಮತ್ತು ಕೇಶವ ಮಳಗಿ ಕಥಾ ಸ್ಪರ್ಧೆಯ ತೀರ್ಪುಗಾರರಾಗಿದ್ದರು.

'ಬಹುಮಾನ ಪಡೆದ ಹಾಗೂ ಮೆಚ್ಚುಗೆ ಪಡೆದ ಕಥೆಗಳನ್ನು ಇಂಗ್ಲಿಷ್, ತೆಲುಗು, ಮಲಯಾಳಂ ಭಾಷೆಗಳಿಗೆ ಅನುವಾದಿಸಿ, ಸಂಕಲನ ರೂಪದಲ್ಲಿ ಪ್ರಕಟಿಸಲಾಗುವುದು. ಇದುವರೆಗೆ ಒಂದೂ ಕಥಾ ಸಂಕಲನ ಹೊರತರದ ಬರಹಗಾರರಿಗೆ ಮಾತ್ರ ಈ ಸ್ಪರ್ಧೆಯಲ್ಲಿ ಅವಕಾಶ ಕಲ್ಪಿಸಿದ್ದೆವು. ಹೊಸ ಪ್ರತಿಭೆಗಳ ಅನ್ವೇಷಣೆ ನಮ್ಮ ಆಶಯವಾಗಿತ್ತು' ಎಂದು ವೀರಲೋಕ ಪ್ರತಿಷ್ಠಾನದ ವೀರಕಪುತ್ರ ಶ್ರೀನಿವಾಸ ತಿಳಿಸಿದ್ದಾರೆ.


ಸ್ವಚ್ಛತಾ ಅಭಿಯಾನದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಬಿಎಂಟಿಸಿ ಘಟಕ ಮತ್ತು ಕಾರ್ಯಾಗಾರಗಳಿಗೆ ಶುಕ್ರವಾರ ಬಹುಮಾನ ವಿತರಿಸಲಾಯಿತು

'ಬಿಎಂಟಿಸಿ ನೌಕರರಿಗಾಗಿ ಸಮುದಾಯ ಭವನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಟಿಸಿ ನೌಕರರಿಗಾಗಿಯೇ ಸಮುದಾಯ ಭವನವನ್ನು ನಿರ್ಮಿಸಲು ಮುಂದಿನ ಬಜೆಟ್‌ನಲ್ಲಿ ಅನುದಾನ ಮೀಸಲಿಡಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಅಕ್ಟೋಬರ್‌ನಲ್ಲಿ ನಡೆದ ಸ್ವಚ್ಛತಾ ಅಭಿಯಾನದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಬಿಎಂಟಿಸಿ ಘಟಕ ಮತ್ತು ಕಾರ್ಯಾಗಾರಗಳಿಗೆ ಶುಕ್ರವಾರ ಬಹುಮಾನ ವಿತರಿಸಿ ಅವರು ಮಾತನಾಡಿದರು.

ಅಗತ್ಯವಿರುವವರಿಗೆ ಕಡಿಮೆ ದರದಲ್ಲಿ ಸಮುದಾಯ ಭವನ ಬಾಡಿಗೆಗೆ ಸಿಗುವಂತಾಗಬೇಕು. ಇನ್ನೊಂದು ವರ್ಷದಲ್ಲಿ ಸಮುದಾಯ ಭವನ ನಿರ್ಮಿಸಿ ಲೋಕಾರ್ಪಣೆಗೊಳ್ಳುವಂತೆ ಆಗಬೇಕು ಎಂದರು.

'ನಮ್ಮ ಸಿಬ್ಬಂದಿ ಕೆಲಸ ಮಾಡುವ ಡಿಪೊ, ಕಾರ್ಯಾಗಾರಗಳು ಯಾವಾಗಲೂ ಉತ್ತಮ ವಾತಾವರಣ ಹೊಂದಿರಬೇಕು. ಶೌಚಾಲಯ ಸಹಿತ ಸುತ್ತಲಿನ ಪರಿಸರ ಸ್ವಚ್ಛವಾಗಿರಬೇಕು. ಅದಕ್ಕಾಗಿಯೇ ಸ್ವಚ್ಛತಾ ಅಭಿಯಾನದ ಸ್ಪರ್ಧೆ ಏರ್ಪಡಿಸಿದ್ದು. ಎಲ್ಲ ಘಟಕದವರು ಬಹುಮಾನ ಪಡೆಯಲು ಅರ್ಹರಾಗಬೇಕು' ಎಂದು ಸೂಚಿಸಿದರು.

ಪೂರ್ವ ವಲಯದಲ್ಲಿ ಗುಂಜೂರು (ಘಟಕ 41), ಪಶ್ಚಿಮ ವಲಯದಲ್ಲಿ ಆರ್.ಆರ್. ನಗರ (21), ಉತ್ತರ ವಲಯದಲ್ಲಿ ಯಲಹಂಕ (11), ದಕ್ಷಿಣ ವಲಯದಲ್ಲಿ ಬನಶಂಕರಿ (20), ಈಶಾನ್ಯ ವಲಯದಲ್ಲಿ ದೇವನಹಳ್ಳಿ (50), ಕೇಂದ್ರೀಯ ವಲಯದಲ್ಲಿ ಕೆ.ಆರ್.ಪುರ (29) ಹಾಗೂ ಕಾರ್ಯಾಗಾರಗಳಲ್ಲಿ ಚಲ್ಲಘಟ್ಟ ಕಾರ್ಯಾಗಾರವು ಪ್ರಥಮ ಸ್ಥಾನ ಪಡೆದವು. ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ. ಸತ್ಯವತಿ, ಅಧಿಕಾರಿಗಳು ಇದ್ದರು.

ನಮ್ಮ ಮೆಟ್ರೊ: ಮೊಬೈಲ್ ಕ್ಯೂಆರ್ ಗ್ರೂಪ್ ಟಿಕೆಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಮೊಬೈಲ್ ಕ್ಯೂಆರ್ ಕೋಡ್ ಗ್ರೂಪ್ ಟಿಕೆಟ್‌ಗಳನ್ನು ಪರಿಚಯಿಸುತ್ತಿದೆ.

ಪ್ರಸ್ತುತ ಮೊಬೈಲ್ ಕ್ಯೂಆರ್ ಟಿಕೆಟ್‌ಗಳನ್ನು ಮೊಬೈಲ್ ಅಪ್ಲಿಕೇಷನ್‌ಗಳ ಮೂಲಕ ಒಬ್ಬ ಪ್ರಯಾಣಿಕನಿಗೆ ಒಂದು ಟಿಕೆಟ್ ನೀಡಲಾಗುತ್ತಿದೆ. ಗುಂಪು ಟಿಕೆಟ್‌ಗಳನ್ನೂ ಕ್ಯೂಆರ್ ಕೋಡ್ ಮೂಲಕ ನೀಡಬೇಕು ಎಂದು ಪ್ರಯಾಣಿಕರಿಂದ ಬೇಡಿಕೆ ಬಂದಿದ್ದ ಹಿನ್ನೆಲೆಯಲ್ಲಿ ಮೊಬೈಲ್ ಕ್ಯೂಆರ್ ಗ್ರೂಪ್ ಟಿಕೆಟ್ ಜಾರಿಗೆ ತರಲಾಗಿದೆ. ಈ ಟಿಕೆಟ್‌ಗಳು ಟೋಕನ್ ದರಕ್ಕಿಂತ ಶೇ 5ರಷ್ಟು ರಿಯಾಯಿತಿಯನ್ನು ಹೊಂದಿರುತ್ತದೆ.

ಟಿಕೆಟ್ ಕೌಂಟರ್‌ಗಳಲ್ಲಿ ಟೋಕನ್ ಖರೀದಿಸಲು ಸರತಿ ನಿಲ್ಲುವುದನ್ನು ತಪ್ಪಿಸಲು, ಪ್ರಯಾಣಿಕರು ಮನೆ, ಕಚೇರಿ ಸಹಿತ ತಾವಿರುವ ಸ್ಥಳದಿಂದಲೇ ಮುಂಗಡವಾಗಿ ಮೊಬೈಲ್ ಕ್ಯೂಆರ್ ಟಿಕೆಟ್ ಪಡೆಯಬಹುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

DS-MAX PROPERTIES

EXPERIENCE THE JOY OF LIVING www.dsmaxproperties.com

DS MAX®
ISO 9001:2015 COMPANY

ಡಿಎಸ್ ಮ್ಯಾಕ್ಸ್



FACILITY MANAGEMENT SERVICES




For Apartments & Commercial Complexes

- MEP & Security Services
- Gardening & Landscaping
- STP / WTP / RO Maintenance
- Swimming Pool Maintenance
- Housekeeping

CALL : 9164 022 000

ELEGANT INTERIORS



Directly From Our Factory

- Modular Kitchens
- TV Units
- Wardrobes
- Painting & Wallpapers
- Storage Units
- False Ceilings
- Furniture

CALL : 9164 056 000

REFER & EARN



Refer Us To Your Friends & Relatives And Get Handsomely Rewarded

- 2, 3 & 4-BHK Homes
- Full / Partial Interiors
- Facility Management Services for Apartment & Commercial Complexes

CALL : 9164 043 000

REFER A LAND



Refer Us To A Landowner For JV / Outright Purchase In Any Part Of Bangalore And Get A 2-BHK ABSOLUTELY FREE*

- Residential Land
- Commercial Land

CALL : 8880 463 463

2, 3 & 4-BHK APARTMENTS FOR SALE IN VARIOUS LOCATIONS

*T & C Apply

PRM/KA/RERA/1251/309/PR/060923/006244 TUMKUR ROAD NEAR HIMALAYA FACTORY ₹ 45.81 - 69.82 Lakhs* 8880 465 465	PRM/KA/RERA/1251/308/PR/201201/003733 ELECTRONIC CITY HOSA ROAD JUNCTION ₹ 50.00 - 54.45 Lakhs* 9164 045 000	PRM/KA/RERA/1251/308/PR/280222/004739 CHANDAPURA 10 MINS. BOMMASANDRA METRO ₹ 37.60 - 49.60 Lakhs* 8880 013 310	PRM/KA/RERA/1251/446/PR/210312/004002 K R PURAM NEAR GARDEN CITY UNIV. ₹ 51.80 - 86.24 Lakhs* 8880 438 000	PRM/KA/RERA/1251/309/PR/220223/005748 THANISANDRA 5 MINS. FROM KNSIT ₹ 52.55 - 94.68 Lakhs* 8880 461 461
PRM/KA/RERA/1251/310/PR/190823/002824 BANASHANKARI 5TH STAGE, NR. NPS SCHOOL ₹ 74.62 L - 1.52 CR.* 8050 161 222	PRM/KA/RERA/1251/446/PR/110722/005059 BEGUR 10 MINS. TO SILK BOARD ₹ 50.65 - 58.10 Lakhs* 8880 472 472	PRM/KA/RERA/1251/308/PR/290122/004660 SARJAPURA SARJAPUR - ATTIBELE ROAD ₹ 38.72 - 49.80 Lakhs* 9164 122 000	DODDAGUBBI NEAR HENNUR DECATHLON ₹ 53.30 - 70.10 Lakhs* 8880 003 003	PRM/KA/RERA/1251/310/PR/150223/005721 OFF MYSORE ROAD RAJARAJESWARI DENTAL COL. ₹ 49.63 - 79.66 Lakhs* 8088 445 445

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in

ಬೇಡಿಕೆಯಿದ್ದರೂ ಸಿಗದ ಮನ್ನಣೆ ● ಪಾದಚಾರಿಗಳ ಸ್ಥಿತಿ ಘನಘೋರ

ಸ್ಕೈವಾಕ್ ಕಗ್ಗಂಟು: ಸಮಸ್ಯೆ ನೂರೆಂಟು

● ಆದಿತ್ಯ ಕೆ.ಎ.



ವಾಹನ ನಡುವೆ ಸಿಲುಕಿದ ಪಾದಚಾರಿಗಳು



ರಸ್ತೆ ದಾಟುತ್ತಿರುವ ಪಾದಚಾರಿಗಳು

ಪ್ರಜಾವಾಣಿ ಚಿತ್ರಗಳು/ ಕಿಶೋರ್ ಕುಮಾರ್ ಬೋಳಾರ್

ಬೆಂಗಳೂರು: ಮಕ್ಕಳನ್ನು ನೋಡಲು ದೂರದ ಊರಿನಿಂದ ರಾತ್ರಿಯಿಡೀ ಬಸ್ಸಿನಲ್ಲಿ ಪ್ರಯಾಣಿಸಿ, ಬೆಳಿಗ್ಗೆ 8 ಗಂಟೆಗೆ ಗೊರಗುಂಟೆಪಾಳ್ಯದ ಜಂಕ್ಷನ್‌ನಲ್ಲಿ ಇಳಿದ 76 ವರ್ಷದ ಆ ಹಿರಿಯರು, ಸರ್ಕಲ್‌ನಲ್ಲಿದ್ದ ಸಂಚಾರ ದಟ್ಟಣೆ ನೋಡಿ 'ಹೇಗಪ್ಪಾ ರಸ್ತೆ ದಾಟುವುದು' ಎಂದು ಆತಂಕಗೊಳ್ಳಗಾದರು. ನುಗ್ಗಿ ಬರುತ್ತಿದ್ದ ವಾಹನಗಳ ನಡುವೆ ರಸ್ತೆ ದಾಟಲು ಪ್ರಯತ್ನಿಸುತ್ತಾ ವಾಹನಗಳ ನಡುವೆ ಸಿಲುಕಿಬಿಟ್ಟರು. ಪಕ್ಕದಲ್ಲಿದ್ದವರೊಬ್ಬರು ಅವರನ್ನು ಕೈ ಹಿಡಿದು ರಸ್ತೆ ದಾಟಿಸಿದರು...!

ಹಸಿರುಪಟ್ಟಕ್ಕೆ ತೆರಳಲು ಇದೇ ಸರ್ಕಲ್‌ಗೆ ಬಂದ ವೃದ್ಧೆಯೊಬ್ಬರು, ಆ ಬದಿಯಲ್ಲಿದ್ದ ಬಸ್ ನಿಲ್ದಾಣದತ್ತ ತೆರಳಲು, ಹೆದ್ದಾರಿಯನ್ನು ದಾಟಬೇಕಿತ್ತು. ಶರವೇಗದಲ್ಲಿ ಸಾಲುಗಟ್ಟಿ ಬರುತ್ತಿದ್ದ ವಾಹನಗಳು ಅವರಿಗೆ ಹೆಜ್ಜೆ ಹಾಕುವುದಕ್ಕೂ ಅವಕಾಶ ನೀಡಲಿಲ್ಲ. ಟ್ರಾಫಿಕ್ ಸಿಗ್ನಲ್ ಬಿಟ್ಟ ತಕ್ಷಣ ಮತ್ತೊಂದು ಕಡೆಯಿಂದ ವಾಹನಗಳು ಮೈಮೇಲೆಯೇ ಬಂದಂತೆ ನುಗ್ಗುತ್ತಿದ್ದವು. ಹಾಗೂ ಹೀಗೂ ಸಾಹಸ ಮಾಡಿ ರಸ್ತೆದಾಟಿದ ಅವರು ಅಬ್ಬಾ ಎಂದು ನಿಟ್ಟುಸಿರು ಬಿಟ್ಟರು.

ಗೊರಗುಂಟೆಪಾಳ್ಯ ಜಂಕ್ಷನ್‌ನಲ್ಲಿ ನಿತ್ಯ ಬೆಳಿಗ್ಗೆ 8 ರಿಂದ 10ಗಂಟೆವರೆಗೆ ಕಂಡುಬರುವ ಸಾಮಾನ್ಯ ದೃಶ್ಯಗಳಿವು.

ರಾಜ್ಯದ 25 ಜಿಲ್ಲೆಗಳು ಹಾಗೂ ಮೂರು ರಾಜ್ಯಗಳಿಗೆ ಸಂಪರ್ಕಕಲ್ಪಿಸುವ ಜಂಕ್ಷನ್ ಇದು ಈ ವೃತ್ತ. ಪೀಣ್ಯ ಕೈಗಾರಿಕಾ ಪ್ರದೇಶದ ಕಾರ್ಖಾನೆಗಳಿಗೆ ತೆರಳುವವರು, ಉದ್ಯೋಗಕ್ಕಾಗಿ ನಿತ್ಯ ತುಮಕೂರು ಕಡೆಗೆ ಹೋಗುವವರು ಈ ವೃತ್ತದಲ್ಲಿ ಒಂದು ಬದಿಯಿಂದ ಇನ್ನೊಂದು ಬದಿಗೆ ದಾಟುತ್ತಾರೆ. ಮೈಸೂರು ರಸ್ತೆ, ಕೆಂಗೇರಿ, ಹೆಬ್ಬಾಳ, ಕೆ.ಆರ್.ಪುರದ ಕಡೆಗೆ ಹೋಗುವವರೂ ಇಲ್ಲಿಂದ ಬಸ್‌ನಲ್ಲಿ ಪ್ರಯಾಣಿಸುತ್ತಾರೆ. ಬಳ್ಳಾರಿ ರಸ್ತೆ ಕಡೆಯಿಂದ ಬರುವ ಬಸ್‌ಗಳನ್ನು ಹೋಟೆಲ್ ವಿನಾಯಕ ಕಡೆಯಲ್ಲಿ ನಿಲುಗಡೆ ಮಾಡಲಾಗುತ್ತದೆ. ಅಲ್ಲಿ ಬಸ್ ಇಳಿದು, ತುಮಕೂರು ಕಡೆಗೆ ಹೋಗುವವರು ರಸ್ತೆ ದಾಟುವುದಕ್ಕೆ ಹರಸಾಹಸಪಡುತ್ತಾರೆ. ಇದೇ ರೀತಿ, ಮೆಜೆಸ್ಟಿಕ್ ಕಡೆಯಿಂದ ಬಂದು ಬಳ್ಳಾರಿ ರಸ್ತೆ ಕಡೆಗೆ ತೆರಳುವವರ ಜೀವ ಭಯದಿಂದಲೇ ರಸ್ತೆ ದಾಟುತ್ತಾರೆ.

ಇಷ್ಟೆಲ್ಲ ದಟ್ಟಣೆ ಇರುವ ಈ ವೃತ್ತದಲ್ಲಿ ಸಾರ್ವಜನಿಕರು ಸುರಕ್ಷಿತವಾಗಿ ರಸ್ತೆ ದಾಟಲು 'ಪಾದಚಾರಿ ಮೇಲ್ಸೇತುವೆಯ (ಸ್ಕೈವಾಕ್) ವ್ಯವಸ್ಥೆ ಇಲ್ಲ. ಹೀಗಾಗಿ ಪಾದಚಾರಿಗಳ ಸ್ಥಿತಿ ಘನಘೋರವಾಗಿದೆ.

ಸಂಚಾರ ದಟ್ಟಣೆಯನ್ನು ಗಮನಿಸಿದ್ದ ಸಂಚಾರ ಪೊಲೀಸರು ಗೊರಗುಂಟೆಪಾಳ್ಯ, ಸಿಎಂಟಿಐ ವೃತ್ತದಲ್ಲಿ ಸ್ಕೈವಾಕ್ ನಿರ್ಮಿಸುವಂತೆ ಬಿಬಿಎಂಪಿಗೆ ಹಲವು ಬಾರಿ ಪ್ರಸ್ತಾವ ಸಲ್ಲಿಸಿದ್ದಾರೆ. ಆ ಪ್ರಸ್ತಾವಕ್ಕೆ ಕಿಮ್ಮತ್ತು ಸಿಗುತ್ತಿಲ್ಲ. ಸಿಎಂಟಿಐ ವೃತ್ತದಲ್ಲಿ ಬೆಳಿಗ್ಗೆ 8 ರಿಂದ 9.30ರ ತನಕ ಗಾರ್ಮೆಂಟ್‌ಗಳಿಗೆ ತೆರಳುವ ಸಾವಿರಾರು ಮಹಿಳೆಯರು ಒಮ್ಮೆಲೆ ಬರುತ್ತಾರೆ. ಸಂಜೆ 5 ರಿಂದ ರಾತ್ರಿ 8 ರ ವರೆಗೆ ಹೆಚ್ಚಿನ ದಟ್ಟಣೆ ಕಂಡುಬರುತ್ತದೆ. ಆ ವೇಳೆಯಲ್ಲಿ ಸಮಸ್ಯೆ ತೀವ್ರವಾಗಿದೆ.

ಗೊರಗುಂಟೆಪಾಳ್ಯ ಮೆಟ್ರೊ ನಿಲ್ದಾಣದ ಮೂಲಕ ರಸ್ತೆ ದಾಟುವುದಕ್ಕೆ ವ್ಯವಸ್ಥೆಯಿದೆ. ಅಲ್ಲಿ ಪ್ರಯಾಣಿಕರನ್ನು ಹೊರತು ಪಡಿಸಿ ಬೇರೆ ಯಾರಿಗೂ ಅವಕಾಶವಿಲ್ಲ. ಸ್ಕೈವಾಕ್ ನಿರ್ಮಾಣವಾಗುವವರೆಗೆ ಅವಕಾಶ ಕಲ್ಪಿಸುವಂತೆ ಬಿಎಂಆರ್‌ಸಿಎಲ್‌ಗೆ ಮನವಿ ಸಲ್ಲಿಸಲಾಗಿತ್ತು. ಅವರು ಅವಕಾಶ ನೀಡಿಲ್ಲ ಎಂದು ಸ್ಥಳೀಯರು ದೂರಿದರು.

ಮೆಟ್ರೊ ಪಿಲ್ಲರ್‌ಗಳಿಗೆ ಅಪಾಯ ತಂದೊಡ್ಡುವ ಸಾಧ್ಯತೆಯಿದೆ ಎನ್ನುವ ಕಾರಣಕ್ಕೆ ಕೆಳಸೇತುವೆ ನಿರ್ಮಾಣವನ್ನು ಕೈಗೆತ್ತಿಕೊಂಡಿಲ್ಲ ಎಂದು ಆಟೊ ಚಾಲಕ ಅಬ್ದುಲ್ ಹೇಳುತ್ತಾರೆ.

ಈ ಎಲ್ಲ ಸಮಸ್ಯೆಗಳ ನಿವಾರಣೆಯಾಗಬೇಕೆಂದರೆ, ತಕ್ಷಣದಲ್ಲೇ ಇಲ್ಲಿ ಸ್ಕೈವಾಕ್ ನಿರ್ಮಾಣವಾಗಬೇಕು. ಅದನ್ನು ಹತ್ತಿ ಇಳಿಯುವುದಕ್ಕೆ ಅನುಕೂಲವಾಗುವಂತೆ ಎರಡೂ ಬದಿಗಳಲ್ಲಿ ಲಿಫ್ಟ್ ಅಥವಾ ಎಸ್ಕಲೇಟರ್ ಯಂತ್ರ ಜೋಡಿಸಬೇಕು ಎಂಬುದು ಸಾರ್ವಜನಿಕರ ಆಗ್ರಹವಾಗಿದೆ.



ಗೊರಗುಂಟೆಪಾಳ್ಯ ಜಂಕ್ಷನ್‌ನಲ್ಲಿ ಸ್ಕೈವಾಕ್ ಇಲ್ಲದಿರುವ ಪರಿಣಾಮ ಅಜ್ಜಿಯ ಕೈಹಿಡಿದು ರಸ್ತೆ ದಾಟಿಸಲಾಯಿತು

ರಾಜಧಾನಿ ಜನರ ಧ್ವನಿ

ಒಮ್ಮೆ ಸಿಗ್ನಲ್ ಬಿಟ್ಟರೆ ಸಾವಿರ ವಾಹನ


ಈ ವೃತ್ತದಲ್ಲಿ ಒಮ್ಮೆ ಸಿಗ್ನಲ್ ಬಿಟ್ಟರೆ ಸಾವಿರ ವಾಹನಗಳು ಚಲಿಸುತ್ತವೆ. ಅದಾದ ಮೇಲೆ ದಟ್ಟಣೆ ಅವಧಿಯಲ್ಲಿ ರಸ್ತೆದಾಟಲು 200ರಿಂದ 250 ಮಂದಿ ಕಾಯುತ್ತಿರುತ್ತಾರೆ. ಯಶವಂತಪುರ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ಎಸ್‌ಆರ್‌ಎಸ್‌ನಿಂದ ಬಿಇಎಲ್ (ಹೊರ ವರ್ತುಲ ರಸ್ತೆ) ವೃತ್ತದವರೆಗೆ ಎಲ್ಲೂ ಸ್ಕೈವಾಕ್ ಇಲ್ಲ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಎರಡು ಕಡೆ ಶೌಚಾಲಯ ನಿರ್ಮಾಣ

ಈ ಜಂಕ್ಷನ್‌ನಲ್ಲಿ ಶೌಚಾಲಯವಿಲ್ಲದೆ ಮಹಿಳೆಯರು ತೊಂದರೆಗೆ ಒಳಗಾಗುತ್ತಿದ್ದರು. ಸದ್ಯ ಗೊರಗುಂಟೆಪಾಳ್ಯ, ಸಿಎಂಟಿಐ ವೃತ್ತದಲ್ಲಿ ಎರಡು ಶೌಚಾಲಯ ನಿರ್ಮಿಸಲಾಗಿದೆ. ಪಿಎಸ್‌ಐ ಒಬ್ಬರು ಸ್ವಂತ ಹಣದಲ್ಲಿ ಮೊಬೈಲ್ ಶೌಚಾಲಯ ನಿರ್ಮಿಸಿದ್ದರು. ಇದಾದ ಮೇಲೆ ಎಚ್ಚೆತ್ತ ಬಿಬಿಎಂಪಿ ಎರಡು ವೃತ್ತದಲ್ಲೂ ಶಾಶ್ವತ ಶೌಚಾಲಯ ನಿರ್ಮಿಸಿದೆ ಎಂದು ಮಹಿಳಾ ಕಾರ್ಮಿಕರು ಹೇಳಿದರು.

ನಿಮ್ಮಲ್ಲೂ ಸ್ಕೈವಾಕ್ ಸಮಸ್ಯೆಗಳಿದ್ದರೆ ಬರೆದು ಕಳಿಸಿ
9606038256

ಪಾದಚಾರಿಗಳು ಏನಂತಾರೆ



ಒಮ್ಮೆ ಭಯ...

ಮೈಮೇಲೆಯೇ ವಾಹನಗಳು ನುಗ್ಗುತ್ತವೆ. ಒಮ್ಮೆ ಭಯ, ಆತಂಕವಾಗುತ್ತದೆ. ಮೊದಲ ಬಾರಿಗೆ ಗೊರಗುಂಟೆಪಾಳ್ಯ ಜಂಕ್ಷನ್‌ಗೆ ಬಂದವರಿಗೆ ರಸ್ತೆದಾಟುವುದು ಸವಾಲು. ಇಲ್ಲಿಗೆ ಸ್ಕೈವಾಕ್ ಅಗತ್ಯವಿದೆ.
ವಿಶ್ವನಾಥ್ ಪಾಟೀಲ್, ಕಲಬುರಗಿ



ವಾಹನಗಳ ವೇಗವೂ ಹೆಚ್ಚು

ಹೆಬ್ಬಾಳ, ದೇವನಹಳ್ಳಿ, ಕೆ.ಆರ್.ಪುರ ಭಾಗದಿಂದಲೂ ಈ ವೃತ್ತಕ್ಕೆ ವಾಹನಗಳು ಬರುತ್ತವೆ. ಹಸಿರುದೀಪ ಹೊತ್ತಿದ ತಕ್ಷಣ ವಾಹನಗಳ ವೇಗವೂ ಹೆಚ್ಚಿರುತ್ತದೆ. ವೃದ್ಧರು, ಮಕ್ಕಳನ್ನೂ ಗಮನಿಸುವುದಿಲ್ಲ. ಸಂಚಾರ ನಿಯಂತ್ರಣಕ್ಕೆ ಕ್ರಮ ಅಗತ್ಯ.
ರಾಜಶೇಖರ್ ಆರಾಧ್ಯ, ತೋಟದಗುಡ್ಡದಹಳ್ಳಿ



ಬಸ್ ನಿಲುಗಡೆಗೆ ಅವಕಾಶ ಬೇಡ

ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ಕೆಎಸ್‌ಆರ್‌ಟಿಸಿ, ಖಾಸಗಿ ಬಸ್‌ಗಳನ್ನು ರಸ್ತೆ ಮಧ್ಯದಲ್ಲಿಯೇ ನಿಲುಗಡೆ ಮಾಡಲಾಗುತ್ತಿದೆ. ಇದರಿಂದ ಸಮಸ್ಯೆಯಾಗುತ್ತಿದೆ. ಈ ಸ್ಥಳದಲ್ಲಿ ಬಸ್ ನಿಲುಗಡೆಗೆ ಅವಕಾಶ ನೀಡಬಾರದು.
ಸರೋಜಾ, ಉದ್ಯೋಗಿ



ಬಡವರು ಲೆಕ್ಕಕ್ಕೆ ಇಲ್ಲವೇ?

ಹೆದ್ದಾರಿ ಬದಿಯಲ್ಲಿ ಕೇಂದ್ರ ಸರ್ಕಾರಕ್ಕೆ ಸೇರಿದ ಜಾಗವಿದೆ. ಆ ಜಾಗವನ್ನು ಸ್ವಾಧೀನ ಪಡಿಸಿಕೊಂಡು ಬಸ್ ನಿಲ್ದಾಣ, ಕೆಳಸೇತುವೆ, ಸ್ಕೈವಾಕ್ ನಿರ್ಮಿಸಬೇಕು. ಸರ್ಕಾರಕ್ಕೆ ಬಡವರು ಲೆಕ್ಕಕ್ಕೆ ಇಲ್ಲವೇ?
ಈಶ್ವರ್, ಉದ್ಯೋಗಿ, 8ನೇ ಮೈಲಿ

ಕೆ.ಆರ್. ಪುರ: ಪ್ರತಿಭಾ ಕಾರಂಜಿ

ಪ್ರಜಾವಾಣಿ ವಾರ್ತೆ



ಶಾಸಕ ಬೈರತಿ ಬಸವರಾಜ ಡೊಳ್ಳು ಬಾರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶಿಕ್ಷಣ ಸಂಯೋಜಕ ಕೆ.ಕಾಂತರಾಜ, ಬಿಇಒ ರಾಮಮೂರ್ತಿ, ಮುಖಂಡರಾದ ಮಾರ್ಕೆಟ್ ರಮೇಶ್, ಕೃಷ್ಣಪ್ಪ ಇದ್ದರು.

ಕೆ.ಆರ್.ಪುರ: ವಿದ್ಯಾರ್ಥಿಗಳು ತಮ್ಮೊಳಗಿರುವ ಪ್ರತಿಭೆಯನ್ನು ಅನಾವರಣಗೊಳಿಸಲು ಪ್ರತಿಭಾ ಕಾರಂಜಿ ಕಾರ್ಯಕ್ರಮ ಸೂಕ್ತ ವೇದಿಕೆಯಾಗಿದೆ ಎಂದು ಶಾಸಕ ಬೈರತಿ ಬಸವರಾಜ ಅಭಿಪ್ರಾಯಪಟ್ಟರು.

ಕೆ.ಆರ್.ಪುರ ಸಮೀಪದ ಎಚ್‌ಎಎಲ್‌ನ ಕೈರಳಿ ನಿಲಯಂ ಸೆಂಟ್ರಲ್ ಶಾಲೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ದಕ್ಷಿಣ ವಲಯದಿಂದ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಮಕ್ಕಳಿಗಾಗಿ ಹಮ್ಮಿಕೊಂಡಿದ್ದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಕ್ಕಳ ನಿಜವಾದ ಪ್ರತಿಭೆಗಳನ್ನು ಪ್ರಾಥಮಿಕ ಶಾಲೆಗಳಲ್ಲಿ ಗುರುತಿಸುವುದೇ ಪ್ರತಿಭಾಕಾರಂಜಿ. ಮಕ್ಕಳು ಕಲಿಯುವ ವಯಸ್ಸಿನಲ್ಲಿ ಉತ್ತಮ ವೇದಿಕೆಯನ್ನು ಒದಗಿಸಿಕೊಟ್ಟು, ಪ್ರೋತ್ಸಾಹ ನೀಡಬೇಕು ಎಂದು ಹೇಳಿದರು.

ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ರಾಮಮೂರ್ತಿ ಮಾತನಾಡಿ, ಈ ವ್ಯಾಪ್ತಿಯಲ್ಲಿರುವ ಇಪ್ಪತ್ತಕ್ಕೂ ಹೆಚ್ಚು ಶಾಲೆಗಳ ಸಾವಿರಕ್ಕೂ ಹೆಚ್ಚು ಮಕ್ಕಳು ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾರೆ ಎಂದರು. ಈ ಸಂಧರ್ಭದಲ್ಲಿ ಶಿಕ್ಷಣ ಸಂಯೋಜಕ ಕೆ.ಕಾಂತರಾಜ, ಕೈರಳಿ ಕಲಾ ಸಮಿತಿಯ ಕಾರ್ಯದರ್ಶಿ ಪಿ.ಕೆ.ಸುಧೀಶ್, ಮುಖಂಡರಾದ ಮಾರ್ಕೆಟ್ ರಮೇಶ್, ಕೃಷ್ಣಪ್ಪ ಇದ್ದರು.

ಕನ್ನಡ ಬಾವುಟಕ್ಕಾಗಿ 'ಎಕ್ಸ್' ಅಭಿಯಾನ ಇಂದು

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕನ್ನಡ ಬಾವುಟಕ್ಕೆ ಅಧಿಕೃತ ಮಾನ್ಯತೆ ನೀಡಬೇಕೆಂದು ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ಶನಿವಾರ ಸಂಜೆ 5 ಗಂಟೆಯಿಂದ 'ಎಕ್ಸ್' ಅಭಿಯಾನ ಹಮ್ಮಿಕೊಂಡಿದೆ.

'#ಕನ್ನಡಬಾವುಟ_ನಮ್ಮಗುರುತು', '#KannadaFlag_MyPride' ಎಂಬ ಹ್ಯಾಶ್ ಟ್ಯಾಗ್ ಅಡಿಯಲ್ಲಿ ಈ ಅಭಿಯಾನ ನಡೆಯಲಿದೆ. ಕನ್ನಡ ಬಾವುಟಕ್ಕೆ ಅಧಿಕೃತ ಮಾನ್ಯತೆ ನೀಡಬೇಕೆಂದು ರಾಜ್ಯ ಸರ್ಕಾರ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಈ ಪ್ರಸ್ತಾವನೆಯನ್ನು ಅಂಗೀಕರಿಸಬೇಕೆಂದು 'ಎಕ್ಸ್' ಅಭಿಯಾನದ ಮೂಲಕ ಒತ್ತಾಯಿಸಲಾಗುವುದು ಎಂದು ವೇದಿಕೆಯ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡ ತಿಳಿಸಿದ್ದಾರೆ.

'ಕನ್ನಡಿಗರಿಗೆ ಕನ್ನಡ ಬಾವುಟ ಮೊದಲ ಗುರುತು. ಭಾರತ ಒಕ್ಕೂಟದ ಭಾಗವಾಗಿ ನಮ್ಮದೇ ಆದ ಬಾವುಟವೊಂದನ್ನು ಹೊಂದುವುದಕ್ಕೆ ಅವಕಾಶ ಇರಬೇಕು. ಈಗಾಗಲೇ ಕೋಟ್ಯಂತರ ಕನ್ನಡಿಗರು ಕನ್ನಡ ಬಾವುಟವನ್ನು ಆರಾಧಿಸುತ್ತಿದ್ದಾರೆ. ಹೀಗಾಗಿ, ಕೇಂದ್ರ ಸರ್ಕಾರ ಕೂಡಲೇ ಕನ್ನಡ ಬಾವುಟಕ್ಕೆ ಅಧಿಕೃತ ಮಾನ್ಯತೆ ನೀಡಬೇಕು' ಎಂದು ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

ನಗರದಲ್ಲಿ ಇಂದು

ಕರ್ನಾಟಕ ರಾಜ್ಯೋತ್ಸವ ಹಾಗೂ ಭುವನೇಶ್ವರಿ ರಥೋತ್ಸವ: ಅಧ್ಯಕ್ಷತೆ: ಎಂ. ಕೃಷ್ಣಪ್ಪ, ಪ್ರಿಯಕೃಷ್ಣ, ಪ್ರದೀಪ್ ಕೃಷ್ಣಪ್ಪ, ಮುಖ್ಯ ಅತಿಥಿ: ವಾಟಾಳ್ ನಾಗರಾಜ್, ಆಯೋಜನೆ: ಹೊಯ್ಸಳ ನಾಗರಿಕರ ಕ್ಷೇಮಾಭಿವೃದ್ಧಿ ಸಮಿತಿ, ಸಮಗ್ರ ಕರ್ನಾಟಕ ಕಾರ್ಮಿಕರ ಸಂಘ, ಸ್ಥಳ: ಸರ್ಕಾರಿ ಶಾಲೆ ಆವರಣ, ಬ್ಯಾಟರಾಯನಪುರ, ಮೈಸೂರು ರಸ್ತೆ, ಬೆಳಿಗ್ಗೆ 10

ಪದವಿ ಪ್ರದಾನ ಸಮಾರಂಭ: ಮುಖ್ಯ ಅತಿಥಿ: ಎಸ್. ಶ್ರೀಕಾಂತ ಸ್ವಾಮಿ, ಅಧ್ಯಕ್ಷತೆ: ಕೆ.ಎಂ.ನಾಗರಾಜ್, ಆಯೋಜನೆ ಹಾಗೂ ಸ್ಥಳ: ಕಮ್ಯುನಿಟಿ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್ಮೆಂಟ್ ಸ್ಟಡೀಸ್, ಜಯನಗರ, ಬೆಳಿಗ್ಗೆ 10.30

ರಾಮಾಯಣ, ಮಹಾಭಾರತ, ಭಗವದ್ಗೀತೆ ಮಹಾಗ್ರಂಥಗಳ ಅನಾವರಣ ಸಮಾರಂಭ: ಸಾನ್ನಿಧ್ಯ: ಶಿವರಾತ್ರಿದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು: ರಾಮಲಿಂಗಾರೆಡ್ಡಿ, ಪ್ರದೀಪ್ ಈಶ್ವರ್, ಸತೀಶ್ ಕುಮಾರ್ ಹೊಸಮನಿ, ಪುಸ್ತಕ ಅನಾವರಣ: ಸಿ.ಎನ್. ರಾಮಚಂದ್ರನ್, ಆಯೋಜನೆ: ಸನ್‌ಸ್ಟಾರ್ ಪಬ್ಲಿಷರ್ಸ್, ಸ್ಥಳ: ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪ, 2ನೇ ಮಹಡಿ, ಜೆಎಸ್‌ಎಸ್ ಶಾಲೆ, ಜಯನಗರ, ಬೆಳಿಗ್ಗೆ 10

ಉಪನ್ಯಾಸ-ಸಂಗೀತ: 'ವಚನ ಸಾಹಿತ್ಯದಲ್ಲಿ ಆರೋಗ್ಯ', ಉಪನ್ಯಾಸಕರು: ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ಗೌರವ ಉಪಸ್ಥಿತಿ: ನ್ಯಾ. ಸುಭಾಷ್ ಬಿ. ಅಡಿ, ಗಾಯನ: ಮುದ್ದುಮೋಹನ್, ಮುಖ್ಯ ಅತಿಥಿ: ಜಿ.ಎಸ್. ಹೆಗಡೆ, ಆಯೋಜನೆ: ಕ.ವಿ.ಪ್ರ.ನಿ.ನಿ ಲೆಕ್ಕಾಧಿಕಾರಿಗಳ ಸಂಘ, ಸ್ಥಳ: ಕ.ವಿ.ಪ್ರ.ನಿ.ನಿ ಲೆಕ್ಕಾಧಿಕಾರಿಗಳ ಸಂಘದ ಬೆಳ್ಳಿ ಭವನ, ಆನಂದರಾವ್ ವೃತ್ತ, ಬೆಳಿಗ್ಗೆ 10

ಚಿಗುರು ಕನ್ನಡ ಸಂಘ ಹಾಗೂ ಐಕ್ಯುಎಸಿ ವತಿಯಿಂದ ಸುವರ್ಣ ಸಂಭ್ರಮ, ಕರ್ನಾಟಕ ರಾಜ್ಯೋತ್ಸವ: ಮುಖ್ಯ ಅತಿಥಿ: ವಿಶಾಖ ಎನ್., ಅಧ್ಯಕ್ಷತೆ: ಮಾರ್ಗರೇಟ್ ಫಾತಿಮಾ ಮೇರಿ, ಆಯೋಜನೆ ಹಾಗೂ ಸ್ಥಳ: ಸೇಂಟ್ ಆನ್ಸ್ ಮಹಿಳಾ ಪದವಿ ಕಾಲೇಜು, ಹಲಸೂರು ಬೆಳಿಗ್ಗೆ 10.30

ಜಾಣಗೆರೆ ವೆಂಕಟರಾಮಯ್ಯ ಅವರ 'ನುಡಿಗೋಲು' ಪುಸ್ತಕ ಬಿಡುಗಡೆ: ವೂಡೇ ಪಿ. ಕೃಷ್ಣ, ಸಮಾರಂಭ ಉದ್ಘಾಟನೆ: ಕೆ. ಮರುಳಸಿದ್ಧಪ್ಪ, ಕೃತಿ ಬಗ್ಗೆ ಮಾತು: ಬಂಜಗೆರೆ ಜಯಪ್ರಕಾಶ್, ಮುಖ್ಯ ಅತಿಥಿ: ಎಚ್.ಎಲ್. ಪುಷ್ಪ, ಅಧ್ಯಕ್ಷತೆ: ಹಿ.ಚಿ. ಬೋರಲಿಂಗಯ್ಯ, ಆಯೋಜನೆ: ಜಾಣಗೆರೆ ಪತ್ರಿಕೆ ಪ್ರಕಾಶನ, ಸ್ಥಳ: ಶೇಷಾದ್ರಿಪುರಂ ಕಾಲೇಜಿನ ಸಭಾಂಗಣ, ಶೇಷಾದ್ರಿಪುರ, ಬೆಳಿಗ್ಗೆ 11

ಶಾ. ಬಾಲುರಾವ್ ಯುವ ಬರಹಗಾರ ಮತ್ತು ಶಾ. ಬಾಲುರಾವ್ ಅನುವಾದ ಪ್ರಶಸ್ತಿ ಪ್ರದಾನ ಸಮಾರಂಭ: ಪ್ರಶಸ್ತಿ ಪ್ರದಾನ: ಮಲ್ಲೇಪುರಂ ಜಿ. ವೆಂಕಟೇಶ್, ಮುಖ್ಯ ಅತಿಥಿ: ಕಮಲಿನಿ ಬಾಲುರಾವ್, ಪ್ರಶಸ್ತಿ ಪುರಸ್ಕೃತರು: ಎಸ್. ಗಂಗಾಧರಯ್ಯ, ಫೌಝಿಯ ಸಲೀಂ, ಉಪಸ್ಥಿತಿ: ಪಿ.ವಿ. ನಾರಾಯಣ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಬಿ.ಎಂ.ಶ್ರೀ. ಕಲಾಭವನ, 3ನೇ ಮುಖ್ಯರಸ್ತೆ, ಎನ್.ಆರ್. ಕಾಲೊನಿ, ಸಂಜೆ 5

ದೊಡ್ಡರಂಗೇಗೌಡ ಅವರ 'ಕಾವ್ಯಮುಖಿ' ಪುಸ್ತಕ ಬಿಡುಗಡೆ: ಸುಚೇಂದ್ರ ಪ್ರಸಾದ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಕೃತಿ ಬಗ್ಗೆ ಮಾತು: ರಾಗಂ ಮಠಪತಿ, ಮುಖ್ಯ ಅತಿಥಿ: ಚಿಂತಾಮಣಿ ಕೊಡ್ಲೆಕೆರೆ, ಶಾಂತರಾಜು, ಆಯೋಜನೆ: ಮಂದಾರ ಪುಸ್ತಕ, ಸ್ಥಳ: ಬಿ.ಎಂ.ಶ್ರೀ. ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 11

ಕನ್ನಡ ಪುಸ್ತಕ ಹಬ್ಬದ ಪ್ರಯುಕ್ತ ವಿಶೇಷ ಉಪನ್ಯಾಸ: 'ಪುಟ್ಟ ಇಸ್ರೇಲ್ ಕಲಿಸುವ ದಿಟ್ಟತನದ ಪಾಠಗಳು', ಉಪನ್ಯಾಸಕರು: ಅಜಿತ್ ಹನಮಕ್ಕನವರ್, ಮುಖ್ಯ ಅತಿಥಿ: ಬಿ.ಎಸ್. ಸುದರ್ಶನ್, ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಕೇಶವಶಿಲ್ಪ, ರಾಷ್ಟ್ರೋತ್ಥಾನ ಪರಿಷತ್, ಕೆಂಪೇಗೌಡ ನಗರ, ಬೆಳಿಗ್ಗೆ 11

ರಾಜ್ಯೋತ್ಸವ ಸಮಾರಂಭ: ಮುಖ್ಯ ಅತಿಥಿಗಳು: ರಾಮಕೃಷ್ಣ ರೆಡ್ಡಿ ಕೆ., ವತ್ಸಲಾ ಮೋಹನ್, ಅಧ್ಯಕ್ಷತೆ: ಜಿಯಾವುಲ್ಲಾ ಶರೀಫ್, ಆಯೋಜನೆ ಹಾಗೂ ಸ್ಥಳ: ಅಬ್ಬಾಸ್ ಖಾನ್ ಮಹಿಳಾ ಕಾಲೇಜು, ಕಬ್ಬನ್ ಪೇಟೆ, ಬೆಳಿಗ್ಗೆ 11.30

ಇವಿ ತಂತ್ರಜ್ಞಾನದ ಬಗ್ಗೆ ಉಪನ್ಯಾಸ: ಸಂಜೀವ್ ಕೆ. ನಾಯಕ್, ಆಯೋಜನೆ ಹಾಗೂ ಸ್ಥಳ: ಬಿಎನ್‌ಎಂ ತಾಂತ್ರಿಕ ವಿದ್ಯಾಲಯ, ಮಧ್ಯಾಹ್ನ 2

ಪದವಿ ಪ್ರದಾನ ಸಮಾರಂಭ: ಮುಖ್ಯ ಅತಿಥಿ: ವೂಡೇ ಪಿ. ಕೃಷ್ಣ, ಉಪಸ್ಥಿತಿ: ಶ್ರೀನಿವಾಸ್ ಚೌಡಪ್ಪ, ಅಧ್ಯಕ್ಷತೆ: ಅಂಥೋನಿ ಜೋಸೆಫ್, ಆಯೋಜನೆ: ಲೊಯೋಲ ಪದವಿ ಕಾಲೇಜು, ಸ್ಥಳ: ಮೌಂಟ್ ಸೆಂಟ್ ಜೋಸೆಫ್, ಬನ್ನೇರುಘಟ್ಟ ರಸ್ತೆ, ಸಂಜೆ 4

ಭರತನಾಟ್ಯ ಗುರುವಂದನೆ: ಮೇಘನಾ ವೈ. ರಾವ್, ಗುರು: ಲಕ್ಷ್ಮಿ ಎನ್. ಮೂರ್ತಿ, ಮಂಜು ಭೈರವಿ, ಸ್ಥಳ: ಶ್ರೀಕೃಷ್ಣದೇವರಾಯ ಕಲಾ ಮಂದಿರ, ತೆಲುಗು ವಿಜ್ಞಾನ ಸಮಿತಿ, ಮಲ್ಲೇಶ್ವರ, ಸಂಜೆ 4

'ಕೊನೆಯ ಬಿಳಿ ಬೇಟೆಗಾರ' ಪುಸ್ತಕ ಬಿಡುಗಡೆ: ಉಲ್ಲಾಸ್ ಕಾರಂತ್, ಮುಖ್ಯ ಅತಿಥಿಗಳು: ಕಲೀಮ್ ಉಲ್ಲಾ, ಬಿ.ಪಿ. ಮಹೇಂದ್ರ ಕುಮಾರ್, ಉಪಸ್ಥಿತಿ: ಎಲ್. ಜಿ. ಮೀರಾ, ಜೋಷುವಾ ಮ್ಯಾಥ್ಯೂ, ಆಯೋಜನೆ: ಆಕೃತಿ ಪುಸ್ತಕ, ಸ್ಥಳ: ಇಎಸ್‌ವಿ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 4.30

24 ಗಂಟೆಗಳ ಕಾಲ ಅಖಂಡ ಭಜನೆ: ಆಯೋಜನೆ ಹಾಗೂ ಸ್ಥಳ: ಸತ್ಯಸಾಯಿ ಆಶ್ರಮ, ಬೃಂದಾವನ, ಕಾಡುಗೋಡಿ, ಸಂಜೆ 6

ಸಂಗೀತ ಕಛೇರಿ: ಗಾಯನ: ಈಶ್ವರ್ ಐಯ್ಯರ್, ಪಿಟೀಲು: ಗೋವಿಂದ ಮಾಧವ, ಮೃದಂಗ: ಬಿ.ಎಸ್. ಸಮರ್ಥ್, ಆಯೋಜನೆ: ಮಲ್ಲೇಶ್ವರಂ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.15

ಧಾರ್ಮಿಕ ಪ್ರವಚನ: ಕಾಂತಾಚಾರ್ ಹಿಪ್ಪರಗಿ, ಆಯೋಜನೆ: ಶ್ರೀ ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಸುಧೀಂದ್ರನಗರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

12 ದಿನಗಳಿಂದ ತಲೆ ಮರೆಸಿಕೊಂಡಿದ್ದ ಕೆಇಎ ಪರೀಕ್ಷಾ ಅಕ್ರಮದ ಆರೋಪಿ

ಮಹಾರಾಷ್ಟ್ರದಲ್ಲಿ ಆರ್‌.ಡಿ. ಪಾಟೀಲ ಬಂಧನ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕೆಇಎ ಪರೀಕ್ಷಾ ನೇಮಕಾತಿ ಅಕ್ರಮದ ಪ್ರಮುಖ ಆರೋಪಿ, ಆರ್‌.ಡಿ. ಪಾಟೀಲನನ್ನು ಕಲಬುರಗಿ ನಗರ ಪೊಲೀಸರು ಶುಕ್ರವಾರ ಮಧ್ಯಾಹ್ನ ನೆರೆಯ ಮಹಾರಾಷ್ಟ್ರದ ಅಕ್ಕಲಕೋಟ ಬಳಿ ಬಂಧಿಸಿದ್ದಾರೆ.

ಕಳೆದ 12 ದಿನಗಳಿಂದ ತಲೆ-ಮರೆಸಿಕೊಂಡಿದ್ದ ಪಾಟೀಲ ಮಹಾರಾಷ್ಟ್ರದ ಸೋಲಾಪುರ ಜಿಲ್ಲೆಯಿಂದ ಕಲಬುರಗಿಗೆ ಬರುತ್ತಿದ್ದ ವೇಳೆ ಪೊಲೀಸರು ಬಂಧಿಸಿದರು. ಆರೋಪಿಯು ಸಂಬಂಧಿಕರ ಮನೆಯಿಂದ ಕಲಬುರಗಿಯ ನ್ಯಾಯಾಲಯಕ್ಕೆ ಶರಣಾಗಲು ಬರುತ್ತಿದ್ದ ಎನ್ನಲಾಗುತ್ತಿದೆ. ಹೀಗಾಗಿ, ಪೊಲೀಸರು ಗಡಿಯಲ್ಲಿಯೇ ತೀವ್ರ ನಿಗಾ ಇಟ್ಟಿದ್ದರು. ಶರಣಾಗಲು ಬರುತ್ತಿದ್ದ ವೇಳೆ ಆತನನ್ನು ಬಂಧಿಸಿ, ರಾತ್ರಿ 8.15ರ ಸುಮಾರಿಗೆ ನಗರಕ್ಕೆ ಕರೆತಂದರು.

ಪರೀಕ್ಷಾ ಅಕ್ರಮ ನಡೆದ ದಿನದಿಂದಲೇ ಪಾಟೀಲ ಪರಾರಿಯಾಗಿದ್ದ. ನಾಲ್ಕು ದಿನಗಳ ಹಿಂದೆ ಕಲಬುರಗಿಯ ಅಪಾರ್ಟ್‌ಮೆಂಟ್‌ನಲ್ಲಿ ತಂಗಿದ್ದ ವೇಳೆ ಅಫಜಲಪುರ ಪೊಲೀಸರು ಬಂಧಿಸಲು ತೆರಳುತ್ತಿದ್ದ ಮಾಹಿತಿ ಪಡೆದು ಅಲ್ಲಿಂದ ಪರಾರಿಯಾಗಿದ್ದ. ಹೀಗಾಗಿ, ಕಲಬುರಗಿ ನಗರ ಪೊಲೀಸ್ ಕಮಿಷನರ್ ಚೇತನ್ ಆರ್. ಅವರು ಡಿಸಿಪಿ ಕನಿಕಾ ಸಿಕ್ರಿವಾಲ್ ನೇತೃತ್ವದಲ್ಲಿ ಐದು ತನಿಖಾ ತಂಡಗಳನ್ನು ರಚಿಸಿದ್ದರು.

ಮತ್ತೊಂದೆಡೆ ಎಸ್‌ಪಿ ಅಡ್ಡೂರು ಶ್ರೀನಿವಾಸಲು ಅವರು ಡಿವೈಎಸ್‌ಪಿ ನೇತೃತ್ವದಲ್ಲಿ ಹಲವು ತಂಡಗಳನ್ನು ರಚಿಸಿದ್ದರು. ಅಂತಿಮವಾಗಿ ಕಲಬುರಗಿ ಎಸಿಪಿ ಭೂತೇಗೌಡ, ಅಶೋಕ ನಗರ ಠಾಣೆ ಪಿಎಸ್‌ಐ ಶಿವಪ್ಪ ಕಮಾಂಡೊ ಅವರ ತಂಡ ಪಾಟೀಲನನ್ನು ಬಂಧಿಸಿತು.

> ಮಹಾರಾಷ್ಟ್ರದಲ್ಲಿ ಅಡಗಿಕೊಂಡಿದ್ದ ಆರೋಪಿ ಆರ್‌.ಡಿ. ಪಾಟೀಲನನ್ನು ಎಸಿಪಿ ಭೂತೇಗೌಡ ನೇತೃತ್ವದ ಪೊಲೀಸರ ತಂಡ ಬಂಧಿಸಿದೆ. ವಿಚಾರಣೆ ಬಳಿಕ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು
>
> **ಚೇತನ್ ಆರ್**
> ಕಲಬುರಗಿ ಪೊಲೀಸ್ ಕಮಿಷನರ್

ಅಕ್ರಮದ ಸುಳಿವು ಕೊಡದ ಪಾಟೀಲ: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿಯೂ ಕಳೆದ ವರ್ಷ ತಲೆ ಮರೆಸಿಕೊಂಡಿದ್ದ ಆರ್‌.ಡಿ. ಪಾಟೀಲ ಪೊಲೀಸರನ್ನು ಸಾಕಷ್ಟು ಸತಾಯಿಸಿದ ಬಳಿಕ ಸೆರೆ ಸಿಕ್ಕಿದ್ದ. ಸುಮಾರು 11 ತಿಂಗಳು ಜೈಲಿನಲ್ಲಿದ್ದ. ಏತನ್ಮಧ್ಯೆ ಆ ಅವಧಿಯಲ್ಲಿ ಜಾಮೀನು ಪಡೆದಿದ್ದ ಆತ ಜಾಮೀನು ನಿಯಮ ಉಲ್ಲಂಘನೆ ಮಾಡಿ ಪರಾರಿಯಾಗಿದ್ದ. ಮತ್ತೆ ಪೊಲೀಸರು ಆತನನ್ನು ಬಂಧಿಸಿದ್ದರು. ಪಿಎಸ್‌ಐ ನೇಮಕಾತಿ ಪ್ರಕರಣದಲ್ಲಿ ವಿಚಾರಣೆ ಸಂದರ್ಭದಲ್ಲಿ ಯಾವುದೇ ಮಾಹಿತಿಯನ್ನು ಬಾಯಿ ಬಿಡುತ್ತಿರಲಿಲ್ಲ.

ಬೇರೆಯವರಿಂದ ಈತನ ಪಾತ್ರದ ಬಗ್ಗೆ ಅರಿತುಕೊಂಡಿದ್ದ ತನಿಖಾಧಿಕಾರಿಗಳು ಈತನ ಕೃತ್ಯಗಳನ್ನು ದಾಖಲೆ ಸಮೇತ ತೋರಿಸಿದಾಗಲಷ್ಟೇ ಸುಮ್ಮನಾಗುತ್ತಿದ್ದ.

ಈಗಲೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ನೇಮಕಾತಿ ಅಕ್ರಮದಲ್ಲಿ ಆರ್‌.ಡಿ. ಪಾಟೀಲನನ್ನು ಹೆಸರು ಕೇಳಿ ಬಂದಿತ್ತು. ಈ ಪ್ರಕರಣ ಹೊರ ಬಿದ್ದ ಬಳಿಕ ತಲೆ ಮರೆಸಿಕೊಂಡಿದ್ದ.



ಕೆಇಎ ಪರೀಕ್ಷಾ ನೇಮಕಾತಿ ಅಕ್ರಮದ ಪ್ರಮುಖ ಆರೋಪಿ ಆರ್‌.ಡಿ. ಪಾಟೀಲನನ್ನು ಪೊಲೀಸರು ಶುಕ್ರವಾರ ರಾತ್ರಿ ಕಲಬುರಗಿಯ ಅಶೋಕ ನಗರ ಠಾಣೆಗೆ ಕರೆತಂದರು –ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಪದೇ ಪದೇ ಸಿಮ್ ಬದಲಾವಣೆ

ಕಲಬುರಗಿಯಿಂದ ಪರಾರಿಯಾಗಿದ್ದ ಆರ್‌.ಡಿ. ಪಾಟೀಲ, ತನ್ನ ಜಾಡು ಸಿಗಬಾರದು ಎಂಬ ಉದ್ದೇಶದಿಂದ ಪದೇ ಪದೇ ಸಿಮ್‌ಗಳನ್ನು ಬದಲಾಯಿಸಿದ್ದ.

ಜಿಲ್ಲೆಯಲ್ಲಿರುವ ತನ್ನ ಆಪ್ತರೊಂದಿಗೆ ಮಾತಾಡಬೇಕಾದ ಸಂದರ್ಭದಲ್ಲಿ ಆಪ್ತರ ಬದಲು ಅವರ ಪತ್ನಿಯರ ಮೊಬೈಲ್‌ನಿಂದ ಕರೆ ಮಾಡುವಂತೆ ಸೂಚಿಸುತ್ತಿದ್ದ. ಆ ಫೋನ್ ಸಂಭಾಷಣೆ ಮುಗಿದ ಬಳಿಕ ತನ್ನ ಸಿಮ್ ಕಾರ್ಡ್ ಬದಲಿಸುತ್ತಿದ್ದ. ಮೊಬೈಲ್‌ಗೆ ಸಿಮ್ ಹಾಕಿದರೆ ತಾನಿರುವ ಸ್ಥಳದ ಸುಳಿವು ಸಿಗಬಹುದು ಎಂಬ ಆತಂಕದಿಂದ ಇಂಟರ್ನೆಟ್ ಬಳಸಲು ಸಿಮ್ ಬದಲು ಡಾಂಗಲ್ ಬಳಸುತ್ತಿದ್ದ. ಮಹಾರಾಷ್ಟ್ರದ ಸೋಲಾಪುರದಲ್ಲಿ ಈತನ ಸಹೋದರನಿದ್ದು, ಸುತ್ತಮುತ್ತಲಿನ ಗ್ರಾಮಗಳಲ್ಲಿ ಈತನ ನೆಂಟರಿದ್ದರು. ಹೀಗಾಗಿ ಅಡಗಿಕೊಳ್ಳಲು ನೆರೆಯ ರಾಜ್ಯವನ್ನು ಆಯ್ಕೆ ಮಾಡಿಕೊಂಡಿದ್ದ.

ಈ ಹಿಂದೆ ಚುನಾವಣೆ ಲಾಭಕ್ಕಾಗಿ ಅಫಜಲಪುರದಲ್ಲಿ ಸಾಮೂಹಿಕ ವಿವಾಹವನ್ನೂ ಆಯೋಜಿಸಿದ್ದ. ಆ ಸಂದರ್ಭದಲ್ಲಿಯೇ ಪಿಎಸ್‌ಐ ನೇಮಕಾತಿ ಅಕ್ರಮ ಹೊರಬಿದ್ದಿದ್ದರಿಂದ ಸಾಮೂಹಿಕ ವಿವಾಹ ನಡೆಯುವ ಮುನ್ನವೇ ಬಂಧಿತನಾಗಿದ್ದ.ಪಿಎಸ್‌ಐ ನೇಮಕಾತಿ ಅಕ್ರಮ ಹಾಗೂ ಜೆಇ, ಎಇ ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ನಡೆಸಿದ್ದಕ್ಕಾಗಿ ಕಲಬುರಗಿ, ತುಮಕೂರು ಹಾಗೂ ಬೆಂಗಳೂರಿನ ವಿವಿಧ ಠಾಣೆಗಳಲ್ಲಿ ಪಾಟೀಲ ವಿರುದ್ಧ ಪ್ರಕರಣಗಳು ದಾಖಲಾಗಿದ್ದವು. ಹೈಕೋರ್ಟ್ ಮೆಟ್ಟಿಲೇರಿ ಜಾಮೀನು ಪಡೆದುಕೊಂಡಿದ್ದ.

ಚುನಾವಣೆಗೆ ನಿಂತಿದ್ದ ಪಾಟೀಲ

ದಶಕದ ಹಿಂದೆ ಕಲಬುರಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಗೌರ (ಬಿ) ಗ್ರಾಮ ಪಂಚಾಯಿತಿ ಅಧ್ಯಕ್ಷನಾಗಿದ್ದ ಆರ್‌.ಡಿ. ಪಾಟೀಲ ನಂತರ ಪರೀಕ್ಷಾ ಅಕ್ರಮದ ಮೂಲಕ ಹಲವರು ಸರ್ಕಾರಿ ಉದ್ಯೋಗ ಪಡೆಯುವಂತೆ ನೋಡಿಕೊಂಡಿದ್ದ. ಹೀಗಾಗಿ, ಆತನ ಸ್ವಗ್ರಾಮ ಸೊನ್ನ ಹಾಗೂ ಸುತ್ತ ಮುತ್ತಲಿನ ಗ್ರಾಮಗಳಲ್ಲಿ ಈತ ಅಭಿಮಾನಿಗಳ ಪಡೆಯನ್ನು ಹೊಂದಿದ್ದ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಉತ್ತರ ಪ್ರದೇಶದಲ್ಲಿ ನೆಲೆ ಹೊಂದಿರುವ ಸಮಾಜವಾದಿ ಪಕ್ಷದಿಂದ ಸ್ಪರ್ಧಿಸಿ ಜೆಡಿಎಸ್ ಅಭ್ಯರ್ಥಿಗಿಂತ ಅಧಿಕ ಮತಗಳನ್ನು ಪಡೆದಿದ್ದ.

ಪಿಎಸ್‌ಐ ನೇಮಕಾತಿ ಅಕ್ರಮ ಹಾಗೂ ಜೆಇ, ಎಇ ಪರೀಕ್ಷೆಗಳಲ್ಲಿನ ಅಕ್ರಮದ ಆರೋಪದ ಕಾರಣ ಕಲಬುರಗಿ, ತುಮಕೂರು ಹಾಗೂ ಬೆಂಗಳೂರಿನ ವಿವಿಧ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿ ದ್ದವು. ಜಾಮೀನಿನ ಮೇಲೆ ಹೊರಗಿದ್ದ ಸಂದರ್ಭದಲ್ಲಿಯೇ ಕೆಇಎ ಪರೀಕ್ಷೆ ಬರೆಯಲಿರುವ ಅಭ್ಯರ್ಥಿಗಳನ್ನು ಸಂಪರ್ಕಿಸಿ ಬ್ಲೂಟೂತ್ ಮೂಲಕ ಉತ್ತರ ಹೇಳುವುದಾಗಿ ತಿಳಿಸಿ ಹಣ ಪಡೆದಿದ್ದ.

ಆರ್‌.ಡಿ. ಪಾಟೀಲ ಅಣ್ಣ ಮಹಾಂತಗೌಡ ಕೆಲ ಕಾಲ ಅಫಜಲಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಬಂಧಿತರಾಗಿದ್ದರು.

ಸಿಐಡಿಗೆ ವಹಿಸಲು ಚಿಂತನೆ: ಸಚಿವ

‘ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ ಪರೀಕ್ಷಾ ಅಕ್ರಮಕ್ಕೆ ಸಂಬಂಧಿಸಿದಂತೆ ಕಲಬುರಗಿ, ಯಾದಗಿರಿ ಜಿಲ್ಲೆಗಳಲ್ಲಿ ಎಫ್‌ಐಆರ್ ದಾಖಲಾಗಿದ್ದು, ವಿಜಯಪುರ, ಬೆಂಗಳೂರಿನಲ್ಲಿಯೂ ಅಕ್ರಮ ನಡೆದಿರುವ ಶಂಕೆ ವ್ಯಕ್ತವಾಗಿದೆ. ಹೀಗಾಗಿ, ಪ್ರಕರಣವನ್ನು ಸಿಐಡಿಗೆ ವಹಿಸುವ ಚಿಂತನೆ ನಡೆದಿದೆ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಆರ್‌.ಡಿ. ಪಾಟೀಲ ಬಂಧನದ ಬಳಿಕ ‘ಪ್ರಜಾವಾಣಿ’ಯೊಂದಿಗೆ ಮಾತನಾಡಿದ ಅವರು, ‘ಈ ಕುರಿತು ಸಚಿವ ಸಂಪುಟ ಸಭೆ ನಡೆದ ವೇಳೆ ಮುಖ್ಯಮಂತ್ರಿ ಜೊತೆ ಚರ್ಚಿಸಲಾಗಿದೆ. ಈ ಬಗ್ಗೆ ಗೃಹ ಇಲಾಖೆ ನಿರ್ಧಾರ ತೆಗೆದುಕೊಳ್ಳಲಿದೆ’ ಎಂದರು.

‘ಇಂತಹ ಅಕ್ರಮಗಳಲ್ಲಿ ಭಾಗಿಯಾದ ಸರ್ಕಾರಿ ಅಧಿಕಾರಿಗಳನ್ನು ಸೇವೆಯಿಂದಲೇ ವಜಾಗೊಳಿಸುವ ಪ್ರಸ್ತಾವವುಳ್ಳ ಕಠಿಣ ಕಾಯ್ದೆಯನ್ನು ಜಾರಿಗೆ ತರುವ ಉದ್ದೇಶವಿದ್ದು, ಕಾನೂನು ಇಲಾಖೆಯು ಮಸೂದೆ ರೂಪಿಸಲು ಅನುಮೋದನೆ ನೀಡಿದೆ’ ಎಂದು ತಿಳಿಸಿದರು.

ಪಿಎಸ್‌ಐ 545 ಹುದ್ದೆಗಳ ನೇಮಕಾತಿ ವಿವರ

- **21-01-2021**: ಅಧಿಸೂಚನೆ ಹೊರಡಿಸಿದ್ದ ದಿನಾಂಕ
- **1,28,598**: ದೈಹಿಕ ಪರೀಕ್ಷೆಗೆ ಹಾಜರಾಗಿದ್ದರು
- **28-07-2021**ರಿಂದ **16-09-2021**: ದೈಹಿಕ ಪರೀಕ್ಷೆ ದಿನಾಂಕ
- **54,104**: ಲಿಖಿತ ಪರೀಕ್ಷೆಗೆ ಅರ್ಹರಾದವರು
- **03-10-2021**: ಲಿಖಿತ ಪರೀಕ್ಷೆ ನಡೆದ ದಿನಾಂಕ
- **92**: ಲಿಖಿತ ಪರೀಕ್ಷೆ ಕೇಂದ್ರಗಳ ಸಂಖ್ಯೆ
- **07-04- 2023**: ಅಭ್ಯರ್ಥಿ ವೀರೇಶ್ ಅಕ್ರಮದ ಬಗ್ಗೆ ವಿಚಾರಣೆ ನಡೆಸಲು ಗೃಹ ಸಚಿವ ಆರಗ ಜ್ಞಾನೇಂದ್ರ ಸಿಐಡಿಗೆ ಸೂಚಿಸಿದ್ದ ದಿನಾಂಕ
- **09-04-2023**: ಹಾಗೂ ಕಲಬುರಗಿ ಚೌಕ್ ಠಾಣೆ: ಸಿಐಡಿ ವರದಿ ಆಧರಿಸಿ ಮೊದಲ ಎಫ್‌ಐಆರ್ ದಾಖಲಾಗಿದ್ದ ದಿನಾಂಕ ಹಾಗೂ ಠಾಣೆ:
- **8**: ಒಟ್ಟು ಎಫ್‌ಐಆರ್‌ಗಳು: (ಕಲಬುರಗಿ ಚೌಕ್, ಕಲಬುರ್ಗಿ ಬಜಾರ್, ಬೆಂಗಳೂರಿನ ಹೈಗ್ರೌಂಡ್ಸ್, ಕೋರಮಂಗಲ, ರಾಮಮೂರ್ತಿನಗರ, ಯಲಹಂಕ ನ್ಯೂಟೌನ್)
- **26-07-2022**: ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದ ದಿನಾಂಕ
- **03-07-2023**: ಎಡಿಜಿಪಿ ಅಮೃತ್ ಪೌಲ್ ಬಂಧನ ದಿನಾಂಕ

ಬಂಧಿತ ಪೊಲೀಸ್ ಅಧಿಕಾರಿಗಳು

- **ಅಮೃತ್ ಪೌಲ್,** ಎಡಿಜಿಪಿ, ಪೊಲೀಸ್ ನೇಮಕಾತಿ ವಿಭಾಗ
- **ಶಾಂತಕುಮಾರ್,** ಡಿವೈಎಸ್ಪಿ, ಪೊಲೀಸ್ ನೇಮಕಾತಿ ವಿಭಾಗ
- **ವೈಜನಾಥ ರೇವೂರ,** ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆಯ ಕಲಬುರಗಿ ವಿಭಾಗದ ಡಿವೈಎಸ್ಪಿ
- **ಮಲ್ಲಿಕಾರ್ಜುನ ಸಾಲಿ,** ರಾಯಚೂರು ಜಿಲ್ಲೆಯ ಲಿಂಗಸುಗೂರು ಡಿವೈಎಸ್ಪಿ
- **ಎಚ್. ಶ್ರೀಧರ್,** ಎಎಚ್‌ಸಿ
- **ಡಿ. ಹರ್ಷ,** ಎಫ್‌ಡಿಎ
- **ಟಿ.ಸಿ. ಶ್ರೀನಿವಾಸ್,** ಎಎಚ್‌ಸಿ
- **ಕೆ.ಎಸ್. ಲೋಕೇಶಪ್ಪ,** ಆರ್‌ಎಸ್‌ಐ
- **ಆರ್. ಮಂಜುನಾಥ್,** ಅಧೀಕ್ಷಕ, ಚಿಕ್ಕಮಗಳೂರು ಪೊಲೀಸ್ ಕಚೇರಿ
- **ಗುರುವ ಬಸವರಾಜ್,** ಆರ್‌ಪಿಐ, ಕೆಎಸ್‌ಆರ್‌ಪಿ 12ನೇ ಪಡೆ
- **ಎಚ್.ವಿ. ಮಧು,** ಆರ್‌ಪಿಐ, ಕೆಎಸ್‌ಆರ್‌ಪಿ 5ನೇ ಪಡೆ
- **ಕೆ. ಹರೀಶ್,** ಪಿಎಸ್‌ಐ, ಬ್ಯಾಡರಹಳ್ಳಿ
- **ಆನಂದ ಮೇತ್ರಿ,** ಕಲಬುರಗಿ ಬೆರಳಚ್ಚು ವಿಭಾಗದ ಸಿಪಿಐ
- **ರುದ್ರಗೌಡ ಪಾಟೀಲ,** ಸಿಎಆರ್ ಪೊಲೀಸ್ ಕಾನ್‌ಸ್ಟೆಬಲ್

ಹೈಕೋರ್ಟ್‌ನಲ್ಲಿ ಇತ್ಯರ್ಥಕ್ಕೆ ಸೂಚನೆ

ನವದೆಹಲಿ: ಅಕ್ರಮ ಆಸ್ತಿ ಗಳಿಕೆ ಪ್ರಕರಣದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ತನಿಖೆಗೆ ತಡೆಯಾಜ್ಞೆ ನೀಡಿರುವ ಆದೇಶ ರದ್ದು ಕೋರಿ ಸಿಬಿಐ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ಕರ್ನಾಟಕ ಹೈಕೋರ್ಟ್‌ನಲ್ಲಿ ಪ್ರಕರಣ ಇತ್ಯರ್ಥಗೊಳಿಸಲು ನ್ಯಾಯಮೂರ್ತಿ ಬೇಲಾ ಎಂ. ತ್ರಿವೇದಿ ನೇತೃತ್ವದ ದ್ವಿಸದಸ್ಯ ಪೀಠವು ನಿರ್ದೇಶನ ನೀಡಿದೆ. ‘ತನಿಖೆಗೆ ಹೈಕೋರ್ಟ್ ಏಕಸದಸ್ಯ ಪೀಠ ತಡೆ ನೀಡಿರಲಿಲ್ಲ. ವಿಭಾಗೀಯ ಪೀಠ ತಡೆ ನೀಡಿತ್ತು. ತಡೆಯಾಜ್ಞೆ ರದ್ದು ಕೋರಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದೆ. ಪ್ರಕರಣದ ತನಿಖೆಗೆ ಅನುಮತಿ ನೀಡಬೇಕು’ ಎಂದು ಸಿಬಿಐ ವಕೀಲರು ಮನವಿ ಮಾಡಿದರು.

ಬೆಂಕಿ ಜೊತೆ ಆಟ: ‘ಸುಪ್ರೀಂ’

ಒಂದನೇ ಪುಟದಿಂದ

ಪಂಜಾಬ್ ಸರ್ಕಾರವನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲರಾದ ಎ.ಎಂ. ಸಿಂಘ್ವಿ ಅವರು ಈ ಹಂತದಲ್ಲಿ, ‘ಜೂನ್ ತಿಂಗಳಲ್ಲಿ ಅಧಿವೇಶನ ನಡೆಸುವ ಸ್ಪೀಕರ್ ಅವರ ಅಧಿಕಾರವನ್ನೇ ರಾಜ್ಯಪಾಲರು ಶಂಕಿಸುತ್ತಿದ್ದಾರೆ’ ಎಂದು ಪೀಠದ ಗಮನಕ್ಕೆ ತಂದರು.

ಇದಕ್ಕೆ ಪೀಠವು, ‘ರಾಜ್ಯಪಾಲರು ಇದನ್ನು ಹೇಗೆ ಹೇಳುತ್ತಾರೆ? ಪಂಜಾಬ್‌ನಲ್ಲಿ ಆಗುತ್ತಿರುವ ಬೆಳವಣಿಗೆಗಳು ತೃಪ್ತಿಕರವಾಗಿಲ್ಲ. ನಾವು ಸಂಸದೀಯ ಪ್ರಜಾಪ್ರಭುತ್ವದಲ್ಲಿ ಮುಂದುವರಿಯುತ್ತಿದ್ದೇವೆಯೇ ಎಂದು ಪ್ರಶ್ನಿಸಿತು.

‘ಜೂನ್ 19, 20ರಂದು ನಡೆದಿದ್ದ ಅಧಿವೇಶನದ ಸಿಂಧುತ್ವವನ್ನು ಪ್ರಶ್ನಿಸುವ, ಶಂಕಿಸುವ ಯಾವುದೇ ಸಾಂವಿಧಾನಿಕ ಆಧಾರಗಳು ಇಲ್ಲ ಎಂಬುದು ನಮ್ಮ ಅಭಿಪ್ರಾಯ. ಅಧಿವೇಶನದ ಕ್ರಮಬದ್ಧತೆಯನ್ನೇ ಅನುಮಾನಿಸುವ ಯಾವುದೇ ಪ್ರಯತ್ನಗಳು ಪ್ರಜಾಪ್ರಭುತ್ವ ವ್ಯವಸ್ಥೆಗೇ ಗಂಭೀರವಾದ ಅಪಾಯವನ್ನು ತರುವಂತಹದ್ದಾಗಿದೆ’ ಎಂದು ಪೀಠ ಅಭಿಪ್ರಾಯಪಟ್ಟಿತು.

ಆದೇಶವನ್ನು ಸವಿವರವಾಗಿ ಉಕ್ತಗೊಳಿಸಿದ ಪೀಠವು, ‘ಸ್ಪೀಕರ್‌ರನ್ನು ಸದನದ ಹಕ್ಕುಬಾಧ್ಯತೆಗಳ ರಕ್ಷಕ ಎಂದು ಗುರುತಿಸಲಾಗುತ್ತದೆ. ಅಧಿವೇಶನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿ ಅವರು ಅಧಿಕಾರವನ್ನು ಸರಿಯಾಗಿ ನಿರ್ವಹಿಸಿದ್ದಾರೆ. ಪಂಜಾಬ್ ವಿಧಾನಸಭೆ ನಡಾವಳಿಯ ನಿಯಮ 16ರ ಪರಿಮಿತಿಯಲ್ಲೇ ಜೂನ್‌ನಲ್ಲಿ ಅಧಿವೇಶನವನ್ನು ಕರೆದಿದ್ದರು ಎಂದು ಹೇಳಿತು.

‘ಅಧಿವೇಶನದ ಸಿಂಧುತ್ವವನ್ನು ಶಂಕಿಸುವ ಸಾಂವಿಧಾನಿಕ ಆಯ್ಕೆಯು ರಾಜ್ಯಪಾಲರಿಗೆ ಇಲ್ಲ. ಶಾಸನಸಭೆಯು ಪೂರ್ಣವಾಗಿ ಶಾಸನಸಭೆಗೆ ಚುನಾಯಿತರಾದ ಸದಸ್ಯರನ್ನು ಒಳಗೊಂಡಿದೆ’ ಎಂದು ಹೇಳಿತು.

ಈ ಕುರಿತ ಆದೇಶದಲ್ಲಿ, ‘ವಿಧಾನ ಸಭೆಯ ಅವಧಿಯಲ್ಲಿ ಸದನದ ಮುಂದೂಡಿಕೆ ಸ್ಪೀಕರ್‌ರ ನಿರ್ಧಾರಕ್ಕೆ ಒಳಪಟ್ಟಿದೆ. ಅಧಿವೇಶನವು ಸಾಂವಿಧಾನಿಕವಾಗಿ ಕ್ರಮಬದ್ಧವಾಗಿದ್ದು, ರಾಜ್ಯಪಾಲರು ಕಡ್ಡಾಯವಾಗಿ ಮಸೂದೆ ಕುರಿತು ನಿರ್ಧರಿಸಬೇಕು’ ಎಂದು ತಿಳಿಸಿತು.

‘ನಾವು ರಾಜ್ಯಪಾಲರ ಅಧಿಕಾರ ಅಥವಾ ಸಂವಿಧಾನದ ವಿಧಿ 200ರ ಪರಿಮಿತಿಯಲ್ಲಿ ಯಾವ ರೀತಿಯಾಗಿ ಕಾರ್ಯ ನಿರ್ವಹಿಸಬೇಕು ಎಂಬುದರ ಕುರಿತು ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿಲ್ಲ’ ಎಂದೂ ಪೀಠ ಸ್ಪಷ್ಟಪಡಿಸಿತು.

‘ಪ್ರಜಾಪ್ರಭುತ್ವದ ಸಂಸದೀಯ ವ್ಯವಸ್ಥೆಯಲ್ಲಿ ನಿಜವಾದ ಅಧಿಕಾರ ಚುನಾಯಿತ ಜನಪ್ರತಿನಿಧಿಗಳಿಗಿದೆ ಎಂಬುದನ್ನಷ್ಟೇ ನಾವು ಗಮನಿಸಿದ್ದೇವೆ. ರಾಷ್ಟ್ರಪತಿಯವರು ನೇಮಿಸುವ ರಾಜ್ಯಪಾಲರು ರಾಜ್ಯದಲ್ಲಿ ಸಂವಿಧಾನಿಕ ಮುಖ್ಯಸ್ಥರಾಗಿದ್ದಾರೆ’ ಎಂದಿತು.

ರಾಜ್ಯಪಾಲರ ಪರ ವಕೀಲ ಜೈನ್ ಅವರು, ಸಂವಿಧಾನದ ವಿಧಿ 174ರ ಅನ್ವಯ ಮಾರ್ಚ್‌ನಲ್ಲಿ ಸೇರಿದ್ದ ಬಜೆಟ್ ಅಧಿವೇಶನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿತ್ತು. ಜೂನ್‌ನಲ್ಲಿ ನಡೆದಿದ್ದ ಅಧಿವೇಶನ ಕ್ರಮಬದ್ಧ ಎಂದು ಕೋರ್ಟ್ ಪರಿಗಣಿಸಿದರೆ ರಾಜ್ಯಪಾಲರು ಮಸೂದೆಗಳಿಗೆ ಸಂಬಂಧಿಸಿದ ಮುಂದಿನ ಕ್ರಮಕೈಗೊಳ್ಳಲು ಸಿದ್ಧರಿದ್ದಾರೆ ಎಂದು ತಿಳಿಸಿದರು.

ಅಧಿವೇಶನ ಮುಂದೂಡುವ ಸ್ಪೀಕರ್ ಅವರ ಅಧಿಕಾರವನ್ನು, ಸದನವನ್ನು ಶಾಶ್ವತವಾಗಿ ಯಥಾಸ್ಥಿತಿಯಲ್ಲಿ ಇಡಲು ದುರ್ಬಳಕೆ ಮಾಡಿಕೊಳ್ಳಲಾಗದು. ವಾರ್ಷಿಕವಾಗಿ ಮೂರು ಅಧಿವೇಶನಗಳು ಸೇರಲಿವೆ. ಒಂದು ಅಧಿವೇಶನವನ್ನು ಅನಿರ್ದಿಷ್ಟವಾಗಿ ಮುಂದೂಡಲು ಅವಕಾಶ ನೀಡಲಾಗದು ಎಂದು ಪೀಠವು ಇದಕ್ಕೆ ಪ್ರತಿಕ್ರಿಯಿಸಿತು.

ಪಿಎಸ್‌ಐ ಅಕ್ರಮ: ಮರು ಪರೀಕ್ಷೆ

ಒಂದನೇ ಪುಟದಿಂದ

ಬ್ಲೂ ಟೂತ್: ‘ಬ್ಲೂ ಟೂತ್ ಬಳಕೆ ಆರೋಪಕ್ಕೆ ಸಂಬಂಧಿಸಿದಂತೆ ಹಲವು ಪ್ರಕರಣಗಳು ಕ್ರಿಮಿನಲ್ ಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇವೆ. ಬ್ಲೂ ಟೂತ್ ಬಳಸಿ ಯಾವುದೇ ಅಕ್ರಮ ನಡೆದಿಲ್ಲವೆಂಬುದು ಸ್ಪಷ್ಟವಾಗಿ ದೃಢಪಡುವ ತನಕ ಪರೀಕ್ಷೆಯನ್ನು ರದ್ದು ಮಾಡಿರುವ ಆಡಳಿತದ ಆದೇಶದಲ್ಲಿ ತಪ್ಪಾಗಿದೆ ಎಂದು ಹೇಳಲು ಆಗದು. ಈ ಹಂತದಲ್ಲಿ ಬ್ಲೂ ಟೂತ್ ಬಳಕೆ ಬಗ್ಗೆ ಏನನ್ನಾದರೂ ದಾಖಲಿಸಿದರೆ ಅದು ವಿಚಾರಣಾ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಮೇಲೆ ಪರಿಣಾಮ ಬೀರುತ್ತದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರತ್ಯೇಕಿಸಲಾಗದು: ‘ಪ್ರಶ್ನೆ ಪತ್ರಿಕೆ ಮೊದಲೇ ಸೋರಿಕೆಯಾದ ಕಾರಣದಿಂದಲೇ ಪ್ರಶ್ನೆ ಪತ್ರಿಕೆಗೆ ಅನುಗುಣವಾಗಿ ಅಭ್ಯರ್ಥಿಗೆ ಬ್ಲೂ ಟೂತ್ ಮೂಲಕ 3ನೇ ವ್ಯಕ್ತಿ ಉತ್ತರಿಸಿರುವ ಸಾಧ್ಯತೆ ಇದೆ. ನೇಮಕ ವಿಭಾಗದ ಪೊಲೀಸ್ ಎಡಿಜಿಪಿಯೇ ಉತ್ತರಪತ್ರಿಕೆಯ ಒಎಂಆರ್ ಶೀಟ್‌ಗಳನ್ನು ತಿರುಚಿರುವ ಆರೋಪ ಇರುವುದರಿಂದ ಪರೀಕ್ಷೆ ಮೇಲಿನ ಸಾರ್ವಜನಿಕ ವಿಶ್ವಾಸವೇ ಹಾಳಾಗಿದೆ. 53 ಅಭ್ಯರ್ಥಿಗಳ ವಿರುದ್ಧ ಆರೋಪ ಪಟ್ಟಿ ದಾಖಲಾಗಿದ್ದು, 52 ಅಭ್ಯರ್ಥಿಗಳನ್ನು ಡಿಬಾರ್ ಮಾಡಲಾಗಿದೆ. ಬ್ಲೂ ಟೂತ್ ಬಳಕೆಯಾಗಿರುವುದರಿಂದ ಇನ್ನೂ ಕೆಲವರು ಅಕ್ರಮದಲ್ಲಿ ಭಾಗಿಯಾಗಿರುವ ಸಂಶಯಗಳಿವೆ. ಹೀಗಾಗಿ ಕಳಂಕಿತರು, ಕಳಂಕಿತರಲ್ಲದವರನ್ನು ಪ್ರತ್ಯೇಕಿಸಲು ಸಾಧ್ಯವಿಲ್ಲ’ ಎಂದು ನ್ಯಾಯಪೀಠ ಹೇಳಿದೆ.

ಪ್ರತಿಪಾದನೆ: ‘ಪಿಎಸ್‌ಐ ನೇಮಕಾತಿ ಲಿಖಿತ ಪರೀಕ್ಷೆಗೆ 54,103 ಮಂದಿ ಹಾಜರಾಗಿದ್ದರು. ಅದರಲ್ಲಿ 545 ಮಂದಿ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಯ್ಕೆಯಾಗಿದ್ದರು. ಈ ಪೈಕಿ 53 ಮಂದಿಯ ವಿರುದ್ಧ ತನಿಖಾಧಿಕಾರಿಗಳು ಆರೋಪ ಪಟ್ಟಿ ಸಲ್ಲಿಸಿದ್ದಾರೆ. ಇವರಲ್ಲಿ 52 ಮಂದಿಗೆ 2022ರ ಏಪ್ರಿಲ್ 6ರಂದು ಷೋಕಾಸ್ ನೋಟಿಸ್ ನೀಡಿ, 2023ರ ಜೂನ್ 20ರಂದು ಡಿಬಾರ್ ಮಾಡಲಾಗಿದೆ. 53 ಮಂದಿ ಆರೋಪಿಗಳನ್ನು ಹೊರತುಪಡಿಸಿ ಉಳಿದವರ ವಿರುದ್ಧ ಯಾವುದೇ ಆರೋಪಗಳು ಇಲ್ಲ’ ಎಂದು ಅರ್ಜಿದಾರರು ಪ್ರತಿಪಾದಿಸಿದ್ದರು.

ಪ್ರಕರಣವೇನು?: 2022ರ ಜುಲೈ 19ರಂದು ಕೆಎಟಿ ಅರ್ಜಿ ವಜಾಗೊಳಿಸಿತ್ತು. ಇದರಿಂದ ಅಭ್ಯರ್ಥಿಗಳು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಹೊಸದಾಗಿ ಲಿಖಿತ ಪರಿಕ್ಷೆ ನಡೆಸುವ ಸರ್ಕಾರದ ಆದೇಶಕ್ಕೆ 2022ರ ಸೆಪ್ಟೆಂಬರ್ 27ರಂದು ಮಧ್ಯಂತರ ತಡೆ ನೀಡಿತ್ತು.

ಬಿಜೆಪಿಗೆ ವಿಜಯೇಂದ್ರ ಸಾರಥಿ

ಒಂದನೇ ಪುಟದಿಂದ

ಕೇಂದ್ರದಲ್ಲಿ ಮತ್ತೆ ಅಧಿಕಾರ ಹಿಡಿಯಬೇಕಾದರೆ, ಲೋಕಸಭೆ ಚುನಾವಣೆಯಲ್ಲಿ ಕರ್ನಾಟಕದಲ್ಲೂ ಹೆಚ್ಚಿನ ಸ್ಥಾನ ಗೆಲ್ಲಬೇಕಿದ್ದರೆ ಯಡಿಯೂರಪ್ಪ ನೆರವು ಅತ್ಯಗತ್ಯ ಎಂದು ಮೋದಿ ಮತ್ತು ಅಮಿತ್ ಶಾ ಮನಗಂಡಿದ್ದಾರೆ ಎಂಬುದನ್ನು ಈ ನೇಮಕ ತೋರಿಸುತ್ತದೆ. ಎರಡೇ ವರ್ಷಗಳಲ್ಲಿ ಬಿಎಸ್‌ವೈ ಕುಟುಂಬವೇ ದೆಹಲಿ ನಾಯಕರಿಗೆ ಪ್ರಿಯವೆನಿಸಿದೆ.

ವಿಧಾನಸಭೆ ಚುನಾವಣೆ ಬಳಿಕ, ನೆಲ ಕಚ್ಚಿರುವ ಪಕ್ಷ ಸಂಘಟನೆಗೆ ಹೊಸ ಹುರುಪು ನೀಡಿ ಮಹಾ ಸಮರಕ್ಕೆ ‘ಕಮಲ’ವನ್ನು ಸಜ್ಜುಗೊಳಿಸುವ ದೊಡ್ಡ ಹೊಣೆ ವಿಜಯೇಂದ್ರ ಅವರ ಮೇಲಿದೆ. ಲಿಂಗಾಯತ ಮತಗಳು ಪಕ್ಷದಿಂದ ಚದುರದಂತೆ ನೋಡಿಕೊಳ್ಳಲು ಯಡಿಯೂರಪ್ಪ ಬೇಡಿಕೆಗೆ ಪಕ್ಷದ ವರಿಷ್ಠರು ಅಸ್ತು ಎಂದಿದ್ದಾರೆ. ನಾಲ್ಕೈದು ತಿಂಗಳಿಂದ ತಮ್ಮ ಬೇಡಿಕೆಯಿಂದ ಒಂಚೂರು ಹಿಂದಕ್ಕೆ ಸರಿಯದೆ ತಮ್ಮ ಪುತ್ರನ ನೇಮಕಕ್ಕೆ ವರಿಷ್ಠರಿಂದ ಕೊನೆಗೂ ಅಂಕಿತ ಹಾಕಿಸಿಕೊಂಡಿರುವ ಯಡಿಯೂರಪ್ಪ, ರಾಜ್ಯದ ಬಿಜೆಪಿ ಪಾಲಿಗೆ ತಾವೇ ‘ಸುಪ್ರೀಂ’ ಎಂದು ತೋರಿಸಿಕೊಟ್ಟಿದ್ದಾರೆ.

ತಂದೆಯಿಂದ ಬಂದಿರುವ ವರ್ಚಸ್ಸು, ಜನಪ್ರಿಯತೆ, ಹಣ ಖರ್ಚು ಮಾಡುವ ಹಾಗೂ ಪಕ್ಷವನ್ನು ಸಂಘಟಿಸುವ ಸಾಮರ್ಥ್ಯ ವಿಜಯೇಂದ್ರ ಅವರಿಗಿದೆ. ರಾಜ್ಯದ ಉದ್ದಗಲಕ್ಕೂ ಓಡಾಡಿ ಪಕ್ಷವನ್ನು ಕಟ್ಟಬಲ್ಲರು. ಮಗನಿಗೆ ಪಟ್ಟ ಕಟ್ಟಿರುವುದರಿಂದ ಯಡಿಯೂರಪ್ಪ ಅವರೂ ಪೂರ್ಣ ಮನಸ್ಸಿನಿಂದ ಕೆಲಸ ಮಾಡಬಲ್ಲರು ಎಂಬ ಲೆಕ್ಕಾಚಾರ ಹಾಕಿ ಈ ನೇಮಕ ಮಾಡಲಾಗಿದೆ ಎಂದು ಮೂಲಗಳು ಹೇಳಿವೆ. ಈ ಹಠಾತ್ ಬೆಳವಣಿಗೆಯಿಂದಾಗಿ, ಪಕ್ಷದ ‘ಸಾರಥಿ’ಯಾಗಲು ಆಸೆ ಕಂಗಳಿಂದ ಕಾಯುತ್ತಿದ್ದ ಕೇಸರಿ ಪಡೆಯ ಹಿರಿಯ ನಾಯಕರಿಗೆ ನಿರಾಸೆಯಾಗಿದೆ. ರಾಜ್ಯದ ಸಂಘಟನೆ, ನೇಮಕದಲ್ಲಿ ಮೇಲುಗೈ ಸಾಧಿಸಲು ಸದ್ದಿಲ್ಲದೆ ತಂತ್ರ ಹೆಣೆಯುತ್ತಿದ್ದ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರಿಗೂ ಹಿನ್ನಡೆಯಾಗಿದೆ.

ಯತ್ನಾಳಗೆ ಹಿನ್ನಡೆ: ಯಾರು ವಿಪಕ್ಷ ನಾಯಕ?

ಲಿಂಗಾಯತ ಸಮುದಾಯಕ್ಕೆ ಪಕ್ಷದ ಅಧ್ಯಕ್ಷ ಸ್ಥಾನ ನೀಡಿರುವುದರಿಂದ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ಶಾಸಕ ವಿ.ಸುನೀಲ್ ಕುಮಾರ್, ಆರಗ ಜ್ಞಾನೇಂದ್ರ, ಆರ್.ಅಶೋಕ ಹಾಗೂ ಸಿ.ಎನ್.ಅಶ್ವತ್ಥ ನಾರಾಯಣ ಹೆಸರು ಮುನ್ನೆಲೆಗೆ ಬಂದಿದೆ.

ಹಿಂದುಳಿದ ಅಥವಾ ಒಕ್ಕಲಿಗ ಸಮುದಾಯದ ನಾಯಕರನ್ನು ವಿಪಕ್ಷ ನಾಯಕರನ್ನಾಗಿ ನೇಮಿಸಬಹುದು ಎಂಬ ಚರ್ಚೆಗಳು ನಡೆದಿವೆ.

ವಿಜಯೇಂದ್ರ ನೇಮಕದಿಂದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಪಕ್ಷದಲ್ಲಿ ಭಾರಿ ಹಿನ್ನಡೆಯಾಗಿದೆ. ಕಳೆದ ನಾಲ್ಕೈದು ವರ್ಷಗಳಿಂದ ಯಡಿಯೂರಪ್ಪ ಅವರನ್ನು ಪ್ರಬಲವಾಗಿ ವಿರೋಧಿಸುತ್ತಿದ್ದ ಯತ್ನಾಳ, ಬಿಜೆಪಿ ಸರ್ಕಾರದ ಅವಧಿಯಲ್ಲಿ ಭ್ರಷ್ಟಾಚಾರದ ಆರೋಪವನ್ನೂ ಮಾಡಿದ್ದರು. ವಿಜಯೇಂದ್ರ ಅವರನ್ನು ಗುರಿ ಮಾಡಿ ನಿರಂತರ ಟೀಕೆ ಮಾಡಿದ್ದರು. ಯಡಿಯೂರಪ್ಪ ಮುಖ್ಯಮಂತ್ರಿ ಸ್ಥಾನ ’ತ್ಯಾಗ‘ ಮಾಡಲು ಇದೂ ಒಂದು ಕಾರಣವಾಗಿತ್ತು. ಈ ವೇಳೆ, ಅಧ್ಯಕ್ಷ ಅಥವಾ ಪ್ರತಿಪಕ್ಷ ಸ್ಥಾನದ ನಿರೀಕ್ಷೆಯಲ್ಲಿದ್ದ ಯತ್ನಾಳರ ಆಸೆಗೆ ವರಿಷ್ಠರು ತಣ್ಣೀರು ಎರಚಿದ್ದಾರೆ.

ಕುಟುಂಬ ರಾಜಕಾರಣಕ್ಕೆ ಮಣೆ

ಕಾಂಗ್ರೆಸ್ ಹಾಗೂ ವಿಪಕ್ಷ ನಾಯಕರ ‘ಕುಟುಂಬ ರಾಜಕಾರಣ’ವನ್ನು ವ್ಯಂಗ್ಯವಾಗಿ ತಿವಿಯುತ್ತಿದ್ದ ಮೋದಿ ಹಾಗೂ ಅಮಿತ್ ಶಾ ಜೋಡಿ, ವಿಜಯೇಂದ್ರ ನೇಮಕಕ್ಕೆ ಸಮ್ಮತಿ ಸೂಚಿಸಿದ್ದಾರೆ.

ಯಡಿಯೂರಪ್ಪ ಅವರು ಬಿಜೆಪಿಯ ಸಂಸದೀಯ ಮಂಡಳಿ ಸದಸ್ಯರಾಗಿದ್ದಾರೆ. ಅವರ ಹಿರಿಯ ಮಗ ಬಿ.ವೈ. ರಾಘವೇಂದ್ರ ಶಿವಮೊಗ್ಗ ಸಂಸದರಾಗಿದ್ದಾರೆ. ಎರಡನೇ ಮಗ ವಿಜಯೇಂದ್ರಗೆ ರಾಜ್ಯದಲ್ಲಿ ಮಹತ್ವದ ಹುದ್ದೆಯನ್ನೂ ಈಗ ನೀಡಿದ್ದಾರೆ. ಬಿಜೆಪಿಯೂ ಕುಟುಂಬ ರಾಜಕಾರಣವನ್ನೇ ನೆಚ್ಚಿಕೊಂಡಿರುವುದನ್ನು ಇದು ತೋರಿಸುತ್ತದೆ.

‘ಸಂಘಟನೆಗೆ ಅಹರ್ನಿಶಿ ದುಡಿಯುವೆ’

ಸಂಘ ಹಾಗೂ ಪಕ್ಷದ ಹಿರಿಯ ನಾಯಕರ ಮಾರ್ಗದರ್ಶನದಲ್ಲಿ ಸರ್ವರ ನಿರೀಕ್ಷೆ, ಜನರ ಅಪೇಕ್ಷೆಗೆ ಪೂರಕವಾಗಿ ರಾಜ್ಯದಲ್ಲಿ ಪಕ್ಷಕ್ಕೆ ಹೊಸ ಚೈತನ್ಯ ತುಂಬಲು ಕಾರ್ಯಕರ್ತರೊಂದಿಗೆ ಕಾರ್ಯಕರ್ತನಾಗಿ ಅಹರ್ನಿಶಿ ದುಡಿಯುವ ಸಂಕಲ್ಪ ತೊಟ್ಟಿರುವೆ. ನಾಡಿನ ಜನರ ಆಶೀರ್ವಾದವೇ ಶ್ರೀರಕ್ಷೆ.

ಬಿ.ವೈ.ವಿಜಯೇಂದ್ರ, ರಾಜ್ಯ ಘಟಕದ ನೂತನ ಅಧ್ಯಕ್ಷ

ದೀಪಾವಳಿ ಸಮಯದಲ್ಲಿ ಬಿಜೆಪಿ ವರಿಷ್ಠರು ಬಿಎಸ್‌ವೈ ಕುಟುಂಬಕ್ಕೆ ಮತ್ತೊಮ್ಮೆ ಸಿಹಿ ಸುದ್ದಿ ನೀಡಿದ್ದಾರೆ. ದೀಪಾವಳಿ ಸಂದರ್ಭದಲ್ಲೇ 2014ರಲ್ಲಿ ಬಿಎಸ್‌ವೈ ಅವರನ್ನು ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ನೇಮಿಸಲಾಗಿತ್ತು.

ವಿಧಾನಸಭಾ ಚುನಾವಣೆಯ ಬಳಿಕ ರಾಜ್ಯ ಬಿಜೆಪಿಯು ನಾವಿಕನಿಲ್ಲದ ದೋಣಿಯಂತಾಗಿತ್ತು. ನಳಿನ್ ಕುಮಾರ್ ಕಟೀಲು ಹೆಸರಿಗೆ ಮಾತ್ರ ಅಧ್ಯಕ್ಷರಾಗಿದ್ದರು. ವಿರೋಧ ಪಕ್ಷದ ನಾಯಕನ ಜತೆಗೆ ನೂತನ ಅಧ್ಯಕ್ಷರನ್ನು ನೇಮಿಸಲು ವರಿಷ್ಠರು ಒಲವು ತೋರಿದ್ದರು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅಥವಾ ಸಿ.ಟಿ.ರವಿ ನೇಮಕವಾಗಬಹುದು ಎಂದು ಪಕ್ಷದ ಪಡಸಾಲೆಯಲ್ಲಿ ಚರ್ಚೆಗಳು ನಡೆದಿದ್ದವು. ನಡ್ಡಾ ಹಾಗೂ ಅಮಿತ್ ಶಾ ಅವರು ಯಡಿಯೂರಪ್ಪ ಅವರನ್ನು ಜೂನ್ ತಿಂಗಳಲ್ಲಿ ಕರೆಸಿಕೊಂಡು ಸಲಹೆ ಕೇಳಿದ್ದರು. ವಿಜಯೇಂದ್ರ ಅವರನ್ನೇ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಮಾಡಬೇಕು ಎಂದು ಬಿಎಸ್‌ವೈ ಹಟ ಹಿಡಿದಿದ್ದರು. ಇದಕ್ಕೆ ವರಿಷ್ಠರು ಒಪ್ಪಿರಲಿಲ್ಲ. ನಡ್ಡಾ ಅವರನ್ನು ವಿಜಯೇಂದ್ರ ಅವರೂ ಭೇಟಿ ಮಾಡಿ ಲಾಬಿ ನಡೆಸಿದ್ದರು. ವರಿಷ್ಠರನ್ನು ಮತ್ತೊಮ್ಮೆ ಭೇಟಿ ಮಾಡಿದಾಗಲೂ ಬಿಎಸ್‌ವೈ ಇಟ್ಟಿದ್ದು ಒಂದೇ ಬೇಡಿಕೆ. ಮಗನಿಗೆ ಪಟ್ಟ ಕಟ್ಟಬೇಕು ಎಂಬುದು ಅವರ ಏಕೈಕ ಸಲಹೆ, ಎಚ್ಚರಿಕೆ ಆಗಿತ್ತು.

ವಿಜಯೇಂದ್ರ ಮುಂದಿರುವ ಸವಾಲುಗಳು

- ಕಾಂಗ್ರೆಸ್‌ನತ್ತ ಮುಖ ಮಾಡಿರುವ ಶಾಸಕರು, ಮಾಜಿ ಶಾಸಕರು ಹಾಗೂ ಮುಖಂಡರನ್ನು ಪಕ್ಷದಲ್ಲೇ ಉಳಿಸಿಕೊಳ್ಳುವುದು.
- ಲೋಕಸಭಾ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸುವುದು
- 2019ರಲ್ಲಿ ಗೆದ್ದ 25 ಸ್ಥಾನಗಳನ್ನು ಉಳಿಸಿಕೊಳ್ಳಲು ತಂತ್ರ ಹೆಣೆಯುವುದು
- ವಿಧಾನಸಭಾ ಚುನಾವಣೆಯ ಹೀನಾಯ ಸೋಲಿನ ನಂತರ ಪಕ್ಷದ ರಾಜ್ಯ ಘಟಕ ಮನೆಯೊಂದು ಮೂರು ಬಾಗಿಲು ಎಂಬಂತಾಗಿದೆ. ಹಿರಿಯ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಂಘಟನೆಗೆ ನವ ಚೈತನ್ಯ ತುಂಬುವುದು.
- ಸೋಲಿನಿಂದ ದಿಕ್ಕೆಟ್ಟು ಕೂತಿರುವ ಕಾರ್ಯಕರ್ತರನ್ನು ಒಟ್ಟುಗೂಡಿಸಿ ಸಂಘಟನೆಗೆ ಅಣಿಗೊಳಿಸುವುದು.

> ಬಿ.ವೈ. ವಿಜಯೇಂದ್ರ ಅವರ ಜೊತೆ ನಾನೂ ರಾಜ್ಯದಲ್ಲಿ ಪ್ರವಾಸ ಮಾಡುತ್ತೇನೆ. ಎಲ್ಲರೂ ಸೇರಿ ಪಕ್ಷವನ್ನು ರಾಜ್ಯದಲ್ಲಿ ಮರಳಿ ಅಧಿಕಾರಕ್ಕೆ ತರಲು ಶ್ರಮಿಸುತ್ತೇವೆ
>
> **ನಳಿನ್‌ಕುಮಾರ್ ಕಟೀಲ್,** ನಿರ್ಗಮಿತ ಅಧ್ಯಕ್ಷ, ಸಂಸದ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

READY TO MOVE IN
₹ 39 Lacs
2 BHK FLAT
FULLY FURNISHED including AC & WARDROBE
* All inclusive except Registration
Loan upto 90%
RENTAL POTENTIAL RS. 20,000 P.M FOR THIS APARTMENT
Chandapura, Near Narayana Hrudayalaya & Metro Station, on Hosur Main Road
NISARGA BUILDERS Call for site visit 6366 864 500

REQUIRED 2000 sqft.
GROUND FLOOR OFFICE SPACE
for RENT / LEASE
@
Chandra Layout, Kengeri Satellite Town and nearby R V College Mysore Road, Bengaluru.
Contact: 9740191676





REAL ESTATE SELLING

Sites

Arkavathi Layout

ARKAVATHI LAYOUT Site For Sale 55x100 Both-Sides Road Adjacent to BDA Layout In Good Location Call: 86602-20048 76769-00174

Banashankari

BANASHANKARI 6TH Stage, Vishweswaraiah BDA/A Katha 20x30, 30x40, 40x60,50x80, Buying/ Selling, Immediate Settlement. SHIVARAJU: 9845390290, 7676547557.

BDA SITE For Sale at BSK 6th Stage, 2nd Block, 50x80 West Facing Contact: 8884396958

SITE FOR SALE Banshankari 6th Stage 11 Block DC Conversation 30×40 East Facing, price 8,500 Contact. 9035699974

Electronic City

KHB SITE 45x40, 20x30 Sale at Suryanagar Phase 3, Near Chandapura, Attible Road. Call 9066865343

Kempegowda Layout

KEMPEGOWDA LAYOUT, BDA COMMERCIAL/ RESIDENTIAL SITE FOR SALE 30X40, 40X60, 50X80 CONTACT KUMAR: 9945119449

Magadi Road

35X30 CORNER Revenue Site Sale 40ft Road Opposite Podar International School Magadi Road Contact: 9731652042

Nagarabhavi

AVAILABLE 30X40 Site D Group West Facing BDA Katha Sale Nagarabhavi Genuine Buyers Contact: 9743381719

50X80 EAST FACING CORNER SITE SALE Nagarabhavi 2nd Stage, Near Swathi Hotel. Genuine Buyers Call: 9964358675.

Rajarajeshwari Nagar

40X60 'A'KHATA East Facing Site for Sale attached to BEML 3rd Stage RajarajeshwariNagar. 9448288522

Sadashiva Nagar

40X60 EAST Face, Sadashiva Nagar, 30x35 Commercial Basavanagudi, for SALE. Agent's Welcome: CONTACT: 8618373754

Uttarahalli

POORNAPRAJNA LAYOUT 30x40, 30x50,40x60 North/ East-West Facing Residential Sites For Sale. Call- 9900399006 Agents Excuse

Vishweshwariah Layout

"VISVESHWARAIAH 1ST-BLOCK 40x60 North Facing Site, Near Shirke and 100 Feet Ring Road. 9845268611/ 8722706156"

VISHWESHWARAIAH LAYOUT 6th Block BDA 50x80 EF 60ft Road Near 100ft Road Good Location: 9980860138

BDA SITE for Sale in 40x60 East Facing, 2nd Block Visvesvaraya 60ft Road Call: 9980433004

BDA SITE for Sale SMVL, 1st Block, 30x40 South Facing Fully Built- Up Good Location: 8217392686

VISHVESWARAIAH LAYOUT 1st Block, opp 60ft road 40x60 East-Facing site.Contact: SREENIDHI PROPERTYJUNCTION. 9886634578/ 9742681666

"VISHVESWARAIAH LAYOUT 50x80 East 60 feet Road 100% Vastu,30x40 East 40 feet Road. 7022218837"

Yelahanka

DC CONVERSATION SITE SALE READY-TO CONSTRUCT YALAHANKA JP KAVAL 20X40, 30X40, 40X60 CONTACT: 6366232222 6366242222

Mysore

GSS:SITES @ Mysore Fully Completed DTCP 'A' Khata,RERA, 90% Bank Loan, Immediate Regn, off Hunsur Road, 5Minutes: NH,Yelwala 10Minutes: Ring Road, Infosys, Vijayanagar, 15Minutes: Palace/ Railway Station. www.gssprojects.in 9845287802/ 8050001571.

Whitefield

30X 40 site in Gated community at Chikkathirupathi 15 Lakhs. SBI approved. Call 7022206007.

House

Banashankari

SALE 20X30, 30X40 Thripex House's BSK 6th Stage, J.P.Nagar 8th Phase, Anjanapura Fully Furnished Granit Flooring Call:8722777999 9449812176

Mysore

HOUSE FOR SALE 40X70, 4BHK Near JP Nagar, Ring Road Srirampura, Mysore.Rs:140 lakhs Contact:93422 88281

Rajarajeshwari Nagar

"RR.NAGAR BEML 5th-Stage 2nd-Phase 3 Houses each 2BHK with Car-Parking on 40x60 East facing, 40ft Road. 9845500019/ 7019314962"

Flat

J P Nagar

SALE OVER 10 YEAR, SEMI-FURNISHED 2 BHK FLAT 1080 SQFT, WITH ROOFED CAR-PARKING JPNAGAR 5TH PHASE: 9986763007

SALE OF building on 50x80 BDA site with 6 flats & 1 pent house in JP Nagar, Dollars layout, B.lore. 7676858184

Uttarahalli

3/4 BHK New Luxurious Flats Sale, Fully Furnished, Italian Marble, Cauvery, 70L/90L, Security, Car-parking. 9844394444, 9945224058.

Agricultural Land

Kanakapura Road

SALE: 50 Gunta Agricultural Land with trees and farm house near Kanakapura and NH. 9448121223.

Commercial Land

Banashankari

"HOSAKEREHALLI 100 FEET Ring-Road 40x60 South East facing Commercial Site with old house. 9845500019/ 7019314962"

Commerical

Marathahalli

SALE: 5700 Sqft, Commercial Site FOR SALE, Near Varthur, WEST Facing, 'B' Khatha in BBMP limit. Contact- 9353532040

General

South

AVAILABLE/ WANTED 30x40 30x50,40x60,80x50- Residential Commercial Sites PG-Buildings Basavanagudi Jayanagar J.P.Nagar Chamarajpet Girinagar Hanumanthnagar Kanakapura/ Bannnnarghatta Road For RENT/LEASE/Sale 2-3-4-5 BHK Houses/Flats/ Office Space/Godown Spaces Call-9900399006

REAL ESTATE BUYING

Sites

Anjanapura

ANJANAPURA, BANASHANKARI 6th Stage, JP Nagar 8th/ 9th Phase, Narayan Nagar. Wanted BDA Sites: 9845298419

WANTED BDA sites Anjanapura, Banashankari 6th stage, Vishweshwaraiah Layout, JPNagar 8 and 9th phase and any BDA katha & Mysore MUDA sites any measurement, Immediate settlement Genuine sellers, Contact: 9902038118: 9449060605: 7338328728.

Bannerghatta Road

WANTED 30X40 in Nisarga Layout- JIGINI for Retired Central Govt. Employee. Pure Vegetarians. Only White. 98450-19187. Brokers Excuse

Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout. Any BDA Sites Wanted Contact: SAPTHAGIRI. 9900268073, 9448068073.

Vishweshwariah Layout

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact: 9844533371, 9341733480

WANTED 50X80 Residential Site Vishweshwaraiah Layout 8th Block. Direct Owner meeting required. Contact: 9342833999

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

Water Proofing Materials

BUILDING SOLUTIONS WATERPROOFING ROOF,TANK, SKYLIGHT, BATHROOM, HOUSE PAINTING, FABRICATION, CARPENTRY and EPOXY COATING. Macbond.9886297762

RENTAL PROPERTIES

Accommodation Available

Commercial

OFFICE FOR Rent 33x12 Sqft, Ground Floor with Furniture Near Anupama Theater, Navayuga Hotel Contact: 7019087616/ 7019123018

Industrial And Factory

AVAILABLE INDUSTRIAL Shed for Rent 95000 sqft at Soukya Road, Whitefield. Commercial 1750sqft x3 Floors, K.R.Road, Banashankari. Contact: 9341234288/ 9663224353/ 9845417487.

INDUSTRIAL RCC Building for Rent 6000 sft basement & Ground floor Nadakerappa Industrial Estate, Hegganahalli, Peenya. Ph: 8880004847

JOB OPPORTUNITIES

Engg/ Production Technical

REQUIRED EXPERIENCED CIVIL ENGINEERS for Reputed Construction Co. Contact: 94490-53904 Mail: kmc185km@gmail.com

PUBLIC NOTICE

PUBLIC NOTICE

I am the owner of the below schedule property. The O.S.No.15952/2023 filed by me before the 28th Addl City Civil Judge (Mayo Hall) Bengaluru has decreed the suit holding that I am the owner of the schedule property. The defendants Sathyaprema Prakash and B M Prakash have filed an appeal before the Hon'ble High Court of Karnataka in RFA No. 1765/2020 and the same is pending. Now the said Sathyaprema Prakash, B M Prakash and Mohammed Ayaz are trying to sell the schedule property without disclosing the pendency of the appeal before the Hon'ble court. Anyone dealing with them is doing so at their own risk/cost.

SCHEDULE

All that piece and parcel of the site situated at **Kasaba Jodi Kempapura Agrahara, Goddadahalli, Bangalore North Taluk, new corporation site bearing No 4/1, Ward No 42, situated at 1st Cross, Kuvempunagar, Goddadahalli, Mysore Road, Bangalore-560026** and measuring East to West 44 feet North to South 60 feet and bounded on **East by:** 10 ft Road, **West by:** conservancy lane, **North by:** Guru English School property and **South by:** Property bearing no 2 belonging to Smt.Neelavathamma

Krishnamurthy, Advocate, Bangalore



BUSINESS

Business Offers

Business to Business

Business

OPPORTUNITY TO Earn 1.5 lakh above Per Month. Trade mark, Fssai, MSME and GST registered Branded Dry Fruits Company Wishes to appoint Franchise outlets throughout Bangalore and all districts of Karnataka. Reasonable Investment: 8095059460/ 6360940295

Finance

WANTED BUSINESS Partners Saree Business 10 Lakhs Investment Monthly Income 1 Lakhs Contact: 8892501007/ 9606701007

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

PERSONAL

Change of Name

I, SHIKHA Vashisth, R/at Permanent Address No. 9/3 Chauraha Abadul Karim, Mahaveer Ganj, Aligarh, Kheriya Gurdev Uttar Pradesh- 202001, presently R/at No. 43/1 Illpaythope 16th B Street Jogupalya Ulsoor, Bangalore- 560008. I have changed my name back to SHIKHA DUBEY vide affidavit dated 13.10.2023 before notary Sumithra. N, Bangalore.

NAME CORRECTION

I, T.M NAGARAJ S/o Motanna, residing at No.10, 2nd cross. Kempalakkanna Layout, K.R. Puram, Bangalore 560036, declare that my correct name is T.M. NAGARAJ, it is mentioned in all documents. My name has wrongly been mentioned in my SSLC Marks card as NAGARAJA T.M Reg No. 455743, Passing year 1992 in Janatha High School, Kembodi, Kolar. I further declare that the names NAGARAJA T.M and T.M. NAGARAJ are one and the same and it pertains to me only. And in further documents of my certificate mentioned my correct name as T.M NAGARAJ. This I Solemnly Swear and depose vide Affidavit No. IN-KA38581729649774V dt 10/11/2023 before Notary Srinatha D.R, Bangalore.

I, P._SRIDEVI W/o.Venkata Seshu Babu Penta R/o SMQ P-73/02 HQ TC, JC.Nagar Post Hebbal Bangalore-560006 have changed my Name from P._SRIDEVI to PENTA SRIDEVI vide affidavit dated:9.11.2023 before Notary N.Peruvazhuthi Bengaluru

CHANGE OF NAME

I, **JAYASMRUTI,** Residing at # 303, Pearl Garden Apartment, 2nd Cross, DUO Heights Layout, Bengaluru-560068, have changed my name to **JAYASMRUTI PARTHASARATHY** vide affidavit dt.10-11-2023, before Notary Aruna V, Bangalore. Henceforth I shall be called **JAYASMRUTI PARTHASARATHY** only.

CHANGE OF NAME

I, **LOY JOHN NICHOLAS DMELLO,** residing at No. 305, Vakil Encasa, 2nd main road, Hennagara main road, Jigani-Bommasandra Link Road, Sriramapura, Jigani post, Bengaluru-560105 have changed my name to **LOY JOHN DMELLO** vide affidavit dated 07/11/2023 before Notary Ravi, Bengaluru.

Lost

DOCUMENT LOST

I, **RISHEEBHA R,** R/at # 5, 6th Main Road, 12th Cross, Near Mount College Carmel Bangalore North, Bangalore-01, have lost my original **Absolute Sale Deed Document No./ Identification P.1557/2021-2022** while shifting house.
Finders please Contact:
Mob No: 9964914596

ಹಸಿರು ಪಟಾಕಿಯಿಂದಲೂ ಕಣ್ಣಿಗೆ ಹಾನಿ ಸಾಧ್ಯತೆ ● ಮುನ್ನೆಚ್ಚರಿಕೆ ವಹಿಸಲು ವೈದ್ಯರ ಸೂಚನೆ

ಪಟಾಕಿ ಅವಘಡ: 24 ಗಂಟೆಯೂ ಸೇವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಹಬ್ಬದ ಸಂದರ್ಭದಲ್ಲಿ ಪಟಾಕಿ ಅವಘಡಗಳು ಸಂಭವಿಸಿದಲ್ಲಿ ಕಣ್ಣಿಗೆ ಹಾನಿಯಾಗುವುದನ್ನು ತಪ್ಪಿಸಲು ನಗರದ ಕಣ್ಣಿನ ಆಸ್ಪತ್ರೆಗಳು ಅಗತ್ಯ ಸಿದ್ಧತೆ ಮಾಡಿಕೊಂಡಿದ್ದು, ಹಬ್ಬದ ದಿನಗಳಲ್ಲಿ 24x7 ಸೇವೆ ನೀಡಲು ಸಜ್ಜಾಗಿವೆ.

ಮಿಂಟೊ, ನಾರಾಯಣ ನೇತ್ರಾಲಯ, ನೇತ್ರಧಾಮ, ಶಂಕರ, ಡಾ. ಅಗರವಾಲ್ ಸೇರಿ ವಿವಿಧ ಕಣ್ಣಿನ ಆಸ್ಪತ್ರೆಗಳು ಚಿಕಿತ್ಸೆಗೆ ಬೇಕಾದ ಔಷಧಗಳನ್ನು ದಾಸ್ತಾನು ಮಾಡಿಕೊಂಡಿವೆ. ಅದೇ ರೀತಿ, ಪ್ರತ್ಯೇಕ ಹಾಸಿಗೆ ವ್ಯವಸ್ಥೆಯನ್ನು ಮಿಂಟೊ, ನಾರಾಯಣ ನೇತ್ರಾಲಯ ಸೇರಿ ಕೆಲ ಆಸ್ಪತ್ರೆಗಳಲ್ಲಿ ಮಾಡಲಾಗಿದೆ.

‘ಪಟಾಕಿ ಸಿಡಿತದಿಂದ ಕಣ್ಣಿಗೆ ಹಾನಿಯಾಗುವ ಜತೆಗೆ ಸುಟ್ಟಗಾಯಗಳಾಗುವ ಸಾಧ್ಯತೆಗಳಿರುತ್ತವೆ. ಪಟಾಕಿಯ ಜೋರಾದ ಶಬ್ದದಿಂದ ಶ್ರವಣ ಸಮಸ್ಯೆ ಕೂಡ ಉಂಟಾಗುತ್ತದೆ. ಪಟಾಕಿಯಿಂದ ಹೊರಹೊಮ್ಮುವ ರಾಸಾಯನಿಕ ಹೊಗೆಯಿಂದ ಉಸಿರಾಟದ (ಅಸ್ತಮಾ) ಹಾಗೂ ಚರ್ಮದ ತೊಂದರೆಗಳು ಕಾಣಿಸಿಕೊಳ್ಳಲಿವೆ. ಪಟಾಕಿಗಳನ್ನು ಹಚ್ಚಲೇಬೇಕು ಎಂದಾದಲ್ಲಿ ಹೆಚ್ಚಿನ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಿ’ ಎಂದು ನಗರದ ನೇತ್ರ ವೈದ್ಯರು ಮನವಿ ಮಾಡಿದ್ದಾರೆ.

‘ಹಸಿರು ಪಟಾಕಿಗಳಲ್ಲಿ ರಾಸಾಯನಿಕಗಳ ಬಳಕೆ ಪ್ರಮಾಣ ಶೇ 50ರಷ್ಟು ಕಡಿಮೆ ಇರುತ್ತದೆ. ಹೆಚ್ಚು ಹಾನಿ ಮಾಡುವ ಬೇರಿಯಂ ಮತ್ತು ಲಿಥಿಯಂ ಹೊರತುಪಡಿಸಿ ಇತರೆ ರಾಸಾಯನಿಕಗಳನ್ನು ಬಳಸಲಾಗುತ್ತದೆ. ಇದರಿಂದ ಮಾಲಿನ್ಯ ಪ್ರಮಾಣ ಕಡಿಮೆಯಾದರೂ, ಸ್ಫೋಟ ಮತ್ತು ಶಬ್ದದ ತೀವ್ರತೆ ಸಾಮಾನ್ಯ ಪಟಾಕಿಗಳಂತೆ ಇರುತ್ತದೆ’ ಎಂದು ಹೇಳಿದ್ದಾರೆ.

35 ಹಾಸಿಗೆ ವ್ಯವಸ್ಥೆ: ‘ಹಬ್ಬದ ಸಮಯದಲ್ಲಿ ಚಿಕಿತ್ಸೆಗೆ ಬೇಕಾದ ಔಷಧವನ್ನು ದಾಸ್ತಾನು ಮಾಡಿಕೊಂಡು, ಶಸ್ತ್ರಚಿಕಿತ್ಸೆಗೆ ಅಗತ್ಯ ಸಿದ್ಧತೆ ಮಾಡಿಕೊಂಡಿದ್ದೇವೆ. ವಿಶೇಷ ತಜ್ಞರನ್ನು ಒಳಗೊಂಡ ವೈದ್ಯ ತಂಡವು ಸಮಯಾನುಸಾರ ಸೇವೆ ನೀಡಲು ಸಿದ್ಧವಾಗಿದೆ. ಒಟ್ಟು 35 ಹಾಸಿಗೆಗಳನ್ನು ಪಟಾಕಿಗಳಿಂದ ಗಾಯಗಳಾದವರಿಗಾಗಿ ಮೀಸಲಿಡಲಾಗಿದೆ. ಇವುಗಳಲ್ಲಿ ತಲಾ 10 ಪುರುಷರು ಹಾಗೂ ಮಹಿಳೆಯರಿಗೆ ಮತ್ತು 15 ಹಾಸಿಗೆಗಳು ಮಕ್ಕಳಿಗೆ ಬಳಸಿಕೊಳ್ಳಲಾಗುತ್ತದೆ’ ಎಂದು ಮಿಂಟೊ ಆಸ್ಪತ್ರೆ ನಿರ್ದೇಶಕ ಡಾ. ನಾಗರಾಜು ಜಿ. ತಿಳಿಸಿದರು.

ಡಾ. ಅಗರವಾಲ್ ಕಣ್ಣಿನ ಆಸ್ಪತ್ರೆಯ ಕ್ಲಿನಿಕಲ್ ಸೇವೆಗಳ ಮುಖ್ಯಸ್ಥೆ ಡಾ.ಬಿಂದಿಯಾ ಹಪಾನಿ, ‘ಪಟಾಕಿಗಳನ್ನು ಸಿಡಿಸುವವರು ಮಾತ್ರವಲ್ಲದೆ, ನೋಡುಗರಿಗೂ ಅಪಾಯವಿರುತ್ತದೆ. ಗಾಯಕ್ಕೆ ಒಳಗಾಗುವವರಲ್ಲಿ ಶೇ 50ಕ್ಕೂ ಹೆಚ್ಚು ಜನರು ನೋಡುಗರೇ ಆಗಿರುತ್ತಾರೆ. ಪಟಾಕಿಯಿಂದ ಕಣ್ಣಿಗೆ ಹಾನಿಯಾದಲ್ಲಿ ಸ್ವಚ್ಛವಾದ ಕರವಸ್ತ್ರದಿಂದ ಕಣ್ಣನ್ನು ಮುಚ್ಚಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಕಣ್ಣನ್ನು ಉಜ್ಜುವುದು, ನೀರಿನಿಂದ ತೊಳೆದುಕೊಳ್ಳಬಾರದು. ಕೂಡಲೇ ಹತ್ತಿರದ ಕಣ್ಣಿನ ಆಸ್ಪತ್ರೆಗೆ ತೆರಳಿ, ತುರ್ತು ಚಿಕಿತ್ಸೆ ಪಡೆಯಬೇಕು’ ಎಂದು ಹೇಳಿದರು

‘ಕಡಿಮೆ ತೀವ್ರತೆಯ ಪಟಾಕಿಗಳೆಂದು ಗುರುತಿಸಿರುವ ನಕ್ಷತ್ರಕಡ್ಡಿ, ಭೂಚಕ್ರ ಇನ್ನಿತರವುಗಳೇ ಹೆಚ್ಚು ಅಪಾಯಕಾರಿ. ಇವುಗಳೂ ಸಿಡಿಯುವ ಸಾಧ್ಯತೆ ಇರುತ್ತದೆ. ಆದ್ದರಿಂದ ಮಕ್ಕಳಿಗೆ ಆದಷ್ಟು ದೂರದಿಂದಲೇ ಬೆಂಕಿ ಹಚ್ಚುವ ಅವಕಾಶ ನೀಡುವುದು ಉತ್ತಮ’ ಎಂದರು.



ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸುಟ್ಟಗಾಯಕ್ಕೆ ತುರ್ತುಚಿಕಿತ್ಸೆ

ಪಟಾಕಿ ಅವಘಡದಿಂದ ಸಂಭವಿಸುವ ಸುಟ್ಟ ಗಾಯಗಳಿಗೆ ತುರ್ತು ಚಿಕಿತ್ಸೆ ನೀಡಲು ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿರುವ ಮಹಾಬೋಧಿ ಸುಟ್ಟ ಗಾಯಗಳ ಚಿಕಿತ್ಸಾ ಕೇಂದ್ರ ಅಗತ್ಯ ಸಿದ್ಧತೆ ಮಾಡಿಕೊಂಡಿದೆ. ಈ ಕೇಂದ್ರಕ್ಕೆ ಅಗತ್ಯ ವೈದ್ಯರು, ಶುಶ್ರೂಷಕರು ಹಾಗೂ ಸಹಾಯಕ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, ದಿನದ 24 ಗಂಟೆಯೂ ಇಲ್ಲಿ ವೈದ್ಯಕೀಯ ಸೇವೆ ಲಭ್ಯವಿರಲಿದೆ. ಕೇಂದ್ರದಲ್ಲಿ 54 ಹಾಸಿಗೆಗಳಿವೆ.

ಸಹಾಯವಾಣಿಗಳು

- **ಮಿಂಟೊ ಆಸ್ಪತ್ರೆ:** 9481740137 ಅಥವಾ 08026707176
- **ನಾರಾಯಣ ನೇತ್ರಾಲಯ:** ರಾಜಾಜಿನಗರ ಶಾಖೆ- 080 66121641/1643 ಅಥವಾ 9902546046
- **ನಾರಾಯಣ ನೇತ್ರಾಲಯ, ಎನ್‌ಎಚ್ ಹೆಲ್ತ್ ಸಿಟಿ ಬೊಮ್ಮಸಂದ್ರ:** 080 66660655 ಅಥವಾ 9902821128
- **ಶಂಕರ ಕಣ್ಣಿನ ಆಸ್ಪತ್ರೆ:** (ಮಾರತಹಳ್ಳಿ) 080 69038900 ಅಥವಾ 9739270477
- **ರೈನ್‌ಬೋ ಮಕ್ಕಳ ಆಸ್ಪತ್ರೆ:** (ಬನ್ನೇರುಘಟ್ಟ) 9355400341, ಮಾರತಹಳ್ಳಿ ಶಾಖೆ 9355400340, ಹೆಬ್ಬಾಳ ಶಾಖೆ 9355400342
- **ಜಯನಗರದ ನೇತ್ರಧಾಮ:** 080 26088000 ಅಥವಾ 9448071816
- **ಡಾ. ಅಗರವಾಲ್ ಕಣ್ಣಿನ ಆಸ್ಪತ್ರೆ:** ಬನ್ನೇರುಘಟ್ಟ ಶಾಖೆ 08048193419, ರಾಜರಾಜೇಶ್ವರಿ ನಗರ ಶಾಖೆ 918048193501

ವೈದ್ಯರು ನೀಡಿದ ಸಲಹೆಗಳು

- ಪಟಾಕಿ ಖರೀದಿಸಲೇಬೇಕಾದಲ್ಲಿ ಐಎಸ್‌ಐ ಗುರುತಿನ ಹಸಿರು ಪಟಾಕಿಗಳನ್ನು ಖರೀದಿಸಿ
- ಪಟಾಕಿಗಳ ಮೇಲಿರುವ ಎಚ್ಚರಿಕೆ, ಸೂಚನೆ ಅನುಸರಿಸಿ
- ಕನಿಷ್ಠ 2-3 ಅಡಿ ದೂರದಿಂದ ಪಟಾಕಿ ಹಚ್ಚಿ
- ಪಟಾಕಿ ಹಚ್ಚಲು ಉದ್ದನೆಯ ಕೋಲು ಬಳಸಿ
- ಮೈದಾನ, ಖಾಲಿ ಜಾಗಗಳಲ್ಲಷ್ಟೇ ಪಟಾಕಿ ಹಚ್ಚಿ
- ಬೆಂಕಿ ಹಾಗೂ ಥಟ್ಟನೆ ಹೊತ್ತಿಕೊಳ್ಳುವ ವಸ್ತುಗಳ ಬಳಿ ಪಟಾಕಿ ಸಂಗ್ರಹಿಸಿಡಬೇಡಿ
- ಪಟಾಕಿ ಸುಡುವುದಕ್ಕೆ ಗಾಜಿನ ಬಾಟಲಿಗಳನ್ನು ಬಳಸಬೇಡಿ. ಇದರಿಂದ ಸಿಡಿಯುವ ಚೂರುಗಳು ಕಣ್ಣಿಗೆ ಹಾನಿ ಮಾಡಬಹುದು
- ಮಕ್ಕಳು ಒಂಟಿಯಾಗಿ ಪಟಾಕಿ ಸಿಡಿಸುವುದಕ್ಕೆ ಅವಕಾಶ ನೀಡಬೇಡಿ. ಜತೆಯಲ್ಲಿ ಪಾಲಕರು ಇರಲಿ
- ಪಟಾಕಿ ಸಿಡಿದಾಗ ಕಿಡಿ ಬಿದ್ದರೆ ಕಣ್ಣನ್ನು ಉಜ್ಜಿಕೊಳ್ಳಬೇಡಿ
- ಅರೆಬರೆ ಸುಟ್ಟ ಪಟಾಕಿ ತುಣುಕನ್ನು ಗಾಳಿಯಲ್ಲಿ ಎಸೆಯಬೇಡಿ
- ಕೈಯಲ್ಲೇ ಪಟಾಕಿ ಸಿಡಿಸುವ ಸಾಹಸ ಬೇಡ
- ಅರೆಬರೆ ಸುಟ್ಟ ಪಟಾಕಿಯನ್ನು ಕೈಯಿಂದ ಹೊಸಕಿ ನಂದಿಸಲು ಯತ್ನಿಸಬೇಡಿ

‘ಪಟಾಕಿ ಸಿಡಿಸಲು 2 ಗಂಟೆ ಅವಕಾಶ’

ಬೆಂಗಳೂರು: ‘ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಿರ್ದೇಶನದಂತೆ ನಗರದಲ್ಲಿ ರಾತ್ರಿ 8 ಗಂಟೆಯಿಂದ 10 ಗಂಟೆಯವರೆಗೆ ಮಾತ್ರ ಪಟಾಕಿ ಸಿಡಿಸಲು ಅವಕಾಶವಿದೆ’ ಎಂದು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್ ತಿಳಿಸಿದರು.

ನಗರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ದೀಪಾವಳಿ ಹಬ್ಬದ ಸಂದರ್ಭದಲ್ಲಿ ಹಸಿರು ಪಟಾಕಿ ಮಾರಾಟ ಹಾಗೂ ಬಳಕೆಗೆ ಮಾತ್ರ ಅವಕಾಶವಿದೆ. ಈ ಬಗ್ಗೆ ನಿಗಾ ವಹಿಸಲು ಎಸಿಪಿ ನೇತೃತ್ವದಲ್ಲಿ ವಿಶೇಷ ಕಾರ್ಯಪಡೆ ರಚಿಸಲಾಗಿದೆ. ನಿಯಮ ಉಲ್ಲಂಘಿಸಿದವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು’ ಎಂದು ಅವರು ಹೇಳಿದರು.

‘ನಗರದಲ್ಲಿರುವ 62 ಮೈದಾನಗಳಲ್ಲಿ ಪಟಾಕಿ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ. ಹಸಿರು ಪಟಾಕಿ ಮಾರಲು ಅನುಮತಿ ಕೋರಿ 912 ವ್ಯಾಪಾರಿಗಳು ಅರ್ಜಿ ಸಲ್ಲಿಸಿದ್ದರು. ಈ ಪೈಕಿ, 263 ವ್ಯಾಪಾರಿಗಳಿಗೆ ಈಗಾಗಲೇ ಪರವಾನಗಿ ನೀಡಲಾಗಿದೆ’ ಎಂದರು.

ಸಾಮಾನ್ಯ ವರ್ಗದ ಸದಸ್ಯಗೆ ಮೀಸಲಾತಿಯಡಿ ಅಧ್ಯಕ್ಷ ಸ್ಥಾನ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಸಾಮಾನ್ಯ ವರ್ಗದಿಂದ ಗ್ರಾಮ ಪಂಚಾಯಿತಿ ಸದಸ್ಯರಾಗಿ ಆಯ್ಕೆಯಾದ ವ್ಯಕ್ತಿ ಸರ್ಕಾರ ಮೀಸಲು ನಿಗದಿಪಡಿಸಿದ ಜಾತಿಗೆ ಸೇರಿದ್ದಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಮೀಸಲು ಅಡಿಯಲ್ಲಿ ಸ್ಪರ್ಧೆ ಮಾಡಬಹುದು‘ ಎಂದು ಹೈಕೋರ್ಟ್ ತಿಳಿಸಿದೆ.

ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಕುನ್ನಲ ಗ್ರಾಮ ಪಂಚಾಯಿತಿ ಸದಸ್ಯೆ ಚೈತ್ರಾ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜ್ ಅವರಿದ್ದ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ–1993ರ ಕಲಂ 5ರ ಅಡಿ ಸದಸ್ಯರ ಆಯ್ಕೆಗೆ ಒದಗಿಸಲಾದ ಮೀಸಲಾತಿಯು ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವವರಿಗೆ ಪರಿಗಣನೆಗೆ ಬರುವುದಿಲ್ಲ. ಅಲ್ಲದೆ, ಕಲಂ 44ರ ಅಡಿಯಲ್ಲಿ ಉಲ್ಲೇಖಿಸಿರುವಂತೆ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಿಟ್ಟ ಹುದ್ದೆಗಳಿಗೆ ಅರ್ಹರು ಇಲ್ಲದಿದ್ದಲ್ಲಿ ಜನಸಂಖ್ಯಾ ಆಧಾರದಲ್ಲಿ ಮೀಸಲು ಹುದ್ದೆಗಳನ್ನು ಇತರೆ ಜನಾಂಗದವರಿಗೆ ನೀಡಬಹುದಾಗಿದೆ ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಅದೇ ರೀತಿಯಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿಗೆ ಸಂಬಂಧಿಸಿದಂತೆ ಜನಸಂಖ್ಯೆಗೆ ಅನುಗುಣವಾಗಿ ಅಧ್ಯಕ್ಷ–ಉಪಾಧ್ಯಕ್ಷ ಹುದ್ದೆಗಳ ಭರ್ತಿ ಮಾಡಬಹುದಾಗಿದೆ. ಆದ್ದರಿಂದ, ಸಾಮಾನ್ಯ ವರ್ಗದಿಂದ ಸದಸ್ಯರಾದವರು ಮೀಸಲು ವರ್ಗದಲ್ಲಿ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಬಹುದಾಗಿದೆ‘ ಎಂದು ವಿವರಿಸಿದೆ.

ಎಎಂಸಿ ಇನ್‌ಸ್ಟಿಟ್ಯೂಷನ್: ಬಿ.ಇ. ಪ್ರೋಗ್ರಾಮ್‌ಗಳಿಗೆ ಚಾಲನೆ

ಬೆಂಗಳೂರು: ಎಎಂಸಿ ಇನ್‌ಸ್ಟಿಟ್ಯೂಷನ್‌ನಲ್ಲಿ 2023–24ರ ಶೈಕ್ಷಣಿಕ ವರ್ಷದ ಬಿ.ಇ. ಪ್ರೋಗ್ರಾಮ್‌ಗಳಿಗೆ ಚಾಲನೆ ನೀಡಲಾಯಿತು.

ನಗರದ ಬನ್ನೇರುಘಟ್ಟ ರಸ್ತೆಯಲ್ಲಿರುವ ಕ್ಯಾಂಪಸ್‌ನಲ್ಲಿ ಇತ್ತೀಚೆಗೆ ಉದ್ಘಾಟನಾ ಕಾರ್ಯಕ್ರಮ ನಡೆಯಿತು. 2000ಕ್ಕೂ ಅಧಿಕ ವಿದ್ಯಾರ್ಥಿಗಳು, ಪೋಷಕರು ಪಾಲ್ಗೊಂಡಿದ್ದರು.

ಎಎಂಸಿ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಕೆ.ಆರ್. ಪರಮಹಂಸ ಮಾತನಾಡಿ, ‘ಎಎಂಸಿ ಪ್ರಸಕ್ತ 11 ಸಂಸ್ಥೆಗಳನ್ನು ಹೊಂದಿದ್ದು, ಹತ್ತು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಪ್ರಿ ನರ್ಸರಿಯಿಂದ ಸ್ನಾತಕೋತ್ತರ ಪದವಿ ತನಕ ಉತ್ತಮ ಶಿಕ್ಷಣ ನೀಡಲಾಗುತ್ತಿದೆ’ ಎಂದು ತಿಳಿಸಿದರು.

ಕಾರ್ಯನಿರ್ವಾಹಕ ಉಪಾಧ್ಯಕ್ಷ ರಾಹುಲ್ ಕಲ್ಲೂರಿ ಮಾತನಾಡಿ, ‘ಉದ್ಯಮಶೀಲ ಮನಸ್ಥಿತಿಯೊಂದಿಗೆ ನಮ್ಮ ವಿದ್ಯಾರ್ಥಿಗಳಿಗೆ ಉತ್ತಮ ಕೌಶಲ ನೀಡುವುದು ಅನಿವಾರ್ಯ. ಇದನ್ನು ಸರ್ಕಾರ, ಕೈಗಾರಿಕೆ ಮತ್ತು ಶೈಕ್ಷಣಿಕ ಸಂಸ್ಥೆಗಳ ಸಹಯೋಗದ ಪ್ರಯತ್ನದ ಮೂಲಕ ಮಾಡಬಹುದು’ ಎಂದು ತಿಳಿಸಿದರು. ಸಂಸದ ತೇಜಸ್ವಿಸೂರ್ಯ, ಎಎಂಸಿ ಸಂಸ್ಥೆಗಳ ಪ್ರಾಂಶುಪಾಲ ಆರ್. ನಾಗರಾಜ್ ಇದ್ದರು.

26ರಿಂದ ರಾಜಭವನ ಚಲೋ

ಬೆಂಗಳೂರು: ರೈತ–ಕಾರ್ಮಿಕ ವಿರೋಧಿ ಕೃಷಿ ಕಾಯ್ದೆಗಳು ಮತ್ತು ಕಾರ್ಮಿಕ ಕಾಯ್ದೆಗಳನ್ನು ರದ್ದು ಮಾಡಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಸಂಯುಕ್ತ ಹೋರಾಟ ಸಮಿತಿ ವತಿಯಿಂದ ನ.26ರಿಂದ 28ರವರೆಗೆ ಬೃಹತ್ ರಾಜಭವನ ಚಲೋ ಮಹಾಧರಣಿ ಹಮ್ಮಿಕೊಳ್ಳಲಾಗಿದೆ ಎಂದು ‘ಸಂಯುಕ್ತ ಹೋರಾಟ–ಕರ್ನಾಟಕ’ ಸಂಯೋಜಕರಾದ ಬಡಗಲಪುರ ನಾಗೇಂದ್ರ, ಎಸ್.ಆರ್. ಹಿರೇಮಠ್ ತಿಳಿಸಿದರು.

ಜನವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು, ಪರ್ಯಾಯ ಜನಪರ ನೀತಿಗಳನ್ನು ರೂಪಿಸಲು 72 ಗಂಟೆಗಳ ಕಾಲ ಮಹಾಧರಣಿ ಹಮ್ಮಿಕೊಂಡಿದ್ದು, ಸಾವಿರಾರು ಸಂಖ್ಯೆಯಲ್ಲಿ ರೈತರು, ಕಾರ್ಮಿಕರು, ದಲಿತರು, ಮಹಿಳೆಯರು, ವಿದ್ಯಾರ್ಥಿಗಳು, ಯುವಜನರು ಭಾಗವಹಿಸಲಿದ್ದಾರೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ದೆಹಲಿಯಲ್ಲಿ ಸತತ 13 ತಿಂಗಳುಗಳ ಕಾಲ ರೈತರು ಐತಿಹಾಸಿಕ ಹೋರಾಟ ನಡೆಸಿದ್ದರಿಂದ ಮೋದಿ ಸರ್ಕಾರವು ರೈತ ವಿರೋಧಿ ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯಿತು. ಆದರೆ, ಕನಿಷ್ಠ ಬೆಂಬಲ ಬೆಲೆ ಕಾಯ್ದೆ ಜಾರಿ, ವಿದ್ಯುತ್ ತಿದ್ದುಪಡಿ ಮಸೂದೆ ರದ್ದು ಮುಂತಾದ ವಿಷಯಗಳಲ್ಲಿ ರೈತರಿಗೆ ನೀಡಿದ್ದ ಲಿಖಿತ ಭರವಸೆಗಳನ್ನು ಈಡೇರಿಸಿಲ್ಲ ಎಂದರು.

ಸಂಯೋಜಕರಾದ ಜೆ.ಸಿ. ಬಯ್ಯಾರೆಡ್ಡಿ, ಮಾವಳ್ಳಿ ಶಂಕರ್,ಎಚ್.ವಿ. ದಿವಾಕರ್, ವರಲಕ್ಷ್ಮೀ ಇದ್ದರು.

ಸುಸ್ಥಿರ ನಗರಗಳ ಸವಾಲು ಸ್ಪರ್ಧೆ: 10 ನಗರಗಳ ಪಟ್ಟಿಯಲ್ಲಿ ಉದ್ಯಾನ ನಗರಿಗೆ ಅಗ್ರಸ್ಥಾನ

ಅಂತಿಮ ಸುತ್ತಿಗೆ ಬೆಂಗಳೂರು ಲಗ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೊಯೊಟಾ ಮೊಬಿಲಿಟಿ ಫೌಂಡೇಷನ್ ವತಿಯಿಂದ ನಡೆಯುತ್ತಿರುವ 'ಸುಸ್ಥಿರ ನಗರಗಳ ಸವಾಲು' ಸ್ಪರ್ಧೆಯ ಅಂತಿಮ ಸುತ್ತಿನಲ್ಲಿರುವ 10 ನಗರಗಳಲ್ಲಿ ಬೆಂಗಳೂರು ನಗರ ಪ್ರಥಮ ಸ್ಥಾನ ಪಡೆದಿದೆ.

'ಸುಸ್ಥಿರ ನಗರಗಳ ಸವಾಲು' ಸ್ಪರ್ಧೆಯು ಜೂನ್‌ನಲ್ಲಿ ಆರಂಭವಾಗಿತ್ತು. ವಿಶ್ವದ 46 ದೇಶಗಳಿಂದ 150ಕ್ಕೂ ಹೆಚ್ಚು ನಗರಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದವು. ಸಂಚಾರ ವ್ಯವಸ್ಥೆ (ಮೊಬಿಲಿಟಿ) ಸುಧಾರಣೆಗಾಗಿ ಅಳವಡಿಕೊಳ್ಳುವ ಯೋಜನೆಗಳನ್ನು ನಗರಗಳು ಪ್ರಸ್ತುತಪಡಿಸಿದ್ದವು.

ನಗರಗಳು ಸಲ್ಲಿಸಿದ್ದ ಯೋಜನೆಗಳನ್ನು ಪರಿಗಣಿಸಿ ನ.8ರಂದು ಪ್ರಕಟಿಸಲಾಗಿರುವ 10 ನಗರಗಳ ಆಯ್ಕೆ ಪೂರ್ವಪಟ್ಟಿಯಲ್ಲಿ (ಶಾರ್ಟ್‌ಲಿಸ್ಟ್) ಬೆಂಗಳೂರು ಪ್ರಥಮ ಸ್ಥಾನದಲ್ಲಿದೆ. ಉತ್ತರ ಪ್ರದೇಶದ ವಾರಾಣಸಿ ನಗರ ಎಂಟನೇ ಸ್ಥಾನದಲ್ಲಿದೆ. ಸೆ.18ರಂದು ಪ್ರವೇಶಕ್ಕೆ ಅಂತಿಮ ದಿನವಾಗಿದ್ದು, ನಂತರ ಆಯ್ಕೆ ಪ್ರಕ್ರಿಯೆ ನಡೆದಿದೆ. ಅಂತಿಮವಾಗಿ ಆಯ್ಕೆಯಾಗುವ ಮೂರು ನಗರಗಳಿಗೆ ಪ್ರತಿವರ್ಷ ₹25 ಕೋಟಿ ಅನುದಾನವನ್ನು ನೀಡಲಾಗುತ್ತದೆ.

ಸಂಚಾರ ವ್ಯವಸ್ಥೆಯನ್ನು ಸುಧಾರಿಸಿಕೊಳ್ಳಲು, ಅಪಘಾತರಹಿತ, ವಾಹನ ಸವಾರರ ಸ್ನೇಹಿ ಸೌಲಭ್ಯ ಕಲ್ಪಿಸುವ ಯೋಜನೆಗಳನ್ನು ಪ್ರಸ್ತುತಪಡಿಸಲಾಗಿತ್ತು. ಸಂಚಾರ ದಟ್ಟಣೆ ನಿರ್ವಹಣೆ, ಮೂಲ ಸೌಕರ್ಯಗಳ ಆಧುನೀಕರಣ, ಅಪಘಾತಗಳ ತಡೆಗಟ್ಟುವ ಸಲುವಾಗಿ 'ಬ್ರ್ಯಾಂಡ್ ಬೆಂಗಳೂರು- ಸುಗಮ ಸಂಚಾರ ಬೆಂಗಳೂರು' ವರದಿಯ ಯೋಜನೆಗಳನ್ನೂ ಬೆಂಗಳೂರು ನಗರ ಪ್ರಸ್ತುತಪಡಿಸಿತ್ತು.

ಪಾದಚಾರಿಗಳಿಗೆ, ಸೈಕಲ್ ಬಳಕೆದಾರರಿಗೆ ಸುರಕ್ಷತೆ ಒದಗಿಸುವುದು, ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸಿಕೊಳ್ಳುವ ಮೂಲಕ ಸುಗಮ ಸಂಚಾರಕ್ಕೆ ಹೊಸ ವ್ಯವಸ್ಥೆ ಅಳವಡಿಸಿಕೊಳ್ಳಲು ನಗರ ಬದ್ಧವಾಗಿದೆ ಎಂದು ಸ್ಪರ್ಧೆಗೆ ಒದಗಿಸಿರುವ ಯೋಜನೆ ಪ್ರಸ್ತಾವದಲ್ಲಿ ಬಿಬಿಎಂಪಿ ತಿಳಿಸಿದೆ. 10 ನಗರಗಳ ಯೋಜನೆಗಳ ಬಗ್ಗೆ ಫೌಂಡೇಷನ್‌ನ ತಜ್ಞರು ವಿಶ್ಲೇಷಣೆ ನಡೆಸಲಿದ್ದಾರೆ. ಯೋಜನೆಗಳ ಕ್ರಿಯಾಯೋಜನೆ, ಅವುಗಳ ಅನುಷ್ಠಾನ, ತಂತ್ರಜ್ಞಾನದ ಅಳವಡಿಕೆ ಸೇರಿದಂತೆ ವಿವಿಧ ಆಯಾಮಗಳ ಬಗ್ಗೆ ಮಾಹಿತಿ ಪಡೆಯಲಿದ್ದಾರೆ. 2024ರ ಫೆಬ್ರುವರಿಯಲ್ಲಿ ಅಂತಿಮ ಮೂರು ನಗರಗಳನ್ನು ಪ್ರಕಟಿಸಲಾಗುವುದು ಎಂದು ಫೌಂಡೇಷನ್‌ನ ಕಾರ್ಯಕ್ರಮಗಳ ನಿರ್ದೇಶಕ ರಯಾನ್ ಕ್ಲೆಮ್ ತಿಳಿಸಿದ್ದಾರೆ.

ಶಾರ್ಟ್ ಲಿಸ್ಟ್‌ನಲ್ಲಿರುವ 10 ನಗರಗಳು

1	ಬೆಂಗಳೂರು	ಭಾರತ
2	ಡೆಟ್ರಾಯಿಟ್	ಅಮೆರಿಕ
3	ಫೋರ್ಟಲೀಸಾ	ಬ್ರೆಜಿಲ್
4	ಮೆಡೆಲಿನ್	ಕೊಲಂಬಿಯಾ
5	ಮೆಕ್ಸಿಕೊ ಸಿಟಿ	ಮೆಕ್ಸಿಕೊ
6	ನ್ಯೂ ಓರ್ಲಿಯನ್ಸ್	ಅಮೆರಿಕ
7	ಸೆಬೆರಾಂಗ್ ಪೆರೈ	ಮಲೇಷ್ಯಾ
8	ವಾರಾಣಸಿ	ಭಾರತ
9	ವೆನಿಸ್	ಇಟಲಿ
10	ಯಾರ್ಕ್	ಯುಕೆ

ಆಶಯಗಳು

- ಸಂಚಾರ ವ್ಯವಸ್ಥೆಯನ್ನು ಸಮಗ್ರವಾಗಿ ಉತ್ತಮಗೊಳಿಸುವುದು
- ನಿವಾಸಿಗಳು, ವಾಹನ ಸವಾರರಿಗೆ ಸುರಕ್ಷತೆ ಒದಗಿಸುವುದು
- ಸಂಚಾರ ವ್ಯವಸ್ಥೆಯಲ್ಲಿ ಸುಸ್ಥಿರತೆಯನ್ನು ಉತ್ತಮಗೊಳಿಸಿ, ಇಂಗಾಲ ಹೊರಸೂಸುವಿಕೆ ಮತ್ತು ಪರಿಸರದ ಮೇಲಿನ ನಕಾರಾತ್ಮಕ ಪರಿಣಾಮವನ್ನು ಕಡಿಮೆಗೊಳಿಸುವುದು
- ಪ್ರಸ್ತುತ ಕೈಗೊಂಡಿರುವ ಕ್ರಮಗಳಿಂದ ಸಂಚಾರ ಸಮಸ್ಯೆ ಪರಿಹಾರವಾಗಿಲ್ಲ. ವಿವಿಧ ರೀತಿಯ ಪ್ರಯತ್ನ ಹಾಗೂ ಆವಿಷ್ಕಾರದ ಯೋಜನೆಗಳಿಂದ ಪರಿಹಾರ ಕಂಡುಕೊಳ್ಳಬೇಕು.



ಬೆಂಗಳೂರು ನಗರ

ಬೆಂಗಳೂರಿಗೆ ತಜ್ಞರ ತಂಡ ಭೇಟಿ

'ಸುಸ್ಥಿರ ನಗರಗಳ ಸವಾಲು' ಸ್ಪರ್ಧೆಯಲ್ಲಿ ಸುಗಮ ಸಂಚಾರಕ್ಕೆ ಬೆಂಗಳೂರು ಅಳವಡಿಸಿಕೊಳ್ಳುವ ಯೋಜನೆಗಳ ಮಾಹಿತಿ, ವಿಶ್ಲೇಷಣೆ ಹಾಗೂ ಸಲಹೆಗಳನ್ನು ನೀಡಲು ಟೊಯೊಟಾ ಮೊಬಿಲಿಟಿ ಫೌಂಡೇಷನ್ ತಜ್ಞರ ತಂಡ ಬೆಂಗಳೂರಿಗೆ ಬರಲಿದೆ' ಎಂದು ಬಿಬಿಎಂಪಿ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಹೇಳಿದರು

'ನ.13ರಿಂದ 15ರವರೆಗೆ ಅಮೆರಿಕದ ಟೆಕ್ಸಾಸ್‌ನ ಡಲ್ಲಾಸ್‌ನಲ್ಲಿ ನಡೆಯಲಿರುವ ಕಾರ್ಯಾಗಾರದಲ್ಲಿ ಯೋಜನೆಯ ವಿನ್ಯಾಸ, ಸಮಸ್ಯೆ ನಿರ್ವಹಣೆ ಬಗ್ಗೆ ತಜ್ಞರೊಂದಿಗೆ ನಗರದ ಪ್ರತಿನಿಧಿಗಳು ಭಾಗವಹಿಸಬೇಕಿತ್ತು. ದೀಪಾವಳಿ ಸಂದರ್ಭವಾಗಿದ್ದರಿಂದ ಅಲ್ಲಿಗೆ ಹೋಗಲು ಸಾಧ್ಯವಾಗುತ್ತಿಲ್ಲ. ಹೀಗಾಗಿ, ಸಂಸ್ಥೆಯ ತಂಡ ಬೆಂಗಳೂರಿಗೆ ನ.21ರಂದು ಬರುತ್ತಿದ್ದು, ನಮ್ಮ ನಗರದೊಂದಿಗೆ ವಾರಾಣಸಿ ನಗರದ ಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಲಿದೆ. ಅಂತಿಮವಾಗಿ ಮೂರು ನಗರಗಳಲ್ಲಿ ಬೆಂಗಳೂರು ಆಯ್ಕೆಯಾದರೆ, ಸಂಚಾರ ವ್ಯವಸ್ಥೆಯ ಆಧುನೀಕರಣಕ್ಕೆ ಟೊಯೊಟಾ ಮೊಬಿಲಿಟಿ ಫೌಂಡೇಷನ್ ಮುಂದಿನ 5 ವರ್ಷಗಳವರೆಗೆ ಅನುದಾನ ನೀಡಲಿದೆ' ಎಂದು ಮಾಹಿತಿ ನೀಡಿದರು.

ದೊರೆಯದ ಹಕ್ಕುಪತ್ರ: ಪ್ರತಿಭಟನೆಗೂ ಸಿಗದ ಸ್ಪಂದನೆ

459 ಕುಟುಂಬ ಅತಂತ್ರ

ಪ್ರಜಾವಾಣಿ ವಾರ್ತೆ



ಭುವನೇಶ್ವರಿ ನಗರದಲ್ಲಿ ನಿರ್ಮಿಸಿರುವ ಮನೆಗಳು

ಬೆಂಗಳೂರು: ಉತ್ತರಹಳ್ಳಿ ಭುವನೇಶ್ವರಿ ನಗರದ ಕೊಳೆಗೇರಿ ನಿವಾಸಿಗಳು ಮನೆ ಹಕ್ಕುಪತ್ರ ಸಿಗದೆ ಪರದಾಡುತ್ತಿದ್ದಾರೆ. ಹಕ್ಕುಪತ್ರಕ್ಕಾಗಿ ಹೋರಾಟ, ಮನವಿ ಸಲ್ಲಿಕೆ ಮಾಡಿದ್ದರೂ ಬೇಡಿಕೆ ಈಡೇರಿಸಿಲ್ಲ ಎಂದು ನಿವಾಸಿಗಳು ನೋವು ತೋಡಿಕೊಂಡಿದ್ದಾರೆ.

ಭುವನೇಶ್ವರಿ ನಗರದ 12 ಎಕರೆ ಪ್ರದೇಶದಲ್ಲಿ 30 ವರ್ಷಗಳಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ಸಮುದಾಯದ ಹಲವು ಬಡಕುಟುಂಬಗಳು ಗುಡಿಸಲಿನಲ್ಲಿ ನೆಲೆಸಿದ್ದವು. ಈ ಸ್ಥಳದಲ್ಲಿ ನಾಲ್ಕು ಅಂತಸ್ತಿನ ಅಪಾರ್ಟ್‌ಮೆಂಟ್ ನಿರ್ಮಿಸಿ ಬಡವರಿಗೆ ಮನೆ ಹಂಚಿಕೆ ಮಾಡಲಾಗುವುದೆಂದು ಕೊಳೆಗೇರಿ ನಿರ್ಮೂಲನಾ ಮಂಡಳಿ ಅಧಿಕಾರಿಗಳು ಭರವಸೆ ನೀಡಿ ಗುಡಿಸಲು ತೆರವುಗೊಳಿಸಿದ್ದರು. ಆ ಸ್ಥಳದಲ್ಲಿ 'ನರ್ಮ್' ಯೋಜನೆ ಅಡಿ 880 ಫ್ಲ್ಯಾಟ್ ನಿರ್ಮಿಸಿ, ಮೊದಲ ಕಂತಿನಲ್ಲಿ 421 ಕುಟುಂಬಗಳಿಗೆ ಮನೆ ಹಂಚಿಕೆ ಮಾಡಲಾಗಿದೆ. ಅವರಿಗೆ ಹಕ್ಕುಪತ್ರವನ್ನೂ ವಿತರಿಸಲಾಗಿದೆ. ಉಳಿದ 459 ಕುಟುಂಬಗಳಿಗೆ ಇದುವರೆಗೂ ಹಕ್ಕುಪತ್ರ ವಿತರಿಸಿಲ್ಲ ಎಂದು ಫಲಾನುಭವಿಗಳು ದೂರಿದ್ದಾರೆ.

'ಉಳಿದ ಮನೆಗಳನ್ನು ಅರ್ಹರಿಗೆ ಹಂಚಿಕೆ ಮಾಡಿ ಹಕ್ಕುಪತ್ರ ವಿತರಿಸಬೇಕು. ಆದರೆ, ಕೊಳೆಗೇರಿ ನಿರ್ಮೂಲನಾ ಮಂಡಳಿ ಅಧಿಕಾರಿಗಳು ₹3 ಲಕ್ಷದಿಂದ ₹4 ಲಕ್ಷ ಕೊಟ್ಟವರಿಗೆ ಅಕ್ರಮವಾಗಿ ಮನೆ ಹಂಚಿಕೆ ಮಾಡುತ್ತಿದ್ದಾರೆ. ಈ ಸಂಬಂಧ ಮಾಹಿತಿ ಬಂದಿದೆ' ಎಂದು ಬಹುಜನ ಸಮಾಜ ಪಕ್ಷದ ರಾಜ್ಯ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ ಹೇಳಿದ್ದಾರೆ.

'ಮನೆ ಸಾಮಗ್ರಿ ಹೊರಹಾಕಿದರು': 'ಕೊಳೆಗೇರಿ ನಿವಾಸಿಗಳಲ್ಲದವರು ಮನೆ ಪಡೆಯಲು ಪ್ರಯತ್ನಿಸುತ್ತಿದ್ದಾರೆ. ಸಂಸದರು, ಶಾಸಕರು ಕಡೆಯವರೆಂದು ಹೇಳಿಕೊಂಡು ಬೇರೆ ಬೇರೆ ಬಡಾವಣೆಗಳಲ್ಲಿ ಸ್ವಂತ ಮನೆಯುಳ್ಳವರೂ ಇಲ್ಲಿಗೆ ಬರುತ್ತಿದ್ದಾರೆ. ಕಳೆದ ವರ್ಷ ರೌಡಿಗಳ ಜತೆಗೆ ಬಂದಿದ್ದ ಕೆಲವರು ಬಡವರು ವಾಸಿಸುತ್ತಿದ್ದ ಮನೆಗಳಲ್ಲಿದ್ದ ಸಾಮಗ್ರಿ ಹೊರ ಹಾಕಿದ್ದರು. ನಿವಾಸಿಗಳ ಮೇಲೆ ದೌರ್ಜನ್ಯ ಎಸಗಿದ್ದರು' ಎಂದು ಮುನಿಯಪ್ಪ ತಿಳಿಸಿದ್ದಾರೆ.

'ದೌರ್ಜನ್ಯ ಎಸಗಿದವರ ವಿರುದ್ಧ ಸುಬ್ರಹ್ಮಣ್ಯಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದರೂ ದೂರುದಾರರ ಮೇಲೆಯೇ ಎಫ್‌ಐಆರ್ ಹಾಕಲಾಗಿತ್ತು. ಪೊಲೀಸರು, ಮಂಡಳಿ ಅಧಿಕಾರಿಗಳು, ರಾಜಕಾರಣಿಗಳು ಒಂದಾಗಿ ಅರ್ಹರಿಗೆ ದ್ರೋಹ ಎಸಗುತ್ತಿದ್ದಾರೆ. ಸಮಸ್ಯೆ ಬಗೆಹರಿಸಿ ಅರ್ಹರಿಗೆ ಮನೆ ಹಂಚಿಕೆ ಮಾಡುವಂತೆ ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಾಗಿತ್ತು. ಮುಖ್ಯಮಂತ್ರಿ, ವಸತಿ ಸಚಿವರಿಗೂ ಮನವಿ ಸಲ್ಲಿಕೆ ಮಾಡಲಾಗಿತ್ತು. ಆದರೆ, ಇನ್ನೂ ಹಕ್ಕುಪತ್ರ ದೊರೆತಿಲ್ಲ' ಎಂದು ದೂರಿದ್ದಾರೆ.

'ನಿವಾಸಿಗಳು ನ್ಯಾಯಾಲಯದ ಆದೇಶ ಪಡೆದು ಹಕ್ಕುಪತ್ರಕ್ಕಾಗಿ ಕಾಯುತ್ತಿದ್ದಾರೆ. ಈ ನಡುವೆ, ನವೆಂಬರ್ 6ರಂದು ಸಂಸದ ಡಿ.ಕೆ.ಸುರೇಶ್ ಅವರು 459 ಮನೆಗಳಲ್ಲಿ ವಾಸ ಮಾಡುತ್ತಿರುವ ನಿವಾಸಿಗಳನ್ನು ಖಾಲಿ ಮಾಡಿಸಿ ತಾವು ಸೂಚಿಸಿದವರಿಗೆ ಹಂಚಿಕೆ ಮಾಡಬೇಕು ಎಂದು ಮಂಡಳಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಸಂಸದರ ಆದೇಶ ಪಾಲಿಸಿದರೆ ಬಡವರಿಗೆ ಅನ್ಯಾಯವಾಗಲಿದೆ; ಬೀದಿಪಾಲಾಗುತ್ತಾರೆ. ಜತೆಗೆ, ನ್ಯಾಯಾಲಯ ಆದೇಶವನ್ನು ಉಲ್ಲಂಘಿಸಿದಂತೆ ಆಗಲಿದೆ' ಎಂದು ಹೇಳಿದ್ದಾರೆ.

> **ಹೈಕೋರ್ಟ್‌ನಿಂದ ಆದೇಶ ಪಡೆದಿರುವ ಕುಟುಂಬಗಳು, ವಾಸ ಮಾಡುತ್ತಿರುವ ಅರ್ಹರನ್ನು ಖಾಲಿ ಮಾಡಿಸಬಾರದು. ಅವರಿಗೆ ಹಕ್ಕುಪತ್ರ ನೀಡಬೇಕು**
> **ಮಾರಸಂದ್ರ ಮುನಿಯಪ್ಪ,** ರಾಜ್ಯ ಅಧ್ಯಕ್ಷ, ಬಹುಜನ ಸಮಾಜ ಪಕ್ಷ

ಬಿಡದಿವರೆಗೂ ಮೆಟ್ರೊ ಮಾರ್ಗ: ಡಿಕೆಶಿ

ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರಚನೆಗೆ ಆದೇಶ ಹೊರಡಿಸಿದ ರಾಜ್ಯ ಸರ್ಕಾರ

ಪ್ರಜಾವಾಣಿ ವಾರ್ತೆ

ರಾಮನಗರ: ಬೆಂಗಳೂರಿನ ಸಂಚಾರ ದಟ್ಟಣೆ ತಪ್ಪಿಸಲು ಬಿಡದಿಯವರೆಗೂ 'ನಮ್ಮ ಮೆಟ್ರೊ' ರೈಲು ಸಂಚಾರ ವಿಸ್ತರಣೆ ಮಾಡಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಬಿಡದಿ ಯೋಜನಾ ಪ್ರಾಧಿಕಾರ ರದ್ದು ಮಾಡಿ, 'ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ'ವಾಗಿ ಪರಿವರ್ತಿಸಲು ಆದೇಶ ಮಾಡಲಾಗಿದೆ ಎಂದು ಅವರು ಹೇಳಿದರು.

ಬಿಡದಿಯ ಟೊಯೋಟಾ-ಕಿರ್ಲೋಸ್ಕರ್ ಸಂಸ್ಥೆ ಆವರಣದಲ್ಲಿ ನಿರ್ಮಿಸಲಾದ ತರಬೇತಿ ಕಟ್ಟಡವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

'ಬಿಡದಿಯ ತನಕ ಮೆಟ್ರೊ ಮಾರ್ಗ ವಿಸ್ತರಣೆಗೆ ಈಗಾಗಲೇ ಸರ್ವೆ ಮಾಡಿಸಲಾಗುತ್ತಿದೆ. ಈ ಬಗ್ಗೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸುವಂತೆ ಬೆಂಗಳೂರು ಮೆಟ್ರೊ ರೈಲು ನಿಗಮಕ್ಕೆ (ಬಿಎಂಆರ್‌ಸಿಎಲ್) ಸೂಚಿಸಿದ್ದೇನೆ' ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಶಿವಕುಮಾರ್ ಹೇಳಿದರು.

ಬಿಡದಿ ಕೈಗಾರಿಕಾ ಪ್ರದೇಶದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಅವರ ಅನುಕೂಲಕ್ಕಾಗಿ ಮೆಟ್ರೊ ಮಾರ್ಗ ವಿಸ್ತರಿಸುವಂತೆ ಶಾಸಕರು, ಸಂಸದರು ಮನವಿ ಸಲ್ಲಿಸಿದ್ದರು ಎಂದರು.

ಬಿಡದಿಯಲ್ಲಿ 10 ಸಾವಿರ ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದ್ದು, ಇದುವರೆಗೂ ಯಾವುದೇ ಉದ್ದೇಶಕ್ಕೆ ಬಳಸಿಕೊಂಡಿಲ್ಲ. ಬೆಂಗಳೂರಿನಲ್ಲಿ ಸಿಗುವ ಸೌಲಭ್ಯ ಈ ಭಾಗಕ್ಕೂ ಸಿಗಬೇಕು ಎನ್ನುವುದು ಸರ್ಕಾರದ ಉದ್ದೇಶ. ಈ ಭಾಗದ ಆಸ್ಪತ್ರೆ, ವಿದ್ಯಾಸಂಸ್ಥೆ, ಕಾರ್ಮಿಕರು, ಅವರ ಮಕ್ಕಳು ಹೀಗೆ ಎಲ್ಲರಿಗೂ ಹೊಸ ಶಕ್ತಿ ತುಂಬಲು ಸರ್ಕಾರ ಈ ಎರಡೂ ಯೋಜನೆ ರೂಪಿಸಿದೆ ಎಂದು ಅವರು ಸಮರ್ಥಿಸಿಕೊಂಡರು.

'ಮೆಟ್ರೊ ವಿಸ್ತರಣೆಗೆ ಸಂಬಂಧಿಸಿದಂತೆ ಸ್ಥಳೀಯರ ಅಭಿಪ್ರಾಯ ಪಡೆಯಲಾಗುವುದು. ನಂತರ ಸರ್ಕಾರದ ಮುಂದೆ ಈ ಪ್ರಸ್ತಾವನೆ ಇಡುತ್ತೇನೆ. ಇದರೊಂದಿಗೆ ಭೂಸ್ವಾಧೀನ ತಪ್ಪಿಸುವುದು ಹೇಗೆ ಎಂಬ ಚಿಂತನೆಯೂ ನಡೆದಿದೆ' ಎಂದು ಶಿವಕುಮಾರ್ ತಿಳಿಸಿದರು.

'ಹೊರಗಿನಿಂದ ಬರುವವರು ಬಿಡದಿ ಮೆಟ್ರೊ ನಿಲ್ದಾಣದ ಬಳಿ ವಾಹನ ನಿಲ್ಲಿಸಿ ಮೆಟ್ರೊ ರೈಲಿನಲ್ಲಿ ಬೆಂಗಳೂರಿಗೆ ತೆರಳಬಹುದು. ಇದರಿಂದ ಬೆಂಗಳೂರು ನಗರದ ವಾಹನ ದಟ್ಟಣೆ ನಿಯಂತ್ರಣವಾಗಲಿದೆ. ಮೆಟ್ರೊ ನಿಲ್ದಾಣದ ಬಳಿ ವಾಹನ ನಿಲುಗಡೆಗೆ ವಿಶಾಲ ಜಾಗ ನೀಡುವುದು ಸೇರಿದಂತೆ ಅನೇಕ ಹೊಸ ಆಲೋಚನೆಗಳಿವೆ. ಎಲ್ಲವನ್ನೂ ವ್ಯವಸ್ಥಿತವಾಗಿ ಪ್ಲಾನ್ ಮಾಡಲಾಗುತ್ತಿದೆ' ಎಂದರು.

'ಬೆಂಗಳೂರು ದಕ್ಷಿಣ ಎಂದು ಹೆಸರು ಬದಲಾಯಿಸಿದ ಮಾತ್ರಕ್ಕೆ ಇಲ್ಲಿಗೆ ಕೈಗಾರಿಕೆ ಬರುತ್ತವೆಯೇ' ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ನಾವೆಲ್ಲರೂ ಬೆಂಗಳೂರಿನವರು. ನಮ್ಮ ಜಿಲ್ಲಾ ಕೇಂದ್ರ ರಾಮನಗರದಲ್ಲೇ ಇರಲಿ. ಅದಕ್ಕೆ ಅಭ್ಯಂತರವಿಲ್ಲ. ಬೆಂಗಳೂರು ಬ್ರ್ಯಾಂಡ್ ಹೆಸರು ಕಳೆದುಕೊಳ್ಳಲು ನಾವು ಇಷ್ಟಪಡುವುದಿಲ್ಲ' ಎಂದರು.

ಮುಖ್ಯಾಂಶಗಳು

- ಬೆಂಗಳೂರು ಸಂಚಾರ ದಟ್ಟಣೆ ತಪ್ಪಿಸಲು ರಾಜ್ಯ ಸರ್ಕಾರದ ಕ್ರಮ
- ಸರ್ವೆ ಕಾರ್ಯಕ್ಕೆ ಚಾಲನೆ ನೀಡಿರುವ ಸರ್ಕಾರ
- ಬಿಡದಿ ಕೈಗಾರಿಕಾ ಪ್ರದೇಶದ ಕಾರ್ಮಿಕರ ಅನುಕೂಲಕ್ಕೆ ಮೆಟ್ರೊ ಸೇವೆ



> **ಮೆಟ್ರೊ ಸೇವೆ ವಿಸ್ತರಣೆ ಮತ್ತು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರಚನೆಯಿಂದ ಈ ಭಾಗ ಅಭಿವೃದ್ಧಿ ಆಗುತ್ತದೆ. ಅದರೊಂದಿಗೆ ಈ ಭಾಗದ ಜನರ ಆಸ್ತಿ ಮೌಲ್ಯವೂ ಹೆಚ್ಚಾಗುತ್ತದೆ**
> **ಡಿ.ಕೆ. ಶಿವಕುಮಾರ್,** ಉಪ ಮುಖ್ಯಮಂತ್ರಿ

> **ರಾಮನಗರಕ್ಕೆ ಬೆಂಗಳೂರು ದಕ್ಷಿಣ ಎಂದಾದರೂ ನಾಮಕರಣ ಮಾಡಲಿ, ದೆಹಲಿ ಅಥವಾ ದುಬೈ ಎಂದಾದರೂ ಕರೆಯಲಿ. ಬರೀ ಹೆಸರು ಬದಲಾವಣೆ ಮಾಡಿದರೆ ಅಭಿವೃದ್ಧಿ ಆಗುತ್ತದೆಯೇ?**
> **ಎಚ್.ಡಿ. ಕುಮಾರಸ್ವಾಮಿ,** ಶಾಸಕ

ಹೇಗೆ ಗ್ರೇಟರ್ ಬೆಂಗಳೂರು ಮಾಡ್ತಾರೊ ನೋಡೋಣ: ಎಚ್‌ಡಿಕೆ

ಚನ್ನಪಟ್ಟಣ: 'ರಾಮನಗರ ಜಿಲ್ಲೆಯ ಅಭಿವೃದ್ಧಿಗೆ ನನ್ನ ಯಾವುದೇ ತಕರಾರಿಲ್ಲ. ಆದರೆ, ಬಿಡದಿಯನ್ನು ಯಾವ ರೀತಿ ಗ್ರೇಟರ್ ಬೆಂಗಳೂರು ಮಾಡುತ್ತಾರೋ ಮಾಡಲಿ, ನೋಡೋಣ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಸವಾಲು ಹಾಕಿದ್ದಾರೆ.

ಚನ್ನಪಟ್ಟಣದಲ್ಲಿ ಶುಕ್ರವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು,'ಇಂತಹ ಇನ್ನೂ ಇಪ್ಪತ್ತು ಘೋಷಣೆ ಮಾಡಲಿ. ಜಿಲ್ಲೆಯ ಅಭಿವೃದ್ಧಿ ಮಾಡಲಿ' ಎಂದು ವ್ಯಂಗ್ಯವಾಗಿ ಹಾರೈಸಿದರು.

'ಮಳೆ ಬಂದಾಗೊಮ್ಮೆ ಬೆಂಗಳೂರು ಏನಾಗುತ್ತಿದೆ ಎಂದು ಎಲ್ಲರಿಗೂ ಗೊತ್ತಿದೆ. 2004ರಲ್ಲಿ ಬೆಂಗಳೂರನ್ನು ಸಿಂಗಪುರ ಮಾಡುತ್ತೇವೆ ಎಂದಿದ್ದರು. ಮಳೆ ಆದಾಗ ಏನಾಯಿತು? ಇದೇ ಗ್ರೇಟರ್ ಬೆಂಗಳೂರು. ನಾನು ಕಾಣದೇ ಇರೋದಾ ಇದೆಲ್ಲಾ' ಎಂದರು.

ದೊಡ್ಡಬಳ್ಳಾಪುರ–ಹೊಸಕೋಟೆ ಮಾರ್ಗ

17ರಿಂದ ಟೋಲ್ ಸಂಗ್ರಹ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಂಚಾರ ದಟ್ಟಣೆ ಕಡಿಮೆ ಮಾಡುವ, ಸರಕು ಸಾಗಣೆ ವಾಹನಗಳ ತಡೆರಹಿತ ಸಂಚಾರಕ್ಕೆ ಅವಕಾಶ ಮಾಡಿಕೊಡುವ 'ಸ್ಯಾಟಲೈಟ್ ಟೌನ್ ರಿಂಗ್ ರೋಡ್'ನ (ಎಸ್‌ಟಿಆರ್‌ಆರ್) ಮೊದಲ ಹಂತದ ದೊಡ್ಡಬಳ್ಳಾಪುರ-ಹೊಸಕೋಟೆ ಮಾರ್ಗ ಸಂಚಾರಕ್ಕೆ ಮುಕ್ತವಾಗಿದೆ.

ನ.17ರಿಂದ ಟೋಲ್ ಪಾವತಿ ಆರಂಭಿಸಲಾಗುತ್ತಿದ್ದು, ದೇವನಹಳ್ಳಿ ಬಳಿಯ ನಲ್ಲೂರು ಟೋಲ್ ಪ್ಲಾಜಾದಲ್ಲಿ ಹಣ ಸಂಗ್ರಹಿಸಲಾಗುತ್ತದೆ. ಲಘು ವಾಹನಗಳಿಗೆ ₹70 (ಏಕಮುಖ ಸಂಚಾರ) 24 ಗಂಟೆಗಳ ಒಳಗೆ ಒಂದು ಸುತ್ತಿನ ಪ್ರಯಾಣಕ್ಕೆ ₹105, ಬಸ್, ಟ್ರಕ್‌ಗಳು ಕ್ರಮವಾಗಿ ₹240 ಮತ್ತು ₹360 ಪಾವತಿಸಬೇಕಿದೆ. ಈ ದರಗಳು ಬರುವ ಮಾರ್ಚ್ 31ರವರೆಗೆ ಜಾರಿಯಲ್ಲಿರುತ್ತವೆ. ದ್ವಿಚಕ್ರ ವಾಹನಗಳಿಗೆ ಟೋಲ್ ಪಾವತಿಯಿಂದ ವಿನಾಯಿತಿ ನೀಡಲಾಗಿದೆ.

ಬೆಂಗಳೂರು ನಗರವನ್ನು ಸುತ್ತುವರೆದಂತೆ ದಾಬಸ್‌ಪೇಟೆಯಿಂದ ರಾಮನಗರದವರೆಗೆ ಸಂಪರ್ಕ ಸೇತುವಾಗಲಿರುವ 288 ಕಿ.ಮೀ ಉದ್ದದ 'ಸ್ಯಾಟಲೈಟ್ ಟೌನ್ ರಿಂಗ್ ರೋಡ್' ಇದಾಗಿದೆ.

ಈ ರಸ್ತೆ ಪೂರ್ಣಗೊಂಡರೆ ಬೇರೆಬೇರೆ ಪ್ರದೇಶಗಳಿಗೆ ತೆರಳಬೇಕಿರುವ ವಾಣಿಜ್ಯ ವಾಹನಗಳು ಬೆಂಗಳೂರು ನಗರ ಪ್ರವೇಶಿಸದೇ ಹೊರವಲಯದ ಮೂಲಕ ಸಾಗಬಹುದಾಗಿದೆ. ಬೆಂಗಳೂರಿನ ವಾಹನ ದಟ್ಟಣೆ ಕಡಿಮೆ ಮಾಡಲು, ವಾಹನಗಳು ನಿಗದಿತ ಸ್ಥಳವನ್ನು ತ್ವರಿತವಾಗಿ ತಲುಪಲು ಈ ಮಾರ್ಗ ಅನುಕೂಲ ಕಲ್ಪಿಸುತ್ತದೆ.

₹17 ಸಾವಿರ ಕೋಟಿ ವೆಚ್ಚದ ಈ ಯೋಜನೆಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ 10 ಹಂತಗಳಲ್ಲಿ ಅಭಿವೃದ್ಧಿಪಡಿಸುತ್ತಿದೆ. ಅವುಗಳಲ್ಲಿ ದೊಡ್ಡಬಳ್ಳಾಪುರ-ಹೊಸಕೋಟೆ ಹೊರವಲಯ ರಸ್ತೆ (34.15 ಕಿ.ಮೀ) ಪೂರ್ಣಗೊಂಡಿದೆ ಎಂದು ಎನ್‌ಎಚ್‌ಎಐ ಬೆಂಗಳೂರಿನ ಯೋಜನಾ ನಿರ್ದೇಶಕ ಕೆ.ಬಿ. ಜಯಕುಮಾರ್ ಮಾಹಿತಿ ನೀಡಿದರು.



ಮಾಜಿ ಶಾಸಕ ಡಾ.ಕೆ. ಶ್ರೀನಿವಾಸಮೂರ್ತಿ ಹಾಗೂ ಸ್ಥಳೀಯ ಜೆಡಿಎಸ್ ಮುಖಂಡರು ಸೋಂಪುರ ಹೋಬಳಿ ಹೊನ್ನೇನಹಳ್ಳಿ ಗ್ರಾಮ ಪಂಚಾಯಿತಿಯ ವೀರಸಾಗರ ಗ್ರಾಮದ ಹೊಲದಲ್ಲಿ ಬೆಳೆ ಸಮೀಕ್ಷೆ ನಡೆಸಿದರು

ಜೆಡಿಎಸ್‌ನಿಂದ ಬರ ಅಧ್ಯಯನ

ದಾಬಸ್‌ಪೇಟೆ: 'ಸಕಾಲಕ್ಕೆ ಮಳೆ ಬೀಳದೆ ರೈತರ ಬದುಕು ಸಂಕಷ್ಟಕ್ಕೆ ಒಳಗಾಗಿದೆ. ನೆಲಮಂಗಲ ತಾಲ್ಲೂಕಿನಲ್ಲೂ ಬರಗಾಲದ ಛಾಯೆ ಆವರಿಸಿದೆ. ಅದಕ್ಕಾಗಿ ಜೆಡಿಎಸ್‌ನಿಂದ ತಾಲ್ಲೂಕಿನಲ್ಲಿ ಬೆಳೆ ಸಮೀಕ್ಷೆ ನಡೆಸಲಾಗುತ್ತಿದೆ' ಎಂದು ಮಾಜಿ ಶಾಸಕ ಕೆ.ಶ್ರೀನಿವಾಸಮೂರ್ತಿ ತಿಳಿಸಿದರು.

ವೀರಸಾಗರ ಗ್ರಾಮದ ರೈತರ ರಾಗಿ ಹೊಲದಲ್ಲಿ ಬೆಳೆ ವೀಕ್ಷಿಸಿ ಅವರು ಮಾತನಾಡಿದರು.

'ಮಳೆ ಇಲ್ಲದೇ ರಾಗಿ ಫಸಲು ಸರಿಯಾಗಿ ಬಂದಿಲ್ಲ. ರಾಗಿ ಬೆಳೆಯಲು ವೆಚ್ಚ ಮಾಡಿದ್ದ ಹಣವೂ ಬರುತ್ತಿಲ್ಲ. ವಾಣಿಜ್ಯ ಬೆಳೆ ಬೆಳೆಯಲು ಸಮರ್ಪಕ ವಿದ್ಯುತ್ ಪೂರೈಕೆಯಾಗುತ್ತಿಲ್ಲ. ವಿದ್ಯುತ್ ಅಭಾವದಿಂದ ಆ ಬೆಳೆಗಳು ಒಣಗುತ್ತಿವೆ. ಇದರಿಂದ ರೈತನ ಬದುಕು ಸಂಕಷ್ಟಕ್ಕೆ ಸಿಲುಕಿದೆ' ಎಂದು ಹೇಳಿದರು.

ಇತ್ತೀಚೆಗೆ ಸರ್ಕಾರ ಹಾಲಿನ ದರ ₹ 2 ಕಡಿಮೆ ಮಾಡಿದೆ. ಈಗಾಗಲೇ ಮೇವು ಹಾಗೂ ಪಶು ಆಹಾರ ಪದಾರ್ಥಗಳ ದರ ಏರಿಕೆಯಾಗಿದ್ದು, ರೈತರಿಗೆ ಹಾಲಿನಲ್ಲೂ ನಷ್ಟವಾಗುತ್ತಿದೆ ಎಂದು ತಿಳಿಸಿದರು.

ಸೋಂಪುರ ಹೋಬಳಿ ಅಧ್ಯಕ್ಷ ಮೋಹನ್ ಕುಮಾರ, ಜೆಡಿಎಸ್ ಜಿಲ್ಲಾ ಉಪಾಧ್ಯಕ್ಷ ಬಿ.ಪಿ.ಶ್ರೀನಿವಾಸಮೂರ್ತಿ ಹಾಗೂ ಮುಖಂಡರು ಹಾಜರಿದ್ದರು.

'ನರೇಗ ಕೆಲಸದ ದಿನ ಹೆಚ್ಚಿಸಲು ರಾಜ್ಯ ಸರ್ಕಾರ ಸಿದ್ಧ'

ಬೆಂಗಳೂರು: 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ನರೇಗ) ಯೋಜನೆಯ ಕೆಲಸ ದಿನಗಳಲ್ಲಿ ತಲಾ 150 ದಿನಗಳಿಗೆ ಹೆಚ್ಚಿಸಲು ಕೇಂದ್ರ ಸರ್ಕಾರ ಸ್ಪಂದಿಸದಿದ್ದರೆ ರಾಜ್ಯ ಸರ್ಕಾರವೇ ಆ ನಿರ್ಧಾರ ಕೈಗೊಳ್ಳಲಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ರಾಜ್ಯದಲ್ಲಿ ತೀವ್ರ ಬರ ಇರುವುದರಿಂದ ನರೇಗ ಯೋಜನೆಯ ಕೆಲಸದ ದಿನಗಳನ್ನು 150 ದಿನಗಳಿಗೆ ಹೆಚ್ಚಿಸುವಂತೆ ಮನವಿ ಮಾಡಲಾಗಿದೆ. ಆದರೆ, ಕೇಂದ್ರ ಸರ್ಕಾರ ಸ್ಪಂದಿಸಿಲ್ಲ. ಈ ವಿಷಯದಲ್ಲಿ ಒತ್ತಡ ಹೇರಬೇಕಾದ ಬಿಜೆಪಿ ಮತ್ತು ಜೆಡಿಎಸ್ ನಾಯಕರು ಬರ ಅಧ್ಯಯನದ ನಾಟಕ ಮಾಡುತ್ತಿದ್ದಾರೆ' ಎಂದರು.

ಬರಗಾಲದ ಕುರಿತು ಅಧ್ಯಯನ ನಡೆಸಿ ವರದಿ ಸಲ್ಲಿಸಲಾಗಿದೆ. ಕೆಲಸ ದಿನಗಳನ್ನು ಹೆಚ್ಚಿಸಲು ಸಾಧ್ಯವಿಲ್ಲದಿದ್ದರೆ ಕೇಂದ್ರ ಸರ್ಕಾರ ಅದನ್ನು ಸ್ಪಷ್ಟವಾಗಿ ತಿಳಿಸಬೇಕು. ರಾಜ್ಯ ಸರ್ಕಾರವೇ ಆ ನಿರ್ಧಾರ ಕೈಗೊಳ್ಳುವುದಕ್ಕೆ ಸಿದ್ಧವಾಗಿದೆ ಎಂದು ಹೇಳಿದರು.

ದೂರು ಸಲ್ಲಿಕೆಯ ಗಡುವು ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ಕಾಮಗಾರಿಗಳಲ್ಲಿ ಶೇಕಡ 40ರಷ್ಟು ಕಮಿಶನ್ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿರುವ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಆಯೋಗಕ್ಕೆ ದೂರು ಸಲ್ಲಿಸಲು ನೀಡಿದ್ದ ಗಡುವನ್ನು ನವೆಂಬರ್ 29ರವರೆಗೂ ವಿಸ್ತರಿಸಲಾಗಿದೆ.

ತನಿಖಾ ವ್ಯಾಪ್ತಿಯಲ್ಲಿರುವ ಲೋಕೋಪಯೋಗಿ, ಜಲ ಸಂಪನ್ಮೂಲ, ಸಣ್ಣ ನೀರಾವರಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ನಗರಾಭಿವೃದ್ಧಿ ಇಲಾಖೆಗಳ ಕಾಮಗಾರಿಗಳಲ್ಲಿ ಅಕ್ರಮ, ನಿಯಮ ಉಲ್ಲಂಘನೆ, ಭ್ರಷ್ಟಾಚಾರ ನಡೆದಿರುವ ಕುರಿತು ಮಾಹಿತಿಗಳಿದ್ದರೆ ಆಯೋಗಕ್ಕೆ ದೂರು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

'ಶುಕ್ರವಾರ ಸಂಜೆಯವರೆಗೂ ದೂರು ಸಲ್ಲಿಕೆಗೆ ಅವಕಾಶವಿತ್ತು. ಈವರೆಗೆ ನೂರಾರು ದೂರುಗಳು ಬಂದಿವೆ. ದೂರು ಸಲ್ಲಿಸಲು ಗಡುವು ವಿಸ್ತರಿಸುವಂತೆ ಸಾರ್ವಜನಿಕರಿಂದ ಮನವಿಗಳು ಬಂದಿವೆ. ಈ ಕಾರಣದಿಂದ ನ.29ರವರೆಗೂ ಗಡುವು ವಿಸ್ತರಿಸಲಾಗಿದೆ' ಎಂದು ಆಯೋಗದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ. ಬೆಂಗಳೂರಿನ ಕೆ.ಆರ್. ವೃತ್ತದಲ್ಲಿರುವ ಲೋಕೋಪಯೋಗಿ ಇಲಾಖೆಯ ಮುಖ್ಯ ಕಟ್ಟಡದ ಮೂರನೇ ಮಹಡಿಯಲ್ಲಿರುವ ಆಯೋಗದ ಕಚೇರಿಗೆ ನೇರವಾಗಿ ಅಥವಾ ಆಯೋಗದ ಇ–ಮೇಲ್ justicedasinquirycommission@gmail.com ವಿಳಾಸಕ್ಕೆ ದೂರು ಸಲ್ಲಿಸಬಹುದು ಎಂದು ಆಯೋಗದ ಅಧಿಕಾರಿಗಳು ತಿಳಿಸಿದ್ದಾರೆ.



ಜನಜಂಗುಳಿ — ಮೆಜೆಸ್ಟಿಕ್ ಕೇಂದ್ರ ಬಸ್ ನಿಲ್ದಾಣದಲ್ಲಿ ಶುಕ್ರವಾರ ರಾತ್ರಿ ತಮ್ಮೂರಿನ ಬಸ್‌ಗಾಗಿ ಕಾಯುತ್ತಿದ್ದ ಪ್ರಯಾಣಿಕರು ಪ್ರಜಾವಾಣಿ ಚಿತ್ರ

ಸುತ್ತೋಲೆ ರದ್ದುಪಡಿಸಲು ಬಿಜೆಪಿ ಆಗ್ರಹ

ಪಿಯು ಇಲಾಖೆ ಉಸ್ತುವಾರಿ ಬದಲಾವಣೆಗೆ ಸುತ್ತೋಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿಪೂರ್ವ ಶಿಕ್ಷಣ ಇಲಾಖೆಯ ಕಾರ್ಯ ನಿರ್ವಹಣೆಯನ್ನು ಆಯಾ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗೆ (ಸಿಇಒ) ಹಾಗೂ ಆಯಾ ವಿಭಾಗದ ಸಂಬಂಧಪಟ್ಟ ಶಾಲಾ ಶಿಕ್ಷಣ ಇಲಾಖೆ ಹೆಚ್ಚುವರಿ ಆಯುಕ್ತರಿಗೆ ಮೇಲುಸ್ತುವಾರಿ ಜವಾಬ್ದಾರಿ ನೀಡಲಾಗಿದ್ದು, ಈ ಕುರಿತ ಸುತ್ತೋಲೆ ರದ್ದು ಮಾಡುವಂತೆ ಬಿಜೆಪಿ ಒತ್ತಾಯಿಸಿದೆ.

ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಎಸ್.ವಿ. ಸಂಕನೂರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸರ್ಕಾರದ ಈ ಕ್ರಮದಿಂದ ಪದವಿಪೂರ್ವ ಶಿಕ್ಷಣ ಇಲಾಖೆ ವ್ಯವಸ್ಥೆ ಅಸ್ತವ್ಯಸ್ತ ಆಗಲಿದೆ ಎಂದು ತಿಳಿಸಿದರು.

ಸಿದ್ದರಾಮಯ್ಯ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಹಲವಾರು ತಪ್ಪು ನಿರ್ಣಯ ಕೈಗೊಂಡಿದ್ದು ಇದರಿಂದ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪಾಲಕರ ಸಮುದಾಯದಲ್ಲಿ ಗೊಂದಲ ನಿರ್ಮಾಣಗೊಂಡಿದೆ ಎಂದು ಅವರು ಹೇಳಿದರು.

'ಪದವಿಪೂರ್ವ ಹಂತದಲ್ಲಿ ಗುಣಮಟ್ಟದ ಶಿಕ್ಷಣ ಇರಬೇಕು ಎಂಬ ಕಾರಣಕ್ಕೆ ಬಂಗಾರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಇದಕ್ಕಾಗಿ ಪ್ರತ್ಯೇಕ ಇಲಾಖೆಯನ್ನೇ ಸ್ಥಾಪಿಸಲಾಯಿತು. ಆಗ ವೀರಪ್ಪ ಮೊಯಿಲಿ ಶಿಕ್ಷಣ ಸಚಿವರಾಗಿದ್ದರು. ಪ್ರತ್ಯೇಕ ಇಲಾಖೆ ಸ್ಥಾಪನೆಗಾಗಿ ಹಲವು ಹೋರಾಟಗಳನ್ನು ನಡೆಸಿದ್ದೆವು. ಬಂಗಾರಪ್ಪ ಕಾಲದಲ್ಲಿ ಆಗಿದ್ದ ಉತ್ತಮ ವ್ಯವಸ್ಥೆಯನ್ನು ಅವರ ಪುತ್ರ ಮಧು ಬಂಗಾರಪ್ಪ ಒಂದು ಸುತ್ತೋಲೆ ಮೂಲಕ ಬದಲು ಮಾಡಿರುವುದು ಬೇಸರ ಸಂಗತಿ' ಎಂದು ಸಂಕನೂರು ತಿಳಿಸಿದರು.

ಮಧು ಬಂಗಾರಪ್ಪ ಅವರು ವಾರ್ಷಿಕ ಪರೀಕ್ಷೆ ಬಳಿಕ ಎರಡು ಪೂರಕ ಪರೀಕ್ಷೆಗಳನ್ನು ನಡೆಸಲು ಸೂಚಿಸಿದ್ದಾರೆ. ಹಿಂದೆ ಒಂದು ಪೂರಕ ಪರೀಕ್ಷೆ ನಡೆಯುತ್ತಿತ್ತು. ಮೂರು ಪರೀಕ್ಷೆಗಳು ಮುಗಿಯಲು ನವೆಂಬರ್ 10 ರವರೆಗೆ ಅವಕಾಶ ಬೇಕು. ಇದರಿಂದ ಬೋಧನಾ ಅವಧಿಯೇ ಸಿಗುವುದಿಲ್ಲ. ಇದರಿಂದ ಶೇ 90 ವಿದ್ಯಾರ್ಥಿಗಳಿಗೆ ಅನ್ಯಾಯ ಆಗಲಿದೆ ಎಂದು ಅವರು ಆಕ್ಷೇಪಿಸಿದರು.

'ಸಚಿವರಿಗೆ ಹೊರಗಿನವರು ಸಲಹೆಗಳನ್ನು ನೀಡಿ ಈ ರೀತಿಯ ಬದಲಾವಣೆಗಳನ್ನು ಮಾಡಿಸುತ್ತಿದ್ದಾರೆ' ಎಂದು ವಿಧಾನ ಪರಿಷತ್‌ನ ಮಾಜಿ ಸದಸ್ಯ ಅರುಣ್ ಶಹಾಪುರ ದೂರಿದರು.

> **ಇಲಾಖೆಯಲ್ಲಿ ಯಾವುದೇ ಬದಲಾವಣೆ ಮಾಡಬೇಕಿದ್ದರೂ ಕಾಯ್ದೆಗೆ ತಿದ್ದುಪಡಿ ತರಬೇಕು. ಅವೆಲ್ಲವನ್ನು ಗಾಳಿಗೆ ತೂರಿ ಸುತ್ತೋಲೆ ಮೂಲಕ ಬದಲಾವಣೆ ಮಾಡಲಾಗಿದೆ**
> **ಅರುಣ್ ಶಹಾಪುರ,** ವಿಧಾನ ಪರಿಷತ್‌ನ ಮಾಜಿ ಸದಸ್ಯ

'ಆರೋಪ ಸಾಬೀತಾದರೆ ರಾಜೀನಾಮೆ'

ಚಿಕ್ಕಬಳ್ಳಾಪುರ: 'ನನ್ನ ಮೇಲೆ ಯಾವುದೇ ಒಂದು ಆರೋಪ ಸಾಬೀತಾದರೂ ರಾಜೀನಾಮೆ ಕೊಟ್ಟು ಮನೆಗೆ ಹೋಗುವೆ' ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ತಿಳಿಸಿದರು.

ಸರ್ಕಾರಿ ನೌಕರರ ಸಂಘ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಸರ್ಕಾರಿ ನೌಕರರಿಂದ ನಾನು ಹಣ ಎತ್ತುತ್ತಿದ್ದೇನೆ ಎಂದು ಕೆಲವರು ಆರೋಪ ಮಾಡುತ್ತಿದ್ದಾರೆ. ಸರ್ಕಾರಿ ನೌಕರರಿಂದ ಒಂದು ರೂಪಾಯಿ ಪಡೆದಿದ್ದರೂ ರಾಜೀನಾಮೆ ನೀಡುವೆ. ನಾನು ಯಾವುದಕ್ಕೂ ಹೆದರುವುದಿಲ್ಲ' ಎಂದರು.

ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಸಚಿವ ಎಚ್‌.ಸಿ. ಮಹದೇವಪ್ಪ ಹೇಳಿಕೆ

'ವರ್ಷಪೂರ್ತಿ ಸಂವಿಧಾನ ದಿನ ಆಚರಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂವಿಧಾನ ದಿನವನ್ನು ವರ್ಷಪೂರ್ತಿ ಆಚರಿಸಲಾಗುವುದು. ಸಂವಿಧಾನ ಹಾಗೂ ಅಂಬೇಡ್ಕರ್ ಕುರಿತು ಸಭೆ, ಚರ್ಚೆ, ಸಂವಾದ, ಗೋಷ್ಠಿಗಳನ್ನು ನಡೆಸಲಾಗುವುದು ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ತಿಳಿಸಿದರು.

ಡಿ.ಪರಮೇಶ್ವರ್ ನಾಯಕ್ ಅವರ 'ಡಾ ಬಿ.ಆರ್. ಅಂಬೇಡ್ಕರ್ ಭರವಸೆಯ ಚಿಹ್ನೆ: ಭಾರತದಲ್ಲಿ ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಅವರ ದೂರದೃಷ್ಟಿ' ಕೃತಿಯನ್ನು ಶುಕ್ರವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಅಂಬೇಡ್ಕರ್, ಬಸವಣ್ಣರನ್ನು ಅರಿಯದೇ ಸಾಮಾಜಿಕ ನ್ಯಾಯ ಸಾಧ್ಯವಿಲ್ಲ. ನಮ್ಮ ಸಾಮಾಜಿಕ ಜವಾಬ್ದಾರಿ ನಿರ್ವಹಿಸದೆ ಇದ್ದರೆ ಕೋಮುವಾದಿಗಳು, ಸಂವಿಧಾನ ವಿರೋಧಿಗಳು ಬಲಿಷ್ಠಗೊಳ್ಳುತ್ತಾರೆ. ಸಂವಿಧಾನ, ಸಾಮಾಜಿಕ ನ್ಯಾಯ ದುರ್ಬಲವಾಗುತ್ತದೆ. ಸಂವಿಧಾನದ ಪೀಠಿಕೆ ಓದು ಪ್ರಥಮ ಹಂತದ ಕಾರ್ಯಕ್ರಮ. ಸಂವಿಧಾನವನ್ನು ಪಠ್ಯದಲ್ಲಿ ಅಳವಡಿಸುವ ಕಾರ್ಯ ಮುಂದೆ ಆಗಬೇಕಿದೆ ಎಂದು ಹೇಳಿದರು.

ಹೈಕೋರ್ಟ್‌ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಮಾತನಾಡಿ, 'ಶಿಕ್ಷಣ ಮತ್ತು ಸಾಮಾಜಿಕ ಅಸಮಾನತೆ ಹೋಗಲಾಡಿಸಲು ಮೀಸಲಾತಿಯನ್ನು ತರಲಾಗಿದೆಯೇ ಹೊರತು ಜಾತಿ ಆಧಾರಿತವಾಗಿ ಅಲ್ಲ. ಈ ಅಸಮಾನತೆಯನ್ನು ತೊಡೆದು ಹಾಕಲು ಸಾಧ್ಯವಾದ ದಿನವೇ ಮೀಸಲಾತಿ ರದ್ದಾಗಲಿ' ಎಂದು ಆಶಿಸಿದರು.

'ಅಂಬೇಡ್ಕರ್ ಭವನ, ಅಂಬೇಡ್ಕರ್ ಪ್ರತಿಮೆಗಳು ಎಲ್ಲೆಡೆ ಆಗುತ್ತಿವೆ. ಆದರೆ, ಅಂಬೇಡ್ಕರ್ ಸಿದ್ಧಾಂತವನ್ನು ಯಾರೂ ಅಳವಡಿಸಿಕೊಳ್ಳುತ್ತಿಲ್ಲ. ಸಂವಿಧಾನವನ್ನು ತಿಳಿದರೆ ಅಂಬೇಡ್ಕರ್ ಅವರನ್ನು ತಿಳಿದಂತಾಗುತ್ತದೆ. ಸಂವಿಧಾನವನ್ನು ಬೋಧಿಸುವ ಶಿಕ್ಷಕರಿಗೆ ಸಂವಿಧಾನದ ಬಗ್ಗೆ ಮೊದಲು 3 ತಿಂಗಳು ತರಬೇತಿ ನೀಡಬೇಕು' ಎಂದು ಸಲಹೆ ನೀಡಿದರು.

ಮುಖ್ಯಾಂಶಗಳು

- ಅಂಬೇಡ್ಕರ್ ಕುರಿತು ಸಭೆ, ಚರ್ಚೆ, ಸಂವಾದ ನಡೆಸಲು ನಿರ್ಧಾರ
- ಸಂವಿಧಾನ ಕುರಿತು ಪಠ್ಯದಲ್ಲಿ ಅಳವಡಿಕೆಗೆ ಮನವಿ
- ಅಂಬೇಡ್ಕರ್ ಸಿದ್ಧಾಂತ ಅಳವಡಿಸಿಕೊಳ್ಳಿ



'ಡಾ.ಬಿ.ಆರ್ ಅಂಬೇಡ್ಕರ್ ಭರವಸೆಯ ಚಿಹ್ನೆ: ಭಾರತದಲ್ಲಿ ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಅವರ ದೂರದೃಷ್ಟಿ' ಕೃತಿಯ ಬಿಡುಗಡೆ ಕಾರ್ಯಕ್ರಮದಲ್ಲಿ ಸಾಹಿತಿ ಎಸ್‌.ಜಿ. ಸಿದ್ದರಾಮಯ್ಯ, ಕೃತಿಕಾರ ಡಿ. ಪರಮೇಶ್ ನಾಯಕ್, ದೂರ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕ ಬಿ.ಸಿ. ಮೈಲಾರಪ್ಪ, ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ, ಮೈಸೂರಿನ ಉರಿಲಿಂಗ ಪೆದ್ದಿಮಠದ ಜ್ಞಾನಪ್ರಕಾಶ ಸ್ವಾಮೀಜಿ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನದಾಸ್ ಇದ್ದರು ಪ್ರಜಾವಾಣಿ ಚಿತ್ರ

ಸಿಸಿಬಿ ಪೊಲೀಸರ ಕಾರ್ಯಾಚರಣೆ • 10 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಮನೆಯಲ್ಲಿ ಡ್ರಗ್ಸ್ ತಯಾರಿಸಿ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯಲ್ಲಿ ಮಿನಿ ಲ್ಯಾಬ್ ಮಾಡಿಕೊಂಡು ಸಿಂಥೆಟಿಕ್ ಡ್ರಗ್ಸ್ ತಯಾರಿಸಿ ಮಾರುತ್ತಿದ್ದ ಆರೋಪಿ ಬೆಂಜಮಿನ್‌ನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ನೈಜೀರಿಯಾ ಪ್ರಜೆ ಬೆಂಜಮಿನ್, ನಗರದ ಅವಲಹಳ್ಳಿಯಲ್ಲಿ ವಾಸವಿದ್ದ. ಮನೆಯಲ್ಲಿಯೇ ಡ್ರಗ್ಸ್ ತಯಾರಿಸಿ ಮಾರುತ್ತಿದ್ದ. ಮನೆ ಮೇಲೆ ಇತ್ತೀಚೆಗೆ ದಾಳಿ ಮಾಡಿ ಆರೋಪಿಯನ್ನು ಸೆರೆ ಹಿಡಿಯಲಾಗಿದೆ. ₹ 10 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ್ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಸಿಂಥೆಟಿಕ್ ಡ್ರಗ್ಸ್ ತಯಾರಿಕೆಗೆ ರಾಸಾಯನಿಕಗಳು, ಕಚ್ಚಾ ವಸ್ತುಗಳನ್ನು ಆರೋಪಿ ಮನೆಯಲ್ಲಿ ಸಂಗ್ರಹಿಸಿ ದ್ದ. ಕುಕ್ಕರ್, ಇತರೆ ಉಪಕರಣಗಳನ್ನು ಬಳಸಿ ಡ್ರಗ್ಸ್ ತಯಾರಿಸುತ್ತಿದ್ದ' ಎಂದರು.

'ನಗರದ ಹಲವು ಮಧ್ಯವರ್ತಿಗಳು, ಹೊರ ರಾಜ್ಯ ಹಾಗೂ ಹೊರ ದೇಶದಲ್ಲಿರುವ ಪೆಡ್ಲರ್‌ಗಳಿಗೆ ಬೆಂಜಮಿನ್ ಡ್ರಗ್ಸ್ ಮಾರುತ್ತಿದ್ದ. ಲಕ್ಷ ಲಕ್ಷ ವಹಿವಾಟು ನಡೆಸುತ್ತಿದ್ದ. ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಕಂಪನಿಗಳ ಉದ್ಯೋಗಿಗಳಿಗೂ ಈತ ಡ್ರಗ್ಸ್ ಮಾರುತ್ತಿದ್ದನೆಂಬ ಮಾಹಿತಿ ಇದೆ' ಎಂದು ಹೇಳಿದರು.



ಡ್ರಗ್ಸ್ ಪ್ರಕರಣದ ಆರೋಪಿ ಬೆಂಜಮಿನ್‌ನಿಂದ ಸಿಸಿಬಿ ಪೊಲೀಸರು ಜಪ್ತಿ ಮಾಡಿರುವ ವಸ್ತುಗಳು

ಡ್ರಗ್ಸ್ ಮಾರುವಾಗ ಸಿಕ್ಕಿಬಿದ್ದಿದ್ದ

'ರಾಮಮೂರ್ತಿ ನಗರ ಠಾಣಾ ವ್ಯಾಪ್ತಿಯಲ್ಲಿ ಆರೋಪಿ ಬೆಂಜಮಿನ್ ಇತ್ತೀಚೆಗೆ ಡ್ರಗ್ಸ್ ಮಾರುತ್ತಿದ್ದ. ಇದೇ ವೇಳೆ ಕಾರ್ಯಾಚರಣೆ ನಡೆಸಿ, ಆತನನ್ನು ಬಂಧಿಸಲಾಗಿತ್ತು. ಆತನ ಬಳಿ 100 ಗ್ರಾಂ ಎಂಡಿಎಂಎ ಡ್ರಗ್ಸ್ ಸಿಕ್ಕಿತ್ತು' ಎಂದು ಸಿಸಿಬಿ ಪೊಲೀಸರು ತಿಳಿಸಿದರು.

'ಬೆಂಜಮಿನ್‌ನನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಿದಾಗ, ಮನೆಯಲ್ಲಿ ಮಿನಿ ಲ್ಯಾಬ್ ಮಾಡಿದ್ದ ಸಂಗತಿ ಗೊತ್ತಾಗಿತ್ತು. ಬಳಿಕವೇ ಮನೆ ಮೇಲೆ ದಾಳಿ ಮಾಡಲಾಗಿತ್ತು' ಎಂದು ಹೇಳಿದರು.

'ಡ್ರಗ್ಸ್ ತಯಾರಿಸಲು ಬಳಸುತ್ತಿದ್ದ ಕಚ್ಚಾ ಪದಾರ್ಥಗಳು, 5 ಲೀಟರ್ ಸಾಮರ್ಥ್ಯದ ಪ್ರೆಷರ್ ಕುಕ್ಕರ್, ಸ್ಟೌವ್, ಅಡುಗೆ ಅನಿಲ ಸಿಲಿಂಡರ್, ಮೊಬೈಲ್ ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

ಬಟ್ಟೆ ವ್ಯಾಪಾರದ ಸೋಗು

'ವ್ಯಾಪಾರ ಉದ್ದೇಶದಿಂದ ವೀಸಾ ಪಡೆದಿದ್ದ ಆರೋಪಿ ಬೆಂಜಮಿನ್, ಹಲವು ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದ. ಬಟ್ಟೆ ವ್ಯಾಪಾರದ ಸೋಗಿನಲ್ಲಿ ನಗರದಲ್ಲಿ ಓಡಾಡುತ್ತಿದ್ದ. ವೀಸಾ ಅವಧಿ 2022ಕ್ಕೆ ಅಂತ್ಯವಾದರೂ ಆರೋಪಿ ಅಕ್ರಮವಾಗಿ ವಾಸವಿದ್ದ' ಎಂದು ಸಿಸಿಬಿ ಪೊಲೀಸರು ಹೇಳಿದರು.

ರೌಡಿ ಬಂಧನ

ಬೆಂಗಳೂರು: ಅಪರಾಧ ಕೃತ್ಯಗಳಲ್ಲಿ ಪದೇ ಪದೇ ಭಾಗಿಯಾಗಿ ಜನರಲ್ಲಿ ಭಯವನ್ನುಂಟು ಮಾಡುತ್ತಿದ್ದ ಆರೋಪದಡಿ ರೌಡಿ ಸೈಯದ್ ಶಬ್ಬೀರ್‌ನನ್ನು (28) ಗೂಂಡಾ ಕಾಯ್ದೆಯಡಿ ಬಂಧಿಸಿರುವ ನಗರದ ಪೊಲೀಸರು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಬಿಟ್ಟು ಬಂದಿದ್ದಾರೆ.

'ಮಡಿವಾಳ ಬಸಾಪುರ ರಸ್ತೆಯ ನಿವಾಸಿ ಶಬ್ಬೀರ್, 2017ರಿಂದ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದ. ಕೋರಮಂಗಲ ಠಾಣೆಯ ರೌಡಿ ಪಟ್ಟಿಯಲ್ಲಿ ಈತನ ಹೆಸರಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದರೋಡೆ, ಕೊಲೆ ಯತ್ನ, ಅಪಹರಣ, ಹಲ್ಲೆ ಸೇರಿ 15 ಪ್ರಕರಣಗಳಲ್ಲಿ ಶಬ್ಬೀರ್ ಆರೋಪಿ. ಕೆಲ ಪ್ರಕರಣಗಳಲ್ಲಿ ಜೈಲಿಗೆ ಹೋಗಿದ್ದ ಈತ, ಜಾಮೀನಿನ ಮೇಲೆ ಹೊರಬಂದಿದ್ದ. ನ್ಯಾಯಾಲಯದ ವಿಚಾರಣೆಗೆ ಹಾಜರಾಗುತ್ತಿರಲಿಲ್ಲ. ತಾನೊಬ್ಬ ರೌಡಿ ಎಂಬುದಾಗಿ ಹೇಳಿಕೊಂಡು ಜನರನ್ನು ಬೆದರಿಸುತ್ತಿದ್ದ. ಶಬ್ಬೀರ್ ಬಂಧನಕ್ಕೆ ಕೋರಮಂಗಲ ಠಾಣೆ ಇನ್‌ಸ್ಪೆಕ್ಟರ್ ಪ್ರಸ್ತಾವ ಸಲ್ಲಿಸಿದ್ದರು. ಇದನ್ನು ಒಪ್ಪಿ ಕಮಿಷನರ್ ಅವರು ಆದೇಶ ಹೊರಡಿಸಿದ್ದರು' ಎಂದು ಮೂಲಗಳು ತಿಳಿಸಿವೆ.

ಆರೋಪಿ ಪತ್ತೆ ಮಾಡಿದ ಬೆರಳಚ್ಚು ಉಪಕರಣ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಅಪರಾಧ ಪ್ರಕರಣದಲ್ಲಿ ಜೈಲು ಸೇರಿ ಜಾಮೀನು ಮೇಲೆ ಹೊರಬಂದು 9 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಆರೋಪಿ ಲಕ್ಷ್ಮಣ್ (47), ಬೆರಳಚ್ಚು ಪತ್ತೆ ಉಪಕರಣದಿಂದಾಗಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ.

'ಸ್ಥಳೀಯ ನಿವಾಸಿ ಲಕ್ಷ್ಮಣ, ದರೋಡೆ ಪ್ರಕರಣದ ಆರೋಪಿ. ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಈತನನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದರು. 9 ವರ್ಷಗಳ ಹಿಂದೆ ಜೈಲಿನಿಂದ ಹೊರಬಂದಿದ್ದ ಆರೋಪಿ, ಗುರುತು ಸಿಗದ ರೀತಿಯಲ್ಲಿ ಗಡ್ಡ ಬಿಟ್ಟುಕೊಂಡು ಬೇಕರಿಯಲ್ಲಿ ಕೆಲಸ ಮಾಡುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಠಾಣೆಯ ಎಎಸ್‌ಐ ಹಾಗೂ ಸಿಬ್ಬಂದಿ, ನ. 8ರಂದು ರಾತ್ರಿ ಪೀಣ್ಯ 2ನೇ ಹಂತದಲ್ಲಿ ಗಸ್ತು ತಿರುಗುತ್ತಿದ್ದರು. ಇದೇ ಸಂದರ್ಭದಲ್ಲಿ ಲಕ್ಷ್ಮಣ, ಅನುಮಾನಾಸ್ಪದ ರೀತಿಯಲ್ಲಿ ಸುತ್ತಾಡುತ್ತಿದ್ದ. ಆತನನ್ನು ಗಮನಿಸಿದ್ದ ಸಿಬ್ಬಂದಿ, ವಿಚಾರಣೆ ನಡೆಸಿದ್ದರು.'

'ಹಳೇ ಪ್ರಕರಣಗಳ ಆರೋಪಿಗಳನ್ನು ಪತ್ತೆ ಮಾಡಲು ಸಿಬ್ಬಂದಿಗೆ ಬೆರಳಚ್ಚು ಪತ್ತೆ ಉಪಕರಣಗಳನ್ನು ನೀಡಲಾಗಿದೆ. ಇದೇ ಉಪಕರಣದ ಸಹಾಯದಿಂದ ಸಿಬ್ಬಂದಿ ಆರೋಪಿಯ ಬೆರಳಚ್ಚು ಪರಿಶೀಲಿಸಿದ್ದರು. ಅವಾಗಲೇ ಲಕ್ಷ್ಮಣ, ಹಳೇ ಪ್ರಕರಣದ ಆರೋಪಿ ಎಂಬುದು ಗೊತ್ತಾಯಿತು. ಆರೋಪಿಯನ್ನು ವಶಕ್ಕೆ ಪಡೆದು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರಿಗೆ ಒಪ್ಪಿಸಲಾಗಿದೆ' ಎಂದು ತಿಳಿಸಿದರು.

ಮೊಬೈಲ್ ಸುಲಿಗೆ: ಆರೋಪಿ ಬೆನ್ನಟ್ಟಿ ಹಿಡಿದ ಹೆಡ್ ಕಾನ್‌ಸ್ಟೆಬಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಫ್ಟ್‌ವೇರ್ ಎಂಜಿನಿಯರೊಬ್ಬರ ಮೊಬೈಲ್ ಕಿತ್ತುಕೊಂಡು ಪರಾರಿಯಾಗುತ್ತಿದ್ದ ಆರೋಪಿ ಸಿತೇಶ್‌ನನ್ನು ಹೆಡ್ ಕಾನ್‌ಸ್ಟೆಬಲ್ ಎಚ್.ಆರ್. ಮೋಹನ್ ಕುಮಾರ್ ಅವರು ಬೆನ್ನಟ್ಟಿ ಹಿಡಿದು, ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಸುಪರ್ದಿಗೆ ಒಪ್ಪಿಸಿದ್ದಾರೆ.

ವಾಹನಗಳ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸುವ ಕರ್ತವ್ಯದಲ್ಲಿದ್ದ ಮೋಹನ್, ಆರೋಪಿಯನ್ನು ಬೆನ್ನಟ್ಟಿ ಹಿಡಿದಿದ್ದಕ್ಕೆ ಡಿಸಿಪಿ ಕುಲ್‌ದೀಪ್‌ಕುಮಾರ್ ಅವರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಆಗಿದ್ದೇನು: 'ಕುಂದಲಹಳ್ಳಿ ಐಟಿಪಿಎಲ್ ರಸ್ತೆಯಲ್ಲಿರುವ ಪ್ರೆಸ್ಟೀಜ್ ಟೆಕ್ ಪಾರ್ಕ್ ಬಳಿಯ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಎಂಜಿನಿಯರ್ ಶಾಂತನಿ ಚಕ್ರವರ್ತಿ, ಸಂಜೆ ಕೆಲಸ ಮುಗಿಸಿ ರಸ್ತೆಯಲ್ಲಿ ನಡೆದುಕೊಂಡು ಮೊಬೈಲ್‌ನಲ್ಲಿ ಮಾತನಾಡುತ್ತ ಮನೆಯತ್ತ ಹೊರಟಿದ್ದರು' ಎಂದು ಪೊಲೀಸರು ಹೇಳಿದರು.

'ಶಾಂತನಿ ಅವರನ್ನು ಹಿಂಬಾಲಿಸಿದ್ದ ಆರೋಪಿ, ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದ. ಕಳ್ಳ... ಕಳ್ಳ... ಎಂದು ಶಾಂತನಿ ಕೂಗಾಡಿದ್ದರು. ಸಮೀಪದ ಆಂಜನೇಯ ಜಂಕ್ಷನ್‌ನಲ್ಲಿ ಕರ್ತವ್ಯದಲ್ಲಿದ್ದ ಎಚ್.ಎ.ಎಲ್ ಸಂಚಾರ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಮೋಹನ್, ಆರೋಪಿಯನ್ನು ಬೆನ್ನಟ್ಟಿದ್ದರು. ಸಾರ್ವಜನಿಕರ ಸಹಾಯದಿಂದ ಆರೋಪಿಯನ್ನು ಹಿಡಿದುಕೊಂಡಿದ್ದರು.'

'ಸುಲಿಗೆ ಆರೋಪಿ ಸಿಕ್ಕಿರುವುದಾಗಿ ಪೊಲೀಸ್ ನಿಯಂತ್ರಣ ಕೊಠಡಿಗೆ ಮಾಹಿತಿ ಹೋಗಿತ್ತು. ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಸ್ಥಳಕ್ಕೆ ಬಂದಿದ್ದರು. ಅವರೇ ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಕರೆದೊಯ್ದರು' ಎಂದು ಪೊಲೀಸರು ತಿಳಿಸಿದರು.

ಜೈಲಿನಲ್ಲಿ ಕೈದಿ ಬಳಿ ಮೊಬೈಲ್ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಕೊಠಡಿಯೊಂದರಲ್ಲಿ ವಿಚಾರಣಾಧೀನ ಕೈದಿ ಬಳಿ ಮೊಬೈಲ್ ಪತ್ತೆಯಾಗಿದ್ದು, ಈ ಬಗ್ಗೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಡ್ರಗ್ಸ್ ಪ್ರಕರಣದಲ್ಲಿ ಜೈಲು ಸೇರಿರುವ ಆರೋಪಿ ಸ್ಯಾಮುಯೆಲ್ ಚಿನ್ವೇಕೆ ಬಳಿ ಮೊಬೈಲ್ ಹಾಗೂ ಚಾರ್ಜರ್ ಸಿಕ್ಕಿದೆ. ಈ ಬಗ್ಗೆ ಜೈಲಿನ ಅಧಿಕಾರಿಗಳು ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸ್ಯಾಮುಯೆಲ್‌ನನ್ನು ಬಂಧಿಸಿದ್ದ ಕಸ್ಟಮ್ಸ್ ಅಧಿಕಾರಿಗಳು, ಜೈಲಿಗೆ ಬಿಟ್ಟಿದ್ದರು. ಜೈಲಿನೊಳಗೆ ಅಕ್ರಮವಾಗಿ ಮೊಬೈಲ್ ತರಿಸಿಕೊಂಡಿದ್ದ ಆರೋಪಿ, ಪರಿಚಯಸ್ಥರು ಹಾಗೂ ಇತರರಿಗೆ ಕರೆ ಮಾಡುತ್ತಿದ್ದ. ಈ ಬಗ್ಗೆ ಮಾಹಿತಿ ಕಲೆಹಾಕಿದ್ದ ಗುಪ್ತದಳದ ಸಿಬ್ಬಂದಿ, ಜೈಲಿನ ಅಧಿಕಾರಿಗಳಿಗೆ ವಿಷಯ ತಿಳಿಸಿದ್ದರು.'

'ನ. 2ರಂದು ಆರೋಪಿಯ ಕೊಠಡಿಗೆ ಹೋಗಿದ್ದ ಜೈಲಿನ ಸಿಬ್ಬಂದಿ, ತಪಾಸಣೆ ನಡೆಸಿದ್ದರು. ತಲೆದಿಂಬಿನ ಕೆಳಭಾಗದಲ್ಲಿ ಮೊಬೈಲ್ ಹಾಗೂ ಚಾರ್ಜರ್ ಸಿಕ್ಕವು. ಇವುಗಳನ್ನು ಆರೋಪಿಗೆ ತಂದುಕೊಟ್ಟವರು ಯಾರು ? ಪ್ರಕರಣದಲ್ಲಿ ಜೈಲಿ ಸಿಬ್ಬಂದಿಯ ಪಾತ್ರವೇನಾದರೂ ಇದೆಯಾ ? ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆಟೊ, ಕಾರುಗಳ ಗಾಜು ಒಡೆದ ಕಿಡಿಗೇಡಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಗೋಪಾಲನಗರ ಠಾಣೆ ವ್ಯಾಪ್ತಿಯಲ್ಲಿ ರಸ್ತೆಬದಿ ನಿಲ್ಲಿಸಿದ್ದ 25ಕ್ಕೂ ಹೆಚ್ಚು ವಾಹನಗಳ ಗಾಜು ಒಡೆದು ಹಾಕಲಾಗಿದ್ದು, ಕೃತ್ಯ ಎಸಗಿದ್ದ ಮೂವರು ಕಿಡಿಗೇಡಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ರಾಜೀವ್ ಗಾಂಧಿನಗರದ ರಸ್ತೆಗಳಲ್ಲಿ ಕಾರು, ದ್ವಿಚಕ್ರ ವಾಹನ ಹಾಗೂ ಆಟೊಗಳನ್ನು ನಿಲ್ಲಿಸಲಾಗಿತ್ತು. ಮಾಸ್ಕ್ ಧರಿಸಿದ್ದ ಮೂವರು ಕಿಡಿಗೇಡಿಗಳು, ದ್ವಿಚಕ್ರ ವಾಹನದಲ್ಲಿ ಸಂಚರಿಸಿ ಲಾಂಗ್‌ನಿಂದ ವಾಹನಗಳ ಗಾಜು ಒಡೆದು ಪರಾರಿಯಾಗಿದ್ದಾರೆ' ಎಂದು ಸ್ಥಳೀಯರು ಹೇಳಿದರು.

'ಆರೋಪಿಗಳ ಕೃತ್ಯದಿಂದಾಗಿ 20ಕ್ಕೂ ಹೆಚ್ಚು ಕಾರುಗಳು, 5 ದ್ವಿಚಕ್ರ ವಾಹನಗಳು ಹಾಗೂ ಆಟೊ ಜಖಂಗೊಂಡಿವೆ. ಕಿಡಿಗೇಡಿಗಳನ್ನು ಪತ್ತೆ ಮಾಡಿ, ಕಠಿಣ ಕ್ರಮ ಜರುಗಿಸಬೇಕು' ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಪೊಲೀಸರು, 'ಯಾವ ಕಾರಣಕ್ಕೆ ಕಿಡಿಗೇಡಿಗಳು ವಾಹನಗಳ ಗಾಜು ಒಡೆದಿದ್ದಾರೆ ಎಂಬುದು ಗೊತ್ತಾಗಿಲ್ಲ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದರು.

ಹಾಸನಾಂಬೆ ದರ್ಶನದ ವೇಳೆ ವಿದ್ಯುತ್ ಅವಘಡ

ನೆಲಮಂಗಲದ ವೃದ್ಧೆಯ ಭುಜದ ಮೂಳೆ ಮುರಿತ, ಗಾಯಗೊಂಡ 17 ಮಂದಿಗೆ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಹಾಸನ: ನಗರದ ಹಾಸನಾಂಬೆ ದೇಗುಲ ಬಳಿ ಶುಕ್ರವಾರ ಮಧ್ಯಾಹ್ನ ಸಂಭವಿಸಿದ ವಿದ್ಯುತ್ ಆಘಾತ ಹಾಗೂ ನಂತರದ ಕಾಲ್ತುಳಿತದಿಂದ ಒಟ್ಟು 17 ಭಕ್ತರಿಗೆ ಗಾಯಗಳಾಗಿವೆ. ನೆಲಮಂಗಲದ ವೃದ್ಧೆಯೊಬ್ಬರ ಭುಜದ ಮೂಳೆ ಮುರಿದಿದ್ದು, ಇನ್ನೊಬ್ಬ ವೃದ್ಧೆ ಹಾಗೂ ಯುವತಿ ಆಘಾತಕ್ಕೆ ಒಳಗಾಗಿದ್ದಾರೆ. ಐವರು ಚಿಕಿತ್ಸೆ ಪಡೆದು ಮನೆಗೆ ತೆರಳಿದ್ದು, ಉಳಿದವರಿಗೆ ಚಿಕಿತ್ಸೆ ನೀಡಲಾಗುತ್ತಿದೆ.

ಸರದಿ ಸಾಲಿನ ಮಧ್ಯದಲ್ಲಿ ಅಳವಡಿಸಿದ್ದ ಎಲ್‌ಇಡಿ ಪರದೆಯ ಕಬ್ಬಿಣದ ತಂತಿಗೆ ವಿದ್ಯುತ್ ತಗುಲಿ, ನಂತರ ಕಬ್ಬಿಣದ ಬ್ಯಾರಿಕೇಡ್‌ನಲ್ಲಿ ಸ್ವಲ್ಪ ಪ್ರಮಾಣದಲ್ಲಿ ವಿದ್ಯುತ್ ಹರಿದಿದ್ದು, ಕೆಲವರಿಗೆ ವಿದ್ಯುತ್ ಆಘಾತದ ಅನುಭವವಾಗಿತ್ತು. ತಕ್ಷಣ ಈ ಸುದ್ದಿ ಹರಡಿ, ಗಾಬರಿಗೊಂಡ ಭಕ್ತರು ಪ್ರಾಣ ಉಳಿಸಿಕೊಳ್ಳಲು ಓಡಲಾರಂಭಿಸಿ ಒಬ್ಬರ ಮೇಲೆ ಇನ್ನೊಬ್ಬರು ಬಿದ್ದರು. ಸಣ್ಣ ಪ್ರಮಾಣದ ಕಾಲ್ತುಳಿತವೂ ಉಂಟಾಯಿತು. ಸ್ಥಳೀಯರು ಕೆಲವರನ್ನು ಹೊರಗೆಳೆದು ರಕ್ಷಿಸಿದರು.

'ಕೂಡಲೇ ಅಂಬುಲೆನ್ಸ್ ಮೂಲಕ ಎಲ್ಲರನ್ನು ನಗರದ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಚಿಕಿತ್ಸೆ ನೀಡಲಾಗುತ್ತಿದ್ದು, ಯಾವುದೇ ಅಪಾಯವಿಲ್ಲ' ಎಂದು ವೈದ್ಯರು ತಿಳಿಸಿದ್ದಾರೆ.

'ವಿದ್ಯುತ್ ಶಾಕ್ ಬಗ್ಗೆ ಮೈಕ್‌ನಲ್ಲಿ ಹೇಳುತ್ತಿದ್ದರು. ಆದರೆ, ಅದನ್ನು ಸರಿಪಡಿಸಿ, ನಂತರ ಜನರ ಸುರಕ್ಷಿತ ದರ್ಶನಕ್ಕೆ ವ್ಯವಸ್ಥೆ ಮಾಡಬೇಕಿತ್ತು' ಎಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದರು.

ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ, ಗಾಯಾಳುಗಳ ಆರೋಗ್ಯ ವಿಚಾರಿಸಿದ ನಂತರ ಮಾತನಾಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, 'ವಿದ್ಯುತ್ ಆಘಾತದ ನಂತರ ನಡೆದ ನೂಕುನುಗ್ಗಲಿನಲ್ಲಿಯೇ ಹೆಚ್ಚು ಭಕ್ತರು ಗಾಯಗೊಂಡಿದ್ದಾರೆ. ಜನರಿಗೆ ತಪ್ಪು ಮಾಹಿತಿ ಹೋಗಬಾರದು. ಯಾವುದೇ ದೊಡ್ಡ ಅನಾಹುತ ಸಂಭವಿಸಿಲ್ಲ' ಎಂದರು.

'ಘಟನೆಯ ಕುರಿತು ಜಿಲ್ಲಾ ಉಸ್ತುವಾರಿ ಸಚಿವ ರಾಜಣ್ಣ ಅವರಿಗೂ ತಿಳಿಸಲಾಗಿದೆ. ಇಂತಹ ಘಟನೆ ನಡೆಯದಂತೆ ಅಗತ್ಯ ಮುನ್ನೆಚ್ಚರಿಕೆ ವಹಿಸಬೇಕು. ಅಧಿಕಾರಿಗಳು ತನಿಖೆ ನಡೆಸಿ, ವರದಿ ನೀಡಲಿದ್ದಾರೆ. ನಂತರ ಕ್ರಮ ಕೈಗೊಳ್ಳಲಾಗುವುದು' ಎಂದರು.

ಶಾಸಕರಾದ ಕೆ.ಎಂ. ಶಿವಲಿಂಗೇಗೌಡ, ಸ್ವರೂಪ್ ಪ್ರಕಾಶ್, ಸಂಸದ ಪ್ರಜ್ವಲ್ ರೇವಣ್ಣ, ಆಸ್ಪತ್ರೆಗೆ ಭೇಟಿ ನೀಡಿ, ಗಾಯಾಳುಗಳ ಆರೋಗ್ಯ ವಿಚಾರಿಸಿದರು.

> ಕೃತ್ಯ ಎಸಗಿದವರನ್ನು ಪತ್ತೆ ಮಾಡಿ, ಕಠಿಣ ಕ್ರಮ ಕೈಗೊಳ್ಳಲಾಗುವುದು
> **ಸಿ.ಸತ್ಯಭಾಮಾ,** ಜಿಲ್ಲಾಧಿಕಾರಿ





ಹಾಸನದ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಗಾಯಾಳುಗಳ ಆರೋಗ್ಯ ವಿಚಾರಿಸಿದರು (ಎಡ ಚಿತ್ರ). ನೂಕುನುಗ್ಗಲು, ಕಾಲ್ತುಳಿತದಿಂದಾಗಿ ಬ್ಯಾರಿಕೇಡ್‌ಗಳು, ಚಪ್ಪಲಿಗಳು ಚೆಲ್ಲಾಪಿಲ್ಲಿಯಾಗಿದ್ದವು

'ಸೋಮಶೇಖರ್‌ಗೆ ಬಿಜೆಪಿ ಏನು ಮೋಸ ಮಾಡಿದೆ'

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: 'ಶಾಸಕ ಎಸ್.ಟಿ. ಸೋಮಶೇಖರ್ ಅವರಿಗೆ ಬಿಜೆಪಿ ಏನು ಮೋಸ ಮಾಡಿದೆ. ಅಧಿಕಾರದಲ್ಲಿ ಇದ್ದಾಗ ಸಹಕಾರದಂತಹ ದೊಡ್ಡ ಖಾತೆಯನ್ನೇ ನೀಡಿರಲಿಲ್ಲವೆ' ಎಂದು ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಪ್ರಶ್ನಿಸಿದರು.

'ಪಕ್ಷ ಅಧಿಕಾರದಲ್ಲಿ ಇದ್ದಾಗ ಅಧಿಕಾರ ಅನುಭವಿಸಿ ಇಲ್ಲದಿದ್ದಾಗ ಪಕ್ಷ ಸಂಘಟನೆ ಮಾಡುವುದಿಲ್ಲ ಎಂದರೆ ಹೇಗೆ, ಮೈಸೂರಿನಂತಹ ದೊಡ್ಡ ಜಿಲ್ಲೆಯ ಉಸ್ತುವಾರಿ ನೀಡಲಾಗಿತ್ತು. ನಾವೀಗ ರಾಜ್ಯದಲ್ಲಿ ಅಧಿಕಾರದಲ್ಲಿ ಇಲ್ಲ, ಸಮಸ್ಯೆಯಲ್ಲಿ ಇದ್ದೇವೆ. ಈ ಸಂದರ್ಭದಲ್ಲಿ ಸೋಮಶೇಖರ್ ವಿಷ ಕುಡಿಯುವ ಸ್ಥಿತಿ ಬಂದಿದೆ ಎಂದು ಮಾತನಾಡಿದರೆ, ಪಕ್ಷ ಕಟ್ಟುವವರು ಯಾರು' ಎಂದು ಶುಕ್ರವಾರ ಇಲ್ಲಿ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

'ಅಧಿಕಾರದಲ್ಲಿರುವ ಕಾಂಗ್ರೆಸ್ ಖುಷಿಪಡಿಸಲು ಈ ರೀತಿ ಮಾತನಾಡುವುದು ತಪ್ಪಾಗುತ್ತದೆ. ಯಶವಂತಪುರದಲ್ಲಿ ಅವರ ನಾಯಕತ್ವದಲ್ಲೆ ಎಲ್ಲಾ ಕಾರ್ಯಕ್ರಮ ನಡೆಯುತ್ತಿವೆ. ಅವರನ್ನು ವಿರೋಧಿಸುವವರು ಪಕ್ಷದಲ್ಲಿ ಯಾರೂ ಇಲ್ಲ. ಅವರು ಈಗಲೂ ಪಕ್ಷದಲ್ಲೇ ಉಳಿದು ಸಂಘಟನೆ ಮಾಡಲಿದ್ದಾರೆ ಎಂಬ ವಿಶ್ವಾಸವಿದೆ' ಎಂದರು.


ಶೋಭಾ ಕರಂದ್ಲಾಜೆ

'ಡಿ.ವಿ. ಸದಾನಂದಗೌಡರು ಚುನಾವಣಾ ರಾಜಕೀಯ ನಿವೃತ್ತಿ ಬಗ್ಗೆ ಮಾತನಾಡಿದ ಬಳಿಕ ನಾನು ಬೆಂಗಳೂರು ಉತ್ತರ ಕ್ಷೇತ್ರದ ಅಭ್ಯರ್ಥಿ ಎಂಬ ಊಹಾಪೋಹ ಶುರುವಾಗಿದೆ. ಪಕ್ಷದಲ್ಲಿ ಈ ಬಗ್ಗೆ ಯಾವುದೇ ಚರ್ಚೆ ನಡೆದಿಲ್ಲ. ಸದ್ಯ ಚಿಕ್ಕಮಗಳೂರು-ಉಡುಪಿ ಕ್ಷೇತ್ರದಲ್ಲಿ ಓಡಾಡುತ್ತಿದ್ದೇನೆ. ಮುಂದೆ ಪಕ್ಷ ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧ' ಎಂದರು.

₹40 ಸಾವಿರ ಕೋಟಿ ಹೂಡಿಕೆ, 1 ಲಕ್ಷ ಉದ್ಯೋಗ ಸೃಷ್ಟಿ

ಕೆಎಚ್‌ಐಆರ್ ಸಿಟಿ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಿಂದ 60–80 ಕಿ.ಮೀ ದೂರದಲ್ಲಿ ವಿಶ್ವ ದರ್ಜೆಯ ಜ್ಞಾನ, ಆರೋಗ್ಯ, ನಾವೀನ್ಯತೆ ಮತ್ತು ಸಂಶೋಧನಾ ನಗರ (ಕೆಎಚ್‌ಐಆರ್ ಸಿಟಿ) ವನ್ನು ಅಭಿವೃದ್ಧಿಪಡಿಸಲಾಗುವುದು. ಇಲ್ಲಿ ಸುಮಾರು ₹40 ಸಾವಿರ ಕೋಟಿ ಹೂಡಿಕೆ ನಿರೀಕ್ಷೆ ಇದ್ದು, ಸುಮಾರು 80 ಸಾವಿರದಿಂದ 1 ಲಕ್ಷ ಕೋಟಿ ಉದ್ಯೋಗ ಸೃಷ್ಟಿ ಆಗಲಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

ಕೆಎಚ್‌ಐಆರ್ ಸಿಟಿ ಕುರಿತು ಗಣ್ಯ ಉದ್ಯಮಿಗಳು, ವೈದ್ಯರು, ಶಿಕ್ಷಣ ತಜ್ಞರು ಮತ್ತು ಸಂಶೋಧಕರ ಸಲಹೆ ಪಡೆಯಲು ಶುಕ್ರವಾರ ಆಯೋಜಿಸಿದ್ದ ದುಂಡು ಮೇಜಿನ ಸಭೆಯ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಜಗತ್ತಿನ ಅತ್ಯುತ್ತಮ ಕಂಪನಿಗಳು, ವಿಶ್ವವಿದ್ಯಾಲಯಗಳ ಕ್ಯಾಂಪಸ್, ಆಸ್ಪತ್ರೆ, ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರಗಳು, ಆಧುನಿಕ ನವೋದ್ಯಮಗಳು, ಕೆಎಚ್‌ಐಆರ್ ಸಿಟಿಯಲ್ಲಿ ಸ್ಥಾಪನೆಗೊಳ್ಳಲಿವೆ. ಒಟ್ಟು ಎರಡು ಹಂತಗಳಲ್ಲಿ ಇದನ್ನು ತಲಾ ಒಂದು ಸಾವಿರ ಎಕರೆಯಲ್ಲಿ ಅಭಿವೃದ್ಧಿಪಡಿಸಲಾಗುವುದು. ಈ ಯೋಜನೆಯು ಸಾಕಾರಗೊಂಡರೆ ₹ 1 ಲಕ್ಷ ಕೋಟಿಗಳಷ್ಟು ವಾರ್ಷಿಕ ವರಮಾನ ಉತ್ಪತ್ತಿ ಆಗಲಿದ್ದು, ರಾಜ್ಯದ ಜಿಡಿಪಿಗೆ ಶೇ 5 ರಷ್ಟು ಕೊಡುಗೆ ಇದರಿಂದ ಬರಲಿದೆ ಎಂದು ಅವರು ತಿಳಿಸಿದರು.

ಅಮೆರಿಕ, ಸಿಂಗಪುರ, ಜಪಾನ್, ಯುಎಇ, ಸ್ವೀಡನ್, ಡೆನ್ಮಾರ್ಕ್, ಚೀನಾ ಮುಂತಾದ ದೇಶಗಳಲ್ಲಿ ಇಂತಹ 'ಸಿಟಿ'ಗಳಿವೆ. ನಿರೀಕ್ಷಿತ ಮಟ್ಟದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಬೇಕೆಂದರೆ ಆರೋಗ್ಯ, ಶಿಕ್ಷಣ, ಸಂಶೋಧನೆ, ನಾವೀನ್ಯ, ವಿಜ್ಞಾನ, ತಂತ್ರಜ್ಞಾನ ಇವುಗಳ ಮೇಲೆ ಗಮನ ಕೇಂದ್ರೀಕರಿಸಬೇಕಾಗಿದೆ. ಬೆಂಗಳೂರು ಇದಕ್ಕೆ ಸೂಕ್ತ ತಾಣವಾಗಿದ್ದು, ಇದರ ಗರಿಷ್ಠ ಲಾಭ ಪಡೆಯಬೇಕಾಗಿದೆ ಎಂದು ಅವರು ಹೇಳಿದರು.

ಕೆಎಚ್‌ಐಆರ್ ಸಿಟಿಯಲ್ಲಿ ಆರೋಗ್ಯ ಕ್ಷೇತ್ರದ ಕಂಪನಿಗಳು, ವೈದ್ಯಕೀಯ ಕೇಂದ್ರಗಳು, ರಿಯಲ್ ಎಸ್ಟೇಟ್, ಹೂಡಿಕೆದಾರರು ಮತ್ತು ವಿಮಾ ಕಂಪನಿಗಳ ನಡುವೆ ಸಹಭಾಗಿತ್ವಕ್ಕೆ ಒತ್ತು ಇರಲಿದೆ. ಇದು ಅಂತಿಮವಾಗಿ ಜಾಗತಿಕ ಮಟ್ಟದಲ್ಲಿ ಉತ್ಕೃಷ್ಟತೆ ಮಾನದಂಡವಾಗಿ ಗುರುತಿಸಿಕೊಳ್ಳುವಂತೆ ಮಾಡುವುದು ಸರ್ಕಾರದ ಗುರಿಯಾಗಿದೆ ಎಂದು ಅವರು ವಿವರಿಸಿದರು.

ಈ 'ಸಿಟಿ'ಯನ್ನು ಸರಿಯಾದ ದಿಕ್ಕಿನಲ್ಲಿ ಮುಂದಿನ ಹಂತಕ್ಕೆ ಕೊಂಡೊಯ್ಯಲು ಪ್ರತಿಯೊಂದು ವಲಯಕ್ಕೂ ಉಪಸಮಿತಿಗಳನ್ನು ರಚಿಸಲಾಗುವುದು. ಒಟ್ಟಾರೆ ಯೋಜನೆಯು ರಾಜ್ಯಕ್ಕೆ ವಾಣಿಜ್ಯ ದೃಷ್ಟಿಯಿಂದ ಲಾಭದಾಯಕವಾಗಿ ಪರಿಣಮಿಸಬೇಕು ಎನ್ನುವ ನಿಟ್ಟಿನಲ್ಲಿ ನೀಲ ನಕ್ಷೆ ಮತ್ತು ಕಾರ್ಯತಂತ್ರ ರೂಪಿಸಲಾಗುವುದು ಎಂದು ಸಚಿವರು ನುಡಿದರು.

ಸಭೆಯಲ್ಲಿ ಉದ್ಯಮಿಗಳಾದ ಕ್ರಿಸ್ ಗೋಪಾಲಕೃಷ್ಣ, ಗೀತಾಂಜಲಿ ಕಿರ್ಲೋಸ್ಕರ್, ಪ್ರಶಾಂತ್ ಪ್ರಕಾಶ್, ಡಾ.ದೇವಿ ಶೆಟ್ಟಿ, ಡಾ.ಸಿ.ಎನ್.ಮಂಜುನಾಥ್, ಡಾ.ವಿವೇಕ ಜವಳಿ, ಡಾ.ಶರಣ್ ಪಾಟೀಲ, ಡಾ.ತಸ್ಲಿಂ ಸೈಯದ್, ಅಂಶುಲ್ ಗುಪ್ತ ಇದ್ದರು.

ಕಾರ್ಮಿಕರ ಮಕ್ಕಳಿಗೆ ಶಿಷ್ಯವೇತನ ಭಾರಿ ಕಡಿತ

ಎಐಡಿಎಸ್‌ಒ ತೀವ್ರ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಮಿಕರ ಮಕ್ಕಳಿಗೆ ನೀಡುತ್ತಿದ್ದ ಶಿಷ್ಯವೇತನವನ್ನು ಭಾರಿ ಪ್ರಮಾಣದಲ್ಲಿ ಕಡಿತಗೊಳಿಸಲು ಸರ್ಕಾರ ತೆಗೆದುಕೊಂಡಿರುವ ನಿರ್ಧಾರವನ್ನು ಎಐಡಿಎಸ್‌ಒ ಖಂಡಿಸಿದೆ. ಈ ನಿರ್ಧಾರ ಹಿಂಪಡೆಯಬೇಕು ಎಂದು ಆಗ್ರಹಿಸಿದೆ.

ಪ್ರತಿ ವಿದ್ಯಾರ್ಥಿಗೆ ವಾರ್ಷಿಕವಾಗಿ ₹ 5,000 ದಿಂದ ₹ 60 ಸಾವಿರದವರೆಗೆ ವೇತನ ನೀಡಲಾಗುತ್ತಿತ್ತು. ಈಗ ₹ 1,100 ದಿಂದ ₹ 11,000ಗೆ ಮಾತ್ರ ನೀಡಲಾಗುತ್ತಿದೆ. ಇದರಿಂದ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಅಡ್ಡಿಯಾಗಿದೆ ಎಂದರು.

ಸೆಸ್ ಹೆಸರಲ್ಲಿ ಕಾರ್ಮಿಕ ನಿಧಿಯಲ್ಲಿ ಬೇಕಾದಷ್ಟು ಹಣ ಸಂಗ್ರಹವಾಗುತ್ತಿದೆ. ಇದು ಕಾರ್ಮಿಕರ ಬೆವರಿನ ಫಲ. ಕಾರ್ಮಿಕರ ಏಳಿಗೆಗಾಗಿ ಬಳಸಬೇಕು. ಸರ್ಕಾರವು ಕೂಡಲೇ ಗಮನ ಹರಿಸಿ ಕಡಿತಗೊಳಿಸಿರುವ ಶಿಷ್ಯವೇತನದ ಮೊತ್ತವನ್ನು ಹೆಚ್ಚಿಸಬೇಕು ಎಂದು ಎಐಡಿಎಸ್‌ಒ ರಾಜ್ಯ ಸಮಿತಿ ಸದಸ್ಯರು ಕಟ್ಟಡ ಕಾರ್ಮಿಕ ಮಂಡಳಿಯ ಉಪ ಕಾರ್ಯದರ್ಶಿ ಕೆ. ಜಾನ್ಸನ್ ಅವರಿಗೆ ಮನವಿ ಸಲ್ಲಿಸಿದರು.



ಶಿಷ್ಯವೇತನದ ಮೊತ್ತವನ್ನು ಕಡಿತಗೊಳಿಸಬಾರದು ಎಂದು ಆಗ್ರಹಿಸಿ ಎಐಡಿಎಸ್‌ಒ ರಾಜ್ಯ ಸಮಿತಿ ಸದಸ್ಯರು ಕಟ್ಟಡ ಕಾರ್ಮಿಕ ಮಂಡಳಿಯ ಉಪ ಕಾರ್ಯದರ್ಶಿ ಕೆ. ಜಾನ್ಸನ್ ಅವರಿಗೆ ಮನವಿ ಸಲ್ಲಿಸಿದರು.

ಮಧು– ಬೇಳೂರು ಸಂಧಾನಕ್ಕೆ 'ಕೈ' ನಿಯೋಗ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಶುಕ್ರವಾರ ಭೇಟಿಮಾಡಿ ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ಮುಖಂಡರ ನಿಯೋಗ, ಸಚಿವ ಮಧು ಬಂಗಾರಪ್ಪ ಮತ್ತು ಸಾಗರ ಕ್ಷೇತ್ರದ ಶಾಸಕ ಬೇಳೂರು ಗೋಪಾಲಕೃಷ್ಣ ಮಧ್ಯೆ ಸಂಧಾನ ನಡೆಸಿ, ಪರಿಸ್ಥಿತಿ ತಿಳಿಗೊಳಿಸುವಂತೆ ಮನವಿ ಮಾಡಿದೆ.

ವಿಧಾನ ಪರಿಷತ್‌ನ ಮಾಜಿ ಸದಸ್ಯ ಆರ್. ಪ್ರಸನ್ನಕುಮಾರ್ ನೇತೃತ್ವದಲ್ಲಿ ಶಿವಕುಮಾರ್ ಅವರನ್ನು ಭೇಟಿ ಮಾಡಿದ ನಿಯೋಗ, ಕೆಲಕಾಲ ಚರ್ಚಿಸಿತು. ಮಧು ಬಂಗಾರಪ್ಪ ವಿರುದ್ಧ ಬೇಳೂರು ಗೋಪಾಲಕೃಷ್ಣ ಬಹಿರಂಗ ಹೇಳಿಕೆ ನೀಡುತ್ತಿರುವುದರಿಂದ ಜಿಲ್ಲೆಯಲ್ಲಿ ಪಕ್ಷಕ್ಕೆ ಹಿನ್ನಡೆ ಆಗುತ್ತಿದೆ ಎಂಬುದನ್ನು ಮನವರಿಕೆ ಮಾಡಲು ಯತ್ನಿಸಿತು.

'ನಾವು ಸರಿ ಮಾಡಿಕೊಳ್ಳುತ್ತೇವೆ': ಈ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಮಧು ಬಂಗಾರಪ್ಪ, 'ಪಕ್ಷ ನನಗೆ ಜವಾಬ್ದಾರಿ ನೀಡಿದೆ. ನಾನಾಗಲೀ, ಬೇಳೂರು ಅವರಾಗಲೀ ಹುಷಾರಾಗಿ ಮಾತನಾಡಬೇಕಾಗುತ್ತದೆ. ಅವರ ಹೇಳಿಕೆಗೆ ನಾನು ಪ್ರತಿಕ್ರಿಯಿಸುವುದಿಲ್ಲ. ಶಿವಮೊಗ್ಗದಲ್ಲಿ ಗೊಂದಲವಿದ್ದರೆ ನಾವು ಸರಿ ಮಾಡಿಕೊಳ್ಳುತ್ತೇವೆ' ಎಂದರು.

'ನಾವೆಲ್ಲರೂ ಕಾಂಗ್ರೆಸ್‌ನ ಹಸ್ತದ ಚಿಹ್ನೆಯ ಬಲದಿಂದ ಗೆದ್ದವರು. ಈಗ ನಾವು ಹೇಗೆ ವರ್ತಿಸಬೇಕು ಎನ್ನುವುದು ಮುಖ್ಯ. ಬಹಿರಂಗವಾಗಿ ಮಾತನಾಡುವುದಿಲ್ಲ. ಕೆಪಿಸಿಸಿ ಅಧ್ಯಕ್ಷರ ಬಳಿ ಏನು ಹೇಳಬೇಕೋ ಅದನ್ನು ಹೇಳುತ್ತೇನೆ. ಪಕ್ಷದಲ್ಲಿ ಉತ್ತರ ಕೊಡುತ್ತೇನೆ' ಎಂದು ಹೇಳಿದರು.

'ಅಡುಗೆ ಮನೆಯಲ್ಲಿರುವವರು': 'ನನ್ನ ವಿರುದ್ಧ ದೂರು ನೀಡಿದವರೆಲ್ಲ ಸಚಿವರ ಅಡುಗೆ ಮನೆಯಲ್ಲಿರುವವರು. ಸಚಿವರಾದವರು ಶಾಸಕರನ್ನು ಒಟ್ಟಾಗಿ ಕರೆದೊಯ್ಯಬೇಕು ಎಂದಿದ್ದೇನೆ. 100 ಜನರನ್ನು ಕರೆದುಕೊಂಡು ಬಂದು ಹೇಳುವಷ್ಟು ತಾಕತ್ತು ನನಗೂ ಇದೆ' ಎಂದು ಬೇಳೂರು ಗೋಪಾಲಕೃಷ್ಣ ಪ್ರತಿಕ್ರಿಯಿಸಿದರು.

ನಿಧನ ವಾರ್ತೆ

ಪಿ.ಬಿ.ಆಚಾರ್ಯ


ಪಿ.ಬಿ.ಆಚಾರ್ಯ

ಉಡುಪಿ: ನಾಗಾಲ್ಯಾಂಡ್ ಮಾಜಿ ರಾಜ್ಯಪಾಲ ಪದ್ಮನಾಭ ಬಾಲಕೃಷ್ಣ ಆಚಾರ್ಯ (ಪಿ.ಬಿ.ಆಚಾರ್ಯ) (92) ಶುಕ್ರವಾರ ಮುಂಬೈನ ತಮ್ಮ ನಿವಾಸದಲ್ಲಿ ನಿಧನರಾದರು.

ಅವರಿಗೆ ಪತ್ನಿ, ಮೂವರು ಪುತ್ರರು, ಪುತ್ರಿ ಇದ್ದಾರೆ.

ಮೂಲತಃ ಉಡುಪಿಯವರಾದ ಆಚಾರ್ಯರು ಉಡುಪಿಯ ಕ್ರಿಶ್ಚಿಯನ್ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ, ಎಂಜಿಎಂ ಕಾಲೇಜಿನಲ್ಲಿ ಪದವಿ ಪೂರೈಸಿದ್ದರು. ತ್ರಿಪುರಾ, ಅಸ್ಸಾಂ, ನಾಗಾಲ್ಯಾಂಡ್, ಮಣಿಪುರ, ಅರುಣಾಚಲ ಪ್ರದೇಶದ ರಾಜ್ಯಪಾಲರಾಗಿದ್ದರು.

ಎಬಿವಿಪಿ, ಆರ್‌ಎಸ್‌ಎಸ್‌ನಲ್ಲಿ ಉನ್ನತ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿಯೂ ಕೆಲಸ ಮಾಡಿದ್ದರು.

ಹುಟ್ಟೂರು ಉಡುಪಿ ಜತೆಗಿನ ನಂಟು ಉಳಿಸಿಕೊಂಡಿದ್ದ ಆಚಾರ್ಯರು ಉಡುಪಿಯ ಅಷ್ಟಮಠಗಳಿಗೆ ಆಗಾಗ ಭೇಟಿ ನೀಡುತ್ತಿದ್ದರು. 'ಮಾಹೆ' ವಿಶ್ವ ವಿದ್ಯಾಲಯದ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

ಹನುಮಣ್ಣ ನಾಯಕ ದೊರೆ


ಹನುಮಣ್ಣ

ಕಲಬುರಗಿ: ಮೈಸೂರಿನ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ, ಹಿರಿಯ ಸಂಗೀತ ಕಲಾವಿದ ಪ್ರೊ.ಹನುಮಣ್ಣ ನಾಯಕ ದೊರೆ (69) ಅವರು ನಗರದ ಬಸವೇಶ್ವರ ಆಸ್ಪತ್ರೆಯಲ್ಲಿ ಶುಕ್ರವಾರ ನಿಧನರಾದರು.

ಬಹು ಅಂಗಾಂಗ ವೈಫಲ್ಯದಿಂದ ಬಳಲುತ್ತಿದ್ದ ಅವರು ಕೆಲ ಕಾಲದಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ಚಂದ್ರಶೇಖರ ಕಂಬಾರ ಅವರು ಹಂಪಿ ಕನ್ನಡ ವಿ.ವಿ. ಕುಲಪತಿಯಾಗಿದ್ದ ಅವಧಿಯಲ್ಲಿ ಹನುಮಣ್ಣ ನಾಯಕ ದೊರೆ ಅವರನ್ನು ಪ್ರಾಧ್ಯಾಪಕರನ್ನಾಗಿ ನೇಮಕ ಮಾಡಿಕೊಂಡಿದ್ದರು. ನಂತರ ಹನುಮಣ್ಣ ನಾಯಕ ಅವರು ಡಾ.ಗಂಗೂಬಾಯಿ ಹಾನಗಲ್ ಸಂಗೀತ ವಿ.ವಿ. ಕುಲಪತಿಯಾಗಿದ್ದರು. ಅವಧಿ ಮುಗಿದ ಬಳಿಕ ಹಂಪಿ ವಿ.ವಿ.ಗೆ ವಾಪಸಾಗಿ ಅಲ್ಲಿಯೇ ಕೆಲಸದಿಂದ ನಿವೃತ್ತರಾಗಿದ್ದರು.

ಕೆಲ ಕಾಲ ಕಲಬುರಗಿಯ ಡಾ.ಶರಣಬಸವಪ್ಪ ಅಪ್ಪ ವಿಶ್ವವಿದ್ಯಾಲಯದ ಸಂಗೀತ ವಿಭಾಗದ ಮುಖ್ಯಸ್ಥರಾಗಿದ್ದರು.

ಅವರಿಗೆ ಇಬ್ಬರು ಪತ್ನಿಯರು, ನಾಲ್ವರು ಪುತ್ರರು, ಪುತ್ರಿ ಇದ್ದಾರೆ.

ಶುಕ್ರವಾರ ಸಂಜೆ ಸ್ವಗ್ರಾಮ, ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ತೆಗ್ಗಿಹಾಳ ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು.

ಶಾರದಾ ಮಠದಿಂದ 2 ಕಿ.ಮೀ ದೂರದ ಮಾರುತಿ ಬೆಟ್ಟದಲ್ಲಿ ನಿರ್ಮಾಣ

ಶಂಕರಾಚಾರ್ಯರ 32 ಅಡಿ ಎತ್ತರದ ಮೂರ್ತಿ ಅನಾವರಣ

ಪ್ರಜಾವಾಣಿ ವಾರ್ತೆ

ಶೃಂಗೇರಿ (ಚಿಕ್ಕಮಗಳೂರು): ಇಲ್ಲಿನ ಶಾರದಾ ಮಠದಿಂದ 2 ಕಿ.ಮೀ ದೂರದಲ್ಲಿರುವ ಮಾರುತಿ ಬೆಟ್ಟದಲ್ಲಿ ನಿರ್ಮಿಸಿರುವ ಆದಿ ಶಂಕರಾಚಾರ್ಯರ 32 ಅಡಿ ಎತ್ತರದ ಮೂರ್ತಿಯನ್ನು ಪೀಠದ ಉಭಯ ಗುರುಗಳಾದ ಭಾರತೀತೀರ್ಥ ಸ್ವಾಮೀಜಿ ಮತ್ತು ವಿಧುಶೇಖರಭಾರತಿ ಸ್ವಾಮೀಜಿ ಅವರು ಶುಕ್ರವಾರ ಅನಾವರಣಗೊಳಿಸಿದರು. 'ಆದಿಶಂಕರ ಬೆಟ್ಟ' ಪ್ರವಾಸಿ ತಾಣವನ್ನು ಉದ್ಘಾಟಿಸಿದರು.

ಬೆಳಿಗ್ಗೆ ತುಂಗಾನದಿಯಲ್ಲಿ ಗಂಗಾಪೂಜೆ ನೆರವೇರಿಸಿ, ಶಂಕರಾಚಾರ್ಯರ ಉತ್ಸವ ಮೂರ್ತಿಯನ್ನು ಬೆಳ್ಳಿ ರಥದಲ್ಲಿರಿಸಿ ಬೆಟ್ಟಕ್ಕೆ ತರಲಾಯಿತು. ಶಂಕರಾಚಾರ್ಯರ ನಾಲ್ವರು ಶಿಷ್ಯರಾದ ಸುರೇಶ್ವರಾಚಾರ್ಯ, ಪದ್ಮಪಾದಾಚಾರ್ಯ, ಹಸ್ತಾಮಲಕಾಚಾರ್ಯ, ತೋಟಕಾಚಾರ್ಯರು ಮತ್ತು ಶೃಂಗೇರಿ ಶಾರದಾ ಪೀಠದ 12ನೇ ಗುರುಗಳಾದ ವಿದ್ಯಾರಣ್ಯರ ಮೂರ್ತಿಗಳನ್ನು ಬೆಟ್ಟದಲ್ಲಿ ಅನಾವರಣಗೊಳಿಸಲಾಯಿತು.

'ಮಠದ ಹಿರಿಯ ಗುರುಗಳಾದ ಭಾರತೀತೀರ್ಥ ಸ್ವಾಮೀಜಿ ಸನ್ಯಾಸ ಸ್ವೀಕಾರಿಸಿ 50 ವರ್ಷವಾಗಿದೆ. ಈ ಸುವರ್ಣ ಮಹೋತ್ಸವದ ವರ್ಷದಲ್ಲಿ ಶಂಕರಾಚಾರ್ಯರ ಪ್ರತಿಮೆ ಅನಾವರಣಗೊಂಡಿದೆ. ಈ ಸುವರ್ಣ ಮಹೋತ್ಸವವನ್ನು ಇಡೀ ವರ್ಷ ಆಚರಣೆ ಮಾಡಲಾಗುವುದು' ಎಂದು ವಿಧುಶೇಖರಭಾರತಿ ಸ್ವಾಮೀಜಿ ಹೇಳಿದರು.

ಉದ್ಘಾಟನೆ ಸಮಾರಂಭದಲ್ಲಿ ದೇಶದ 10 ಮಂದಿ ವೇದಾಂತ ವಿದ್ವಾಂಸರಿಗೆ ತಲಾ ₹1 ಲಕ್ಷ ನಗದು ನೀಡಿ ಸನ್ಮಾನಿಸಲಾಯಿತು. ಶಿವಕುಮಾರ ಶರ್ಮ ಮತ್ತು ಸೀತಾರಾಮ ಶರ್ಮರವರ ನೇತೃತ್ವದಲ್ಲಿ ಧಾರ್ಮಿಕ ಕಾರ್ಯಕ್ರಮ ನಡೆದವು. ಶೃಂಗೇರಿ ಶಾಸಕ ಟಿ.ಡಿ ರಾಜೇಗೌಡ, ಶಿವಗಂಗಾ ಮಠದ ಪುರುಷೋತ್ತಮ ಭಾರತಿ ಸ್ವಾಮೀಜಿ, ನೆಲಮಾವು ಮಠದ ಮಾಧವನಂದ-ಭಾರತಿ ಸ್ವಾಮೀಜಿ ಇದ್ದರು.

ಮೂರ್ತಿ ಅನಾವರಣ ಸಂದರ್ಭದಲ್ಲಿ ಸಾರ್ವಜನಿಕರಿಗೆ ಪ್ರವೇಶ ಇರಲಿಲ್ಲ. ಮಠದ ಭಕ್ತರು ರಸ್ತೆಯಲ್ಲಿ ನಿಂತು ಕಾರ್ಯಕ್ರಮ ವೀಕ್ಷಿಸಿದರು.


ಆದಿ ಶಂಕರಚಾರ್ಯ ಬೆಟ್ಟದಲ್ಲಿ ಶಂಕರಾಚಾರ್ಯರ 32 ಎತ್ತರದ ಶಿಲಾ ಪ್ರತಿಮೆಯನ್ನು ಶೃಂಗೇರಿ ಶಾರದಾ ಪೀಠದ ಉಭಯ ಗುರುಗಳಾದ ಭಾರತಿ ತೀರ್ಥ ಸ್ವಾಮೀಜಿ ಮತ್ತು ವಿಧುಶೇಖರಭಾರತಿ ಸ್ವಾಮೀಜಿ ಅನಾವರಣಗೊಳಿಸಿದರು

ಪ್ರವಾಸಿ ತಾಣವಾಗಿ ಅಭಿವೃದ್ಧಿ

₹45 ಕೋಟಿ ವೆಚ್ಚದಲ್ಲಿ ಸುಮಾರು 2 ಎಕರೆ ಜಾಗದಲ್ಲಿ ಆದಿಶಂಕರ ಬೆಟ್ಟ ಪ್ರವಾಸಿ ತಾಣವಾಗಿ ಅಭಿವೃದ್ಧಿಗೊಳ್ಳಲಿದೆ. ಪಶ್ಚಿಮಘಟ್ಟ ಪ್ರದೇಶದ ಹಸಿರು ಹೊದಿಕೆ, ಸೂರ್ಯೋದಯ ಹಾಗೂ ಸೂರ್ಯಾಸ್ತಮಾನದ ದೃಶ್ಯ ಇಲ್ಲಿಂದ ಕಾಣಲಿದೆ. ಬೆಟ್ಟ ಹತ್ತಲು ಎಕ್ಸಲೇಟರ್ ವ್ಯವಸ್ಥೆ ಇದೆ. ಆಂಜನೇಯ ದೇವಸ್ಥಾನ, ಕಾರಂಜಿ, ಗ್ರಂಥಾಲಯ, ಪುಸ್ತಕ ಮಳಿಗೆ ಇದೆ. ಪ್ರವಾಸಿಗರಿಗೆ ವಾಸ್ತವ್ಯಕ್ಕೆ ಕೆಳಗಡೆ ವಸತಿ ಗೃಹಗಳು ನಿರ್ಮಾಣವಾಗುತ್ತಿವೆ.

ಅಕ್ರಮಗಳನ್ನು ತಡೆದು ರೈತರ ಹಿತ ಕಾಪಾಡುವುದಕ್ಕಾಗಿ ಈ ಕ್ರಮ: ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿಕೆ

ಬರ ಪರಿಹಾರ: ಫ್ರೂಟ್ಸ್ ದತ್ತಾಂಶ ಆಧಾರ

ಪ್ರಜಾವಾಣಿ ವಾರ್ತೆ


ಕೃಷ್ಣ ಬೈರೇಗೌಡ

ಬೆಂಗಳೂರು: ಬರಗಾಲದಿಂದ ಆಗಿರುವ ಬೆಳೆ ಹಾನಿಗೆ 'ರೈತರ ನೋಂದಣಿ ಮತ್ತು ಏಕೀಕೃತ ಫಲಾನುಭವಿಗಳ ಮಾಹಿತಿ ವ್ಯವಸ್ಥೆ' (ಫ್ರೂಟ್ಸ್) ದತ್ತಾಂಶದ ಆಧಾರದಲ್ಲೇ ಪರಿಹಾರ ವಿತರಣೆ ಮಾಡಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಎಲ್ಲ ಜಿಲ್ಲಾಧಿಕಾರಿಗಳು ಮತ್ತು ಆಯ್ದ ಉಪ ವಿಭಾಗಾಧಿಕಾರಿಗಳು ಹಾಗೂ ತಹಶೀಲ್ದಾರರ ಜತೆ ಶುಕ್ರವಾರ ಸಭೆ ನಡೆಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಅವರು, 'ಹಿಂದಿನ ವರ್ಷಗಳಲ್ಲಿ ಬರ ಪರಿಹಾರ ವಿತರಣೆಯಲ್ಲಿ ವ್ಯಾಪಕ ಅವ್ಯವಹಾರ ನಡೆದಿರುವುದು ಪತ್ತೆಯಾಗಿತ್ತು. ಅಕ್ರಮಗಳನ್ನು ತಡೆಯುವುದಕ್ಕಾಗಿ ಫ್ರೂಟ್ಸ್ ದತ್ತಾಂಶದ ಆಧಾರದಲ್ಲಿ ಪರಿಹಾರ ವಿತರಣೆಗೆ ನಿರ್ಧರಿಸಲಾಗಿದೆ' ಎಂದರು.

ರಾಜ್ಯದ ಶೇಕಡ 95ರಷ್ಟು ರೈತರು ಫ್ರೂಟ್ಸ್ ಗುರುತಿನ ಸಂಖ್ಯೆ ಹೊಂದಿದ್ದಾರೆ. ಆದರೆ, ಒಟ್ಟು ಸಾಗುವಳಿ ವಿಸ್ತೀರ್ಣದ ಶೇ 65ರಷ್ಟು ಮಾತ್ರ ದತ್ತಾಂಶದಲ್ಲಿ ದಾಖಲಾಗಿದೆ. ಆದ್ದರಿಂದ ವಿಸ್ತೀರ್ಣದ ವಿವರವನ್ನು ದಾಖಲಿಸಲು 15 ದಿನ ಅವಕಾಶ ನೀಡಲಾಗುವುದು. ನಂತರದಲ್ಲಿ ಫ್ರೂಟ್ಸ್ ದತ್ತಾಂಶದಲ್ಲಿ ದಾಖಲಾದ ವಿಸ್ತೀರ್ಣದ ಆಧಾರದಲ್ಲೇ ಪರಿಹಾರ ವಿತರಣೆ ನಡೆಯಲಿದೆ ಎಂದು ತಿಳಿಸಿದರು.

ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಕಂದಾಯ ಇಲಾಖೆ ಕಚೇರಿಗಳಲ್ಲಿ ಫ್ರೂಟ್ಸ್ ದತ್ತಾಂಶದಲ್ಲಿ ವಿಸ್ತೀರ್ಣ ದಾಖಲಿಸಲು ಅವಕಾಶ ಕಲ್ಪಿಸಲಾಗುವುದು. ರೈತರು ಈ ಅವಕಾಶವನ್ನು ಬಳಸಿಕೊಳ್ಳಬೇಕು ಎಂದರು.

ಬರಪೀಡಿತ ಪ್ರದೇಶಗಳಲ್ಲಿ ಕುಡಿಯುವ ನೀರು ಪೂರೈಕೆಗೆ ಟ್ಯಾಂಕರ್ ಒದಗಿಸಲು ಟೆಂಡರ್ ಪ್ರಕ್ರಿಯೆ ಆರಂಭಿಸಲು ಸೂಚಿಸಲಾಗಿದೆ. ಬೇಡಿಕೆ ಬಂದ 24 ಗಂಟೆಗಳೊಳಗೆ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುವುದು. ಕೆಲವೆಡೆ ಮೇವಿನ ಕೊರತೆ ಉದ್ಭವಿಸಿದ್ದು, ಖರೀದಿಗೆ ಸಿದ್ಧತೆ ಆರಂಭಿಸುವುದಕ್ಕೂ ನಿರ್ದೇಶನ ನೀಡಲಾಗಿದೆ ಎಂದು ವಿವರಿಸಿದರು.

ಇ–ಆಫೀಸ್ ಜಾರಿ: ರಾಜ್ಯದ ಎಲ್ಲ ತಾಲ್ಲೂಕು ಕಚೇರಿಗಳಲ್ಲಿ ಇ–ಆಫೀಸ್ ತಂತ್ರಾಂಶದ ಮೂಲಕ ಕಡತ ವಿಲೇವಾರಿ ಆರಂಭಿಸಲಾಗಿದೆ. ಕೆಲವು ಹೋಬಳಿ ಕೇಂದ್ರಗಳಲ್ಲೂ ಆರಂಭವಾಗಿದೆ. ಹೊಸ ಕಡತಗಳನ್ನು ಕಡ್ಡಾಯವಾಗಿ ಇ–ಆಫೀಸ್ ತಂತ್ರಾಂಶದಲ್ಲೇ ಆರಂಭಿಸುವಂತೆ ಸೂಚಿಸಲಾಗುವುದು ಎಂದು ಸಚಿವರು ತಿಳಿಸಿದರು.

ವ್ಯಾಜ್ಯಗಳಿಲ್ಲದ ಮತ್ತು ತೊಡಕುಗಳಿಲ್ಲದ ಪ್ರಕರಣಗಳಲ್ಲಿ ಆಸ್ತಿ ಖರೀದಿ, ವಿಭಾಗದ ಬಳಿಕ ತಂತ್ರಾಂಶದ ಮೂಲಕವೇ ಮ್ಯುಟೇಷನ್ ಸೃಜನೆಗೆ ಅವಕಾಶ ಕಲ್ಪಿಸುವ ಚಿಂತನೆ ನಡೆದಿದೆ ಎಂದರು.

ಪ್ರಕರಣ ವಿಲೇವಾರಿಗೆ ಗಡುವು

ತಹಶೀಲ್ದಾರ್ ಮತ್ತು ಉಪ ವಿಭಾಗಾಧಿಕಾರಿಗಳ ಕಂದಾಯ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ವಿಲೇವಾರಿಗೆ ಗಡುವು ವಿಧಿಸಲಾಗಿದೆ. ತಹಶೀಲ್ದಾರ್ ನ್ಯಾಯಾಲಯದಲ್ಲಿ 90 ದಿನ ಮತ್ತು ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ ಆರು ತಿಂಗಳೊಳಗೆ ಪ್ರಕರಣ ವಿಲೇವಾರಿ ಮಾಡುವ ಗುರಿ ಇದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ತಾವು ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿ ತಹಶೀಲ್ದಾರ್ ನ್ಯಾಯಾಲಯಗಳಲ್ಲಿ ಒಂದು ವರ್ಷಕ್ಕಿಂತ ಹಳೆಯ 2,215 ಪ್ರಕರಣಗಳು ಬಾಕಿ ಇದ್ದವು. ಈಗ ಅವುಗಳ ಸಂಖ್ಯೆ 750ಕ್ಕೆ ಇಳಿದಿದೆ. ಜನವರಿ ವೇಳೆಗೆ 90 ದಿನ ಮೀರಿದ ಯಾವುದೇ ಪ್ರಕರಣ ಬಾಕಿ ಉಳಿಯಬಾರದು ಎಂದು ತಾಕೀತು ಮಾಡಲಾಗಿದೆ ಎಂದರು.

ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ ಒಂದು ವರ್ಷಕ್ಕಿಂತ ಹಳೆಯ 59,339 ಪ್ರಕರಣಗಳಿದ್ದವು. ಈಗ 30,000ಕ್ಕೆ ಇಳಿಕೆಯಾಗಿದೆ. ಮಾರ್ಚ್ ಒಳಗಾಗಿ ಈ ಎಲ್ಲ ಪ್ರಕರಣಗಳ ವಿಲೇವಾರಿಗೆ ಗಡುವು ವಿಧಿಸಲಾಗಿದೆ. ರಾಜ್ಯದಲ್ಲಿ ಅನಧಿಕೃತ ಜನವಸತಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸುವ 3,292 ಪ್ರಸ್ತಾವಗಳಿದ್ದವು. ಹಿಂದಿನ ಐದು ವರ್ಷಗಳಲ್ಲಿ 1,705 ಜನವಸತಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸಲಾಗಿದೆ. ಜನವರಿ ಅಂತ್ಯದೊಳಗೆ ಇನ್ನೂ 1,500 ಜನವಸತಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸಲಾಗುವುದು ಎಂದರು.

'ಬಗರ್ ಹುಕುಂ ಫಲಾನುಭವಿಗಳಿಗೆ ಡಿಜಿಟಲ್ ಹಕ್ಕುಪತ್ರ'

ಬೆಂಗಳೂರು: ಬಗರ್ ಹುಕುಂ ಫಲಾನುಭವಿಗಳಿಗೆ ಡಿಜಿಟಲ್ ಸಾಗುವಳಿ ಚೀಟಿ (ಹಕ್ಕುಪತ್ರ) ವಿತರಿಸಲಾಗುವುದು. ದುರ್ಬಳಕೆ ತಡೆಯಲು ಅದನ್ನು ಶಾಶ್ವತವಾಗಿ ಸಂರಕ್ಷಿಸಿ ಇಡಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅನಧಿಕೃತ ಸಾಗುವಳಿಗಳನ್ನು ಸಕ್ರಮಗೊಳಿಸುವಂತೆ ಕೋರಿ ಸಲ್ಲಿಸಿರುವ 9.90 ಲಕ್ಷ ಅರ್ಜಿಗಳು ವಿಲೇವಾರಿಗೆ ಬಾಕಿ ಇವೆ. 15 ವರ್ಷಗಳಿಂದ ಸಾಗುವಳಿ ಮಾಡಿರುವುದನ್ನು ಖಾತರಿಪಡಿಸಿಕೊಂಡ ಬಳಿಕವೇ ಮಂಜೂರಾತಿ ಆದೇಶ ನೀಡಲಾಗುವುದು' ಎಂದರು.

ಒಟ್ಟು 190 ತಾಲ್ಲೂಕುಗಳಲ್ಲಿ ಬಗರ್ ಹುಕುಂ ಸಮಿತಿ ರಚಿಸಬೇಕಿದೆ. 100 ತಾಲ್ಲೂಕುಗಳಲ್ಲಿ ಸಮಿತಿಯ ಸದಸ್ಯರನ್ನು 15 ದಿನಗಳೊಳಗೆ ನೇಮಿಸಲಾಗುವುದು. ಉಳಿದ ತಾಲ್ಲೂಕುಗಳಲ್ಲಿ ಸಮಿತಿ ಸದಸ್ಯರ ನೇಮಕಕ್ಕೆ ಡಿಸೆಂಬರ್ 1ರೊಳಗೆ ಪ್ರಸ್ತಾವ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದರು.

ಅರ್ಜಿಗಳ ವಿಲೇವಾರಿಗೆ ಎಂಟು ತಿಂಗಳ ಗಡುವು ವಿಧಿಸಲಾಗುವುದು. 15 ವರ್ಷಗಳ ಉಪಗ್ರಹ ಚಿತ್ರಗಳನ್ನು ಸಮಿತಿಗಳಿಗೆ ಒದಗಿಸಲಾಗುವುದು. ಅವುಗಳ ಮೂಲಕ ಸಾಗುವಳಿ ಖಾತರಿಪಡಿಸಿಕೊಳ್ಳಬೇಕು. ಕುಟುಂಬದ ಎಲ್ಲ ಸದಸ್ಯರ ಜಮೀನಿನ ಒಟ್ಟು ವಿಸ್ತೀರ್ಣವನ್ನು ಖಾತರಿಪಡಿಸಿಕೊಂಡ ಬಳಿಕವೇ ಮಂಜೂರಾತಿ ಪ್ರಕ್ರಿಯೆ ಆರಂಭಿಸಲು ಸೂಚಿಸಲಾಗುವುದು. ಫಲಾನುಭವಿಗಳಿಗೆ ಕ್ರಯಪತ್ರದ ಮೂಲಕ ಜಮೀನು ನೋಂದಣಿ ಮಾಡಿಕೊಡಲಾಗುವುದು. ಜತೆಯಲ್ಲೇ ಪೋಡಿ ಪ್ರಕ್ರಿಯೆ ಪೂರ್ಣಗೊಳಿಸಿ, ನಕ್ಷೆಯನ್ನೂ ಅಂತಿಮಗೊಳಿಸಲಾಗುವುದು. ನೆರೆ ಹೊರೆಯ ಜಮೀನುಗಳ ಪ್ರವೇಶಕ್ಕೆ ದಾರಿಯನ್ನೂ ಕಾಯ್ದಿರಿಸಲಾಗುವುದು. ಅಧಿಕಾರ ದುರ್ಬಳಕೆ ತಡೆಯಲು ಬಗರ್ ಹುಕುಂ ಸಮಿತಿಯ ನಿರ್ಣಯಗಳಿಗೆ ಸದಸ್ಯರ ಡಿಜಿಟಲ್ ಸಹಿ ಕಡ್ಡಾಯಗೊಳಿಸಲಾಗುವುದು ಎಂದು ತಿಳಿಸಿದರು.

ಇಂಟರ್‌ನೆಟ್ ಸಾಮರ್ಥ್ಯ ಹೆಚ್ಚಳ: ರಾಜ್ಯದ ಕೆಲವು ತಾಲ್ಲೂಕು ಕಚೇರಿಗಳಲ್ಲಿ ಇಂಟರ್‌ನೆಟ್ ಸಮಸ್ಯೆಯಿಂದ ಕಡತಗಳ ವಿಲೇವಾರಿಗೆ ತೊಡಕು ಉಂಟಾಗುತ್ತಿದೆ. ಅಂತಹ ತಾಲ್ಲೂಕು ಕಚೇರಿಗಳನ್ನು ಗುರುತಿಸಿ ಇಂಟರ್‌ನೆಟ್ ಸಾಮರ್ಥ್ಯ ಹೆಚ್ಚಿಸಲಾಗುವುದು ಎಂದರು.

ಸುದ್ದಿ 2 ನಿಮಿಷ

ಇಸ್ರೊ ಅಧ್ಯಕ್ಷ ಸೋಮನಾಥ್‌ಗೆ 'ಅನುಭವ ಮಂಟಪ' ಪ್ರಶಸ್ತಿ

ಬಸವಕಲ್ಯಾಣ (ಬೀದರ್ ಜಿಲ್ಲೆ): ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ಅವರು ವಿಶ್ವ ಬಸವಧರ್ಮ ವಿಶ್ವಸ್ಥ ಮಂಡಳಿಯಿಂದ ನೀಡುವ ರಾಷ್ಟ್ರೀಯ 'ಅನುಭವ ಮಂಟಪ ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹1 ಲಕ್ಷ ನಗದು ಹಾಗೂ ಫಲಕ ಒಳಗೊಂಡಿದೆ.



'ಸೋಮನಾಥ್ ಅವರ ನೇತೃತ್ವದಲ್ಲಿ ಚಂದ್ರಯಾನ–3 ಯಶಸ್ವಿಯಾಗಿದ್ದು, ದೇಶದ ಕೀರ್ತಿ ಹೆಚ್ಚಿದೆ. ಆದಕಾರಣ ಅವರಿಗೆ ಪ್ರಶಸ್ತಿ ನೀಡಲಾಗುತ್ತಿದೆ. ವಿಶ್ವಸ್ಥ ಮಂಡಳಿ ಅಧ್ಯಕ್ಷ ಭಾಲ್ಕಿ ಬಸವಲಿಂಗ ಪಟ್ಟದ್ದೇವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಇದೇ ಸಾಲಿನಿಂದ ಈ ಪ್ರಶಸ್ತಿ ನೀಡಲು ಸಭೆಯಲ್ಲಿ ನಿರ್ಧರಿಸಲಾಗಿದೆ. ನವೆಂಬರ್ 25ರಂದು ಬಸವಕಲ್ಯಾಣದಲ್ಲಿ ನಡೆಯಲಿರುವ 'ಅನುಭವ ಮಂಟಪ ಉತ್ಸವ'ದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ' ಎಂದು ಮಂಡಳಿ ಕಾರ್ಯದರ್ಶಿ ಡಾ.ಎಸ್.ಬಿ.ದುರ್ಗೆ ಶುಕ್ರವಾರ ತಿಳಿಸಿದ್ದಾರೆ.

ಚಿಕ್ಕಮಗಳೂರು ನಗರಸಭೆ: ಬಿಜೆಪಿ ಮಂಡಿಸಿದ್ದ ಅವಿಶ್ವಾಸಕ್ಕೆ ಸೋಲು

ಚಿಕ್ಕಮಗಳೂರು: ನಗರಸಭೆ ಅಧ್ಯಕ್ಷ ವರಸಿದ್ಧಿ ವೇಣುಗೋಪಾಲ್ ವಿರುದ್ಧ ಸ್ವಪಕ್ಷ ಬಿಜೆಪಿ ಸದಸ್ಯರು ಮಂಡಿಸಿದ್ದ ಅವಿಶ್ವಾಸ ನಿರ್ಣಯಕ್ಕೆ ಸೋಲಾಗಿದೆ.

35 ಸದಸ್ಯ ಬಲದ ನಗರಸಭೆಯಲ್ಲಿ 18 ಸದಸ್ಯರನ್ನು ಹೊಂದಿರುವ ಬಿಜೆಪಿ ಆಡಳಿತ ನಡೆಸುತ್ತಿತ್ತು. ಪಕ್ಷದ ಆಂತರಿಕ ಒಪ್ಪಂದದ ಪ್ರಕಾರ ವರಸಿದ್ಧಿ ವೇಣುಗೋಪಾಲ್ ರಾಜೀನಾಮೆ ನೀಡಿದ್ದರು. ಆದರೆ, ಏಕಾಏಕಿ ವಾಪಸ್ ಪಡೆದು ಪಕ್ಷದ ನಾಯಕರ ವಿರುದ್ಧ ಸೆಡ್ಡು ಹೊಡೆದಿದ್ದರು. ಮುಜುಗರಕ್ಕೆ ಒಳಗಾಗಿದ್ದ ಬಿಜೆಪಿ, ಅವರನ್ನು ಪಕ್ಷದಿಂದ ಅಮಾನತುಗೊಳಿಸಿತ್ತು. ಬಳಿಕ ಅವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲಾಗಿತ್ತು.

ಕಾಂಗ್ರೆಸ್ ತಟಸ್ಥ ನಿಲುವು ತಾಳಿದ್ದರಿಂದ ಅವಿಶ್ವಾಸಕ್ಕೆ ಅಗತ್ಯ ಇರುವ (ಮೂರನೇ ಎರಡು ಭಾಗ) ಮತ ದೊರಕುವ ಸಾಧ್ಯತೆ ಕಡಿಮೆ ಇತ್ತು. ಅವಿಶ್ವಾಸದ ಪರ ಇರುವವರು ಮತ ಹಾಕಬಹುದು ಎಂದು ಅಧ್ಯಕ್ಷರು ಸಭೆಯಲ್ಲಿ ಹೇಳಿದರು. ಆದರೆ, ಮತ ಚಲಾವಣೆಗೂ ಮುನ್ನ ಚರ್ಚೆಗೆ ಅವಕಾಶ ನೀಡಬೇಕು ಎಂದು ಬಿಜೆಪಿ ಸದಸ್ಯರು ಪಟ್ಟು ಹಿಡಿದರು. ಮೊದಲು ಮತ ಚಲಾವಣೆ ಮಾಡುವಂತೆ ಹಲವು ಬಾರಿ ಹೇಳಿದರೂ ಬಿಜೆಪಿ ಸದಸ್ಯರು ಪಟ್ಟು ಸಡಿಲಿಸಲಿಲ್ಲ. ಈ ಸಂದರ್ಭದಲ್ಲಿ ಮಾತಿನ ಚಕಮಕಿ ನಡೆಯಿತು. ಅಂತಿಮವಾಗಿ 'ಅವಿಶ್ವಾಸ ಯಶಸ್ವಿಯಾಗಿಲ್ಲ' ಎಂದು ಆಯುಕ್ತ ಬಿ.ಸಿ.ಬಸವರಾಜ್ ಘೋಷಣೆ ಮಾಡಿದರು.

ಕಾಂಗ್ರೆಸ್ ಶಾಸಕ ಎಚ್.ಡಿ.ತಮ್ಮಯ್ಯ ಹಾಜರಿದ್ದರು. ಸಂಸದೆ ಶೋಭಾ ಕರಂದ್ಲಾಜೆ ನಗರದಲ್ಲೇ ಇದ್ದರೂ ಸಭೆಗೆ ಹಾಜರಾಗಲಿಲ್ಲ. ವಿಧಾನ ಪರಿಷತ್ತಿನ ಬಿಜೆಪಿ ಸದಸ್ಯ ಎಂ.ಕೆ.ಪ್ರಾಣೇಶ್, ಜೆಡಿಎಸ್ ಸದಸ್ಯ ಎಸ್.ಎಲ್.ಭೋಜೇಗೌಡ ಕೂಡ ಸಭೆಗೆ ಗೈರಾಗಿದ್ದರು.



'ಟಿಪ್ಪು' ನೆನಪು

ಮೈಸೂರಿನಲ್ಲಿ ಟಿಪ್ಪು ಕನ್ನಡ ರಾಜ್ಯೋತ್ಸವ ವೇದಿಕೆಯಿಂದ ಶುಕ್ರವಾರ ಆಯೋಜಿಸಿದ್ದ 'ಟಿಪ್ಪು ಉತ್ಸವ ಹಾಗೂ ಕನ್ನಡ ರಾಜ್ಯೋತ್ಸವ'ದ ಮೆರವಣಿಗೆಯಲ್ಲಿ ಚಿಣ್ಣರು ಟಿಪ್ಪು ಸುಲ್ತಾನ್ ವೇಷಭೂಷಣದಲ್ಲಿ ಪಾಲ್ಗೊಂಡಿದ್ದು ಗಮನಸೆಳೆಯಿತು –ಪ್ರಜಾವಾಣಿ ಚಿತ್ರ: ಅನೂಪ್ ರಾಘ ಟಿ.

ಹೊಸ ವರ್ಷಕ್ಕೆ ಹಾಲಿನ ದರ ಹೆಚ್ಚಳ?

ಒಂದನೇ ಪುಟದಿಂದ...

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪಶುಸಂಗೋಪನಾ ಸಚಿವ ಕೆ. ವೆಂಕಟೇಶ್, 'ಉತ್ಪಾದನಾ ವೆಚ್ಚ ಹೆಚ್ಚಳದಿಂದ ಆಗುತ್ತಿರುವ ಹೊರೆ ಕುರಿತು ಹಾಲು ಉತ್ಪಾದಕರ ಒಕ್ಕೂಟಗಳು ಅಹವಾಲು ಸಲ್ಲಿಸಿವೆ. ನಂದಿನಿ ಹಾಲಿನ ದರ ಪ್ರತಿ ಲೀಟರ್‌ಗೆ ₹ 47 ಇದೆ. ಇತರ ರಾಜ್ಯಗಳಲ್ಲಿ ಹಾಲಿನ ದರ ಇನ್ನೂ ಹೆಚ್ಚಾಗಿದೆ. ನಂದಿನ ಹಾಲನ್ನು ಹೊರ ರಾಜ್ಯಗಳಲ್ಲಿ ಕರ್ನಾಟಕಕ್ಕಿಂತ ಹೆಚ್ಚಿನ ದರಕ್ಕೆ ಮಾರಾಟ ಮಾಡಲಾಗುತ್ತಿದೆ' ಎಂದರು.

ಕೆಎಂಎಫ್ ನಂದಿನ ಹಾಲಿನ ದರವನ್ನು ಸೆಪ್ಟೆಂಬರ್ 1ರಂದು ಪ್ರತಿ ಲೀಟರ್‌ಗೆ ₹3ರಷ್ಟು ಹೆಚ್ಚಳ ಮಾಡಿತ್ತು. ಆದರೆ, ಅಮೂಲ್ 2022ರ ಮಾರ್ಚ್‌ನಿಂದ 2023ರ ಫೆಬ್ರುವರಿಯವರೆಗೆ ಹತ್ತು ತಿಂಗಳ ಅವಧಿಯಲ್ಲಿ ಲೀಟರ್‌ಗೆ ₹ 12 ಹೆಚ್ಚಳ ಮಾಡಲಾಗಿದೆ ಎಂದು ಸಚಿವರು ತಿಳಿಸಿದರು.

'ಹಾಲಿನ ದರ ಹೆಚ್ಚಳ ಕುರಿತು ಮುಂದಿನ ವರ್ಷದ ವೇಳೆಗೆ ನೋಡೋಣ' ಎಂದು ಪ್ರತಿಕ್ರಿಯಿಸಿದರು.

ಕ್ಷೀರ ಭಾಗ್ಯ ಯೋಜನೆಗೆ ಕೆಎಂಎಫ್ ಪೂರೈಸುತ್ತಿರುವ ಹಾಲಿನಪುಡಿಯ ದರವನ್ನು ಪ್ರತಿ ಕೆ.ಜಿ.ಗೆ ₹400 + ಸರಕು ಮತ್ತು ಸೇವಾ ತೆರಿಗೆ ಎಂಬುದಾಗಿ ನಿಗದಿಪಡಿಸಬೇಕು. ಈಗ ಪ್ರತಿ ಕೆ.ಜಿ. ಹಾಲಿನ ಪುಡಿಗೆ ₹300 + ತೆರಿಗೆ ನೀಡಲಾಗುತ್ತಿದೆ. ಇದರಿಂದ ಕೆಎಂಎಫ್‌ಗೆ ನಷ್ಟವಾಗುತ್ತಿದೆ ಎಂದು ಇಲಾಖೆ ಕೆಎಂಎಫ್ ಬೇಡಿಕೆ ಇಟ್ಟಿದೆ.

ಕೆಎಂಎಫ್‌ನಿಂದ ಜೋಳ ಖರೀದಿ: 'ರೈತರಿಂದ ಒಂದು ಲಕ್ಷ ಟನ್ ಜೋಳ ಖರೀದಿಸಲು ಕೆಎಂಎಫ್ ನಿರ್ಧರಿಸಿದೆ. ಪ್ರತಿ ಕ್ವಿಂಟಲ್‌ಗೆ ₹ 2,090 ದರವಿದ್ದು, ಕೆಎಂಎಫ್ ಹೆಚ್ಚುವರಿಯಾಗಿ ಪ್ರತಿ ಕ್ವಿಂಟಲ್‌ಗೆ ₹ 160 ನೀಡಲಿದೆ. ಸೋಮವಾರದಿಂದ ಖರೀದಿ ಕೇಂದ್ರಗಳನ್ನು ಆರಂಭಿಸಲಾಗುವುದು' ಎಂದು ಸಚಿವರು ತಿಳಿಸಿದರು.

ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ

ದೂರು ನೀಡಿದ ಸಂತ್ರಸ್ತೆಯ ತಾಯಿ • ಇಬ್ಬರು ಬಾಲಕರು ಸೇರಿ ಮೂವರ ಬಂಧಿಸಿದ ಪೊಲೀಸರು

ಪ್ರಜಾವಾಣಿ ವಾರ್ತೆ

ಮದ್ದೂರು (ಮಂಡ್ಯ ಜಿಲ್ಲೆ): ಪರಿಶಿಷ್ಟ ಜಾತಿಯ ಬಾಲಕಿ ಮೇಲೆ ಸಾಮೂಹಿಕವಾಗಿ ಅತ್ಯಾಚಾರ ಎಸಗಿದ ಆರೋಪದ ಮೇರೆಗೆ ಇಬ್ಬರು ಬಾಲಕರು ಸೇರಿ ಮೂವರನ್ನು ಮದ್ದೂರು ಠಾಣೆ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಬಾಲಕಿಯ ತಾಯಿ ನೀಡಿದ ದೂರಿನ ಆಧಾರದ ಮೇಲೆ ಆರೋಪಿಗಳನ್ನು ಬಂಧಿಸಲಾಗಿದೆ. ಪ್ರಮುಖ ಆರೋಪಿ ಹಾಗೂ ಆತನ ಗೆಳೆಯ ಬಾಲಕರಾಗಿದ್ದು ಮತ್ತೊಬ್ಬ ಆರೋಪಿ ವಯಸ್ಕನಾಗಿದ್ದಾನೆ. ಪ್ರಮುಖ ಆರೋಪಿ ಹಾಗೂ ಬಾಲಕಿ ದ್ವಿತೀಯ ಪಿಯುಸಿ ಓದುತ್ತಿದ್ದರು. ಆತ ಬಾಲಕಿಯನ್ನು ಪ್ರೀತಿಸುತ್ತಿರುವುದಾಗಿ ಹೇಳಿಕೊಂಡಿದ್ದ. ಈಚೆಗೆ ಮೈಸೂರಿನಲ್ಲಿ ನಡೆದ ಯುವ ದಸರಾ ಸೇರಿದಂತೆ ವಿವಿಧೆಡೆ ಇಬ್ಬರೂ ಜೊತೆಯಲ್ಲಿ ತೆರಳಿದ್ದರು.

ನ.4ರಂದು ಮದ್ದೂರಿಗೆ ಬಾಲಕಿಯನ್ನು ಕರೆಸಿಕೊಂಡಿದ್ದ ಆರೋಪಿ ಬೆಂಗಳೂರು– ಮೈಸೂರು ಹೆದ್ದಾರಿ ಬದಿಯ ಲಾಡ್ಜ್‌ಗೆ ಕರೆದೊಯ್ದಿದ್ದ. ನಂತರ ಆತ ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದ. ಖಾಸಗಿ ಕ್ಷಣಗಳ ವಿಡಿಯೊ ಚಿತ್ರೀಕರಣ ಮಾಡಿಕೊಂಡಿದ್ದ.

ನಂತರ ತನ್ನ ಇಬ್ಬರು ಗೆಳೆಯರನ್ನು ಲಾಡ್ಜ್‌ಗೆ ಕರೆಸಿ ಅವರ ಜೊತೆಯೂ ಸಹಕರಿಸುವಂತೆ ಬಾಲಕಿಯನ್ನು ಪೀಡಿಸಿದ್ದ. ಸಹಕರಿಸದಿದ್ದರೆ ಜಾಲತಾಣಗಳಲ್ಲಿ ವಿಡಿಯೊ ಹರಿಬಿಡುವುದಾಗಿ ಬೆದರಿಸಿದ್ದ. ನಂತರ ಮೂವರೂ ಸಾಮೂಹಿಕವಾಗಿ ಅತ್ಯಾಚಾರ ಎಸಗಿದ್ದರು. ಎಲ್ಲವನ್ನೂ ಚಿತ್ರೀಕರಣ ಮಾಡಿಕೊಂಡಿದ್ದರು.

ಘಟನೆ ಕುರಿತು ಯಾರಿಗಾದರೂ ವಿಷಯ ತಿಳಿಸಿದರೆ ಎಲ್ಲಾ ವಿಡಿಯೊ ಬಹಿರಂಗಪಡಿಸುವುದಾಗಿ ಆರೋಪಿಗಳೆಲ್ಲರೂ ಬೆದರಿಕೆ ಹಾಕಿದ್ದರು. ಜೊತೆಗೆ ಕರೆದಾಗಲೆಲ್ಲಾ ಬರಬೇಕು ಎಂದೂ ತಾಕೀತು ಮಾಡಿದ್ದರು.

ಆರೋಪಿಗಳು ಮತ್ತೆ ಮತ್ತೆ ಕರೆ ಮಾಡಿ ಬೆದರಿಸುತ್ತಿದ್ದ ಕಾರಣ ಬಾಲಕಿ ಘಟನೆ ಕುರಿತು ತನ್ನ ತಾಯಿ ಬಳಿ ಹೇಳಿಕೊಂಡಿದ್ದರು. ನ.9ರಂದು ಬಾಲಕಿಯ ತಾಯಿ ಮದ್ದೂರು ಠಾಣೆಯಲ್ಲಿ ಸಾಮೂಹಿಕ ಅತ್ಯಾಚಾರ, ಜಾತಿ ನಿಂದನೆ, ಕೊಲೆ ಬೆದರಿಕೆಯ ದೂರು ದಾಖಲಿಸಿದ್ದರು.

'ಆರೋಪಿಗಳೆಲ್ಲರೂ ಬಾಲಕಿಯ ಅಕ್ಕಪಕ್ಕದ ಗ್ರಾಮದವರೇ ಆಗಿದ್ದಾರೆ. ಬಾಲಕಿಯನ್ನು ಕರೆದೊಯ್ದಿದ್ದ ಪ್ರಮುಖ ಆರೋಪಿ ಸೇರಿ ದಂತೆ ಇಬ್ಬರು ಬಾಲಕರನ್ನು ಬಾಲಮಂದಿರಕ್ಕೆ ಕಳುಹಿಸಲಾಗಿದೆ. ಮತ್ತೊಬ್ಬ ಆರೋಪಿಯನ್ನು ಜೈಲಿಗೆ ಕಳುಹಿಸಲಾಗಿದೆ' ಎಂದು ಜಿಲ್ಲಾ ಎಸ್‌ಪಿ ಎನ್. ಯತೀಶ್ ಹೇಳಿದರು.

ಕ್ಷಮೆ ನೀಡಬೇಡಿ: ದಲಿತ ಸಂಘಟನೆಗಳ ಒತ್ತಾಯ


ಘಟನೆಯ ನಂತರ ದಲಿತ ಸಂಘಟನೆಗಳ ಮುಖಂಡರು ಮದ್ದೂರು ಪೊಲೀಸ್ ಠಾಣೆಯ ಎದುರು ಸೇರಿದರು. 'ದಲಿತ ಬಾಲಕಿ ಮೇಲೆ ಅತ್ಯಾಚಾರ ಎಸಗಿರುವ ಆರೋಪಿಗಳಿಗೆ ಗಲ್ಲು ಶಿಕ್ಷೆ ವಿಧಿಸಬೇಕು. ಇಬ್ಬರು ಆರೋಪಿಗಳು ಅಪ್ರಾಪ್ತ ವಯಸ್ಕರಾಗಿದ್ದರೂ ಅವರಿಗೆ ಕ್ಷಮೆ ನೀಡಬಾರದು' ಎಂದು ಒತ್ತಾಯಿಸಿದರು.

'ಪೊಲೀಸರ ಕರ್ತವ್ಯ ಶ್ಲಾಘನೀಯವಾದುದು, ದೂರು ಬಂದ ಕೂಡಲೇ ಆರೋಪಿಗಳನ್ನು ಬಂಧಿಸಿ ದಿಟ್ಟ ಕ್ರಮ ಮೆರೆದಿದ್ದಾರೆ. ಆದರೆ ಅವರು ಕಾನೂನು ಕುಣಿಕೆಯಿಂದ ತಪ್ಪಿಸಿಕೊಳ್ಳದಂತೆ ನೋಡಿಕೊಳ್ಳಬೇಕು' ಎಂದರು.

'ಮದ್ದೂರಿನ ಲಾಡ್ಜ್ ಮಾಲೀಕರು ಅಪ್ರಾಪ್ತ ವಯಸ್ಕರಿಗೆ ಕೊಠಡಿ ನೀಡಿರುವುದು ಅಕ್ಷಮ್ಯ ಅಪರಾಧ. ಅತ್ಯಾಚಾರಕ್ಕೆ ಪರೋಕ್ಷವಾಗಿ ಅವರೂ ಕಾರಣಕರ್ತರಾಗಿದ್ದಾರೆ. ಕೂಡಲೇ ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು ಲಾಡ್ಜ್ ಮಾಲೀಕರನ್ನು ಬಂಧಿಸಬೇಕು. ಕೂಡಲೇ ಲಾಡ್ಜ್ ಮುಚ್ಚಿಸಬೇಕು' ಎಂದು ಒತ್ತಾಯಿಸಿದರು.

ಮುರುಘಾ ಶರಣರ ಬಿಡುಗಡೆ ಆದೇಶ ಕಾಯ್ದಿರಿಸಿದ ನ್ಯಾಯಾಲಯ

ಪ್ರಜಾವಾಣಿ ವಾರ್ತೆ


ಶಿವಮೂರ್ತಿ ಮುರುಘಾ ಶರಣರು

ಚಿತ್ರದುರ್ಗ: ಪೋಕ್ಸೊ ಪ್ರಕರಣದಡಿ ಬಂಧಿತರಾಗಿ ಜೈಲು ಸೇರಿರುವ ಇಲ್ಲಿನ ಮುರುಘಾ ಮಠದ ಪೀಠಾಧಿಪತಿ ಶಿವಮೂರ್ತಿ ಮುರುಘಾ ಶರಣರಿಗೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿದ್ದು, ನ್ಯಾಯಾಂಗ ಬಂಧನದಿಂದ ಬಿಡುಗಡೆ ಮಾಡುವ ಆದೇಶವನ್ನು ಇಲ್ಲಿನ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ನ.15ಕ್ಕೆ ಕಾಯ್ದಿರಿಸಿದೆ.

ಈ ನಡುವೆ ಮತ್ತೊಂದು ಪೋಕ್ಸೊ ಪ್ರಕರಣದಲ್ಲಿ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವಂತೆ ಪ್ರಾಸಿಕ್ಯೂಷನ್ ಅನುಮತಿ ಕೋರಿದೆ. ಇದರ ವಿಚಾರಣೆ ಕೂಡ ಅಂದೇ ನಿಗದಿಯಾಗಿದೆ.

ಹೈಕೋರ್ಟ್ ಮಂಜೂರು ಮಾಡಿದ ಜಾಮೀನು ಆದೇಶದ ಪ್ರತಿಯನ್ನು ಶರಣರ ಪರ ವಕೀಲರು ಶುಕ್ರವಾರ ಜಿಲ್ಲಾ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ಹೈಕೋರ್ಟ್ ವಿಧಿಸಿದ ಷರತ್ತುಗಳ ಅನ್ವಯ ಇಬ್ಬರು ವ್ಯಕ್ತಿಗಳ ಭದ್ರತಾ ಖಾತರಿಯ ಪ್ರಮಾಣಪತ್ರವನ್ನು ಸಲ್ಲಿಸಿದರು. ಅದನ್ನು ಬುಧವಾರ ಪರಿಶೀಲಿಸಲು ನ್ಯಾಯಾಲಯ ಸಮಯ ನಿಗದಿಪಡಿಸಿತು.

ನ್ಯಾಯಾಂಗ ಬಂಧನಕ್ಕೆ ಕೋರಿಕೆ: ಮತ್ತೊಂದು ಪೋಕ್ಸೊ ಪ್ರಕರಣದಲ್ಲಿ ಆರೋಪಿ ವಿರುದ್ಧ ಹೊರಡಿಸಿದ ಬಾಡಿ ವಾರೆಂಟ್ ಅನ್ನು ನ್ಯಾಯಾಂಗ ಬಂಧನದ ವಾರೆಂಟ್ ಆಗಿ ಪರಿವರ್ತಿಸುವಂತೆ ಪ್ರಾಸಿಕ್ಯೂಷನ್ ಪರವಾಗಿ ಸರ್ಕಾರದ ಪರ ವಕೀಲ ಎಚ್.ಆರ್. ಜಗದೀಶ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದರು. ಇದಕ್ಕೆ ತಕರಾರು ಸಲ್ಲಿಸಲು ಆರೋಪಿ ಪರ ವಕೀಲರಿಗೆ ಕಾಲಾವಕಾಶ ಕಲ್ಪಿಸಿದ ನ್ಯಾಯಾಧೀಶೆ ಬಿ.ಕೆ. ಕೋಮಲಾ, ವಿಚಾರಣೆಯನ್ನು ನ.15ಕ್ಕೆ ಮುಂದೂಡಿದರು.

'ಬಿಡುಗಡೆ ನಿಶ್ಚಿತ'

'ಪೋಕ್ಸೊ ಪ್ರಕರಣಕ್ಕೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿರುವುದರಿಂದ ಶಿವಮೂರ್ತಿ ಮುರುಘಾ ಶರಣರು ಬುಧವಾರ ಜೈಲಿನಿಂದ ಬಿಡುಗಡೆಯಾಗುವುದು ನಿಶ್ಚಿತ. ಕಾನೂನು ತೊಡಕುಗಳು ಎದುರಾದರೆ ಅಂದೇ ನಿವಾರಣೆ ಮಾಡಲಾಗುವುದು' ಎಂದು ಶರಣರ ಪರ ವಕೀಲ ಸಂದೀಪ್ ಪಾಟೀಲ್ ತಿಳಿಸಿದರು.

'ಎರಡನೇ ಪ್ರಕರಣಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ಇಂತಹ ಸಂದರ್ಭದಲ್ಲಿ ತಳಹಂತದ ನ್ಯಾಯಾಲಯದಲ್ಲಿ ಪ್ರಕ್ರಿಯೆ ನಡೆಸುವುದು ತಪ್ಪಾಗುತ್ತದೆ. ಒಂದೊಮ್ಮೆ ಹಾಗೆ ಮಾಡಿದರೆ ಅದು ನ್ಯಾಯಾಂಗ ನಿಂದನೆಯಾಗುತ್ತದೆ' ಎಂದು ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯೆ ನೀಡಿದರು.

'ಬಂಧನಕ್ಕೆ ಅವಕಾಶವಿದೆ'

'ಮೊದಲ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ಶರಣರನ್ನು ಮತ್ತೊಂದು ಪ್ರಕರಣದಲ್ಲಿ ಬಾಡಿ ವಾರೆಂಟ್ ಹೊರಡಿಸಿ ವಿಚಾರಣೆ ನಡೆಸಲಾಗಿತ್ತು. ಮೊದಲ ಪ್ರಕರಣದಲ್ಲಿ ಜಾಮೀನು ಸಿಕ್ಕಿರುವುದರಿಂದ ಎರಡನೇ ಪ್ರಕರಣದಲ್ಲಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವಂತೆ ಕೋರಿಕೊಳ್ಳಲಾಗಿದೆ. ಕಾನೂನಿನಲ್ಲಿ ಇದಕ್ಕೆ ಅವಕಾಶವಿದೆ' ಎಂದು ಸರ್ಕಾರಿ ವಕೀಲ ಜಗದೀಶ್ ತಿಳಿಸಿದರು.

'ಜಾಮೀನು ಹಾಗೂ ತಡೆಯಾಜ್ಞೆಯ ಪ್ರಕ್ರಿಯೆಗಳು ಭಿನ್ನ. ದೋಷಾರೋಪ ನಿಗದಿ, ಸಾಕ್ಷ್ಯ ವಿಚಾರಣೆ ನಡೆಸದಂತೆ ತಡೆಯಾಜ್ಞೆ ತರಲಾಗಿದೆ. ಆದರೆ, ಮತ್ತೊಂದು ಪ್ರಕರಣದಲ್ಲಿ ನ್ಯಾಯಾಂಗ ಬಂಧನದ ಅವಧಿಯನ್ನು ಮುಂದುವರಿಸಲು ಯಾವುದೇ ತೊಂದರೆ ಇಲ್ಲ' ಎಂದು ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯೆ ನೀಡಿದರು.

ಪಟಾಕಿ ಮಳಿಗೆ ಜಪ್ತಿ: ಬೀಗ ತೆರವಿಗೆ ಹೈಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿಯಮ ಉಲ್ಲಂಘನೆ ಆರೋಪದಡಿ ಜಪ್ತಿ ಮಾಡಿದ ಅರ್ಜಿದಾರರ ಪಟಾಕಿ ದಾಸ್ತಾನು ಮಳಿಗೆಗಳಿಗೆ ಹಾಕಲಾಗಿರುವ ಬೀಗವನ್ನು, ದೀಪಾವಳಿ ಸಮೀಪಿಸುತ್ತಿರುವುದರಿಂದ ಕೂಡಲೇ ತೆರವುಗೊಳಿಸಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.

ಏತನ್ಮಧ್ಯೆ, 'ಬೀಗ ತೆರವುಗೊಳಿಸುವ ಮಳಿಗೆಗಳು ಸ್ಫೋಟಕ ಕಾಯ್ದೆ ಮತ್ತು ಅದಕ್ಕನುಗುಣವಾದ ನಿಯಮಗಳನ್ನು ಪಾಲನೆ ಮಾಡಿದ್ದರೆ ಮಾತ್ರವೇ ಮಾರಾಟಕ್ಕೆ ಅವಕಾಶ ನೀಡಬೇಕು' ಎಂದು ಸಂಬಂಧಿಸಿದ ಜಿಲ್ಲಾಡಳಿತಕ್ಕೆ ನಿರ್ದೇಶಿಸಿದೆ.

'ಜಪ್ತಿ ಮಾಡಲಾಗಿರುವ ನಮ್ಮ ಪಟಾಕಿ ದಾಸ್ತಾನು ಮಳಿಗೆಗಳ ತೆರವಿಗೆ ನಿರ್ದೇಶಿಸಬೇಕು' ಎಂದು ಕೋರಿ ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆ ಬಾಗೇಪಲ್ಲಿಯ ಎನ್.ಮಹದೇಶನ್ ಸೇರಿದಂತೆ ಒಟ್ಟು 22 ಜನ ಪಟಾಕಿ ಮಾರಾಟ ಪರವಾನಗಿದಾರರು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿ ಈ ಕುರಿತಂತೆ ಮಧ್ಯಂತರ ಆದೇಶ ನೀಡಿತು.

ವಿಚಾರಣೆ ವೇಳೆ ಪ್ರಕರಣದ ಪ್ರತಿವಾದಿಯಾದ ಪೆಟ್ರೋಲಿಯಂ ಮತ್ತು ಸ್ಫೋಟಕ ಸುರಕ್ಷಾ ಸಂಸ್ಥೆ ಮುಖ್ಯ ನಿಯಂತ್ರಕರ ಪರವಾಗಿ, ಕೇಂದ್ರ ಸರ್ಕಾರದ ಡೆಪ್ಯುಟಿ ಸಾಲಿಸಿಟರ್ ಜನರಲ್ ಶಾಂತಿಭೂಷಣ್ ಹಾಜರಾಗಿ, '600 ಕೆ.ಜಿ ತೂಕದವರೆಗೂ ಪಟಾಕಿ ದಾಸ್ತಾನು ಮಾಡಲು ಪರವಾನಗಿ ನೀಡಲು ಜಿಲ್ಲಾಧಿಕಾರಿಗೆ ಅಧಿಕಾರವಿದೆ. ಆದರೆ, ಬಹಳಷ್ಟು ಪ್ರಕರಣಗಳಲ್ಲಿ ಈ ಮಿತಿಯನ್ನು ಮೀರಿ ಕಾನೂನು ಬಾಹಿರವಾಗಿ ಪರವಾನಗಿ ನೀಡಲಾಗಿದೆ' ಎಂಬ ಅಂಶವನ್ನು ಪುನರುಚ್ಚರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ರಾಜ್ಯ ಸರ್ಕಾರದ ಪರ ವಕೀಲ ಕೆ.ಎಸ್.ಹರೀಶ್, 'ಕಂದಾಯ, ಅಗ್ನಿಶಾಮಕ ಮತ್ತು ಪೊಲೀಸ್ ಇಲಾಖೆಗಳ ಸಹಯೋಗದಲ್ಲೇ ಸಮಗ್ರ ಪರಿಶೀಲನೆ ನಡೆಸಿ ನಿರಾಕ್ಷೇಪಣಾ ಪತ್ರ ನೀಡಲಾಗಿದೆ' ಎಂದು ಸರ್ಕಾರದ ಕ್ರಮವನ್ನು ಸಮರ್ಥಿಸಿಕೊಂಡರು.

ಇದಕ್ಕೆ ಅರ್ಜಿದಾರರ ಪರ ವಕೀಲ ಬಿ.ಬಿ. ಸಾಗರ್, 'ದೀಪಾವಳಿ ಹಬ್ಬ ಆರಂಭವಾಗುತ್ತಿದ್ದು, ಜಪ್ತಿ ಮಾಡಿದ ಮಳಿಗೆಗಳ ಬೀಗ ತೆರೆಯಲು ನಿರ್ದೇಶಿಸಬೇಕು' ಎಂದು ಕೋರಿದರು. ಇದನ್ನು ಮನ್ನಿಸಿದ ನ್ಯಾಯಪೀಠ 'ಜಪ್ತಿ ಮಾಡಲಾಗಿರುವ ಅರ್ಜಿದಾರರ ದಾಸ್ತಾನು ಮಳಿಗೆಗಳ ಬೀಗಗಳನ್ನು ಕೂಡಲೇ ತೆರೆಯಬೇಕು. ಸ್ಫೋಟಕ ಕಾಯ್ದೆ-1984ರ ನಿಯಮಗಳನ್ನು ಮೀರದಂತೆ ಷರತ್ತುಗಳನ್ನು ಪಾಲನೆ ಮಾಡುವವರಿಗೆ ಮಾತ್ರವೇ ಪಟಾಕಿ ಮಾರಾಟಕ್ಕೆ ಅವಕಾಶ ಕಲ್ಪಿಸಲು ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕು' ಎಂದು ಆದೇಶಿಸಿತು.

ಅರ್ಜಿದಾರರು ಷರತ್ತುಗಳನ್ನು ಅನುಪಾಲನೆ ಮಾಡಿದ ಬಗ್ಗೆ ಮತ್ತು ಅರ್ಜಿಗೆ ಸಂಬಂಧಿಸಿದಂತೆ ಮೂರು ವಾರಗಳಲ್ಲಿ ಸಂಪೂರ್ಣ ಆಕ್ಷೇಪಣೆ ಸಲ್ಲಿಸುವಂತೆ ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿತು.

ಕೊಲೆ ಬೆದರಿಕೆ: 7 ಜನರ ಬಂಧನ

ಹಿಂದೂ ಜಾಗರಣ ವೇದಿಕೆ ಮುಖಂಡನೂ ಸೆರೆ

ಪ್ರಜಾವಾಣಿ ವಾರ್ತೆ


ದಿನೇಶ್ ಪಂಜಿಗ

ಪುತ್ತೂರು (ದಕ್ಷಿಣ ಕನ್ನಡ): ನಗರ ಹೊರವಲಯದ ಮುಕ್ರಂಪಾಡಿಯಲ್ಲಿರುವ ಪುತ್ತಿಲ ಪರಿವಾರದ ಕಚೇರಿ ಬಳಿ ತಲವಾರಿನೊಂದಿಗೆ ಬಂದು ಕೊಲೆ ಬೆದರಿಕೆಯೊಡ್ಡಿದ ಆರೋಪದ ಮೇಲೆ ಹಿಂದೂ ಜಾಗರಣ ವೇದಿಕೆಯ ಜಿಲ್ಲಾ ಘಟಕದ ಸಂಯೋಜಕ ದಿನೇಶ್ ಪಂಜಿಗ, ಇಬ್ಬರು ಬಾಲಕರು ಸೇರಿ 9 ಮಂದಿಯ ವಿರುದ್ಧ ಪುತ್ತೂರು ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಏಳು ಜನರನ್ನು ಬಂಧಿಸಲಾಗಿದೆ.

'ಸಾಮಾಜಿಕ ಮಾಧ್ಯಮದ ಬಳಗವೊಂದರಲ್ಲಿ ಚರ್ಚೆಯಾದ ವಿಷಯಕ್ಕೆ ಸಂಬಂಧಿಸಿ ಪುತ್ತಿಲ ಪರಿವಾರದಲ್ಲಿ ಗುರುತಿಸಿಕೊಂಡಿರುವ ಬನ್ನೂರಿನ ಮನೀಶ್ ಕುಲಾಲ್ ಎಂಬವರನ್ನು ಗುರಿಯಾಗಿಸಿಕೊಂಡು ಶುಕ್ರವಾರ ಮಧ್ಯಾಹ್ನ ದಿನೇಶ್ ಪಂಜಿಗ ಅವರು ಎಂಟು ಮಂದಿ ಬೆಂಬಲಿಗರೊಂದಿಗೆ ತಲುವಾರು ಹಿಡಿದುಕೊಂಡು ಪುತ್ತಿಲ ಪರಿವಾರದ ಕಚೇರಿ ಬಳಿಗೆ ತೆರಳಿದ್ದಾರೆ. 'ತಾಕತ್ತಿದ್ದರೆ ಇಲ್ಲಿಗೆ ಬಾ ಎಂದು ಹೇಳಿದ್ದ ಮನೀಶ್ ಎಲ್ಲಿದ್ದಾನೆ' ಎಂದು ಪ್ರಶ್ನಿಸಿ ಅರಚಿದ್ದಾರೆ. ಈ ವೇಳೆ ಮನೀಶ್ ಕುಲಾಲ್, ಪುತ್ತಿಲ ಪರಿವಾರದ ಕಚೇರಿಯಲ್ಲಿ ಇರಲಿಲ್ಲ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಈ ಮಾಹಿತಿ ತಿಳಿದ ಮನೀಶ್ ಕುಲಾಲ್ ಪೊಲೀಸರಿಗೆ ವಿಷಯ ಮುಟ್ಟಿಸಿದ್ದರು. ತಕ್ಷಣ ಪೊಲೀಸರು ಸ್ಥಳಕ್ಕೆ ತೆರಳಿ ಪುತ್ತೂರು ತಾಲ್ಲೂಕಿನ ಶಾಂತಿಗೋಡು ಗ್ರಾಮದ ನಿವಾಸಿ ದಿನೇಶ್ ಪಂಜಿಗ (38), ನರಿಮೊಗ್ರು ಗ್ರಾಮದ ಭವಿತ್ (19), ಬೊಳುವಾರಿನ ಮನ್ವಿತ್ (19), ಆರ್ಯಾಪು ಗ್ರಾಮದ ಜಯಪ್ರಕಾಶ್ (18), ಚಿಕ್ಕಮುಡ್ನೂರು ಗ್ರಾಮದ ಚರಣ್ (23), ಬನ್ನೂರು ಗ್ರಾಮದ ಮನೀಶ್ (23), ಪುತ್ತೂರು ಕಸಬಾದ ವಿನೀತ್ (19) ಅವರನ್ನು ಬಂಧಿಸಿದ್ದಾರೆ.

ಈ ಘಟನೆಯಿಂದಾಗಿ ಮುಕ್ರಂಪಾಡಿಯ ಪುತ್ತಿಲ ಪರಿವಾರದ ಕಚೇರಿ ಬಳಿ ಗೊಂದಲದ ವಾತಾವರಣ ನಿರ್ಮಾಣವಾಯಿತು. ಆ ಬಳಿಕದ ವಿದ್ಯಮಾನದಲ್ಲಿ ಪುತ್ತೂರು ನಗರ ಠಾಣೆಯ ಎದುರು ಎರಡೂ ತಂಡದ ಬೆಂಬಲಿಗರು ಸೇರಿ ಅಲ್ಲಿಯೂ ಗೊಂದಲದ ವಾತಾವರಣ ಉಂಟಾಗಿತ್ತು.

ಈ ಪ್ರಕರಣದ ವಿಚಾರದಲ್ಲಿ ಸಾರ್ವಜನಿಕರು ವದಂತಿಗಳಿಗೆ ಕಿವಿಗೊಡದಂತೆ ಮತ್ತು ವದಂತಿ ಹರಡದಂತೆ ಪೊಲೀಸರು ಮನವಿ ಮಾಡಿದ್ದಾರೆ.

> ಪುತ್ತೂರಿನಲ್ಲಿ ಮತ್ತೆ ರೌಡಿಸಂ ಅಟ್ಟಹಾಸ ಎಲ್ಲೆ ಮೀರುತ್ತಿದೆ. ಅಮಾಯಕ ಕಾರ್ಯಕರ್ತರನ್ನು ಹತ್ಯೆ ಮಾಡುವ ಮನಸ್ಥಿತಿಯವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು
>
> **ಅರುಣಕುಮಾರ್ ಪುತ್ತಿಲ**
> ಪುತ್ತಿಲ ಪರಿವಾರದ ನಾಯಕ

ದೇವಣಿ ಜಾನುವಾರು ಸಂಶೋಧನೆ ಮತ್ತು ಮಾಹಿತಿ ಕೇಂದ್ರದ ವಿಜ್ಞಾನಿಗಳಿಂದ ಸಾಧನೆ

ಜಾನುವಾರುಗಳಲ್ಲಿ ಭ್ರೂಣ ವರ್ಗಾವಣೆ ಯಶಸ್ವಿ

ಪ್ರಜಾವಾಣಿ ವಾರ್ತೆ

ಬೀದರ್: ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ದೇವಣಿ ಜಾನುವಾರು ಸಂಶೋಧನೆ ಹಾಗೂ ಮಾಹಿತಿ ಕೇಂದ್ರವು ತಳಿ ಸಂರಕ್ಷಣೆ ಮತ್ತು ಸಂವರ್ಧನೆಯಲ್ಲಿ ಹೊಸ ಮೈಲಿಗಲ್ಲು ಸಾಧಿಸಿದೆ. ಜಾನುವಾರುಗಳಲ್ಲಿ ಬಹು ಅಂಡೋತ್ಪತ್ತಿ ಮತ್ತು ಭ್ರೂಣ ವರ್ಗಾವಣೆ ಪ್ರಕ್ರಿಯೆಯಲ್ಲಿ ಯಶಸ್ಸು ಸಾಧಿಸಿದೆ.

ಬೀದರ್ ಪಶು ವೈದ್ಯಕೀಯ ಕಾಲೇಜಿನ ಸಹಯೋಗದೊಂದಿಗೆ ಪ್ರಾಣಿ ಸಂತಾನೋತ್ಪತ್ತಿ ಸ್ತ್ರೀರೋಗ ವಿಜ್ಞಾನ ಮತ್ತು ಪ್ರಸೂತಿ ವಿಭಾಗದಿಂದ ಈ ಸಂಶೋಧನೆ ಕೈಗೊಳ್ಳಲಾಗಿದೆ.

ಇದು ಪಿಎಚ್.ಡಿ ವಿದ್ಯಾರ್ಥಿ ಅಶೋಕ ವಾಲಿಕರ್ ಅವರ ಸಂಶೋಧನೆಯ ಭಾಗವಾಗಿದೆ. ವಿಜ್ಞಾನಿಗಳಾದ ಡಾ.ಬಿಜೂರ್ಕರ್ ಆರ್.ಜಿ., ಡಾ.ವೆಂಕನಗೌಡ, ಡಾ.ಎಂ.ಕೆ. ತಾಂಡಲೆ, ಡಾ.ದಿಲೀಪ್‌ಕುಮಾರ್, ಡಾ.ಶ್ರೀಕಾಂತ್ ಕುಲಕರ್ಣಿ, ಡಾ.ಪ್ರಕಾಶಕುಮಾರ ರಾಠೋಡ್ ಮಾರ್ಗದರ್ಶನದಲ್ಲಿ ಈ ಸಂಶೋಧನೆ ನಡೆದಿದೆ. ಈ ಸಂಶೋಧನೆಯ ಫಲದಿಂದ ಆರು ಆರೋಗ್ಯಕರ ಕರುಗಳು ಜನಿಸಿವೆ.

'ಆರು ಉತ್ತಮ ಗುಣಮಟ್ಟದ ಹಸುಗಳಿಂದ 42 ಭ್ರೂಣಗಳನ್ನು ಸಂಗ್ರಹಿಸಿ, ಅವುಗಳಲ್ಲಿ 36 ಭ್ರೂಣಗಳನ್ನು ಹಸುಗಳಿಗೆ (ಸರೋಗೇಟ್) ವರ್ಗಾಯಿಸಲಾಗಿತ್ತು. ಇದರಿಂದ ಒಟ್ಟು 10 ಹಸುಗಳು ಗರ್ಭಧರಿಸಿವೆ. 'ಇನ್–ವಿವೋ' ಭ್ರೂಣ ವರ್ಗಾವಣೆ ಮೂಲಕ ಮೊದಲ ಕರು ಅಕ್ಟೋಬರ್ 31ರಂದು ಜನಿಸಿದೆ' ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕೆ.ಸಿ. ವೀರಣ್ಣ ಶುಕ್ರವಾರ ತಿಳಿಸಿದ್ದಾರೆ.

'ಉತ್ತಮ ಗುಣಮಟ್ಟದ ತಳಿಯ ಹಸುವಿನ ಬಹು ಅಂಡೋತ್ಪತ್ತಿಯನ್ನು ಪಡೆದು, ಅದನ್ನು ಇತರೆ ಹಸುಗಳಿಗೆ ಕೃತಕ ಗರ್ಭಧಾರಣೆ ಮಾಡಲಾಯಿತು. ಕೃತಕ ಗರ್ಭಧಾರಣೆ ಹಾಗೂ ಫಲೀಕರಣದ ನಂತರ ದಾನಿಗಳ ಹಸುಗಳ ಗರ್ಭಾಶಯದಿಂದ ಏಳು ದಿನಗಳ ನಂತರ ಭ್ರೂಣಗಳನ್ನು ಹಿಂಪಡೆಯಲಾಯಿತು. ಆ ಭ್ರೂಣಗಳನ್ನು ಸಮಾನ ಋತುಚಕ್ರದ ಹಂತದಲ್ಲಿದ್ದ ಹಸುಗಳಿಗೆ ವರ್ಗಾಯಿಸಲಾಯಿತು. ಈ ಹೊಸ ತಂತ್ರಜ್ಞಾನವು ಉನ್ನತ-ಆನುವಂಶಿಕ ಗುಣಗಳ ಪ್ರಸರಣವನ್ನು ವೇಗಗೊಳಿಸುತ್ತದೆ. ಗುಣಮಟ್ಟದ ಜಾನುವಾರುಗಳನ್ನು ಹೆಚ್ಚಿಸಬಹುದು' ಎಂದು ಹೇಳಿದ್ದಾರೆ.

'ದೇಶೀ ಜಾನುವಾರುಗಳನ್ನು ತಳಿ ಸಂವರ್ಧನೆ ಮೂಲಕ ಸಂರಕ್ಷಿಸುವುದು ಹೆಚ್ಚು ಶ್ರಮ ಮತ್ತು ಸಮಯ ತೆಗೆದುಕೊಳ್ಳುತ್ತದೆ. ಬಹು ಅಂಡೋತ್ಪತ್ತಿ ಮತ್ತು ಭ್ರೂಣ ವರ್ಗಾವಣೆ ತಂತ್ರಜ್ಞಾನದಿಂದ ಉತ್ಕೃಷ್ಟ ದೇವಣಿ ತಳಿ ಜಾನುವಾರುಗಳನ್ನು ಹೆಚ್ಚಿಸಲು ಸಹಕಾರಿಯಾಗುತ್ತದೆ. ಸಾಮಾನ್ಯವಾಗಿ ಒಂದು ಉತ್ತಮ ಗುಣಮಟ್ಟದ ಹಸು ತನ್ನ ಜೀವಿತಾವಧಿಯಲ್ಲಿ ಸರಿಯಾಗಿ ನಿರ್ವಹಿಸಿದರೆ 6ರಿಂದ 7 ಕರುಗಳನ್ನು ನೀಡಬಹುದು. ಆದರೆ, ಈ ತಂತ್ರಜ್ಞಾನದಿಂದ ಪ್ರತಿ ಚಕ್ರದಲ್ಲಿ 4ರಿಂದ 5 ಗುಣಮಟ್ಟದ ಭ್ರೂಣಗಳನ್ನು ಪಡೆಯಬಹುದು. ಸರೋಗೇಟ್ ಹಸುಗಳ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಉತ್ಕೃಷ್ಟ ಕರುಗಳನ್ನು ಪಡೆಯಬಹುದು' ಎಂದು ಮಾಹಿತಿ ಹಂಚಿಕೊಂಡಿದ್ದಾರೆ.



ಭ್ರೂಣ ವರ್ಗಾವಣೆ ತಂತ್ರಜ್ಞಾನದಿಂದ ಜನಿಸಿರುವ ಕರು

> ಬಹು ಅಂಡೋತ್ಪತ್ತಿ ಮತ್ತು ಭ್ರೂಣ ವರ್ಗಾವಣೆಯಿಂದ ರೈತರಿಗೆ ಬಹಳ ಅನುಕೂಲವಾಗಲಿದೆ
>
> **ಡಾ.ಬಿ.ವಿ. ಶಿವಪ್ರಕಾಶ**
> ಸಂಶೋಧನಾ ನಿರ್ದೇಶಕ, ಪಶು ವೈದ್ಯಕೀಯ ವಿಶ್ವವಿದ್ಯಾಲಯ ಬೀದರ್

> ಈ ಸಂಶೋಧನೆಯಿಂದ ಹೈನುಗಾರಿಕೆ ಉದ್ಯಮ ಬೆಳೆಯಲು ಸಹಾಯವಾಗುತ್ತದೆ. ಜಾನುವಾರುಗಳ ಸಾಮರ್ಥ್ಯ ಹೆಚ್ಚಾಗುತ್ತದೆ
>
> **ಪ್ರೊ.ಕೆ.ಸಿ.ವೀರಣ್ಣ**
> ಕುಲಪತಿ, ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರ್

ಬುಂದೇಲ್‌ಖಂಡ: ಬರಗಾಲದಿಂದ ವಲಸೆ ತನಕ ಸಮಸ್ಯೆಗಳು ಹತ್ತಾರು • ಪರಿಹಾರ ಮರೀಚಿಕೆ

ಸಮಸ್ಯೆಗಳು ಗೌಣ, ಜಾತಿಯೇ ಪ್ರಧಾನ



ಚುನಾವಣಾ ಪಯಣ
ಮಧ್ಯಪ್ರದೇಶ
ಮಂಜುನಾಥ ಹೆಬ್ಬಾರ್

ಛತ್ತರ್‌ಪುರ (ಮಧ್ಯಪ್ರದೇಶ): ಬತ್ತಿ ಬರಡಾಗಿರುವ ಬುಂದೇಲ್‌ಖಂಡ ಪ್ರದೇಶದಲ್ಲಿ ಚುನಾವಣಾ ಪ್ರಚಾರ ನಡೆಸುತ್ತಿರುವ ರಾಜಕೀಯ ಪಕ್ಷಗಳ ನಾಯಕರಿಗೆ ನೈಜ ಸಮಸ್ಯೆಗಳು ನಗಣ್ಯವಾಗಿವೆ. ಅಕ್ರಮ ಗಣಿಗಾರಿಕೆ, ಬರಗಾಲ ಹಾಗೂ ರೈತರ ಆತ್ಮಹತ್ಯೆಯಂತಹ ಜ್ವಲಂತ ಸಮಸ್ಯೆಗಳ ಕುರಿತು ಪ್ರಸ್ತಾಪಿಸಲು ಅವರಿಗೆ ಪುರುಸೊತ್ತು ಇಲ್ಲ. ಇಲ್ಲಿನ ಕದನ ಕಣದಲ್ಲಿ ಜಾತಿ ಹಾಗೂ ಧರ್ಮವೇ ಪ್ರಮುಖ ಚುನಾವಣಾ 'ಅಸ್ತ್ರ'ವಾಗಿದೆ.

ಈ ಭಾಗದಲ್ಲಿ ಕಮಲ ಪಾಳಯ 'ರಾಮ' ಭಜನೆಯಲ್ಲಿ ನಿರತವಾಗಿದ್ದರೆ, ಕಾಂಗ್ರೆಸ್ ನಾಯಕರದ್ದು ಮೃದು ಹಿಂದುತ್ವವಾದ. ಈ ಭಾಗದಲ್ಲಿ ಪ್ರಬಲ ನೆಲೆ ಹೊಂದಿದ್ದ ಸಮಾಜವಾದಿ ಪಕ್ಷ (ಎಸ್‌ಪಿ) ಹಾಗೂ ಬಹುಜನ ಸಮಾಜವಾದಿ ಪಕ್ಷ (ಬಿಎಸ್‌ಪಿ) ನಿಸ್ತೇಜಗೊಂಡಿವೆ. ಧಾರ್ಮಿಕ ಭಾವನೆಗಳಿಗೆ ಹೆಸರಾದ ಹಾಗೂ ರಾಜಕೀಯವಾಗಿ ಸೂಕ್ಷ್ಮ ಪ್ರದೇಶವಾಗಿರುವ ಈ ಭಾಗವು ಆಡಳಿತಾರೂಢ ಬಿಜೆಪಿ ಹಾಗೂ ಕಾಂಗ್ರೆಸ್‌ಗೆ ನಿರ್ಣಾಯಕ ವಾಗಿದೆ. ಜುರಾಹೋಗೆ ಸಾಗುವ ಹಾದಿಯಲ್ಲಿ ಸಿಕ್ಕ ಸಚಿನ್ ಜೈನ್, 'ದೇಶದಾದ್ಯಂತ ಕವಿದಿರುವ ಕೃಷಿ ಬಿಕ್ಕಟ್ಟು ಈ ಭಾಗದಲ್ಲಿ ಇನ್ನಷ್ಟು ಉಲ್ಬಣಿಸಿದೆ. ಬೆಲೆ ಕುಸಿತದ ವಿರುದ್ಧ ರೈತರು ತಿರುಗಿ ಬಿದ್ದಿದ್ದಾರೆ. ಇದು ತೀವ್ರ ಬರಗಾಲಕ್ಕೆ ತುತ್ತಾಗುತ್ತಿರುವ ಪ್ರದೇಶ. ನಮ್ಮ ರಾಜಕಾರಣಿಗಳಿಗೆ ಇದು ಪ್ರಮುಖ ವಿಷಯವೇ ಆಗಿಲ್ಲ. ಜಾತಿ ಹಾಗೂ ಧರ್ಮವೇ ಅವರಿಗೆ ಪ್ರಮುಖವಾಗಿದೆ. ಜನರಲ್ಲಿ ಧರ್ಮದ ಅಮಲು ಏರಿಸಿ ಚುನಾವಣೆ ಗೆಲ್ಲಬಹುದು ಎಂಬ ಭ್ರಮೆಯಲ್ಲಿ ಇದ್ದಾರೆ. ಈ ವಿಷಯದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ನಾಯಕರು ಒಂದೇ ನಾಣ್ಯದ ಎರಡು ಮುಖಗಳು. ಈ ಭಾಗದಲ್ಲಿ ಎಸ್‌ಪಿ ಹಾಗೂ ಬಿಎಸ್‌ಪಿ ನೆಲೆ ಕಳೆದುಕೊಂಡಿವೆ. ಎಸ್‌ಪಿ ಜತೆಗಿದ್ದ ಯಾದವರು ಕಾಂಗ್ರೆಸ್ ಜತೆಗೆ ಗುರುತಿಸಿಕೊಂಡಿದ್ದಾರೆ' ಎಂದು ವಿಶ್ಲೇಷಿಸಿದರು.

'ಜನವರಿಯಲ್ಲಿ ರಾಮಮಂದಿರ ಉದ್ಘಾಟನೆಗೊಳ್ಳಲಿದೆ ಎಂಬುದು ಎಲ್ಲರಿಗೂ ಗೊತ್ತಿತ್ತು. ಆದರೆ, ಅದನ್ನು ಅಧಿಕೃತವಾಗಿ ಪ್ರಕಟಿಸಿರಲಿಲ್ಲ. ರಾಜ್ಯದ ವಿಧಾನಸಭಾ ಚುನಾವಣೆ ಘೋಷಣೆಯಾದ ಕೂಡಲೇ ರಾಮಭಕ್ತರು ಚುರುಕಾದರು. ಪ್ರಧಾನಿ ಅವರನ್ನು ಭೇಟಿ ಮಾಡಿ ದಿನಾಂಕ ಅಂತಿಮಗೊಳಿಸಿದರು. ರಾಮಮಂದಿರ ಉದ್ಘಾಟನೆಗೆ ಶುಭ ಕೋರುವ ನೂರಾರು ಫ್ಲೆಕ್ಸ್‌ಗಳನ್ನು ಈ ಭಾಗದಲ್ಲಿ ನೀವು ಕಾಣಬಹುದು. ಹಿಂದೂ ಮತಗಳ ಧ್ರುವೀಕರಣಕ್ಕೆ ಈ ಮೂಲಕ ಕಮಲ ಪಡೆ ಕಸರತ್ತು ನಡೆಸುತ್ತಿದೆ' ಎಂದು ಅವರು ಹೇಳಿದರು. ಅವರ ಮಾತಿಗೆ ಪಕ್ಕದಲ್ಲಿದ್ದ ಪ್ರಕಾಶ್ ದ್ವಿವೇದಿ ಬಲವಾಗಿ ಆಕ್ಷೇಪಿಸಿದರು. 'ಇದರಲ್ಲಿ ತಪ್ಪೇನಿದೆ. ನಾವೆಲ್ಲ ಶ್ರೀರಾಮನ ಜತೆಗೆ ಇದ್ದೇವೆ. ಆತ ಸರ್ವಶ್ರೇಷ್ಠ. ಈ ನಾಡು ಅಭಿವೃದ್ಧಿ ಆಗಿರುವುದೇ ಶ್ರೀರಾಮನಿಂದ. ರಾಮಮಂದಿರ ಕಟ್ಟಿರುವ ಪಕ್ಷಕ್ಕೆ ನಮ್ಮ ಮತ' ಎಂದು ಸ್ಪಷ್ಟವಾಗಿ ಹೇಳಿದರು. 'ಉಳಿದ ದೇವರು ಶ್ರೇಷ್ಠ ಅಲ್ಲವೇ' ಎಂದು ಪ್ರಶ್ನಿಸಿದರೆ, 'ಅವೆಲ್ಲ ಈಗ್ಯಾಕೆ' ಎಂದು ಗೊಣಗುತ್ತಾ ಮುಂದೆ ಸಾಗಿದರು.

ಕೈಂದಿ ಗ್ರಾಮದಲ್ಲಿ ಬ್ಯಾಗ್ ಹಾಕಿಕೊಂಡು ಬಸ್‌ಗೆ ಕಾಯುತ್ತಿದ್ದ ಯುವಕ ವಿಕಾಸ್, 'ಬುಂದೇಲ್‌ಖಂಡವು ಅಭಿವೃದ್ಧಿಯಲ್ಲಿ ಹಿಂದುಳಿದಿದೆ. ಇಲ್ಲಿ ಉದ್ಯೋಗಗಳು ಸಿಗುತ್ತಿಲ್ಲ. ಜನರು ದೊಡ್ಡ ಪ್ರಮಾಣದಲ್ಲಿ ಪಟ್ಟಣಗಳಿಗೆ ವಲಸೆ ಹೋಗುತ್ತಿದ್ದಾರೆ. ನಾನು ಸಹ ಕೆಲಸ ಹುಡುಕಿಕೊಂಡು ನೋಯ್ಡಾ ಕಡೆಗೆ ಹೊರಟಿದ್ದೇನೆ' ಎಂದರು.

'ಇಲ್ಲಿನ ಹಳ್ಳಿಗಳಲ್ಲಿ ಮನೆಯ ಬಾಗಿಲುಗಳ ಬೀಗ ನೇತು ಹಾಕಿರುವ ಸಾಮಾನ್ಯ ದೃಶ್ಯ ಕಾಣುತ್ತದೆ. ಊರು ಬಿಡುವ ಸಂದರ್ಭದಲ್ಲಿ ಜನರು ಬಾಗಿಲಿನ ಮೇಲೆ ಬೀಗ ನೇತು ಹಾಕಿ ಹೋಗುತ್ತಾರೆ' ಎಂದು ಅವರು ಹೇಳಿದರು.

'ಇಲ್ಲಿನ ಕೃಷಿ ಮಳೆಯಾಶ್ರಿತವಾಗಿದೆ. ವರ್ಷದಲ್ಲಿ ಒಂದೇ ಬೆಳೆ ಬೆಳೆಯಲಾಗುತ್ತದೆ. ಕಾರ್ಮಿಕರು ಸಾಮಾನ್ಯವಾಗಿ ತಮ್ಮ ಹಳ್ಳಿಗಳಿಗೆ ಬಿತ್ತನೆ ಮತ್ತು ಕೊಯ್ಲಿನ ಸಮಯದಲ್ಲಿ ಅಥವಾ ದೀಪಾವಳಿಯಂತಹ ಹಬ್ಬಗಳಿಗೆ ಹಿಂದಿರುಗುತ್ತಾರೆ. ಚುನಾವಣೆ ಸಮಯದಲ್ಲಿ ಅಭ್ಯರ್ಥಿಗಳು ವಲಸೆ ಹೋದವರನ್ನು ಭಕ್ಷೀಸು ಕೊಟ್ಟು ಕರೆಸುತ್ತಾರೆ. ಅವರನ್ನು ಖುಷಿ ಪಡಿಸಲು ಬಗೆಬಗೆಯ ವ್ಯವಸ್ಥೆ ಮಾಡುತ್ತಾರೆ. ಹೆಚ್ಚು ಖುಷಿಪಡಿಸಿದವರಿಗೆ ಇಲ್ಲಿನ ಕಾರ್ಮಿಕರು ಮತ ಒತ್ತುತ್ತಾರೆ' ಎಂದು ಹೇಳಿ ಸಣ್ಣಗೆ ನಕ್ಕರು.

ಪೃಥ್ವಿಪುರದ ಹೆದ್ದಾರಿ ಪಕ್ಕದಲ್ಲಿ ಸಣ್ಣ ಹೋಟೆಲ್ ಇಟ್ಟುಕೊಂಡಿರುವ ಆದೇಶ್ ಯಾದವ್ ಅವರು 'ಗೋ ರಾಜಕೀಯ' ಹೇಗೆ ನಡೆಯುತ್ತಿದೆ ಎಂಬುದನ್ನು ಹೇಳುತ್ತಾರೆ. 'ಜಾನ್ಸಿ–ಛತ್ತರ್‌ಪುರ ನಡುವಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ನೂರಾರು ಬೀಡಾಡಿ ದನಗಳು ಇವೆ. ಅವುಗಳಿಂದಾಗಿ ಹಲವು ಅಪಘಾತಗಳು ನಡೆದಿವೆ. ಹೆದ್ದಾರಿ ಬಿಟ್ಟು ಅವು ಕದಲುವುದಿಲ್ಲ. ಮಲಗುವುದು ಇಲ್ಲೇ. ಗೋ ಸಂರಕ್ಷಣೆ ಬಗ್ಗೆ ಭಾಷಣ ಬಿಗಿಯುವವರು ಇವುಗಳ ಕುರಿತು ಚಕಾರ ಎತ್ತುವುದಿಲ್ಲ. ಗೋಶಾಲೆಗಳನ್ನೂ ನಿರ್ಮಿಸಿಲ್ಲ. ಇವುಗಳನ್ನು ಸ್ಥಳಾಂತರ ಮಾಡಲು ಮುಂದಾದರೆ ಅದಕ್ಕೂ ಆಕ್ಷೇಪ ಮಾಡುತ್ತಾರೆ. ಅವರಿಗೆ ಚುನಾವಣೆಗಾಗಿ ಈ ಗೋವುಗಳು ಬೇಕು' ಎಂದು ಅವರು ಬೇಸರ ವ್ಯಕ್ತಪಡಿಸಿದರು.

'ಇತರ ಹಿಂದುಳಿದ ವರ್ಗಗಳ ಹಾಗೂ ದಲಿತರ ಮತಗಳ ಮೇಲೆ ಕಣ್ಣಿಟ್ಟು ಬಿಜೆಪಿಯು ಸಾಗರ್ ಜಿಲ್ಲೆಯ ನಾರ್ಯಾವಳಿಯಲ್ಲಿ ₹100 ಕೋಟಿ ಅಂದಾಜು ಮೊತ್ತದಲ್ಲಿ ಸಂಸ ರವಿದಾಸ್ ಸ್ಮಾರಕ ನಿರ್ಮಾಣಕ್ಕೆ ಯೋಜನೆ ರೂಪಿಸಿದೆ. ಚುನಾವಣೆಗೆ ಘೋಷಣೆಗೆ ಮುನ್ನ ಪ್ರಧಾನಿಯವರು ಅಡಿಗಲ್ಲು ಹಾಕಿದರು. ಈ ಭಾಗದ ದೇವಳಗಳ ನವೀಕರಣಕ್ಕೆ ಸರ್ಕಾರ ಹೇರಳ ಅನುದಾನ ಕೊಟ್ಟಿದೆ. ಆದರೆ, ಜನರ ಕಷ್ಟ ನೀಗಿಸಲು ಒಂದೇ ಒಂದು ಯೋಜನೆ ರೂಪಿಸುತ್ತಿಲ್ಲ. ರಾಜ್ಯದಲ್ಲಿ ಆಡಳಿತ ವಿರೋಧಿ ಅಲೆ ಪ್ರಬಲವಾಗಿದೆ. ಈ ಅಲೆಯಲ್ಲೇ ಗೆಲ್ಲಬಹುದು ಎಂಬ ಭ್ರಮೆಯಲ್ಲಿ ಕಾಂಗ್ರೆಸ್ ಇದೆ' ಎಂದು ಅವರು ಅಭಿಪ್ರಾಯಪಟ್ಟರು.

ಎಷ್ಟು ಕ್ಷೇತ್ರಗಳು

ಬುಂದೇಲ್‌ಖಂಡ ಪ್ರದೇಶವು ಸಾಗರ್ (8 ವಿಧಾನಸಭಾ ಸ್ಥಾನಗಳು), ಟಿಕಮ್‌ಗಢ (3 ಸ್ಥಾನಗಳು), ನಿವಾಡಿ (2 ಸ್ಥಾನಗಳು), ಛತ್ತರ್‌ಪುರ (6 ಸ್ಥಾನಗಳು), ದಾಮೋಹ್ (4 ಸ್ಥಾನಗಳು) ಮತ್ತು ಪನ್ನಾ (3 ಸ್ಥಾನಗಳು) ಜಿಲ್ಲೆಗಳನ್ನು ಒಳಗೊಂಡಿದೆ. 2018ರ ಚುನಾವಣೆಯಲ್ಲಿ ಬಿಜೆಪಿ 17 ಹಾಗೂ ಕಾಂಗ್ರೆಸ್ 7 ಕ್ಷೇತ್ರಗಳನ್ನು ಗೆದ್ದಿದ್ದವು. ಬಿಎಸ್‌ಪಿ ಹಾಗೂ ಎಸ್‌ಪಿ ತಲಾ ಒಂದು ಸ್ಥಾನಕ್ಕೆ ತೃಪ್ತಿಪಟ್ಟಿದ್ದವು.

ಪ್ರತ್ಯೇಕ ರಾಜ್ಯದ ಬೇಡಿಕೆ

ದಕ್ಷಿಣ ಉತ್ತರ ಪ್ರದೇಶದ ಏಳು ಮತ್ತು ಮಧ್ಯ ಪ್ರದೇಶದ ಉತ್ತರ ಭಾಗದ ಆರು ಜಿಲ್ಲೆಗಳನ್ನು ಒಳಗೊಂಡ ಬುಂದೇಲ್‌ಖಂಡ ರಾಜ್ಯವನ್ನು ರಚಿಸಬೇಕು ಎಂಬುದು ಈ ಭಾಗದ ಜನರ ಬಹುಕಾಲದ ಬೇಡಿಕೆ.

'ಬಹುಜನ ಸಮಾಜವಾದಿ ಪಕ್ಷದ ನಾಯಕಿ ಮಾಯಾವತಿ ಅವರು ಪ್ರತ್ಯೇಕ ಬುಂದೇಲ್‌ಖಂಡ ರಾಜ್ಯಕ್ಕೆ ಮೊದಲು ಧ್ವನಿ ಎತ್ತಿದವರು. 2007ರಲ್ಲಿ ಮಾಯಾವತಿ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದಾಗ ಉತ್ತರ ಪ್ರದೇಶವನ್ನು ನಾಲ್ಕು ಸಣ್ಣ ರಾಜ್ಯಗಳಾಗಿ ವಿಂಗಡಿಸುವ ಸಂಬಂಧ ನಿರ್ಣಯವನ್ನು ವಿಧಾನಸಭೆಯಲ್ಲಿ ಅಂಗೀಕರಿಸಲಾಗಿತ್ತು. ಜತೆಗೆ, ಈ ಭಾಗದ ಜನರು ಹೋರಾಟವನ್ನೂ ನಡೆಸಿದ್ದರು. ಪ್ರತ್ಯೇಕ ರಾಜ್ಯವಾದರೆ ಈ ಭಾಗ ಅಭಿವೃದ್ಧಿಯಾದೀತು. ಆದರೆ, ಈ ಬಗ್ಗೆ ಕಾಂಗ್ರೆಸ್ ಹಾಗೂ ಬಿಜೆಪಿ ನಾಯಕರಿಗೆ ಆಸಕ್ತಿ ಇಲ್ಲ' ಎಂದು ಜಾನ್ಸಿ ಸಮೀಪ ಸಿಕ್ಕ ರಾಮ್ ಭರೋಸಾ ಬೇಸರ ವ್ಯಕ್ತಪಡಿಸಿದರು.

ಛತ್ತೀಸಗಢ ವಿಧಾನಸಭೆ ಚುನಾವಣೆ 2ನೇ ಹಂತ



70 ಸ್ಥಾನಗಳು
958 ಅಭ್ಯರ್ಥಿಗಳು
130 ಮಹಿಳೆಯರು
ಮತದಾನ ದಿನ 17 ನವೆಂಬರ್

ಅಪರಾಧ ಮತ್ತು ಅಭ್ಯರ್ಥಿಗಳು


56 ಗಂಭೀರ ಪ್ರಕರಣ

ಕಾಂಗ್ರೆಸ್	7
ಎಎಪಿ	6
ಬಿಜೆಪಿ	4
ಜೆಸಿಸಿ(ಜೆ)	4

16 ರೆಡ್ ಅಲರ್ಟ್ ಕ್ಷೇತ್ರಗಳು: (ಕ್ರಿಮಿನಲ್ ಪ್ರಕರಣ ಹೊಂದಿರುವ 3 ಅಥವಾ ಅದಕ್ಕಿಂತ ಹೆಚ್ಚಿನ ಅಭ್ಯರ್ಥಿಗಳು)

ಹಣ ಮತ್ತು ಅಭ್ಯರ್ಥಿಗಳು

253 ಒಟ್ಟು ಕೋಟ್ಯಧಿಪತಿಗಳು



ಅಭ್ಯರ್ಥಿಗಳ ಸರಾಸರಿ ಆಸ್ತಿ ₹ 2 (ಕೋಟಿ)

ಕಾಂಗ್ರೆಸ್	₹13.42 ಕೋಟಿ
ಬಿಜೆಪಿ	₹5.32 ಕೋಟಿ
ಎಎಪಿ	₹2.04 ಕೋಟಿ
ಜೆಸಿಸಿ (ಜೆ)	₹1.53 ಕೋಟಿ

- ಶ್ರೀಮಂತ ಅಭ್ಯರ್ಥಿ: ಟಿ.ಎಸ್.ಸಿಂಗ್ ದೇವ್-ಕಾಂಗ್ರೆಸ್-ಅಂಬಿಕಾಪುರ ₹447.71 ಕೋಟಿ
- ಬಡ ಅಭ್ಯರ್ಥಿ: ರಾಜರತ್ನ ಉಕೆ - ಮುಂಗೇಲಿ - ನ್ಯಾಷನಲ್ ಯೂತ್ ಪಾರ್ಟಿ ₹500
- ಆಸ್ತಿ ಇಲ್ಲವೆಂದು ಘೋಷಿಸಿದ 3 ಅಭ್ಯರ್ಥಿಗಳು

ಮೂಲ: ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್)

ಚುನಾವಣಾ ಕಣದಲ್ಲಿ

- **ಮರುಮತದಾನ:** ಮಿಜೋರಾಂ ನಲ್ಲಿ ಐಜ್ವಾಲ್‌ನ ದಕ್ಷಿಣ–3 ಕ್ಷೇತ್ರದಲ್ಲಿನ ಮುಆಲುಂಗತ್ತು ಮತಗಟ್ಟೆಯಲ್ಲಿ ಶುಕ್ರವಾರ ಮರುಮತದಾನ ನಡೆಯಿತು. 1087 ಮತದಾರರಲ್ಲಿ ಶೇ 87ರಷ್ಟು ಮಂದಿ ಮತ ಚಲಾಯಿಸಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ. 40 ಸದಸ್ಯರ ವಿಧಾನಸಭೆಗೆ ಮಂಗಳವಾರ ಚುನಾವಣೆ ನಡೆದಿತ್ತು. ಶೇ. 80.43ರಷ್ಟು ಮತದಾನ ಆಗಿತ್ತು.
- **ಸಿ.ಎಂ ವಿರುದ್ಧ ಪಕ್ಷೇತರರು:** ರಾಜಸ್ಥಾನದ ಸರ್ದಾರ್‌ಪುರದಲ್ಲಿ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ವಿರುದ್ಧ ಐವರು ಪಕ್ಷೇತರರು ಸ್ಪರ್ಧಿಸಿದ್ದಾರೆ. ಇವರಲ್ಲಿ ಕಾರ್ಮಿಕ, ಬಿಎಸ್ಸಿ, ಬಿಇಡಿ ಪದವೀಧರ, ಕೃಷಿಕ ಮತ್ತು ವಕೀಲ, ರೈತ ಹಾಗೂ ಸಾಮಾಜಿಕ ಕಾರ್ಯಕರ್ತ ಇದ್ದಾರೆ. ನಾಮಪತ್ರ ಸಲ್ಲಿಸಿದ್ದ ಇತರ ನಾಲ್ವರು ಪಕ್ಷೇತರರು ಕಣದಿಂದ ಹಿಂದೆ ಸರಿದಿದ್ದಾರೆ. ಬಿಜೆಪಿ, ಬಿಎಸ್ಪಿ, ಎಎಸ್‌ಪಿ (ಕೆ) ಮತ್ತು ಇಂಡಿಯನ್ ಪೀಪಲ್ಸ್ ಗ್ರೀನ್ ಪಾರ್ಟಿಯ ಅಭ್ಯರ್ಥಿಗಳನ್ನೂ ಗೆಹಲೋತ್ ಎದುರಿಸುತ್ತಿದ್ದಾರೆ.
- **1875 ಅಭ್ಯರ್ಥಿಗಳು ಕಣದಲ್ಲಿ:** ಇದೇ 25ರಂದು ರಾಜಸ್ಥಾನ ವಿಧಾನಸಭೆಗೆ ನಡೆಯಲಿರುವ ಚುನಾವಣೆಯಲ್ಲಿ 1875 ಅಭ್ಯರ್ಥಿಗಳು ಉಳಿದುಕೊಂಡಿದ್ದಾರೆ. ನಾಮಪತ್ರ ವಾಪಸ್ ಪಡೆಯಲು ಕಡೇ ದಿನವಾದ ಗುರುವಾರ 490 ಮಂದಿ ಹಿಂಪಡೆದರು. ಕಣದಲ್ಲಿರುವ ಅಭ್ಯರ್ಥಿಗಳ ಪೈಕಿ 183 ಮಹಿಳೆಯರಿದ್ದರೆ 1692 ಪುರುಷರಿದ್ದಾರೆ.
- **ಇಂದು ಪ್ರಣಾಳಿಕೆ ಬಿಡುಗಡೆ:** ಇದೇ 17ರಂದು ನಡೆಯುವ ಮಧ್ಯಪ್ರದೇಶ ವಿಧಾನಸಭೆ ಚುನಾವಣೆಗಾಗಿ ಬಿಜೆಪಿಯು 11ರಂದು ಶನಿವಾರ ಪ್ರಣಾಳಿಕೆ ಬಿಡುಗಡೆ ಮಾಡಲಿದೆ ಎಂದು ಪಕ್ಷದ ರಾಜ್ಯ ಘಟಕದ ವಕ್ತಾರ ಪಂಕಜ್ ಚತುರ್ವೇದಿ ಹೇಳಿದ್ದಾರೆ. ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ, ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಮತ್ತಿತರ ನಾಯಕರು ಪ್ರಣಾಳಿಕೆ ಬಿಡುಗಡೆ ಮಾಡುವರು ಎಂದು ತಿಳಿಸಿದ್ದಾರೆ.

ನುಡಿ–ಕಿಡಿ



ರಾಜಸ್ಥಾನದಲ್ಲಿ ವಿಶೇಷವಾಗಿ ದಲಿತ ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತಿದೆ. ಆದರೂ ರಾಜಸ್ಥಾನ ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಈ ಬಗ್ಗೆ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಮಾತನಾಡುವುದಿಲ್ಲ. ರಾಜಸ್ಥಾನಕ್ಕೆ ಅವರು ಹೋಗುವುದಿಲ್ಲ, ಅಲ್ಲಿನ ಮುಖ್ಯಮಂತ್ರಿಯನ್ನು ಪ್ರಶ್ನಿಸುವುದಿಲ್ಲ. ಇತರ ರಾಜ್ಯಗಳಿಗೆ ಹೋಗಿ ಅವರು ಉಪನ್ಯಾಸ ಕೊಡುತ್ತಾರೆ.

ನಿರ್ಮಲಾ ಸೀತಾರಾಮನ್, ಕೇಂದ್ರ ಹಣಕಾಸು ಸಚಿವೆ



ಬಿಆರ್‌ಎಸ್, ಕಾಂಗ್ರೆಸ್ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಭ್ರಷ್ಟಾಚಾರ ಮತ್ತು ಹಗರಣದಲ್ಲಿ ಭಾಗಿಯಾಗಿರುವುದೇ ಇವುಗಳ ನೀತಿ ಆಗಿದೆ. ಕಾಲೇಶ್ವರಂ ಯೋಜನೆಯ ಎಲ್ಲಾ ವಿವರಗಳನ್ನು ಪರಿಶೀಲಿಸಿರುವುದಾಗಿ ತೆಲಂಗಾಣ ಮುಖ್ಯಮಂತ್ರಿಯವರು ಹೇಳಿದರೂ ಈ ನೀರಾವರಿ ಯೋಜನೆಯು ವಿಶ್ವದಲ್ಲೇ ಎಂಜಿನಿಯರಿಂಗ್ ವೈಫಲ್ಯದ ಅತಿ ದೊಡ್ಡ ಯೋಜನೆಯಾಗಿ ಹೊರಹೊಮ್ಮಿದೆಯಷ್ಟೆ.

ಅನುರಾಗ್ ಠಾಕೂರ್, ಕೇಂದ್ರ ವಾರ್ತಾ ಸಚಿವ



ಹಸ್ತಲಾಘವ

ಮಧ್ಯಪ್ರದೇಶದ ಮಂಡಲಾ ಜಿಲ್ಲೆಯಲ್ಲಿ ಆಯೋಜಿಸಿದ್ದ ಸಾರ್ವಜನಿಕ ಸಭೆಯಲ್ಲಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಜನರಿಗೆ ಹಸ್ತಲಾಘವ ಮಾಡಿದರು ಪಿಟಿಐ ಚಿತ್ರ

'ಮೋದಿಯಿಂದ ಇಂಥ ಭಾಷೆ ನಿರೀಕ್ಷಿಸಿರಲಿಲ್ಲ'

ಜೈಪುರ (ಪಿಟಿಐ): ರಾಜಸ್ಥಾನ ಸರ್ಕಾರವು ಭಯೋತ್ಪಾದಕರಿಗೆ ಅನುಕಂಪ ತೋರಿಸುತ್ತದೆ ಎಂಬ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಪ್ರಧಾನಿಯಿಂದ ಇಂತಹ ಭಾಷೆ ನಿರೀಕ್ಷಿಸಿರಲಿಲ್ಲ ಎಂದಿದ್ದಾರೆ.

'ಪ್ರಧಾನಿ ಅವರ ಹೇಳಿಕೆ ಒಪ್ಪುವಂಥದ್ದಲ್ಲ. ಈ ರೀತಿಯ ವಾತಾವರಣವನ್ನು ರಾಷ್ಟ್ರದಲ್ಲಿ ಸೃಷ್ಟಿಸಬೇಡಿ ಎಂದು ಪ್ರಧಾನಿ ಅವರಲ್ಲಿ ಕೇಳಿಕೊಳ್ಳುತ್ತೇನೆ' ಎಂದು ಹೇಳಿದ್ದಾರೆ. ಈಚೆಗೆ ಮೋದಿ ಅವರು, ಕಾಂಗ್ರೆಸ್ ಸರ್ಕಾರ ಭಯೋತ್ಪಾದಕರಿಗೆ ಅನುಕಂಪ ತೋರುತ್ತಿರುವುದರಿಂದಲೇ ಕನ್ಹಯ್ಯ ಲಾಲ್ ಹತ್ಯೆಯಂತಹ ಪ್ರಕರಣ ನಡೆಯುತ್ತಿದೆ ಎಂದಿದ್ದರು.

ಕೆಸಿಆರ್‌ಗೆ ಸಿದ್ದರಾಮಯ್ಯ ಪಂಥಾಹ್ವಾನ

ಪ್ರಜಾವಾಣಿ ವಾರ್ತೆ

ಕಾಮಾರೆಡ್ಡಿ (ತೆಲಂಗಾಣ): 'ಗ್ಯಾರಂಟಿ ಯೋಜನೆಗಳ ಯಶೋಗಾಥೆ ತಿಳಿಯಲು ಕರ್ನಾಟಕಕ್ಕೆ ಬನ್ನಿ. ನಂತರ ಮುಕ್ತ ಚರ್ಚೆ ಮಾಡೋಣ' ಎಂದು ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್ ಅವರಿಗೆ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಪಂಥಾಹ್ವಾನ ನೀಡಿದರು.

ತೆಲಂಗಾಣ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ರೇವಂತ್ ರೆಡ್ಡಿ ಸ್ಪರ್ಧಿಸಿರುವ ಕಾಮಾರೆಡ್ಡಿ ವಿಧಾನಸಭಾ ಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ 'ಹಿಂದುಳಿದ ವರ್ಗಗಳ ನಿರ್ಣಯ' ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

'ಕರ್ನಾಟಕದಲ್ಲಿ ಗ್ಯಾರಂಟಿ ಯೋಜನೆಗಳು ಜಾರಿಯೇ ಆಗಿಲ್ಲ ಎಂದು ಮುಖ್ಯಮಂತ್ರಿ ಚಂದ್ರಶೇಖರ್ ರಾವ್ ಸರಣಿ ಸುಳ್ಳುಗಳನ್ನು ಹೇಳುತ್ತಿದ್ದಾರೆ. ಕರ್ನಾಟಕದಲ್ಲಿ ನಾವು ಚುನಾವಣಾ ಪೂರ್ವದಲ್ಲಿ ನೀಡಿದ್ದ ಗ್ಯಾರಂಟಿ ಭರವಸೆಗಳನ್ನು ಅಧಿಕಾರಕ್ಕೆ ಬಂದ 100 ದಿನಗಳಲ್ಲಿ ಜಾರಿ ಮಾಡಿದ್ದೇವೆ. ತೆಲಂಗಾಣದಲ್ಲೂ ಒಂದು ಬೋನಸ್ ಸೇರಿ ಆರು ಗ್ಯಾರಂಟಿಗಳನ್ನು ಜಾರಿಗೊಳಿಸುವ ಭರವಸೆ ನೀಡುತ್ತೇವೆ' ಎಂದರು.

ಬಿಜೆಪಿ ಮತ್ತು ಬಿಆರ್‌ಸಿ ಎರಡೂ ಒಂದೇ. ಬಿಆರ್‌ಸಿ ತೆಲಂಗಾಣದಲ್ಲಿ ಬಿಜೆಪಿಯ ಬಿ ಟೀಮ್ ಆಗಿ ಕೆಲಸ ಮಾಡುತ್ತಿದೆ. ತೆಲಂಗಾಣದ ಜನರು ಕೆಸಿಎಆರ್ ಮತ್ತು ಮೋದಿ ಅವರ ಮಕ್ಮಲ್ ಟೋಪಿಗೆ ಈ ಬಾರಿ ತಲೆಬಾಗುವುದಿಲ್ಲ ಎಂಬ ನಂಬಿಕೆ ಇದೆ ಎಂದರು.

ಕೆಸಿಆರ್ ಹತ್ತು ವರ್ಷ ಅಧಿಕಾರದಲ್ಲಿದ್ದರೂ ತೆಲಂಗಾಣ ಅಭಿವೃದ್ಧಿ ಮಾಡಲಿಲ್ಲ. ಭ್ರಷ್ಟಾಚಾರದಲ್ಲಿ ಮುಳುಗಿದರು. ಪ್ರಧಾನಿ ಮೋದಿಯೂ ದೇಶದ ಆರ್ಥಿಕತೆಯನ್ನು ಹಳ್ಳ ಹಿಡಿಸಿದರು. ಇದನ್ನು ಕರ್ನಾಟಕದ ಜನರು ಅರ್ಥ ಮಾಡಿಕೊಂಡು ಜಾಗೃತರಾದರು. ತೆಲಂಗಾಣದ ಜನರೂ ಅರ್ಥ ಮಾಡಿಕೊಳ್ಳಬೇಕು ಎಂದು ಕೋರಿದರು.

ನರೇಂದ್ರ ಮೋದಿ ಕರ್ನಾಟಕಕ್ಕೂ 48 ಬಾರಿ ಚುನಾವಣಾ ಪ್ರಚಾರಕ್ಕೆ ಬಂದಿದ್ದರು. ಅವರು ಪ್ರಚಾರ ಮಾಡಿದ ಕ್ಷೇತ್ರಗಳಲ್ಲಿ ಬಿಜೆಪಿ ಹೀನಾಯವಾಗಿ ಸೋತಿದೆ. ನೂರು ಬಾರಿ ತೆಲಂಗಾಣಕ್ಕೆ ಪ್ರಚಾರಕ್ಕೆ ಬಂದರೂ ಇಲ್ಲಿ ಬಿಜೆಪಿ ಗೆಲ್ಲುವುದಿಲ್ಲ. ಬಿಜೆಪಿ ಅಭ್ಯರ್ಥಿಗಳು ಠೇವಣಿ ಕಳೆದುಕೊಳ್ಳುತ್ತಾರೆ ಎಂದರು.

ತೆಲಂಗಾಣ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರೇವಂತ್ ರೆಡ್ಡಿ ಇದ್ದರು.

ಬಿ.ಸಿಗೆ ₹20,000 ಕೋಟಿ ಮೀಸಲು (ಹೈದರಾಬಾದ್ ವರದಿ): ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಹಿಂದುಳಿದ ವರ್ಗಗಳ (ಬಿ.ಸಿ) ಕಲ್ಯಾಣಕ್ಕೆ ವಾರ್ಷಿಕ ₹ 20,000 ಕೋಟಿ ಮೀಸಲಿಡಲಾಗುವುದು ಎಂದು ಪಕ್ಷ ಹೇಳಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಯೋಜನೆಗಳನ್ನು ಒಳಗೊಂಡ 'ಬಿ.ಸಿ ಘೋಷಣೆ'ಯನ್ನು ಕಾಮಾರೆಡ್ಡಿಯಲ್ಲಿ ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆಗೊಳಿಸಿದರು.

ಜಾತಿ ಗಣತಿ ಆಧರಿಸಿ ಹಿಂದುಳಿದ ವರ್ಗಗಳ ಮೀಸಲಾತಿಯನ್ನು ಹೆಚ್ಚಿಸುವುದಾಗಿ ಮತ್ತು ಅಧಿಕಾರಕ್ಕೆ ಬಂದ ಆರು ತಿಂಗಳುಗಳಲ್ಲಿ ಹಿಂದುಳಿದ ವರ್ಗಗಳ ಆಯೋಗದ ವರದಿಯನ್ನು ಬಿಡುಗಡೆ ಮಾಡುವುದಾಗಿ ಕಾಂಗ್ರೆಸ್ ಭರವಸೆ ನೀಡಿದೆ. ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ವಾರ್ಷಿಕ ₹ 4,000 ಕೋಟಿ ಬಜೆಟ್ ರೂಪಿಸಲಾಗುವುದು ಅಲ್ಲದೆ ಆರು ತಿಂಗಳಲ್ಲಿ ಜಾತಿ ಗಣತಿ ನಡೆಸಲಾಗುವುದು ಎಂದು ತೆಲಂಗಾಣ ಕಾಂಗ್ರೆಸ್ ಅಲ್ಪಸಂಖ್ಯಾತರಿಗಾಗಿ ಗುರುವಾರ ಬಿಡುಗಡೆ ಮಾಡಿರುವ ಘೋಷಣೆಗಳಲ್ಲಿ ಆಶ್ವಾಸನೆ ನೀಡಿತ್ತು.



ತೆಲಂಗಾಣದ ಕಾಮಾರೆಡ್ಡಿ ವಿಧಾನಸಭಾ ಕ್ಷೇತ್ರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ಹಿಂದುಳಿದ ವರ್ಗಗಳ ನಿರ್ಣಯ' ಸಮಾವೇಶದಲ್ಲಿ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗವಹಿಸಿದ್ದರು.

'ಸಿದ್ದರಾಮಯ್ಯಗೆ ಟೀಕಿಸುವ ಹಕ್ಕಿಲ್ಲ'

ನಿಜಾಮಾಬಾದ್(ಪಿಟಿಐ): ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ (ಕೆಸಿಆರ್) ಅವರನ್ನು ಟೀಕಿಸುವ ಹಕ್ಕು ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಇಲ್ಲ ಎಂದು ವಿಧಾನ ಪರಿಷತ್ ಸದಸ್ಯೆ ಕೆ.ಕವಿತಾ ಹೇಳಿದ್ದಾರೆ.

ರಾವ್ ಕುರಿತ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್‌ನ ಭರವಸೆಗಳು ಮತ್ತು ಯೋಜನೆಗಳಿಗಿಂತ ಭಿನ್ನವಾಗಿ, ಬಿಆರ್‌ಎಸ್ ಸರ್ಕಾರ ತೆಲಂಗಾಣದ ಹಿಂದುಳಿದ ಸಮುದಾಯ ಮಾತ್ರವಲ್ಲದೆ ಸಮಾಜದ ಪ್ರತಿಯೊಂದು ವರ್ಗದ ಅಭಿವೃದ್ಧಿಗೆ ನಿರಂತರವಾಗಿ ಕೊಡುಗೆ ನೀಡಿದೆ ಎಂದು ಹೇಳಿದರು. ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದ್ದ ಸಿದ್ದರಾಮಯ್ಯ ಅವರು ಪ್ರಧಾನಿ ನರೇಂದ್ರ ಮೋದಿ ಮತ್ತು ಚಂದ್ರಶೇಖರ ರಾವ್ ವಿರುದ್ಧ ವಾಗ್ದಾಳಿ ನಡೆಸಿದ್ದರು.

ಟೀಕೆ: ಕಾಂಗ್ರೆಸ್ 'ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಘೋಷಣೆ' ಯಡಿ ಹಲವು ಕಾರ್ಯಕ್ರಮ ರೂಪಿಸಿರುವುದರ ವಿರುದ್ಧವೂ ಟೀಕಿಸಿದ ಆಡಳಿತಾರೂಢ ಬಿಆರ್‌ಎಸ್, ಮೀಸಲಾತಿ ಉದ್ದೇಶಕ್ಕಾಗಿ ಜಾತಿಗಣತಿ ನಡೆಸುವ ಮತ್ತು ಅಲ್ಪಸಂಖ್ಯಾತರನ್ನು ಹಿಂದುಳಿದ ವರ್ಗಗಳೊಂದಿಗೆ ಸೇರಿಸುವ ಕಾಂಗ್ರೆಸ್ ಪ್ರಸ್ತಾವ ಸಮುದಾಯಗಳ ನಡುವೆ ಬಿರುಕು ಸೃಷ್ಟಿಸುತ್ತದೆ ಎಂದು ಆರೋಪಿಸಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಬಿಆರ್‌ಎಸ್ ಕಾರ್ಯಕಾರಿ ಅಧ್ಯಕ್ಷ ಕೆ.ಟಿ.ರಾಮರಾವ್, 'ಆರು ತಿಂಗಳೊಳಗೆ ಜಾತಿಗಣತಿ ನಡೆಸಿ ಮತ್ತು ಅಲ್ಪಸಂಖ್ಯಾತರು ಸೇರಿದಂತೆ ಎಲ್ಲಾ ಹಿಂದುಳಿದ ವರ್ಗಗಳಿಗೆ ಉದ್ಯೋಗ, ಶಿಕ್ಷಣ ಮತ್ತು ಸರ್ಕಾರಿ ಕಲ್ಯಾಣ ಯೋಜನೆಗಳಲ್ಲಿ ನ್ಯಾಯಯುತ ಮೀಸಲಾತಿ ಖಚಿತಪಡಿಸಿಕೊಳ್ಳಬೇಕು' ಎಂದು ಹೇಳಿದರು.

ಚಂದ್ರಶೇಖರ ರಾವ್ ಆಸ್ತಿ ಮೌಲ್ಯ ₹59 ಕೋಟಿ

ಹೈದರಾಬಾದ್ (ಪಿಟಿಐ): ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರು ತಮ್ಮ ಅವಿಭಜಿತ ಕುಟುಂಬದ ಆಸ್ತಿ ₹ 59 ಕೋಟಿ ಮೌಲ್ಯ ಎಂದು ಘೋಷಿಸಿದ್ದಾರೆ. ₹ 25 ಕೋಟಿ ಸಾಲ ಇರುವುದಾಗಿ ಹೇಳಿದ್ದಾರೆ.

ಇದೇ 30ರಂದು ನಡೆಯಲಿರುವ ವಿಧಾನಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸುವ ವೇಳೆ ಗುರುವಾರ ಸಲ್ಲಿಸಿದ ಅಫಿಡವಿಟ್ ಪ್ರಕಾರ, ಅವರು ಸ್ವಂತ ಕಾರನ್ನು ಹೊಂದಿಲ್ಲ.

ಅವರ ವಿರುದ್ಧ ಒಂಬತ್ತು ಪ್ರಕರಣಗಳು ಬಾಕಿ ಉಳಿದಿವೆ. ಎಲ್ಲವೂ ತೆಲಂಗಾಣ ರಾಜ್ಯ ಆಂದೋಲನದ ಸಮಯದಲ್ಲಿ ದಾಖಲಾಗಿವೆ.

ಅವರ ಪತ್ನಿ ಶೋಭಾ ಅವರ ಹೆಸರಿನಲ್ಲಿರುವ ಒಟ್ಟು ಚರಾಸ್ತಿಗಳ ಮೌಲ್ಯ ಸುಮಾರು ಏಳು ಕೋಟಿ ರೂಪಾಯಿ. ಅವರ ಅವಿಭಜಿತ ಕುಟುಂಬದ ಹೆಸರಿನಲ್ಲಿ ಒಂಬತ್ತು ಕೋಟಿ ರೂಪಾಯಿ ಮೌಲ್ಯದ ಚರಾಸ್ತಿ ಇದೆ. ಪತ್ನಿ ಶೋಭಾ ಬಳಿ ಸುಮಾರು ₹1.5 ಕೋಟಿ ಮೌಲ್ಯದ 2.81 ಕೆಜಿ ಚಿನ್ನಾಭರಣ, ವಜ್ರ ಮತ್ತು ಇತರ ಬೆಲೆಬಾಳುವ ವಸ್ತುಗಳು ಇವೆ. ರಾವ್ ಅವರ ಹೆಸರಿನಲ್ಲಿರುವ ಸ್ಥಿರಾಸ್ತಿಗಳ ಒಟ್ಟು ಮಾರುಕಟ್ಟೆ ಮೌಲ್ಯ ಸುಮಾರು ₹8.50 ಕೋಟಿಗಳಾಗಿದ್ದು, ಅವಿಭಜಿತ ಕುಟುಂಬದ ಹೆಸರಿನಲ್ಲಿ ಸುಮಾರು ₹15ಕೋಟಿ ಮೌಲ್ಯದ ಆಸ್ತಿ ಇದೆ.

ಆದಾಯ ತೆರಿಗೆ ರಿಟರ್ನ್ಸ್ ಪ್ರಕಾರ, ರಾವ್ ಅವರ ಒಟ್ಟು ಆದಾಯವು 2023ರ ಮಾರ್ಚ್ 31ರ ವೇಳೆಗೆ ₹1.60 ಕೋಟಿ ಇದ್ದರೆ 2019ರ ಮಾರ್ಚ್ 31ರ ಅನ್ವಯ ₹ 1.74 ಕೋಟಿ ಇದೆ.

ರಾವ್ ಅವರು ಕೃಷಿಕರು. ಬಿ.ಎ ಪದವೀಧರರು ಎಂದು ಅಫಿಡವಿಟ್‌ನಲ್ಲಿ ಹೇಳಲಾಗಿದೆ.

ರಾವ್ ಅವರ ಮಗ ಬಿಆರ್‌ಎಸ್ ಕಾರ್ಯಾಧ್ಯಕ್ಷ ಕೆ.ಟಿ. ರಾಮರಾವ್ ಅವರು ತಮ್ಮ ನಾಮಪತ್ರ ಸಲ್ಲಿಸುವ ವೇಳೆ ಒಟ್ಟು ₹ 54.27 ಕೋಟಿ ಮೌಲ್ಯದ ಆಸ್ತಿ ಹೊಂದಿರುವುದಾಗಿ ಅಫಿಡವಿಟ್‌ನಲ್ಲಿ ತಿಳಿಸಿದ್ದಾರೆ.

ಕೆಲಸ ಮಾಡಿ, ಹೊಣೆ ಹೊರಿಸಬೇಡಿ: 'ಸುಪ್ರೀಂ'

ನವದೆಹಲಿ (ಪಿಟಿಐ): 'ರಾಜಧಾನಿಯಲ್ಲಿ ವಾಯು ಮಾಲಿನ್ಯವನ್ನು ತಡೆಯುವ ನಿಟ್ಟಿನಲ್ಲಿ ಕೆಲಸ ಮಾಡದೇ ಸಂಪೂರ್ಣ ಹೊಣೆಯನ್ನು ಕೋರ್ಟ್‌ನ ಮೇಲೆ ಹೊರಿಸ ಬೇಡಿ' ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ದೆಹಲಿ ಸರ್ಕಾರಕ್ಕೆ ತಿಳಿಸಿತು.

'ಮಾಲಿನ್ಯ ತಡೆ ಕ್ರಮವಾಗಿ ದೆಹಲಿಯಲ್ಲಿ ಸಮ–ಬೆಸ ಸಂಖ್ಯೆಗಳ ಆಧಾರದಲ್ಲಿ ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸುವ ತೀರ್ಮಾನ ರಾಜ್ಯ ಸರ್ಕಾರದ್ದೇ ಆಗಿದೆ. ಈ ಕುರಿತು ಕೋರ್ಟ್ ಯಾವುದೇ ನಿರ್ದೇಶನ ನೀಡುವುದಿಲ್ಲ' ಎಂದೂ ನ್ಯಾಯಪೀಠ ಸ್ಪಷ್ಟಪಡಿಸಿತು.

ವಾಯು ಗುಣಮಟ್ಟ ಕುರಿತ ವಿಷಯದ ವಿಚಾರಣೆ ನಡೆಸುತ್ತಿದ್ದ ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್ ನೇತೃತ್ವದ ಪೀಠ, 'ಸಮ–ಬೆಸ ಸಂಖ್ಯೆ ಆಧರಿತ ಯೋಜನೆಗೂ ಕೋರ್ಟ್‌ಗೂ ಸಂಬಂಧವಿಲ್ಲ. ನೆರೆ ರಾಜ್ಯಗಳಿಂದ ದೆಹಲಿಗೆ ಬರುವ ಟ್ಯಾಕ್ಸಿಗಳಿಗೆ ಇದು ಅನ್ವಯಿಸಬೇಕು ಎಂದೂ ಕೋರ್ಟ್ ಎಂದಿಗೂ ಹೇಳಿಲ್ಲ' ಎಂದು ಸ್ಪಷ್ಟ ಮಾತುಗಳಲ್ಲಿ ತಿಳಿಸಿತು.

ಮುಂದೂಡಿಕೆ: ಇದರ ಬೆನ್ನಲ್ಲೇ ದೆಹಲಿಯಲ್ಲಿ ಸಮ–ಬೆಸ ಸಂಖ್ಯೆಗಳ ಆಧಾರದಲ್ಲಿ ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸುವ ಯೋಜನೆ ಜಾರಿಯನ್ನು ದೆಹಲಿ ಸರ್ಕಾರ ಮುಂದೂಡಿದೆ.

ವಾಯು ಗುಣಮಟ್ಟ ಸುಧಾರಣೆ: ದೆಹಲಿಯಲ್ಲಿ ಶುಕ್ರವಾರ ಮಧ್ಯಾಹ್ನ ಅಕಾಲಿಕವಾಗಿ ಮಳೆಯಾಗಿದ್ದು, ವಾಯು ಗುಣಮಟ್ಟದಲ್ಲಿ ಗಣನೀಯ ಸುಧಾರಣೆ ಕಂಡುಬಂದಿತು.

ಇಬ್ಬರು ಪತ್ರಕರ್ತರಿಗೆ 'ಸುಪ್ರಿಂ' ರಕ್ಷಣೆ



ಅದಾನಿ ಸಮೂಹದ ಕುರಿತು ಬರೆದಿದ್ದಾರೆ ಎನ್ನಲಾದ ಲೇಖನಕ್ಕೆ ಸಂಬಂಧಿಸಿದಂತೆ ಇಬ್ಬರು ಪತ್ರಕರ್ತರಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ಬಂಧನದಿಂದ ರಕ್ಷಣೆ ನೀಡಿದೆ.

ಲೇಖನಕ್ಕೆ ಸಂಬಂಧಿಸಿದಂತೆ ಬೆಂಜಮಿನ್ ನಿಕೋಲಸ್ ಬ್ರೂಕ್ ಪಾರ್ಕಿನ್ ಮತ್ತು ಕ್ಲೋಯ್ ನೀನಾ ಕಾರ್ನಿಷ್ ಅವರಿಗೆ ಗುಜರಾತ್ ಪೊಲೀಸರು ಸಮನ್ಸ್ ನೀಡಿದ್ದರು. ಈ ಹಿನ್ನೆಲೆಯಲ್ಲಿ ಇಬ್ಬರೂ ಸುಪ್ರೀಂ ಕೋರ್ಟ್ ಮೊರೆಹೋಗಿದ್ದರು.

ಉತ್ತರ ಪ್ರದೇಶ ಸರ್ಕಾರಕ್ಕೆ ತರಾಟೆ

ಮುಸ್ಲಿಂ ವಿದ್ಯಾರ್ಥಿಗೆ ಸಹಪಾಠಿಯಿಂದ ಶಿಕ್ಷಕಿಯೊಬ್ಬರು ಕಪಾಳಕ್ಕೆ ಹೊಡೆಸಿದ್ದ ಪ್ರಕರಣದಲ್ಲಿ ತನ್ನ ಆದೇಶ ಪಾಲಿಸದ ಉತ್ತರ ಪ್ರದೇಶ ಸರ್ಕಾರವನ್ನು ಸುಪ್ರೀಂ ಕೋರ್ಟ್ ಶುಕ್ರವಾರ ತರಾಟೆಗೆ ತೆಗೆದುಕೊಂಡಿದೆ.

ಸಂತ್ರಸ್ತ ವಿದ್ಯಾರ್ಥಿ ಮತ್ತು ಕಪಾಳಕ್ಕೆ ಹೊಡಿದಿದ್ದ ಸಹಪಾಠಿಗೆ ಆಪ್ತ ಸಮಾಲೋಚನೆ ಒದಗಿಸಲು ಏಜೆನ್ಸಿಯನ್ನು ನೇಮಿಸುವಂತೆ ನೀಡಿದ್ದ ಆದೇಶವನ್ನು ಪಾಲಿಸದ ಸರ್ಕಾರದ ನಡೆಯನ್ನು ಕೋರ್ಟ್ ಖಂಡಿಸಿದೆ.

ನ್ಯಾಯಮೂರ್ತಿ ಅಭಯ್ ಎಸ್ ಓಕಾ ಮತ್ತು ಪಂಕಜ್ ಮಿತ್ತಲ್ ಅವರಿದ್ದ ಪೀಠ, ನ್ಯಾಯಾಲಯ ಯಾವುದೇ ಕಠಿಣ ಕ್ರಮ ಕೈಗೊಳ್ಳಬಾರದು ಎಂದಾದರೆ ಮುಂದಿನ ವಿಚಾರಣೆಗೆ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಖುದ್ದು ಹಾಜರಾಗಬೇಕು ಎಂದು ತಾಕೀತು ಮಾಡಿತು.

ಹಿಂದುತ್ವ ರಕ್ಷಣೆಗೆ ನಿಯಮ: ಅರ್ಜಿ ವಜಾ

ಭಾರತದಲ್ಲಿ ಹಿಂದುತ್ವದ 'ರಕ್ಷಣೆ'ಗಾಗಿ ಮಾರ್ಗದರ್ಶಿ ಸೂತ್ರಗಳನ್ನು ರಚಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾ ಮಾಡಿತು.

ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್ ನೇತೃತ್ವದ ನ್ಯಾಯಪೀಠವು, 'ಇಂಥ ಮನವಿಗಳನ್ನು ಒಳಗೊಂಡ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಪುರಸ್ಕರಿಸುವುದಿಲ್ಲ' ಎಂದು ಸ್ಪಷ್ಟಪಡಿಸಿತು.

ರಶ್ಮಿಕಾ ಡೀಪ್‌ಫೇಕ್ ವಿಡಿಯೊ: ವರದಿ ಕೇಳಿದ ಡಿಸಿಡಬ್ಲ್ಯು

ನವದೆಹಲಿ (ಪಿಟಿಐ): ನಟಿ ರಶ್ಮಿಕಾ ಮಂದಣ್ಣ ಅವರ ಡೀಪ್‌ಫೇಕ್ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿರುವ ವಿಚಾರವನ್ನು ಸ್ವಯಂ ಪ್ರೇರಿತವಾಗಿ ಗಣನೆಗೆ ತೆಗೆದುಕೊಂಡಿರುವ ದೆಹಲಿ ಮಹಿಳಾ ಆಯೋಗವು (ಡಿಸಿಡಬ್ಲ್ಯು), ಈ ಕುರಿತು ಕೈಗೊಂಡಿರುವ ಕ್ರಮಗಳ ಬಗ್ಗೆ ವರದಿ ಸಲ್ಲಿಸುವಂತೆ ದೆಹಲಿ ಪೊಲೀಸರಿಗೆ ಶುಕ್ರವಾರ ನೋಟಿಸ್ ನೀಡಿದೆ.

ಮಾಧ್ಯಮಗಳಲ್ಲಿ ಪ್ರಕಟವಾಗಿರುವ ವರದಿಗಳನ್ನು ಆಧರಿಸಿ ಡಿಸಿಡಬ್ಲ್ಯು ವರದಿ ಕೇಳಿದೆ ಎಂದು ಮೂಲಗಳು ತಿಳಿಸಿವೆ. 'ಡೀಪ್‌ಫೇಕ್ ವಿಡಿಯೊ ಜಾಲತಾಣ ಗಳಲ್ಲಿ ಹರಿದಾಡಿರುವ ಬಗ್ಗೆ ರಶ್ಮಿಕಾ ಕಳವಳ ವ್ಯಕ್ತಪಡಿಸಿದ್ದಾರೆ. ಇದು ಗಂಭೀರ ಪ್ರಕರಣವಾಗಿದ್ದರೂ ಈವರೆಗೆ ಯಾರನ್ನೂ ಬಂಧಿಸಲಾಗಿಲ್ಲ' ಎಂದು ನೋಟಿಸ್‌ನಲ್ಲಿ ಹೇಳಲಾಗಿದೆ.

ಭಾರತ–ಅಮೆರಿಕ ವಿದೇಶಾಂಗ, ರಕ್ಷಣಾ ಸಚಿವರ ಮಾತುಕತೆ

ರಕ್ಷಣೆ, ತಂತ್ರಜ್ಞಾನ: ಪಾಲುದಾರಿಕೆಗೆ ಆದ್ಯತೆ

ನವದೆಹಲಿ (ಪಿಟಿಐ): ರಕ್ಷಣಾ ಪರಿಕರಗಳ ಉತ್ಪಾದನೆ, ಖನಿಜಯುಕ್ತ ಸಂಪನ್ಮೂಲ, ಉನ್ನತ ತಂತ್ರಜ್ಞಾನ ಕ್ಷೇತ್ರಗಳನ್ನು ಕೇಂದ್ರೀಕರಿಸಿ ಜಾಗತಿಕ ಕಾರ್ಯತಂತ್ರ ಪಾಲುದಾರಿಕೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಭಾರತ ಮತ್ತು ಅಮೆರಿಕ ಶುಕ್ರವಾರ ವಿಸ್ತೃತ ಚರ್ಚೆ ನಡೆಸಿದವು.

ಇಸ್ರೇಲ್-ಹಮಾಸ್ ಸಂಘರ್ಷ ಮತ್ತು ಇಂಡೋ-ಪೆಸಿಫಿಕ್‌ನಲ್ಲಿ ಚೀನಾದ ಸೇನೆಯು ಬಲಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಈ ಕ್ಷೇತ್ರಗಳತ್ತ ಹೆಚ್ಚಿನ ಗಮನಹರಿಸಲು ಉಭಯ ರಾಷ್ಟ್ರಗಳು ಒತ್ತು ನೀಡಿವೆ.

ರಷ್ಯಾ-ಉಕ್ರೇನ್ ಯುದ್ಧ, ಪಶ್ಚಿಮ ಏಷ್ಯಾದಲ್ಲಿ ಹಮಾಸ್ ಮತ್ತು ಇಸ್ರೇಲ್ ನಡುವೆ ಹೆಚ್ಚುತ್ತಿರುವ ಸಂಘರ್ಷದಿಂದ ರಾಜಕೀಯ ಪ್ರಕ್ಷುಬ್ಧತೆಯ ನಡುವೆ ಭಾರತ-ಅಮೆರಿಕದ ವಿದೇಶಾಂಗ ಮತ್ತು ರಕ್ಷಣಾ ಸಚಿವರ ಮಾತುಕತೆ ನಡೆಯಿತು.

ಅಮೆರಿಕದ ನಿಯೋಗದ ನೇತೃತ್ವವನ್ನು ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕೆನ್ ಮತ್ತು ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್ ವಹಿಸಿದ್ದರೆ, ವಿದೇಶಾಂಗ ಸಚಿವ ಎಸ್. ಜೈಶಂಕರ್ ಮತ್ತು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಭಾರತದ ನಿಯೋಗದ ನೇತೃತ್ವ ವಹಿಸಿದ್ದರು.

ಭಾರತ ಮತ್ತು ಅಮೆರಿಕ ನಡುವಿನ ಪಾಲುದಾರಿಕೆಯನ್ನು ಬಲಪಡಿಸುವುದು ಹಾಗೂ ಜಾಗತಿಕ ಅಗತ್ಯಗಳಿಗೆ ಸ್ಪಂದಿಸುವುದಕ್ಕೆ ಸಂಬಂಧಿಸಿ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರ ದೂರದೃಷ್ಟಿಯನ್ನು ಸಾಕಾರಗಳಿಸಲು ಈ ಮಾತುಕತೆಯು ಅವಕಾಶ ಒದಗಿಸಿದೆ ಎಂದು ಜೈಶಂಕರ್ ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ಅಭಿಪ್ರಾಯಪಟ್ಟರು.

'ಅಮೆರಿಕ– ಭಾರತವು ದೃಢವಾದ ಪಾಲುದಾರಿಕೆ ಹೊಂದಿವೆ. ನಾವು ಅಂತರರಾಷ್ಟ್ರೀಯ ಶಾಂತಿ, ಭದ್ರತೆ ಮತ್ತು ಸಾರ್ವಭೌಮತ್ವ, ಪ್ರಾದೇಶಿಕ ಸಮಗ್ರತೆ ಮತ್ತು ಸ್ವಾತಂತ್ರ್ಯದ ತತ್ವಗಳನ್ನು ಎತ್ತಿಹಿಡಿಯಲು ಕೆಲಸ ಮಾಡುತ್ತಿದ್ದೇವೆ. ನಮ್ಮ ರಕ್ಷಣಾ ಸಹಕಾರವು ಆ ಕೆಲಸದ ಪ್ರಮುಖ ಆಧಾರಸ್ತಂಭವಾಗಿದೆ' ಎಂದು ಬ್ಲಿಂಕೆನ್ ಹೇಳಿದರು.

ಈ ವರ್ಷದ ಪ್ರಮುಖ ಅಂಶವೆಂದರೆ ಜೂನ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಅಮೆರಿಕ ಭೇಟಿ ಎರಡೂ ದೇಶಗಳ ನಡುವಿನ ಸಂಬಂಧದಲ್ಲಿ ಹೊಸ ಅಧ್ಯಾಯ ತೆರೆದಿದೆ. ಸೆಪ್ಟೆಂಬರ್‌ನಲ್ಲಿ ಅಧ್ಯಕ್ಷ ಬೈಡನ್ ಅವರ ದೆಹಲಿ ಭೇಟಿ ಸಹ ಸಕಾರಾತ್ಮಕ ಪಥಕ್ಕೆ ಅಪಾರ ಕೊಡುಗೆ ನೀಡಿದೆ ಎಂದಿದ್ದಾರೆ.

'ಭಾರತ– ಅಮೆರಿಕದ ದ್ವಿಪಕ್ಷೀಯ ಕಾರ್ಯಸೂಚಿಯ ಎಲ್ಲಾ ಅಂಶಗಳಲ್ಲಿ ನಾವು ವೇಗವಾಗಿ ದಾಪುಗಾಲು ಹಾಕುತ್ತಿದ್ದೇವೆ. ನಮ್ಮ ವ್ಯಾಪಾರ ವಹಿವಾಟು ಇಂದು 200 ಬಿಲಿಯನ್ ಡಾಲರ್‌ಗಿಂತ ಹೆಚ್ಚಾಗಿದೆ, ವಿದೇಶಿ ನೇರ ಬಂಡವಾಳ (ಎಫ್‌ಡಿಐ) ಎರಡೂ ಕಡೆಯಿಂದಲೂ ಹೆಚ್ಚುತ್ತಿದೆ ಎಂದು ಜೈಶಂಕರ್ ಹೇಳಿದರು.

'ವಿವಿಧ ಭೌಗೋಳಿಕ ರಾಜಕೀಯ ಸವಾಲುಗಳ ಹೊರತಾಗಿಯೂ, ಪ್ರಮುಖ ಮತ್ತು ದೀರ್ಘಕಾಲೀನ ವಿಷಯಗಳ ಮೇಲೆ ನಮ್ಮ ಗಮನ ಕೇಂದ್ರೀಕರಿಸಬೇಕಾಗಿದೆ. ಮುಕ್ತ ಮತ್ತು ನಿಯಮಬದ್ಧ ಇಂಡೋ-ಪೆಸಿಫಿಕ್ ಪ್ರದೇಶ ಖಚಿತಪಡಿಸಿಕೊಳ್ಳಲು ನಮ್ಮ ಪಾಲುದಾರಿಕೆ ನಿರ್ಣಾಯಕವಾಗಿದೆ' ಎಂದು ರಾಜನಾಥ್ ಸಿಂಗ್ ತಿಳಿಸಿದರು.

ದೀಪಗಳ ಸಾಲು, ಹೊಸ ಬಟ್ಟೆ, ಹೊಸ ಆಭರಣ ಇವೆಲ್ಲಕ್ಕೂ ಭಿನ್ನವಾಗಿ ನೆಲದ ಸಂಸ್ಕೃತಿಯ ದೀವಳಿಗೆ ಇದೆ. ರೈತಮಿತ್ರರಾದ ರಾಸುಗಳನ್ನು ತೊಳೆದು, ಅಲಂಕರಿಸಿ, ಪೂಜಿಸಿ, ನೈವೇದ್ಯ ನೀಡಿ, ಸಂಪ್ರೀತಗೊಳಿಸುತ್ತಾರೆ. ಸಾಹಸಿ ಗೌಳಿಗರು ಇವನ್ನು ಓಡಾಡಿಸಿ, ಚುಮುಚುಮು ಚಳಿಗಾಲಕ್ಕೆ ಸನ್ನದ್ಧರಾಗಿಸುತ್ತಾರೆ.ಮಹಾಲಿಂಗ ಗಂಗೆಯನು ವರಿಸಲೆಂದೇ ನೀರು ತುಂಬುತ್ತಾರೆ. ಭೂಮಿಗಾಗಿ ಹೊಡೆದಾಡಿದ ಪಾಂಡವರನ್ನು ಹೆಂಡಿಯೊಳಗೆ ಮಾಡಿ ಕೂರಿಸುತ್ತಾರೆ. ನಂತರ ಅವರು ಹೊಲದ ಮಣ್ಣಿನ ಪಾಲಾಗುತ್ತಾರೆ. ಮೆರೆದವರೆಲ್ಲ ಮಣ್ಣಾಗಬೇಕು ಎಂಬ ಸಂದೇಶದೊಂದಿಗೆ ಯಾವುದೂ ಶಾಶ್ವತವಲ್ಲ ಎಂಬ ಬೆಳಕಿನ ಕುಡಿಯೊಂದನ್ನು ಬೆಳಗುತ್ತಾರೆ. ಗ್ರಾಮದ ಎಲ್ಲ ಜನಾಂಗದವರೂ ಸೇರಿ ಆಚರಿಸುವ ಶ್ರಮಸಂಸ್ಕೃತಿಯ ವೈವಿಧ್ಯಮಯ ಆಚರಣೆಯ ತುಣುಕುಗಳು ಇಲ್ಲಿವೆ.





ಎಮ್ಮೆಯೇ ನಮ್ಮನೆ ದೇವರು...

ನಾಗರಾಜ ಬಿ.ಎನ್

ಐದು-ಆರು ತಲೆ ಮಾರುಗಳಿಂದ ಎಮ್ಮೆಗಳನ್ನು ಸಾಕುತ್ತ, ಅದರಿಂದಲೇ ಬದುಕು ಕಂಡುಕೊಂಡಿದ್ದೇವೆ. ದೀಪಾವಳಿ ಹಬ್ಬ ಎಂದರೆ ಗೌಳಿಗರಿಗೆ ಎಮ್ಮೆಗಳ ಹಬ್ಬ. ಅವುಗಳನ್ನು ಸಿಂಗರಿಸಿ, ಪೂಜೆ ಸಲ್ಲಿಸಿ ಮೃಷ್ಟಾನ್ನ ಭೋಜನ ನೀಡಿದೆವೆಂದರೆ ಸಾರ್ಥಕ ಭಾವ...

ಇದು ಹುಬ್ಬಳ್ಳಿಯ ಗೌಳಿಗರ ಸಮಾಜದ ಹಿರಿಯ ಸತ್ಯಪ್ಪ ಉಪ್ಪಾರ ಅವರ ಮನದಾಳದ ಮಾತು. ನಗರದ ಕೊಪ್ಪಿಕರ ರಸ್ತೆ ಮತ್ತು ದಾಜೀಬಾನ್ ಪೇಟೆ ರಸ್ತೆಯ ಥಳಕುವ ಮಾರುಕಟ್ಟೆ ಮಧ್ಯೆ ಇರುವ ಗೌಳಿಗಲ್ಲಿಯಲ್ಲಿ ಇವರ ವಾಸ. 65 ಕುಟುಂಬಗಳು ಇಲ್ಲಿ ವಾಸವಾಗಿದ್ದು, ಅಪ್ಪಟ ಗ್ರಾಮೀಣ ಶೈಲಿ ಇಲ್ಲಿ ಕಾಣಬಹುದು.

ಸೆಗಣಿ ಮೆತ್ತಿದ ಎಮ್ಮೆ-ಕರುಗಳು, ಬಾರುಕೋಲು ಹಿಡಿದು ಎಮ್ಮೆ ಜೊತೆ ಒಡನಾಡುತ್ತಿರುವ ಮಕ್ಕಳು, ಸಂಜೆಯಾದಂತೆ ಕೊಟ್ಟಿಗೆಯಲ್ಲಿ ಹಾಲು ಹಿಂಡುವ ಯಜಮಾನ, ಕೊಟ್ಟಿಗೆ ಶುಚಿಗೊಳಿಸಿ, ಎಮ್ಮೆ ಮೈ ತೊಳಿಸುವ ಯಜಮಾನಿ, ಕಣ್ಣಾಡಿಸಿದಲ್ಲೆಲ್ಲ ಎಮ್ಮೆ-ಕರುಗಳು... ದೀಪಾವಳಿ ಸಮೀಪಿಸುತ್ತಿರುವುದರಿಂದ ಇಲ್ಲಿನ ಕೊಟ್ಟಿಗೆಳು ಬಣ್ಣಬಣ್ಣದ ದೀಪ ಹಾಗೂ ಹೂಗಳಿಂದ ಸಿಂಗಾರಗೊಳ್ಳುತ್ತಿವೆ.

'ಎಮ್ಮೆ ನಮಗೆ ಮನೆ ಮಹಾಲಕ್ಷ್ಮಿ. ವರ್ಷಪೂರ್ತಿ ಹಾಲು ನೀಡುವ ಅವುಗಳಿಗೆ, ಸ್ನಾನ ಮಾಡಿಸಿ, ಮೈಗೆ ಶೇಡಿ ಹಚ್ಚಿ, ಕೋಡುಗಳಿಗೆ ಬಣ್ಣ ಹಚ್ಚಿ, ನವಿಲುಗರಿ ಕಟ್ಟಿ, ಆಲಂಕಾರಿಕ ವಸ್ತುಗಳಿಂದ ಸಿಂಗರಿಸಿ, ಪೂಜಿಸುತ್ತೇವೆ. ಅವುಗಳಿಗಾಗಿಯೇ ಹೋಳಿಗೆ ತಯಾರಿಸಿ ಉಣಬಡಿಸುತ್ತೇವೆ' ಎನ್ನುತ್ತಾರೆ ಸತ್ಯಪ್ಪ ಉಪ್ಪಾರ.

'ಗಲ್ಲಿಯಲ್ಲಿರುವ ಎಲ್ಲ ಕುಟುಂಬದವರು ದೀಪಾವಳಿಯ ಬಲಿಪಾಡ್ಯದಂದು, ಸಿಂಗರಿಸಿದ ಎಮ್ಮೆಗಳನ್ನು ಮೂರುಸಾವಿರ ಮಠದವರೆಗೆ ಮೆರವಣಿಗೆ ನಡೆಸಿ, ನೆಹರೂ ಮೈದಾನಕ್ಕೆ ಕರೆದೊಯ್ಯುತ್ತಾರೆ. ಮನೆ ಯಜಮಾನ ಹೆಗಲ ಮೇಲೆ ಕಂಬಳಿ ಹೊದ್ದು, ಬಾರುಕೋಲು ಹಿಡಿದು ಹಲಗೆ, ಜಾಗಟೆ ಬಾರಿಸುತ್ತ ಮುಂದೆ ನಡೆದ ಎಂದರೆ, ಎಮ್ಮೆಗಳು ಕುಣಿಯುತ್ತ ಹಿಂದೆ ಓಡುತ್ತವೆ. ಕುತ್ತಿಗೆಯಲ್ಲಿನ ಗಂಟೆ ಅಲುಗಾಡುತ್ತ ಸದ್ದು ಮಾಡುವಾಗ, ಹಬ್ಬದ ಸಂಭ್ರಮ ಎಲ್ಲೆ ಮೀರುತ್ತದೆ' ಎಂದರು.

ಸುಮಾರು 300 ಎಮ್ಮೆಗಳು ನೆಹರೂ ಮೈದಾನದಲ್ಲಿ ಜಮಾಯಿಸುತ್ತವೆ. ಸೆಗಣಿಯಿಂದ ಮಾಡಿದ ಪಂಚ-ಪಾಂಡವರ ಮೂರ್ತಿಗಳಿಗೆ ಅಲ್ಲಿ ಅರ್ಚಕರ ನೇತೃತ್ವದಲ್ಲಿ ಪೂಜೆ ಸಲ್ಲಿಸಲಾಗುತ್ತದೆ. ಎಮ್ಮೆಗಳಿಗೆ ವಿಭೂತಿ ಹಚ್ಚಿ, ಪೂಜೆ ಮಾಡಿ, ನೈವೇದ್ಯ ನೀಡಲಾಗುತ್ತದೆ. ಗೌಳಿ ಸಮುದಾಯದವರಷ್ಟೇ ಅಲ್ಲ, ಸುತ್ತಲಿನ ಎಲ್ಲ ಸಮುದಾಯದವರು ಇದನ್ನು ಕಣ್ತುಂಬಿಸಿಕೊಳ್ಳಲು, ಅಲ್ಲಿ ಜಮಾಯಿಸುತ್ತಾರೆ.

'ಎಮ್ಮೆ ನಮಗೆ ಮನೆ ಮಗಳು': 'ಮನೆ ಹೆಣ್ಣುಮಕ್ಕಳಿಗೆ ಹೇಗೆ ಆಭರಣಗಳನ್ನು ಖರೀದಿಸುತ್ತೇವೆಯೋ ಹಾಗೆಯೇ, ಎಮ್ಮೆಗಳಿಗೆ ದೀಪಾವಳಿಯಂದು ಆಲಂಕಾರಿಕ ವಸ್ತುಗಳನ್ನು ಖರೀದಿಸಿ ಸಿಂಗರಿಸುತ್ತೇವೆ. ಮನೆ ಮಗಳಾದ ಅವುಗಳಿಗೆ ಕವಡಿ ಮತ್ತು ಕಂಠಿ ಸರ ಕಟ್ಟಿ ಅಂದ ಹೆಚ್ಚಿಸುತ್ತೇವೆ. ನಮ್ಮ ಸಮುದಾಯದವರು ಈಗಲೂ ದೈವಿ ಸ್ವರೂಪಿಯಾದ ಎಮ್ಮೆಯ ಸಾಕಾಣಿಕೆಯಲ್ಲಿಯೇ ಬದುಕು ಕಟ್ಟಿಕೊಂಡಿದ್ದಾರೆ. ಹಳ್ಳಿ ಸಂಸ್ಕೃತಿ, ಆಚಾರದ ಜೊತೆಗೆ, ಉತ್ತಮ ಆರೋಗ್ಯವನ್ನು ಕಾಪಾಡಿಕೊಂಡಿದ್ದೇವೆ' ಎಂದು ನಿಂಗಪ್ಪ ಉಪ್ಪಾರ ಹೇಳಿದರು.

ದೀಪಗಳ ನಡುವೆ ಸಗಣಿ ಪಾಂಡವರು

ಸುಷ್ಮಾ ಸವಸುದ್ದಿ

ಉತ್ತರ ಕರ್ನಾಟಕದ ಲಿಂಗಾಯತರು, ಒಕ್ಕಲಿಗರು, ನೇಕಾರರು, ಬ್ರಾಹ್ಮಣರು ಸೇರಿದಂತೆ ಎಲ್ಲ ಸಮುದಾಯದವರೂ ಈ ಸಂಪ್ರದಾಯವನ್ನು ಆಚರಿಸುತ್ತಾರೆ. ಮನೆಯೊಡತಿಯರು ದೀಪಾವಳಿ ಹಬ್ಬಕ್ಕೂ ಪೂರ್ವ ಮೊದಲೆರಡು ದಿನ ಗೋವಿನ ಸಗಣಿಯನ್ನು ಸಂಗ್ರಹಿಸಿಡಲು ಶುರು ಮಾಡುತ್ತಾರೆ. ನರಕ ಚತುದರ್ಶಿಯ ದಿನದಿಂದ ಬಲಿ ಪಾಡ್ಯದವರೆಗೆ ಪಾಂಡವರನ್ನು ತಯಾರಿಸಲು ಆರಂಭಿಸುತ್ತಾರೆ. ಬೆಳಿಗ್ಗೆ ಬೇಗ ಎದ್ದು ದನದ ಕೊಠಡಿಯಲ್ಲಿ ಐದು ಚಿಕ್ಕ ಪಾಂಡವರನ್ನು ತಯಾರಿಸಿ ಇಡುತ್ತಾರೆ. ನರಕ ಚತುದರ್ಶಿ ದಿನ ಐದು ಪಾಂಡವರು, ಅಮವಾಸ್ಯೆ ದಿನ ಒಂಬತ್ತು ಪಾಂಡವರು, ಬಲಿಪಾಡ್ಯದಂದು ಹನ್ನೊಂದು ಪಾಂಡವರನ್ನು ತಯಾರಿಸಲಾಗುವುದು.



ಬಲಿಪಾಡ್ಯದಂದು ಬೆಳಿಗ್ಗೆ ಬೇಗ ಎದ್ದು ಪಾಂಡವರನ್ನು ತಯಾರಿಸಿ, ಅವುಗಳಿಗೆ ಉತ್ತರಾಣಿ ಕಡಿ, ಹಳದಿ ಬಣ್ಣದ ಹೊನ್ನಾರಿ ಹೂವು, ಬಿಳಿ ಹೊಣ್ಣೆ ಹೂವುಗಳನ್ನು ತಲೆಗೆ ಕೀರಿಟದಂತೆ ಹಾಕಿ, ಕುಂಕುಮ, ಭಂಡಾರ ಹಚ್ಚಿ, ಚೆಂಡು ಹೂವುಗಳಿಂದ ಸಿಂಗರಿಸಲಾಗುತ್ತದೆ. ಪಾಂಡವರ ಜೊತೆಗೆ ಬೀಸುವ ಕಲ್ಲು, ಕುಟ್ಟುವ ಕಲ್ಲು, ಕೋಣಗಳನ್ನು ತಯಾರಿಸುತ್ತಾರೆ. ಆ ದಿನ ಸುಣ್ಣದಿಂದ ಮನೆ ತುಂಬ ಪಾಂಡವರ ಹೆಜ್ಜೆ ಗುರುತುಗಳನ್ನು ಹಾಕಲಾಗುತ್ತದೆ. ಮನೆಯ ಮುಖ್ಯ ದ್ವಾರದ ಅಕ್ಕಪಕ್ಕ ಒಂದೊಂದು ಪಾಂಡವರನ್ನು ಈಡಲಾಗುತ್ತದೆ.

ಸಿಂಗರಿಸಿಕೊಂಡ ಪಾಂಡವರಿಗೆ ಆ ದಿನ ವಿಶೇಷ ಖಾದ್ಯಗಳ ನೈವೇದ್ಯ. ಕಬ್ಬು ಗರಿಕೆ, ಜೋಳದ ದಂಟನ್ನು ಗೋಪುರದಂತೆ ನಿಲ್ಲಿಸಿ, ಅರ್ಧ ವೃತ್ತಾಕಾರದಲ್ಲಿ ಪಾಂಡವರನ್ನು ಜೋಡಿಸಿ ಇಡಲಾಗುತ್ತದೆ. ಅವುಗಳ ಮುಂದೆ ಬಣ್ಣ ಬಣ್ಣದ ರಂಗೋಲಿ ಹಾಕಿ, ಆರತಿ ಬೆಳಗಿ, ದೀಪ ಬೆಳಗಿಸಲಾಗುತ್ತದೆ. ಬೆಳಗಿಂದ ಅಲಂಕಾರಗೊಂಡು ಮನೆತುಂಬ ಸಂಭ್ರಮ ಮೂಡಿಸಿದ ಪಾಂಡವರು ಸಂಜೆಯಾಗುತ್ತಿದ್ದಂತೆ ಮನೆ ಏರಿ ಕೂಡುತ್ತಾರೆ.

ಸೂರ್ಯಾಸ್ತದ ಹೊತ್ತಿಗೆ ಪಾಂಡವರನ್ನು ಮನೆಯ ಮೇಲಿಟ್ಟು ದೀಪ ಬೆಳಗಿಸಲಾಗುತ್ತದೆ. ಪಾಂಡವರ ಜೊತೆಗೆ ಚಿಕ್ಕೆ ಪಣತಿಗಳಲ್ಲಿ ಗೋಧಿ, ಜೋಳದ ಬೀಜ ಹಾಕಿ ಬೆಳೆಸಲಾದ ಪುಟ್ಟ ಸಸಿಗಳನ್ನೂ ಇಡುತ್ತಾರೆ.

ವಿಷ್ಣುವು ನಂದ ರಾಕ್ಷಸನನ್ನು ಕೊಂದ ನೆನಪಿಗಾಗಿ ದೀಪಾವಳಿಯ ಪಾಡ್ಯದ ದಿವಸ ಪಾಂಡವರನ್ನು ಪ್ರತಿಷ್ಠಾಪಿಸಲಾಗುವುದು. ಈ ಸಂಪ್ರದಾಯ ದನಗಳಿಗೆ, ದನದ ಕೊಟ್ಟಿಗೆಗೆ ರೈತಾಪಿ ಜನ ತೋರುವ ಗೌರವವನ್ನೂ ಸಾರುತ್ತದೆ.



ಎಮ್ಮೆ ನಮ್ಮ ಹೆಮ್ಮೆ

ಇಮಾಮಹುಸೇನ್ ಗೂಡುನವರ

ಎಮ್ಮೆಗಳ ಅಲಂಕಾರಕ್ಕೆ ಕವಡೆ ಸರ, ಕೋಡು ಕೊಂಬುಗಳಿಗೆ ತುರಾಯಿಗಳು, ಹೊಸ ಹಗ್ಗಗಳು, ಕೋಡುಗಳಿಗೆ ಹೊಸ ಬಣ್ಣ ಬಳಿಯುವುದು ಆರಂಭವಾದರೆ ಬೆಳಗಾವಿಯಲ್ಲಿ ದೀವಳಿಗೆ ಬಂದಂತೆ.

ಬೆಳಗಾವಿ ಕುಂದಾಕ್ಕೆ ಹೆಸರಾದಂತೆ ಗೌಳಿಗರ ಕುಂದದ ಉತ್ಸಾಹಕ್ಕೂ ಹೆಸರಾಗಿದೆ. ಉತ್ತರ ಭಾರತದಿಂದ ಬಂದ ಯಾದವರು, ಇಲ್ಲಿನ ಹಣಬರ ಸಮುದಾಯದವರು ಹೈನುಗಾರಿಕೆಯನ್ನೇ ನಂಬಿ ಬದುಕುತ್ತಿದ್ದಾರೆ. ಮಲೆನಾಡಿನ ಸೆರಗಿನಂತಿರುವ ಈ ಊರಿನಲ್ಲಿ ಯಾದವರ ಶ್ರಮದಿಂದಲೇ ಪೇಡೆ, ಕುಂದಾ ಜನಪ್ರಿಯವಾಗಲು ಸಾಧ್ಯವಾಗಿದ್ದು.

ವರ್ಷವಿಡೀ ಹಾಲು ಕೊಟ್ಟು ಪೊರೆಯುವ ಎಮ್ಮೆಗಳಿಗೆ ಸಿಂಗಾರ ಮಾಡಿ, ದ್ವಾದಶಿಯಂದು ದೋಸೆ (ದ್ವಾಸಿ) ಮಾಡಿ ನೈವೇದ್ಯ ಹಿಡಿದು ಬಲಿಪಾಡ್ಯಮಿಯ ದಿನ ಎಮ್ಮೆಗಳ ಓಟ ಏರ್ಪಡಿಸಲಾಗುತ್ತದೆ.

ಇಲ್ಲಿನ ಕ್ಯಾಂಪ್ ಪ್ರದೇಶ, ಟಿಳಕವಾಡಿಯ ಗೌಳಿ ಗಲ್ಲಿ, ಗೊಂಧಳಿ ಗಲ್ಲಿ, ಕೋನವಾಳ ಗಲ್ಲಿ, ಚವಾಟ್ ಗಲ್ಲಿ, ಗಾಂಧಿ ನಗರ, ವಡಗಾವಿ, ಅನಗೋಳದಲ್ಲಿ ನಡೆಯುವ ಎಮ್ಮೆಗಳ ಓಟದ ಸ್ಪರ್ಧೆ ಕಣ್ಮನಸೆಳೆಯುತ್ತದೆ. ಸರ್ಕಾರಿ ಸರ್ದಾರ್ಸ್ ಪ್ರೌಢಶಾಲೆ ಮೈದಾನದಲ್ಲಿ ನಡೆಯುವ ಸ್ಪರ್ಧೆಯಂತೂ ರೋಚಕ.

ಕೆಲ ಯುವಕರು ಬೈಕಿನ ಸೈಲೆನ್ಸರ್ ತೆಗೆದು ಕರ್ಕಶ ಶಬ್ದ ಮಾಡುತ್ತ ವೇಗವಾಗಿ ಬೈಕ್ ಓಡಿಸಿದರೆ, ಎಮ್ಮೆಗಳು ಅವರನ್ನೇ ಹಿಂಬಾಲಿಸುತ್ತ ಓಡುವ ದೃಶ್ಯ ಎಂಥವರಲ್ಲೂ ರೋಮಾಂಚನ ಮೂಡಿಸುತ್ತದೆ.

ಎಮ್ಮೆಗಳ ಓಟದ ಸ್ಪರ್ಧೆ ಕಣ್ತುಂಬಿಕೊಳ್ಳಲು ಅಪಾರ ಸಂಖ್ಯೆಯಲ್ಲಿ ಜನ ಸೇರುತ್ತಾರೆ. ಸಿಳ್ಳೆ, ಚಪ್ಪಾಳೆಗಳ ಸುರಿಮಳೆಗೈದು ಹುರಿದುಂಬಿಸುತ್ತಾರೆ. 'ಎಮ್ಮೆಗಳ ಫ್ಯಾಷನ್ ಷೋ' ಅನ್ನು ತಮ್ಮ ಮೊಬೈಲ್, ಕ್ಯಾಮೆರಾಗಳಲ್ಲಿ ಸೆರೆಹಿಡಿದು ಸಂಭ್ರಮದಲ್ಲಿ ಮಿಂದೇಳುತ್ತಾರೆ.

ಉತ್ತರ-ದಕ್ಷಿಣದ ಸಂಗಮ: ಬಹುಭಾಷಾ ಸಂಸ್ಕೃತಿ ಹೊಂದಿರುವ ಬೆಳಗಾವಿಯಲ್ಲಿ ಗುಜರಾತಿಗಳು, ಬಂಗಾಳಿಗಳು, ಬಿಹಾರಿಗಳು ಸೇರಿದಂತೆ ಉತ್ತರ ಭಾರತೀಯರು ಸಾವಿರಾರು ಸಂಖ್ಯೆಯಲ್ಲಿ ನೆಲೆಸಿದ್ದಾರೆ. ದೀಪಾವಳಿಯಲ್ಲಿ ಅವರು ಸ್ಥಳೀಯ ಧಾರ್ಮಿಕ ಪದ್ಧತಿ ಅನುಸರಿಸುವ ಜತೆಗೆ, ತಮ್ಮ ನಾಡಿನ ಸಂಸ್ಕೃತಿಯನ್ನೂ ಅನಾವರಣಗೊಳಿಸುತ್ತಾರೆ. ಉತ್ತರ-ದಕ್ಷಿಣದ ಸಂಗಮಕ್ಕೆ ಗಡಿನೆಲ ಸಾಕ್ಷಿಯಾಗುತ್ತದೆ.

ಗಂಗೆಯ ತುಂಬಿ...

ಸುಮಾ ಬಿ.

ಅರೆಮಲೆನಾಡಿನ ಮನೆಗಳಲ್ಲಿ 'ಮಾಲಿಂಗನ ಬಳ್ಳಿ' ಹೊಕ್ಕಿತೆಂದರೆ ದೀಪಾವಳಿ ಹಬ್ಬ ಶುರುವಾಯಿತೆಂತಲೇ. ಬಚ್ಚಲು ಮನೆಯೊಳಗಿನ ಹಂಡೆ, ಹೊಗೆ ಹೋಗುವ ಪೈಪು, ನೀರು ಕಾಯಿಸುವ ಒಲೆ ಕೆಮ್ಮಣ್ಣು (ಊರ್‌ಮಂಜು), ಸುಣ್ಣ ಪೂಸಿಕೊಂಡು 'ಲಕಲಕ' ಹೊಳೆಯುತ್ತಿದ್ದರೆ ಹಬ್ಬದ ಸಂಭ್ರಮ ಮೈದುಂಬಿದಂತೆಯೇ... ಬರೋಬ್ಬರಿ ಐದು ದಿನಗಳ ಆಚರಣೆಯ ಹೊತ್ತು ತರುವ 'ನೀರು ತುಂಬುವ ಹಬ್ಬ' (ಗಂಗೆ ತುಂಬುವ ಹಬ್ಬ) ಮಧ್ಯ ಕರ್ನಾಟಕದ ದೀವಟಿಗೆಯ ಹಬ್ಬಕ್ಕೆ ಮುನ್ನುಡಿ ಬರೆಯುತ್ತದೆ.

ಅಟ್ಟದ ಮೇಲೆ ಪೇರಿಸಿಟ್ಟ ತಾಮ್ರದ ಹಂಡೆಗಳಿಗೆ ವರ್ಷಕ್ಕೊಮ್ಮೆ ಹುಣಸೆಹಣ್ಣು, ಉಪ್ಪು ಬೆರೆಸಿಕೊಂಡು ಮೈಉಜ್ಜಿಸಿಕೊಳ್ಳುವ ಭಾಗ್ಯ. ನೀರು ಕಾಯಿಸುವ ಹಂಡೆ, ತಪ್ಪಲಿ, ಕೊಳಗಗಳು ಮಾಲಿಂಗನ ಬಳ್ಳಿ, ಹಿಂಡ್ಲೆಕಾಯಿ ಬಳ್ಳಿ ಸುತ್ತಿಕೊಂಡು, ಸುಣ್ಣ- ಕೆಮ್ಮಣ್ಣು ಬಳಿದುಕೊಂಡು ಮರುದಿನದ 'ನೀರು ಎರೆದುಕೊಳ್ಳುವ ಹಬ್ಬಕ್ಕೆ' (ಬೂರೇ ಹಬ್ಬ, ಅಭ್ಯಂಜನ ಸ್ನಾನ) ಅಣಿಯಾಗುತ್ತವೆ. ಉತ್ರಾಣಿ ಕಡ್ಡಿ, ಬಿದಿರು ಸೊಪ್ಪೂ ಹಂಡೆಯ ಅಕ್ಕಪಕ್ಕ ಹಾಜರಿ ಹಾಕುತ್ತವೆ. ಮಾರನೇ ದಿನ ಮನೆಮಂದಿಗೆಲ್ಲ ಬಿಸಿ ಎಣ್ಣೆಯ ನಂಟು. ದೇಹ ಪೂರ್ತಿ ಎಣ್ಣೆಯಲ್ಲಿ ಮಿಂದೆದ್ದು, ತಲೆಗೆ ಹಾಲು, ತುಪ್ಪ ಹಾಕಿಕೊಂಡು ಬಿಸಿ ನೀರ ಮೈಗೆ ಸೋಕಿಸಿದರೆ 'ಬೂರೇ ಹಬ್ಬ' ಸಂಪನ್ನ. ಮಾಗಿಚಳಿಯ ಹೊಸ್ತಿಲಲ್ಲಿ ಬರುವ ಈ ಸಂಪ್ರದಾಯ ದೇಹ ರಕ್ಷಣೆಯ ಪಾಠವನ್ನೂ ಹೇಳುತ್ತದೆ.



ನರಕ ಚತುರ್ದಶಿಯ ಹಿಂದಿನ ದಿನ ಅಂದರೆ ತ್ರಯೋದಶಿಯ ದಿನದ ಈ ಆಚರಣೆಗೆ 'ಮಾಲಿಂಗನ ಬಳ್ಳಿ' ಇರಲೇ ಬೇಕು. ಅದಿಲ್ಲದಿದ್ದರೆ ಆಚರಣೆ ಅಪೂರ್ಣ ಎಂತಲೇ. ನಗರ, ಪಟ್ಟಣಗಳಲ್ಲಿ ವಾಸಿಸುವವರೂ ಆ ದಿನ ಬಳ್ಳಿಯನ್ನು ಹುಡುಕಿಕೊಂಡು ತರುವುದುಂಟು. ಈಗೀಗ ಮಾರುಕಟ್ಟೆಗೂ ಈ ಬಳ್ಳಿ ಲಗ್ಗೆ ಇಟ್ಟಿದೆ. ಅಷ್ಟರ ಮಟ್ಟಿನ ಪ್ರಭಾವ 'ಮಾಲಿಂಗನ ಬಳ್ಳಿ'ಯದ್ದು. ಬಳ್ಳಿಯಲ್ಲಿ ಬಿಡುವ ಕಾಯಿಯ ಒಳಭಾಗದಲ್ಲಿ ಶಿವಲಿಂಗದ ಪ್ರತಿರೂಪ ಒಡಮೂಡಿರುತ್ತದೆ. ಬಹುತೇಕರು ಇದನ್ನು 'ಶಿವಲಿಂಗನ ಬಳ್ಳಿ' ಎಂತಲೇ ಕರೆಯುವರು. ಗಂಗೆಗೆ ಮಾಂಗಲ್ಯ ಕಟ್ಟುವ ಸಂಕೇತವಾಗಿ ಬಳ್ಳಿಯನ್ನು ಹಂಡೆಯ ಕೊರಳಿಗೆ ಕಟ್ಟಲಾಗುತ್ತದೆ.

ಬಳ್ಳಿಯಲ್ಲಿ ಬಿಡುವ ಕಾಯಿ ಅತೀ ಕಹಿಯಾಗಿದ್ದು, ಔಷಧೀಯ ಗುಣವೂ ಅದಕ್ಕಿದೆ. ಹಂಡೆ ಬಿಸಿಯಾದಾಗ ಬಳ್ಳಿಯೂ ಬಿಸಿಯಾಗಿ ಹಿತವಾದ ಆವಿಯನ್ನು ಹೊರಸೂಸುತ್ತದೆ. ಈ ಆವಿ ದೇಹಕ್ಕೆ ಸೋಂಕುವುದರಿಂದ ಆರೋಗ್ಯಪೂರ್ಣ ಸ್ನಾನ ಎನಿಸಿಕೊಳ್ಳುತ್ತದೆ.

ಸಾಮರಸ್ಯ ಸಾರುವ ಆಣೀ ಪೀಣಿ



ಹಂಡಾಕಳಾ ಬಂಡಾಕಳಾ
ಕನಕಪ್ಪನ ಕರಿ ಆಕಳಾ
ಗುಡ್ಡಾವೇರಿ ಬರುವಾಗ ಕಳ್ಳಾರು ಕಂಡಾರೂ
ಕಳ್ಳರ ಕೈಯಾಗ ಬೆಳ್ಳಿಯ ಕುಡಗೋಲು
ಬೆಳ್ಳಿಯ ಕುಡಗೋಲು ಮಾರ ಮಾರ ಹುಲ್ಲು
ಮಾರ ಮಾರ ಹುಲ್ಲಿಗೆ ಬೋರ ಬೋರ ಹಾಲು
ಬೋರ ಬೋರ ಹಾಲಿಗೆ ಕಣ್ಣಿ ಕಣ್ಣಿ ಮೊಸರು
ಕಣ್ಣಿ ಕಣ್ಣಿ ಮೊಸರಿಗಿ, ಕಳ ಕಳ ತುಪ್ಪ
ಕಳ ಕಳ ತುಪ್ಪಕ್ಕ ಬಳಾ ಬಳಾ ರೊಕ್ಕ
ಆಣೀ ಪೀಣಿ ಜಾಣೆಗೊನಿಮ್ಮ ಎತ್ತಿನ ಪೀಡಾ ಹೊಳೆಯಾಚಕೊ...

ಅರಸನ ಕೈಯಾಗ, ಬೆಳ್ಳಿಯ ಕುಡಗೋಲ
ಬೆಳ್ಳಿಯ ಕುಡಗೋಲಿಗಿ ಮಾರ ಮಾರ ಹುಲ್ಲ
ಮಾರ ಮಾರ ಹುಲ್ಲಿಗಿ ಗೆಜ್ಜಿ ಕಟ್ಟಿದೆಮ್ಮಿ
ಗೆಜ್ಜಿ ಕಟ್ಟಿದೆಮ್ಮಿಗಿ ಸರ್ ಬುರ್ ಹಾಲು
ಸರ್ ಬುರ್ ಹಾಲಿಗೆ ಕೆನಿ ಕೆನಿ ಮೊಸರು
ಕೆನಿ ಕೆನಿ ಮೊಸರಿಗಿ ಗಮ್ ಗಮ್ ತುಪ್ಪ
ಗಮ್ ಗಮ್ ತುಪ್ಪಕ್ಕ ಬಳಕೊ ರೊಕ್ಕ....

ನೇಗಿಲಯೋಗಿಯ ಜೊತೆ ದುಡಿಯುವ ಎತ್ತುಗಳನ್ನು ಪೂಜಿಸುತ್ತ, ಎಲ್ಲ ಜನಾಂಗದವರೂ ಅವುಗಳ ಸ್ವಾಸ್ಥ್ಯಕ್ಕೆ ಪ್ರಾರ್ಥಿಸುತ್ತಾರೆ. ಪರಸ್ಪರ ಸೌಖ್ಯವೇ ಸೌಭಾಗ್ಯ ಎನ್ನುವ ಆಚರಣೆ ಇದು...

ಕಲಾವತಿ ಬೈಚಬಾಳ

ಈ ಹಾಡುಗಳು ರಾಗಬದ್ಧವಾಗಿ ಕೇಳತೊಡಗಿದರೆ ಊರೂರಿಗೆ ದೀವಳಿಗೆ ಬಂತೆಂದೇ ಅರ್ಥ. ಕೃಷಿಕರ ಮನೆಯ ದನ, ಕರು, ಬೆಳೆ, ಬೇಸಾಯಕ್ಕೆ ಒಳಿತಾಗಲೆಂದು ಹಾರೈಸಿ ಗ್ರಾಮೀಣ ಯುವಕರು ಮುಂದಿನ ಮನೆಗೆ ತೆರಳುತ್ತಾರೆ.

ದೀಪಾವಳಿ ಇಡೀ ದೇಶವೇ ಆಚರಿಸುವಂಥಹ ಹಬ್ಬ. ನಾಲ್ಕೈದು ದಿನ ವಿವಿಧ ಉಪ ಆಚರಣೆಗಳನ್ನು ಮಾಡುವ ಹಬ್ಬದ ವೇಳೆಯಲ್ಲಿ 'ಆಣೀ ಪೀಣಿ'ಯೂ ಒಂದು ವಿಶಿಷ್ಟ ಸಂಪ್ರದಾಯವಾಗಿ ಬೆಳೆದು ಬಂದಿದೆ.



ಅನ್ನದಾತನ ಒಡನಾಡಿಗಳಾದ ದನಕರುಗಳಿಗೆ ರೋಗಗಳು ಬಾಧಿಸದಿರಲಿ, ಪಶು ಸಂತಾನ ಬೆಳೆಯಲಿ ಎಂಬುವುದೇ ಈ ಆಚರಣೆಯ ಮುಖ್ಯ ಉದ್ದೇಶ.

ಕಿತ್ತೂರು ಕರ್ನಾಟಕ ಭಾಗದ ವಿಜಯಪುರ, ಬಾಗಲಕೋಟೆ, ಗದಗ, ಧಾರವಾಡ, ಹಾವೇರಿ ಜಿಲ್ಲೆಗಳಲ್ಲಿ ಈ ಆಚರಣೆ ಹೆಚ್ಚಾಗಿದೆ. ಆಣೀ-ಪೀಣಿ ಆಚರಣೆ ಮಲೆನಾಡಿನ ಅಂಟಿಕೆ-ಪಂಟಿಕೆ ಸಂಪ್ರದಾಯಕ್ಕಿಂತ ಭಿನ್ನವಾಗಿದೆ.

ಆಣೀ-ಪೀಣಿಯನ್ನು ಕೆಲವು ಕಡೆ 'ಅವಂಟಿಗೋ ಪವಂಟಿಗೋ', 'ಆಡಿ ಪಿಡೀ', 'ಅಂಟಿ ಸುಂಟಿ' ಎಂದು ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತದೆ.

ದನಕಾಯುವ ಅಥವಾ ಕುರಿ ಕಾಯುವ ಹುಡುಗರು ದೀಪಾವಳಿಯ ಪಾಡ್ಯದಂದು ಬೆಳಗಿನ ಜಾವ ಅಕ್ಕ-ತಂಗಿಯರಿಂದ ಆರತಿ ಬೆಳಗಿಸಿಕೊಂಡು ಹಳ್ಳ/ ಅಡವಿಗೆ ಹೋಗಿ ಆಣೀಪೀಣಿ ದೀಪ ಸಿದ್ಧಗೊಳಿಸುವಲ್ಲಿ ನಿರತರಾಗುತ್ತಾರೆ.

ಹಳ್ಳದ ದಂಡೆಯಲ್ಲಿ ಬೆಳೆದ ಹುಲ್ಲಿನಿಂದ ಐದು, ಏಳು ಅಥವಾ ಹನ್ನೊಂದು ನಾಗರಹಾವಿನ ಹೆಡೆಗಳ ಮಾದರಿಯಲ್ಲಿ ಗೂಡು/ ಬುಟ್ಟಿ ರೂಪಿಸುತ್ತಾರೆ. ಅದರಲ್ಲಿ ಹಣತೆ ಇಟ್ಟು, ಹೆಡೆಗಳ ಕೆಳಗುಳಿದ ಹುಲ್ಲನ್ನು ಒಟ್ಟಿಗೆ ಕಟ್ಟಿ, ಕೈಯಲ್ಲಿ ಹಿಡಿಯಲು ಅನುಕೂಲವಾಗುವಂತೆ ಸಿಂಬಿ ಕಟ್ಟುತ್ತಾರೆ. ಇದೇ ಆಣೀಪೀಣಿ ದೀಪ.

ಸಂಜೆ ಮನೆಗೆ ಬರುವಾಗ ಕೈಯಲ್ಲಿ ದೀಪ ಹಿಡಿದುಕೊಂಡು ಬರುವ ಯುವಕರ ಗುಂಪು, ಗ್ರಾಮದಲ್ಲಿ ದನಕರುಗಳಿರುವವರ ಮನೆಗೆ ತೆರಳಿ ಜಾನುವಾರುಗಳಿಗೆ ಆರತಿ ಬೆಳಗುತ್ತದೆ.

ಮೂರು ದಿನ ನಡೆಯುವ ಈ ಜಾನಪದ ಉತ್ಸವದ ಕೊನೆಯ ದಿನ ದೀಪ ಬೆಳಗಿದ ಎಲ್ಲ ಮನೆಗೂ ಹೋಗಿ ಕೊಬ್ಬರಿ, ವಸ್ತ್ರ ಸೇರಿದಂತೆ ಇತ್ಯಾದಿ ವಸ್ತುಗಳನ್ನು ಕಾಣಿಕೆಯಾಗಿ ಪಡೆದು ದೀಪವನ್ನು ಹೊಳೆಯಲ್ಲಿ ಹರಿಬಿಡುತ್ತಾರೆ. ಈ ಆಚರಣೆ ಸಾಮರಸ್ಯ ಸಾರುವುದರ ಜೊತೆಗೆ ಮೇಲು ಕೀಳೆಂಬ ಬೇಧವನ್ನು ತೊಡೆದು ಹಾಕುವುದರ ಸಂಕೇತವೂ ಆಗಿದೆ ಎನ್ನುತ್ತಾರೆ ಜನಪದ ತಜ್ಞರು.

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಎಂ.ಪಿ. ವಿಭಾಗ, ರಾಮನಗರ.
ದೂ. : 080-2727 1259. ಇ-ಮೇಲ್ : eempdrmgm@gmail.com

ಟೆಂಡರ್ ಪ್ರಕಟಣೆ ಸಂಖ್ಯೆ : 06/2023-24 ದಿನಾಂಕ : 10-11-2023

ಟೆಂಡರ್ ಪ್ರಕಟಣೆ

ಕಾವೇರಿ ನೀರಾವರಿ ನಿಗಮ ನಿಯಮಿತದ ಅಡಿಯಲ್ಲಿ ಅರ್ಹ ಗುತ್ತಿಗೆದಾರರಿಂದ https://kppp.karnataka.gov.in ಮುಖಾಂತರ 2701 ಲೆಕ್ಕ ಶೀರ್ಷಿಕೆಯಡಿಯಲ್ಲಿ ಮಾನವ ಸಂಪನ್ಮೂಲ ಸರಬರಾಜು ಮಾಡುವ (Providing Outsourcing Staff) ವಿವಿಧ ಮೊತ್ತದ ಕಾಮಗಾರಿಗಳ ಟೆಂಡರ್ ಆಹ್ವಾನಿಸಲಾಗಿರುತ್ತದೆ.
ಕಾಮಗಾರಿಗಳ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ : 27-11-2023, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 28-11-2023, ಆರ್ಥಿಕ ಬಿಡ್ ತೆರೆಯುವ ದಿನಾಂಕ : 06-12-2023, ಹಾಗೂ ಇ.ಎಂ.ಡಿ. ಮುಂತಾದ ಇತರೆ ಮಾಹಿತಿಗಳನ್ನು https://kppp.karnataka.gov.in ಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಡಿಐಪಿಆರ್/ರಾಮನಗರ/278/ಮಣಿಪಾಲ್/2023-24 ಕಾ.ನೀ.ನಿ.ನಿ., ಎಂ.ಪಿ. ವಿಭಾಗ, ರಾಮನಗರ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ, ಮಡಿಕೇರಿ

ಅಲ್ಪಾವಧಿ ಟೆಂಡರ್ ಪ್ರಕಟಣೆ

ಟೆಂಡರ್ ಪ್ರಕಟಣೆ ಸಂಖ್ಯೆ : 06/2023-24/2328-32 ದಿನಾಂಕ: 09-11-2023
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-4 ರನ್ವಯ ದ್ವಿ-ಕೋಟೆ ಪದ್ಧತಿಯಲ್ಲಿ ಲೋಕೋಪಯೋಗಿ ಇಲಾಖೆಯ ಕೊಡಗು ವಿಭಾಗದ ವ್ಯಾಪ್ತಿಯಲ್ಲಿ ಲೆ.ಶಿ: 3054-ಜಿಲ್ಲಾ ಮುಖ್ಯ ರಸ್ತೆ ಸೇತುವೆ ನಿರ್ವಹಣೆ ಅಡಿಯ ಸೋಮವಾರಪೇಟೆ ತಾಲ್ಲೂಕಿನ 1 ಕಾಮಗಾರಿಯನ್ನು ಇ-ಸಂಗ್ರಹಣಾ ವೇದಿಕೆ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ.136.66 ಲಕ್ಷಗಳಾಗಿರುತ್ತದೆ. ಟೆಂಡರ್ ದಾಖಲಾತಿಗಳನ್ನು ದಿನಾಂಕ: 09.11.2023 ರಿಂದ ಕರ್ನಾಟಕ ರಾಜ್ಯ ಸರ್ಕಾರದ ಇ-ಸಂಗ್ರಹಣಾ ವೇದಿಕೆ ಮುಖಾಂತರ ಪಡೆಯಬಹುದಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 17-11-2023 ಸಂಜೆ 5.00 ಗಂಟೆಯಾಗಿರುತ್ತದೆ.
ಟೆಂಡರ್ ಸಂಪೂರ್ಣ ವಿವರಗಳನ್ನು ಇ-ಸಂಗ್ರಹಣಾ ವೇದಿಕೆ https://kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಯಾವುದೇ ತಿದ್ದುಪಡಿ/ಮಾರ್ಪಾಡುಗಳನ್ನು ಇ- ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ, ಮಡಿಕೇರಿ.

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ) ಕಮಲಾಪೂರ ಜಿ॥ಕಲಬುರಗಿ

NO:A4/DIET/KMA/TALP/COMP/TENDER/2022-23 DATE: 10/11/2023

:: ಸಂಕ್ಷಿಪ್ತ ಟೆಂಡರ್ ಪ್ರಕಟಣೆ ::

ಇ-ಪ್ರಕ್ಯೂರಮೆಂಟ್ ಮೂಲಕ ಅಲ್ಪಾವಧಿ ಇ-ಟೆಂಡರ್ ಆಹ್ವಾನ
2022-23ನೇ ಸಾಲಿನ ಆಯವ್ಯಯ ಘೋಷಣೆಯಂತೆ ಕೆ.ಪಿ.ಎಸ್ ಶಾಲೆಗಳಿಗೆ ಯಂತ್ರೋಪಕರಣಗಳನ್ನು ಮತ್ತು ಸಾಧನಾ ಸಾಮಗ್ರಿಗಳನ್ನು ಖರೀದಿಸುವ ಮತ್ತು 03 ವರ್ಷ ನಿರ್ವಹಣೆ ಮಾಡುವ ಸಂಬಂಧ ಅಲ್ಪಾವಧಿ ಇ-ಟೆಂಡರ್‌ನ್ನು ಕರೆಯಲಾಗಿದೆ. ಆಸಕ್ತ ಮತ್ತು ಅರ್ಹ ಕಂಪನಿ/ತಯಾರಕರು/ಅಧೀಕೃತ ಮಾರಾಟಗಾರರುಗಳಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಟೆಂಡರ್ ಕರೆಯಲಾಗಿದೆ. ವಿವರ ಈ ಮುಂದಿನಂತೆ ಇದೆ. 1) ಟೆಂಡರ್‌ಗೆ ಇಟ್ಟಿರುವ ಮೊಬಲಗು **ರೂ. 64,81,000/-** 2) ಟೆಂಡರ್ ಡ್ಯಾಕುಮೆಂಟ್‌ನ್ನು ವೆಬ್‌ಸೈಟ್‌ನಿಂದ ಡೌನಲೋಡ್ ಮಾಡಿಕೊಳ್ಳಬೇಕಾದ ದಿ:10/11/2023 3) ಟೆಂಡರ್ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:17/11/2023 ಸಮಯ: 5.00 ಸಂಜೆವರೆಗೆ, 4) ತಾಂತ್ರಿಕ್ ಬಿಡ್‌ಗಳನ್ನು ತೆರೆಯುವ ದಿ:18/11/2023 ಮುಂಜಾನೆ:11.00ಕ್ಕೆ, 5) ಆರ್ಥಿಕ ಬಿಡ್ ತೆರೆಯುವ ದಿ:20/11/2023 ಕ್ಕೆ ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 9448999370 (www.dietkamalapur123@gamil.com) ಮತ್ತು ಅಂತರಜಾಲದ ತಾಣ ವಿಳಾಸ- http://www.eproc.karnataka.gov.in

ಸಹಿ/- ಉಪನಿರ್ದೇಶಕರು (ಅಭಿವೃದ್ಧಿ)/ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ) ಕಮಲಾಪೂರ, ಜಿಲ್ಲೆ: ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/457/ಕೆ.ಎಸ್.ಎಂ.ಸಿ.&ಎ/2023-24

ಕೃಷಿ ಮಾರಾಟ ಇಲಾಖೆ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ

ಮಹಾತ್ಮ ಗಾಂಧಿ ಸಂಕೀರ್ಣ, ಮಾರುಕಟ್ಟೆ ಪ್ರಾಂಗಣ, ಯಶವಂತಪುರ, ಬೆಂಗಳೂರು - 560022. ದೂರವಾಣಿ ಸಂಖ್ಯೆ: 080-23472850/23371695
ಇ-ಮೇಲ್: apmcbangalore22@gmail.com

ಸಂಖ್ಯೆ:ಕೃಮಾಇ/ಕೃಉಮಾಸ/ಬೆಂ/ಭದ್ರತೆ/4830/2023-24 ದಿನಾಂಕ: 10-11-2023

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

2023-24 ನೇ ಸಾಲಿಗೆ ಬೆಂಗಳೂರು, ಯಶವಂತಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ, ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣಗಳ ಭದ್ರತಾ ನಿರ್ವಹಣಾ ಕಾರ್ಯಕ್ಕಾಗಿ ಕಾರ್ಮಿಕ ಇಲಾಖೆಯಲ್ಲಿ ಹಾಗೂ the bidder must be a company / LLP registered under companies Act 1956 or Companies Act, 2013 or LLP Act, 2008 ರಡಿ ನೋಂದಾಯಿಸಲ್ಪಟ್ಟ ಮತ್ತು ಕನಿಷ್ಠ 10 ವರ್ಷಗಳ ಅನುಭವವುಳ್ಳ ಸಂಸ್ಥೆ / ಏಜೆನ್ಸಿಯವರಿಂದ ಕನಿಷ್ಠ ವೇತನ ಕಾಯ್ದೆಯನ್ವಯ ಈ ಕೆಳಕಂಡಂತೆ ನಮೂದಿಸಿರುವ ಸೇವೆಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸುವ ಅರ್ಹ ಸಂಸ್ಥೆ / ಏಜೆನ್ಸಿಯವರು ವೆಬ್‌ಸೈಟ್: **https://eproc.karnataka.gov.in** ನಲ್ಲಿ ಪ್ರಕಟಿಸಿದಂತೆ ಹಾಗೂ ಇನ್ನುಳಿದ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 18-11-2023.

ಕ್ರ. ಸಂ.	ನಿರ್ವಹಣಾ ವಿವರಣೆ	ವಿವಿಧ ಹುದ್ದೆಗಳ ಒಟ್ಟು ಸಂಖ್ಯೆ	ಇ.ಎಂ.ಡಿ (ರೂ.ಲಕ್ಷಗಳಲ್ಲಿ)
1	ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣ, ಯಲಹಂಕ ರೈತರ ಸಂತೆ ಹಾಗೂ ನಂದಿನಿ ಬಡಾವಣೆಯಲ್ಲಿ ಪ್ರತಿದಿನ ಭದ್ರತಾ ಕಾರ್ಯ ನಿರ್ವಹಿಸಲು ಭದ್ರತಾ ಟೆಂಡರ್.	92	10.00
2	ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದ ಎ, ಬಿ, ಸಿ ಮತ್ತು ಡಿ ಬ್ಲಾಕ್‌ಗಳಲ್ಲಿ ಭದ್ರತಾ ಕಾರ್ಯ ನಿರ್ವಹಿಸಲು ಭದ್ರತಾ ಟೆಂಡರ್.	20	2.50

ಸಹಿ/- ಕಾರ್ಯದರ್ಶಿ, ಕೃಉಮಾಸ, ಬೆಂಗಳೂರು ವಾಸಾಸಂಇ/ವಾ.ಪ್ರ/2071/ಅಡ್ವರ್ಟೋರ್/2023-24 ಸಹಿ/- ಆಡಳಿತಾಧಿಕಾರಿಗಳು, ಕೃಉಮಾಸ, ಬೆಂಗಳೂರು

ਪੰਜਾਬ ਨੈਸ਼ਨਲ ਬੈਂਕ ...भरोसे का प्रतीक! ಪಂಜಾಬ್ ನ್ಯಾಷನಲ್ ಬ್ಯಾಂಕ್ ...the name you can BANK upon!

(ಭಾರತ ಸರ್ಕಾರದ ಅಧೀನ ಸಂಸ್ಥೆ)
ಕ್ರೆಡಿಟ್ ಡಿಪಾರ್ಟ್‌ಮೆಂಟ್, 6-1-73, ಎರಡನೇ ಮಹಡಿ, ಸಯೀದ್ ಪ್ಲಾಜಾ, ಲಕಡಿ-ಕಾ-ಪೂಲ್, ಜೆಡ್‌ಒ, ಹೈದರಾಬಾದ್ - 500004
ಇ-ಮೇಲ್: zohydcredit@pnb.co.in ಫೋನ್:040-23235212, 24475158

ಕಾರ್ಪೋರೇಟ್ ಸಾಲಗಾರರ ಡ್ಯೂ ಡಿಲಿಜೆನ್ಸ್‌ಗಾಗಿ ಸಿಎ/ಸಿಎಸ್/ಕಾಸ್ಟ್ ಅಕೌಂಟಂಟ್ ನೇಮಕಾತಿ

ಪಂಜಾಬ್ ನ್ಯಾಷನಲ್ ಬ್ಯಾಂಕ್, ವಲಯ ಕಚೇರಿ, ಹೈದರಾಬಾದ್ ಇವರು ಕಾರ್ಪೋರೇಟ್ ಸಾಲಗಾರರ ಡ್ಯೂ ಡಿಲಿಜೆನ್ಸ್‌ಗಾಗಿ ಸಿಎ/ಸಿಎಸ್/ಕಾಸ್ಟ್ ಅಕೌಂಟಂಟ್ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.
ಸಂಪೂರ್ಣ ವಿವರ ಮತ್ತು ಅರ್ಜಿ ನಮೂನೆಯನ್ನು ಬ್ಯಾಂಕ್‌ನ www.pnbindia.in ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು (ಡೌನ್‌ಲೋಡ್ ಫಾರ್ಮ್ಸ್ - ಮೂರನೇ ಪಕ್ಷಗಾರ ಸಂಸ್ಥೆಗಳ ಎಂಪಾನೆಲ್‌ಮೆಂಟ್). ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **28-11-2023 ರಂದು ಸಂಜೆ 5.00 ಗಂಟೆ.**
ಈ ಜಾಹೀರಾತಿಗೆ ಸಂಬಂಧಿತ ಯಾವುದೇ ತಿದ್ದುಪಡಿ/ಸ್ಪಷ್ಟೀಕರಣವನ್ನು ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ. ಭವಿಷ್ಯದಲ್ಲಿನ ಯಾವುದೇ ತಿದ್ದುಪಡಿ/ಸ್ಪಷ್ಟೀಕರಣಗಳಿಗಾಗಿ, ನಿಯಮಿತವಾಗಿ ಬ್ಯಾಂಕ್‌ನ https://www.pnbindia.in ವೆಬ್‌ಸೈಟ್‌ಗೆ ಭೇಟಿ ನೀಡುತ್ತಲಿರಿ.
ಅರ್ಜಿ ನಮೂನೆಯ ಜೊತೆಗೆ ಪೂರಕ ದಾಖಲಾತಿಗಳನ್ನು ಮತ್ತು ಹಿಂದಿನ ಬ್ಯಾಂಕರ್ಸ್/ಉದ್ಯೋಗದಾತರು ನೀಡಿದ ತೃಪ್ತಿಕರ ಉಲ್ಲೇಖ ವರದಿಯನ್ನು ಲಗತ್ತಿಸತಕ್ಕದ್ದು.

ಸಹಿ/- ಸಹಾಯಕ ಮಹಾ ಪ್ರಬಂಧಕರು

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ದಾವಣಗೆರೆ.

ಸಂ:ಕಾಇಂ:ಗ್ರಾ.ಕು.ನೀ & ನೈ ವಿ /ದಾ/ಕೆ.ಇಂ-1/ಜೆ.ಜೆ.ಎಂ/ಟೆಂಡರ್/785
ದಿನಾಂಕ:8/11/2023

ಅಲ್ಪಾವಧಿ ಟೆಂಡರ್ ಪ್ರಕಟಣೆ

("ಇ-ಪ್ರೊಕ್ಯೂರ್‌ಮೆಂಟ್"ಮೂಲಕ)

2021-22 ನೇ ಸಾಲಿನ ಜಲ ಜೀವನ್ ಮಿಷನ್ ಯೋಜನೆಯಡಿ ದಾವಣಗೆರೆ ಜಿಲ್ಲೆ ಜಗಳೂರು ತಾಲ್ಲೂಕಿನ ಒಟ್ಟು 09 ಗ್ರಾಮಕ್ಕೆ 09 ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿ ರೂ.1694 ಲಕ್ಷಗಳಿಗೆ ಹೊನ್ನಾಳಿ ತಾಲ್ಲೂಕಿನ ಒಟ್ಟು 01 ಗ್ರಾಮಕ್ಕೆ 01 ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿ ರೂ.138.00 ಲಕ್ಷಗಳಿಗೆ ಚನ್ನಗಿರಿ ತಾಲ್ಲೂಕಿನ ಒಟ್ಟು 02 ಗ್ರಾಮಕ್ಕೆ 02 ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿ ರೂ.260.50 ಲಕ್ಷಗಳಿಗೆ, ದಾವಣಗೆರೆ ತಾಲ್ಲೂಕಿನ ಒಟ್ಟು 01 ಗ್ರಾಮಕ್ಕೆ 01 ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿ ರೂ.270.00 ಲಕ್ಷಗಳಿಗೆ ಅನುಮೋದನೆಯಾಗಿದ್ದು,ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ನೋಂದಾಯಿತ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಹಾಗೂ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಅನ್ವಯ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ಪೋರ್ಟಲ್ ಮುಖಾಂತರ ಸಲ್ಲಿಸುವ ಕಡೇ ದಿನಾಂಕ: 21/11/2023 ರ ಸಂಜೆ 5.00 ರ ವರೆಗೆ ಇರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ:08192-262126 ಅಥವಾ www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ವಾಸಾಇ/ಡಿವಿಜಿ/335/ಕೆಎಸ್‌ಎಂಸಿಎ/2023-24 ಸಹಿ/- ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ & ನೈ. ವಿಭಾಗ, ದಾವಣಗೆರೆ.

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.

ನಂ:ದಾಮಪಾ:ಕಾಅ2.ಇ.ಟೆಂಡರ್:23:2023-24 ದಿನಾಂಕ: 06-11-2023

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮುಖಾಂತರ)

2022-23 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ (4ನೇ ಕರೆ) - 01 ಕಾಮಗಾರಿ, 2023-24 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ (4ನೇ ಕರೆ) - 01 ಕಾಮಗಾರಿ, ದಾವಣಗೆರೆ ಮಹಾನಗರ ಪಾಲಿಕೆ ನಿಷ್ಕ್ರಿಯಗೊಂಡಿರುವ ಹಳೆಯ ವಾಹನಗಳನ್ನು ವಿಲೇಗೊಳಿಸುವ - 01 ಹರಾಜು ಕಾಮಗಾರಿ ಒಟ್ಟು 03 ಕಾಮಗಾರಿಗಳಿಗೆ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜನ್ಸಿದಾರರು/ ಸರಬರಾಜುದಾರರು ಕೆ.ಪಿ.ಪಿ. ಪೋರ್ಟಲ್ ವೆಬ್ ಸೈಟ್ https://kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಕೆ.ಪಿ.ಪಿ. ಸಹಾಯಕ ದೂರವಾಣಿ ಸಂಖ್ಯೆ: +91-8046010000+91-8068948777 ರಿಂದ ಮಾಹಿತಿ ಪಡೆಯಬಹುದು.
(1) ಕೆ.ಪಿ.ಪಿ.ಪಿ.ಯಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ : 09-11-2023 (1) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 24-11-2023 ಸಮಯ : 16.30 (1) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 24-11-2023 ಸಮಯ : 17.00 (1) ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ: 27-11-2023 ಸಮಯ : 11.00

ವಾಸಾಇ/ದಾವಣಗೆರೆ/334/ಕೆಎಸ್‌ಎಂಸಿಎ/2023-24 ಸಹಿ/- ಕಾರ್ಯಪಾಲಕ ಅಭಿಯಂತರರು (ಯುಜಿಡಿ) ಮಹಾನಗರ ಪಾಲಿಕೆ, ದಾವಣಗೆರೆ

ಜಿಲ್ಲಾ ಪಂಚಾಯತ್ ತುಮಕೂರು,
ಕಾರ್ಯಪಾಲಕ ಅಭಿಯಂತರರವರ ಕಚೇರಿ,

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತುಮಕೂರು ವಿಭಾಗ.
ದೂ:0816-2252937
ಸಂಖ್ಯೆ: 10/ಕಾಪಾಅ/ಗ್ರಾಕು.ನೀ.ನೈ ವಿ/ತುಮ/AE-3/2208/2023-24
ದಿನಾಂಕ: 07.11.2023

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 10/2023-24

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ ಮತ್ತು ನೈರ್ಮಲ್ಯ ವಿಭಾಗ, ತುಮಕೂರು ಇವರು 2023-24 ನೇ ಸಾಲಿಗೆ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಸೂಕ್ತ ನೊಂದಾಯಿತ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನ ವಿವರ ಈ ಕೆಳಕಂಡಂತಿರುತ್ತದೆ. ತುಮಕೂರು ಜಿಲ್ಲೆ ವ್ಯಾಪ್ತಿಯಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಅನುಮೋದನೆಗೊಂಡಿರುವ ಮಧುಗಿರಿ ತಾಲ್ಲೂಕಿನ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ (https://kppp.karnataka.gov.in/) ಬಿಡ್ ಸಲ್ಲಿಸಬಹುದು ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
ಅ) ಕನಿಷ್ಠ ಕಾಮಗಾರಿ ಮೊತ್ತ ರೂ 19.98 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.49,950/-ಗಳು ಹಾಗೂ ಆ) ಗರಿಷ್ಟ ಮೊತ್ತ ರೂ.96.24 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.1,92,480/- ಗಳು (1) ಭರ್ತಿಮಾಡಿದ ಟೆಂಡರ್‌ನ್ನು ಸಲ್ಲಿಸುವ ಅಂತಿಮ ದಿನಾಂಕ :28.11.2023 ಸಂಜೆ 5:00 ಘಂಟೆವರೆಗೆ (2) ಪೂರ್ವಭಾವಿ ಸಭೆ (KW-3 ಕಾಮಗಾರಿಗಳಿಗೆ) ದಿನಾಂಕ: 21.11.2023 ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ&ನೈರ್ಮಲ್ಯ ವಿಭಾಗ ತುಮಕೂರು (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 29.11.2023 ಸಂಜೆ 05.30 ಘಂಟೆಯ ನಂತರ (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 04.12.2023 ಬೆಳಿಗ್ಗೆ 11.00 ಘಂಟೆಯ ನಂತರ.

ಸಹಿ/- ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
DIPR/TMK/295/KSMCA/2023-24 ತುಮಕೂರು ವಿಭಾಗ, ತುಮಕೂರು

ಕರ್ನಾಟಕ ಸರ್ಕಾರ (ಸ್ವಾಯತ್ತ ಸಂಸ್ಥೆ)
ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಾರವಾರ

ಸಂ: ಕ್ರಿಮ್ಸ್/ಮರು-ಟೆಂಡರ್/114/2023-24 ದಿನಾಂಕ: 10.11.2023

ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕ್ರ.ಸಂ.1: ಟೆಂಡರ್ ಸಂಖ್ಯೆ: ಕ್ರಿಮ್ಸ್/ಮರು-ಟೆಂಡರ್/114/2023-24 ದಿನಾಂಕ: 10.11.2023, ಟೆಂಡರ್ ಹೆಸರು: ಕ್ರಿಮ್ಸ್ ಕಾರವಾರದ ಬೋಧಕ ಆಸ್ಪತ್ರೆಗೆ ಸಿದ್ಧಪಡಿಸಿದ ಪಥ್ಯಾಹಾರವನ್ನು ಒದಗಿಸಲು ಅಲ್ಪಾವಧಿ ಮರು-ಟೆಂಡರ್ ಆಹ್ವಾನಿಸುವ ಕುರಿತು. ಟೆಂಡರ್ ಪ್ರಾರಂಭ **ದಿನಾಂಕ: 13.11.2023.** ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 21.11.2023 ರಂದು ಸಂಜೆ 5.00 ರ ಒಳಗೆ.** ಈ ಮೇಲ್ಕಂಡ ಟೆಂಡರ್‌ಗಳಿಗೆ ಅರ್ಹ ಟೆಂಡರ್‌ದಾರರಿಂದ ಇ-ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್‌ನಲ್ಲಿ **http://www.kppp.karnataka.gov.in** ವೆಬ್‌ಸೈಟ್‌ನಲ್ಲಿ ಪಡೆದುಕೊಳ್ಳಬಹುದು.

DIPR/KWR/KSMCA/349/23-24 dt. 10.11.2023 ಸಹಿ/- ನಿರ್ದೇಶಕರು

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಶಿವಮೊಗ್ಗ.

ಟೆಂಡರ್ ಸಂಖ್ಯೆ:- ಟೆಂಡರ್ ಸಂಖ್ಯೆ: ಕಾಇಂ/ಪಂರಾಇಂ/ವಿಶಿ/ಕಿ.ಇಂ./ಟೆಂಡರ್/2022-23/852 Date:31.10.2023

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಶಿವಮೊಗ್ಗ ವ್ಯಾಪ್ತಿಯ ತೀರ್ಥಹಳ್ಳಿ ತಾಲ್ಲೂಕಿನ 2022-23 ಹಾಗೂ 2023-24 ನೇ ಸಾಲಿನ 2702 ಕೆರೆ, 3054 CMGSY, ವಿವೇಕಾ ಶಾಲೆ, ವಿವೇಕಾ ಪಿಯು ಶಾಲೆ, ಯೋಜನೆಯಲ್ಲಿ ಕಾಮಗಾರಿಗಳ ಟೆಂಡರ್ ಒಟ್ಟು ಮೊತ್ತ ರೂ. 2,12,33,000.00. ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in/ ಈ ವೆಬ್‌ಸೈಟ್‌ನಲ್ಲಿ ದಿ: 31/10/2023 ರಿಂದ ಪಡೆಯಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 13/11/2023 ಸಂಜೆ 4.30 ರವರೆಗೆ ನಿಗದಿ ಪಡಿಸಲಾಗಿರುತ್ತದೆ.
ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಂದ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/41/11/23-24/740

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ಚಿತ್ರದುರ್ಗ

Pho: 08194-234488 Email:-eerdwsd.chd@gmail.com
ನಂ. ಗ್ರಾ.ನೀ.ಸ.&ನೈ./ವಿ/ಚಿ/ಕಾಇಂ/ಬಿ4/ಟೆಂಡರ್/2023-24/ ದಿನಾಂಕ:-06.11.2023

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯು-2, 3 & 4 ನಿಭಂದನೆಗೊಳಪಟ್ಟಂತೆ, ಸೂಪರಿಂಟೆಂಡಿಂಗ್ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನೀಯರಿಂಗ್ ವೃತ್ತ ದಾವಣಗೆರೆ/ಮುಖ್ಯ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಬೆಂಗಳೂರು ಇವರಲ್ಲಿ ನೋಂದಾಯಿಸಿದ ಅರ್ಹ ದರ್ಜೆಯ ನೋಂದಣಿ ಮಾಡಿಸಿದ ಗುತ್ತಿಗೆದಾರರಿಂದ ಇ-ಪ್ರಾಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಏಕ ಮತ್ತು ದ್ವಿ-ಲಕೋಟೆ ಪದ್ಧತಿಯಲ್ಲಿ 2022-23 ನೇ ಸಾಲಿನ ಜಲಜೀವನ್ ಮಿಷನ್ ಯೋಜನೆಯಡಿ ಚಿತ್ರದುರ್ಗ ತಾಲ್ಲೂಕು ವ್ಯಾಪ್ತಿಯ 13 ಕಾಮಗಾರಿ ರೂ. 718.12 ಲಕ್ಷಗಳು, ಹೊಳಲ್ಕೆರೆ ತಾಲ್ಲೂಕು ವ್ಯಾಪ್ತಿಯ 16 ಕಾಮಗಾರಿ ರೂ. 1937.66 ಲಕ್ಷಗಳು ಹಿರಿಯೂರು ತಾಲ್ಲೂಕು ವ್ಯಾಪ್ತಿಯ 23 ಕಾಮಗಾರಿಗಳು 2492.00 ಲಕ್ಷಗಳು ಮತ್ತು ಹೊಸದುರ್ಗ ತಾಲ್ಲೂಕು ವ್ಯಾಪ್ತಿಯ 37 ಕಾಮಗಾರಿಗಳು ರೂ. 2176.16 ಲಕ್ಷಗಳು ಒಟ್ಟು 73.23.94 ಲಕ್ಷಗಳಿಗೆ (89 ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ ಹೊಂದಿದ ಕಾಮಗಾರಿಯ ಮೊತ್ತ ರೂ. 342.95 ಲಕ್ಷ) ಟೆಂಡರ್ ಪ್ರಕಟಿಸಲಾಗಿದೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 17.11.2023 ಸಂಜೆ 4-00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 18.11.2023 ರ ಸಂಜೆ 4-30 ಗಂಟೆ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ: 20.11.2023 ರ ಬೆಳಿಗ್ಗೆ 11-00 ಗಂಟೆ ಕಾಮಗಾರಿಗಳ ವಿವರಗಳನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುತ್ತದೆ. ಹಾಗೂ ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾ.ನೀ.ಸ&ನೈ, ವಿಭಾಗ, ಚಿತ್ರದುರ್ಗ ರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

DIPR/CTA/KSMCA/325/2023-24 ಸಹಿ/- ಕಾರ್ಯಪಾಲಕ ಅಭಿಯಂತರರು, ಗ್ರಾ.ನೀ.ಸ & ನೈ ವಿಭಾಗ, ಚಿತ್ರದುರ್ಗ.

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಅರಮನೆ ರಸ್ತೆ, ಬೆಂಗಳೂರು-560 001. ಫೋನ್: 22204928

ಕಡತ ಸಂಖ್ಯೆ: DTE-PLAN0SPS(1)/16/2023 ದಿನಾಂಕ: 10.11.2023

ಇ-ಟೆಂಡರ್ ಅಧಿಸೂಚನೆ

ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಈ ಕೆಳಕಂಡ ಸಾಮಗ್ರಿಗಳನ್ನು ಮತ್ತು ಸೇವೆಗಳನ್ನು ಪೂರೈಸುವ ಸಂಬಂಧ ಆಸಕ್ತ ಬಿಡ್‌ದಾರರಿಂದ ಇ-ಸಂಗ್ರಹಣೆ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಬಿಡ್‌ಗಳನ್ನು ಆಹ್ವಾನಿಸಿರುತ್ತಾರೆ. ಟೆಂಡರ್ ದಸ್ತಾವೇಜು ಮತ್ತು ಇತರ ವಿವರಗಳಿಗಾಗಿ **https://kppp.karnataka.gov.in** ಅನ್ನು ಸಂಪರ್ಕಿಸಬಹುದಾಗಿದೆ.

ಟೆಂಡರ್ ವೇಳಾಪಟ್ಟಿ ಈ ಕೆಳಗಿನಂತಿದೆ:

ಕ್ರ. ಸಂ.	ಟೆಂಡರ್ ಸಂಖ್ಯೆ	ಇ-ಪೋರ್ಟಲ್‌ನಲ್ಲಿ ದಸ್ತಾವೇಜನ್ನು ಅಪ್‌ಲೋಡ್ ಮಾಡುವ ದಿನಾಂಕ	ಪ್ರೀಬಿಡ್ ಸಭೆಯ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
1.	ಟೆಂಡರ್ ಸಂಖ್ಯೆ: DTE/2023-24/IND0003 ಪೀಠೋಪಕರಣ ಸರಬರಾಜು	09/11/2023	20/11/2023 11:00 a.m.	11.12.2023 5:00p.m.
2.	ಟೆಂಡರ್ ಸಂಖ್ಯೆ: DTE/2023-24/IND0004 ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಉಪಕರಣಗಳ ಸರಬರಾಜು	10/11/2023	20/11/2023 11:00 a.m.	11.12.2023 5:00p.m.

ಸಹಿ/- ನಿರ್ದೇಶಕರು,
DIPR/CP/RO/2083/2023-24 ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.

GOVERNMENT OF INDIA, MINISTRY OF FINANCE
INCOME TAX DEPARTMENT
OFFICE OF TAX RECOVERY OFFICER (CENTRAL)
Room No.320, 3rd Floor, C.R. Building, Queens Road, Bengaluru – 560001

PROCLAMATION OF SALE BY AUCTION

The undermentioned movable properties attached by the Income Tax Department will be sold by public auction through e-auction by M/s MSTC Limited (Auction No.34053) on behalf of Income Tax Department on **"as is where is and what is there is basis"** for recovery of the certificate debt of Rs.308,48,72,049/- due as on 10/11/2023 for the AY 2012-13 to 2018-19 from Shri Sukash Chandrasekharan.

Lot No.	Description of property to be sold	Lot No.	Description of property to be sold
01	BMW M-5, Regn No. PY-01-CM-6000 **Reserve Price – Rs.18,79,316/-**	02	Toyota Prado, Regn. No. TN-05-AJ-9199 **Reserve Price – Rs.22,50,347/-**
03	Range Rover, Regn No. TN-01-BD-0007 **Reserve Price – Rs.44,43,812/-**	04	Lamborghini, Regn. No. DL-2F-GX-06 **Reserve Price – Rs.38,52,424/-**
05	Jaguar XKR Coupe, Regn. No. PY-01-CG-6688 **Reserve Price – Rs.31,07,458/-**	06	Rolls Royce, Regn. No. DL-3C-AY-4199 **Reserve Price – Rs.1,74,77,008/-**
07	Ducati Diavel, Regn. No. OD-33-G-1786 **Reserve Price – Rs.3,56,237/-**	08	Bentley, Regn. No. DL-4C-AP-9009 **Reserve Price – Rs.83,35,734/-**
09	Innova Crysta, Regn. No. KL-07-CG-5020 **Reserve Price – Rs.11,89,930/-**	10	Toyota Fortuner, Regn. No. TN-47-AM-5585 **Reserve Price – Rs.15,31,173/-**
11	Nissan Teana, Regn. No. TN-21-AU-3217 **Reserve Price – Rs.2,03,118/-**	12	Porsche, Regn. No. WB-02-Y-2345 **Reserve Price – Rs.5,08,880/-**

Notice is hereby given that, in the absence of any order of postponement, the said property shall be sold by e-auction conducted online through MSTC Limited (A Govt of India Enterprise) **https://www.mstcecommerce.com** at **12.00 PM on the said 28th day of November 2023**. The sale shall be subject to the conditions prescribed in the Second Schedule to the Income Tax Act, 1961, and the rules made thereunder. Detailed Terms and Conditions of the auction sale and conditions of the vehicle may be downloaded from MSTC Website **https://www.mstcecommerce.com.** The properties can be inspected physically from 22/11/2023 to 24/11/2023 between 12.00 PM to 05.00 PM after taking prior appointment of the undersigned over Email bangalore.tro.central@incometax.gov.in or over phone 080-22862651. Bidders are advised to bid only after satisfying themself of the condition of the vehicle and transfer of ownership.
Given under my hand and seal at Bangalore this **10th day of November 2023.**

**Sd/-
TARUN KUMAR SHARMA
TAX RECOVERY OFFICER (CENTRAL)
BENGALURU**

ವಾಣಿಜ್ಯ ತೆರಿಗೆ ಇಲಾಖೆ

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ) ರವರ ಕಛೇರಿ, ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-5, ಕೊಠಡಿ ಸಂಖ್ಯೆ: 501, 'ಬಿ" ಬ್ಲಾಕ್, 5ನೇ ಮಹಡಿ, ವಾಣಿಜ್ಯ ತೆರಿಗೆ ಕಾರ್ಯಾಲಯ-2, ಕೋರಮಂಗಲ, ಬೆಂಗಳೂರು-560047.
ದೂರವಾಣಿ ಸಂಖ್ಯೆ: 080-25706157 ಫ್ಯಾಕ್ಸ್: 080-25706175

ಟೆಂಡರ್ ಸಂಖ್ಯೆ: CTD/2-23-24/SE0016 ದಿನಾಂಕ: 30-10-2023

ಇ-ಟೆಂಡರ್ ಅಧಿಸೂಚನೆ

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-5, ಬೆಂಗಳೂರು ರವರ ಕಛೇರಿಯ ಕಾರ್ಯವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಲು 23 ಟೆಕ್ನಿಕಲ್ ಅನಲಿಸ್ಟ್‌ಗಳ ಸೇವೆಯನ್ನು ಒದಗಿಸುವ ಸಲುವಾಗಿ ದ್ವಿ-ಲಕೋಟೆ/ದ್ವಿ-ಭಾಗಗಳ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮೂಲಕ ಟೆಂಡರ್ ಕರೆಯಲಾಗಿದೆ. ಟೆಂಡರಿನ ನಿಬಂಧನೆಗಳು, ಷರತ್ತುಗಳು, ನಮೂನೆ ಮತ್ತು ಇತರೆ ವಿವರಗಳನ್ನು ವೆಬ್‌ಸೈಟ್: **https://kppp.karnataka.gov.in and http://ctax.kar.nic.in** ಮೂಲಕ ಪಡೆಯಬಹುದಾಗಿದೆ. ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 18-11-2023. ಹೆಚ್ಚಿನ ವಿವರಗಳಿಗಾಗಿ ಕಛೇರಿ ದೂರವಾಣಿ ಸಂಖ್ಯೆ: 080-25706157 ರಲ್ಲಿ ಸಂಪರ್ಕಿಸಬಹುದು.

ಸಹಿ/-
ವಾಸಸಂಇ/ವಾಪ್ರ/2065/ಸ್ಕ್ಯಾನ್/2023-24 ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ) ವಿ.ಸ.ಸೇ.ತೆ.ಕ-5, ಬೆಂಗಳೂರು

Government of Karnataka
OFFICE OF THE DISTRICT OFFICER MINORITIES WELFARE DEPARTMENT, DHARWAD

Email : domdharwad@gmail.com Tel No : 0836-2971590

TENDER NOTIFICATION : SECTION-1

FOR THE YEAR 2023-24 TENDER DOCUMENTFOR SUPPLY OF FOOD AND OTHER MATERIALS (GROUP-A TO GROUP-D) TO POST METRIC HOSTELS/MINORITY RESIDENTIAL SCHOOLS OF MINORITY WELFARE DEPARTMENT , DHARWAD DISTRICT.

Office Of The District Officer Minority Welfare Department of Dharwad District, here by jointly invites Technical & financial Bids from officially registered, eligible suppliers, Non-governmental organization who are registered under law, & co-operative societies who are registered under society act to Supply food materials for all institutions spread over Dharwad Districtas described in the schedule of requirements. (1) Tender Reference No. and date MWD/DWD/FOOD TENDER-D/CR- 01 : 2023-24 Date : **08-11-2023** (2) Amount put to Tender **Rs.4,00,54,500/-** (3) Tender Apply start Date : **09-11-2023** (4) Last date & Time for submission of Tender Date : **11-12-2023** Time. 17.30 P.M (5) Pre Bid Meeting Date, Place and Time **18-11-2023** at 11.30 A.M District Minority Welfare Dept. Dharwad . (6) Submission of samples Date : **12-12-2023** (7) Date & Time of opening of Technical bid Date : **13-12-2023** Time:11.00 A.M At: Office of the Deputy Commissioner, Dharwad Dist. (subject to change) (8) Date,Time & Place of opening of Financial Bid **28-12-2023** Time. 11.00 AM At: Office of the Deputy Commissioner Dharwad(subject to change) (9) EMD Amount **Rs. 6,01,000/-** (10) Address for communication MINORITY WELFARE DEPARTMENT, SADHANAKERI ROAD DHARWAD PHONE NO. 0836-2971590 EMAIL:**domdharwad@gmail.com**
Interested eligible Registered in karnataka public procurement portal bidders can down load the bid documents with visiting the web site **https://kppp.karnataka.gov.in**

**Sd/- District officer,
MINORITY WELFARE DEPARTMENT,**
DIPR/DWD/KSMCA/476/2022-23 **DHARWAD**

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

#49, ಪರಿಸರ ಭವನ, ಚರ್ಚ್ ಸ್ಟ್ರೀಟ್ ಬೆಂಗಳೂರು-560 001
ಫೋನ್: 080-2558 6520/2558 9112 ಫ್ಯಾಕ್ಸ್: 080-2588 6321
e-mail: ho@kspcb.gov.in | Website: kspcb.karnataka.gov.in

No PCB 124 Infra EPH 2023/4246 Date:09/11/2023

ಪರಿಸರ ಸಾರ್ವಜನಿಕ ಸಭೆಗಾಗಿ ಅಧಿಸೂಚನೆ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಇವರು 333.89 ಹೆಕ್ಟೇರ್ ಪ್ರದೇಶದಲ್ಲಿ ಗೌರಿಬಿದನೂರು ಕೈಗಾರಿಕಾ ಪ್ರದೇಶ 3ನೇ ಹಂತವನ್ನು ಗೌಡಸಂದ್ರ ಮತ್ತು ದೊಡ್ಡಕುರುಗೋಡು ಗ್ರಾಮಗಳು, ಕಸಬಾ ಹೋಬಳಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಅಭಿವೃದ್ಧಿಪಡಿಸಲು ಪ್ರಸ್ತಾಪಿಸಿರುತ್ತಾರೆ. ಸದರಿ ಯೋಜನೆಗೆ ಪರಿಸರ ಆಘಾತ ಅಧ್ಯಯನ ಅಧಿಸೂಚನೆ ದಿನಾಂಕ 14.09.2006ರ ಪ್ರಕಾರ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಅದರ ಅಂಗವಾಗಿ ಸಾರ್ವಜನಿಕ ಪರಿಸರ ಸಮಾಲೋಚನಾ ಸಭೆಯನ್ನು ನಡೆಸಬೇಕಾಗಿರುತ್ತದೆ. ಇದರನ್ವಯ ಯೋಜನೆಯ ಪ್ರವರ್ತಕರು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದಿಂದ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ. ಅದರಂತೆ ಯೋಜನಾ ಪ್ರವರ್ತಕರು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದಿಂದ ಉಲ್ಲೇಖದ ನಿಯಮಗಳು (Terms of Reference, TOR) ಪತ್ರವನ್ನು File No 10 / 13 / 2023- IA. II, ದಿನಾಂಕ: 09.05.2023 ರಂತೆ ಪಡೆದಿರುತ್ತಾರೆ. ಯೋಜನಾ ಪ್ರವರ್ತಕರ ಪತ್ರ ಸಂಖ್ಯೆ. No. KIADB/EE-2/719/2023-24, ದಿನಾಂಕ: 21.08.2023 ರ ಕೋರಿಕೆಯ ಪ್ರಕಾರ ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ದಿನಾಂಕ: 12.12.2023 ರಂದು ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ, ಇವರ ನಿರ್ಧಾರದಂತೆ, ಈ ಕೆಳಕಾಣಿಸಿದ ವಿವರಗಳಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ನಡೆಸಲಾಗುತ್ತಿದೆ : **ಯೋಜನೆಯ ವಿವರಗಳು ಕೆಳಕಂಡಂತಿವೆ**

1	**ಸಂಸ್ಥೆಯ ಹೆಸರು ಮತ್ತು ವಿಳಾಸ:** ಕಾರ್ಯಪಾಲಕ ಅಭಿಯಂತರರು-2, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ನಂ: 14/3, ಎರಡನೇ ಮಹಡಿ, ಸಿ.ಎಫ್.ಸಿ ಕಟ್ಟಡ, ಮಹರ್ಷಿ ಅರವಿಂದ ಭವನ, ನೃಪತುಂಗ ರಸ್ತೆ, ಬೆಂಗಳೂರು-560 001.
2	**ಉದ್ದೇಶಿತ ಯೋಜನೆಯ ಸ್ಥಳ:** ಗೌರಿಬಿದನೂರು ಕೈಗಾರಿಕಾ ಪ್ರದೇಶ 3ನೇ ಹಂತ, ಗೌಡಸಂದ್ರ ಮತ್ತು ದೊಡ್ಡಕುರುಗೋಡು ಗ್ರಾಮಗಳು, ಕಸಬಾ ಹೋಬಳಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.
3	**ಯೋಜನೆಯ ಕಾರ್ಯ ಚಟುವಟಿಕೆ:** ಕಾರ್ಖಾನೆಗಳನ್ನು ಸ್ಥಾಪಿಸಲು ಇಂಡಸ್ಟ್ರೀಯಲ್ ಪ್ಲಾಟ್‌ಗಳನ್ನು ಅಭಿವೃದ್ಧಿ ಪಡಿಸಲು 333.89 ಹೆಕ್ಟೇರ್ ಕೈಗಾರಿಕಾ ಪ್ರದೇಶದ ರಚನೆ.
4	**ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ:** 12ನೇ ತಾರೀಕು ಡಿಸೆಂಬರ್ 2023 ರಂದು ಮಂಗಳವಾರ ಬೆಳಿಗ್ಗೆ 11.00 ಘಂಟೆಗೆ ಯೋಜನಾ ಸ್ಥಳ, ಕೈಗಾರಿಕ ನಿವೇಶನ ಸಂಖ್ಯೆ: 295, ಸರ್ವೆ ನಂ. 220/221, ದೊಡ್ಡಕುರುಗೋಡು ಗ್ರಾಮ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.
5	**ಯೋಜನೆಯ ವೆಚ್ಚ:** ರೂ. 492 ಕೋಟಿಗಳು.
6	**ಯೋಜನೆಯ ದಾಸ್ತವೇಜುಗಳನ್ನು ಸಾರ್ವಜನಿಕ ಪರಾಮರ್ಷೆಗೆ ಇಟ್ಟಿರುವ ಸ್ಥಳ:** 1) ಜಿಲ್ಲಾಧಿಕಾರಿಯವರ ಕಛೇರಿ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ. 2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಕಛೇರಿ, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ. 3) ಜಂಟಿ ನಿರ್ದೇಶಕರ ಕಛೇರಿ, ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ. 4) ನಗರ ಸಭಾ ಆಯುಕ್ತರ ಕಛೇರಿ, ಗೌರಿಬಿದನೂರು ನಗರಸಭೆ, ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ. 5) ತಹಸಿಲ್ದಾರರ ಕಛೇರಿ, ಗೌರಿಬಿದನೂರು ತಾಲ್ಲೂಕು ಕಛೇರಿ, ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ. 6) ಕಾರ್ಯನಿರ್ವಾಹಕ ಅಧಿಕಾರಿಯವರ ಕಛೇರಿ, ತಾಲ್ಲೂಕು ಪಂಚಾಯತ್, ಗೌರಿಬಿದನೂರು ತಾಲ್ಲೂಕು, ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ. 7) ಕಾರ್ಯದರ್ಶಿಯವರ ಕಛೇರಿ, ದೊಡ್ಡಕುರುಗೋಡು ಗ್ರಾಮ ಪಂಚಾಯತ್, ದೊಡ್ಡಕುರುಗೋಡು, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ. 8) ಹಿರಿಯ ಪರಿಸರ ಅಧಿಕಾರಿಯವರ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಪೂರ್ವ, 3ನೇ ಮಹಡಿ, ನಿಸರ್ಗ ಭವನ, 7ನೇ ಡಿ ಮುಖ್ಯ ರಸ್ತೆ, ತಿಮ್ಮಯ್ಯ ರಸ್ತೆ, ಶಿವನಗರ, ರಾಜಾಜಿನಗರ, ಬೆಂಗಳೂರು -560 010. 9) ಪ್ರಾದೇಶಿಕ ಕಛೇರಿ ಚಿಕ್ಕಬಳ್ಳಾಪುರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಮನೆ ನಂ. 708/62, 4ನೇ ವಿಭಾಗ, ಹೆಚ್.ಎಸ್. ಗಾರ್ಡನ್, ಸರ್.ಎಂ.ವಿ.ಕ್ರೀಡಾಂಗಣದ ಹತ್ತಿರ, ಚಿಕ್ಕಬಳ್ಳಾಪುರ 562101. 10) ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ-3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560 034. 11) **ಸಹಾಯ ಕೇಂದ್ರ,** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ರಸ್ತೆ, ಬೆಂಗಳೂರು-560 001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ ಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಮಿಂಚಂಚೆ ಮುಖಾಂತರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ ಅಧ್ಯಕ್ಷರು, ಸಾರ್ವಜನಿಕ ಪರಿಸರ ಸಮಿತಿ (ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ಜಾಲತಾಣ: **http://kspcb.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/-
ಸದಸ್ಯ ಕಾರ್ಯದರ್ಶಿ

Bharat Petroleum इंडियनऑयल IndianOil हिन्दुस्तान पेट्रोलियम HP

ಎಲ್‌ಪಿಜಿ ವಿತರಕರ ನೇಮಕಾತಿಗಾಗಿ ಡ್ರಾ /ಮರು ಡ್ರಾ ನಡೆಸಲು ಸೂಚನೆ

ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ (IOCL), ಭಾರತ್ ಪೆಟ್ರೋಲಿಯಮ್ ಕಾರ್ಪೊರೇಷನ್ ಲಿಮಿಟೆಡ್ (BPCL) ಮತ್ತು ಹಿಂದೂಸ್ತಾನ್ ಪೆಟ್ರೋಲಿಯಮ್ ಕಾರ್ಪೊರೇಷನ್ ಲಿಮಿಟೆಡ್ (HPCL) ಈ ಕೆಳಗೆ ತಿಳಿಸಿರುವ ಸ್ಥಳಗಳಲ್ಲಿ LPG ವಿತರಕರಿಗೆ (ಶಹೇರಿ/ಗ್ರಾಮೀಣ/ದುರ್ಗಮ್ ಕ್ಷೇತ್ರೀಯ ವಿತರಕ್) **15 ಮತ್ತು 16 ನವೆಂಬರ್ 2023 ರಂದು ಬೆಂಗಳೂರಿನ ಹೆಬ್ಬಾಳದಲ್ಲಿರುವ ಕೃಷಿ** ವಿಶ್ವವಿದ್ಯಾನಿಲಯದ ಅಲ್ಯೂಮ್ನಿ ಸಭಾಂಗಣದಲ್ಲಿ ಕೆಳಗೆ ನೀಡಲಾದ ದಿನಾಂಕ ಹಾಗೂ ಸಮಯದ ಪ್ರಕಾರ **ಡ್ರಾ/ಮರು ಡ್ರಾ** ನಡೆಯಲಿದೆ ಎಂಬುದನ್ನು ಇದರ ಮೂಲಕ ತಿಳಿಸಲಾಗಿದೆ.

ಕ್ರ. ಸಂ.	ಕ್ರ.ಸಂ. 20.05.2023 ಜಾಹೀರಾತಿನ ಪ್ರಕಾರ	OMC	ಸ್ಥಳ	ಜಿಲ್ಲೆ	ವರ್ಗ	ಮಾರುಕಟ್ಟೆ ಬಗೆ	ಲಾಟ್‌ಗಳ ಡ್ರಾ ದಿನಾಂಕ	ಡ್ರಾ ಸಮಯ
1	10	BPC	ಧಾರವಾಡ	ಧಾರವಾಡ	ಓಪನ್	ಶಹೇರಿ	15.11.23	9.30 AM
2	11	BPC	ನಗರಬಸ್ತಿಕೇರಿ	ಉತ್ತರ ಕನ್ನಡ	OBC	ಡಿಕೆವಿ	15.11.23	10.15 AM
3	3	IOC	ಕೋಣನಕೇರಿ	ಹಾವೇರಿ	ಓಪನ್	ಡಿಕೆವಿ	15.11.23	10.40 AM
4	5	IOC	ಹುನ್ನರಗಿ	ಬೆಳಗಾವಿ	SC	ಗ್ರಾಮೀಣ	15.11.23	11.10 AM
5	7	HPC	ದೊಡ್ಡಸಗರೆ	ತುಮಕೂರು	ಓಪನ್ (W)	ಗ್ರಾಮೀಣ	15.11.23	12.00 PM
6	12	BPC	ತೋವಿನಕೆರೆ	ತುಮಕೂರು	OBC	ಡಿಕೆವಿ	15.11.23	12.40 PM
7	6	HPC	ಆಸಗೋಡು	ಚಿಕ್ಕಮಗಳೂರು	ಓಪನ್	ಡಿಕೆವಿ	15.11.23	13.30 PM
8	8	BPC	ಮಂಡ್ಯ ಬೊಮ್ಮನಾಯಕನಹಳ್ಳಿ	ರಾಮನಗರ	SC	ಗ್ರಾಮೀಣ	15.11.23	13.50 PM
9	ಮರು-ಡ್ರಾ	IOC	ಅನಗವಾಡಿ	ಬಾಗಲಕೋಟೆ	ಓಪನ್ (PH)	ಗ್ರಾಮೀಣ	15.11.23	14.30 PM
10	ಮರು-ಡ್ರಾ	IOC	ಬೊಮ್ಮನಹಳ್ಳಿ	ಹಾವೇರಿ	OBC	ಗ್ರಾಮೀಣ	15.11.23	15.15 PM
11	14	BPC	ಕಬ್ಬನ್‌ಪೇಟೆ	ಬೆಂಗಳೂರು ನಗರ	ಓಪನ್	ಶಹೇರಿ	15.11.23	16.00 PM
12	ಮರು-ಡ್ರಾ	IOC	ರಂಗಸಮುದ್ರ	ತುಮಕೂರು	ಓಪನ್ (GP)	ಗ್ರಾಮೀಣ	15.11.23	16.45 PM
13	2	IOC	ಬೀಚಗಾನಹಳ್ಳಿ	ಚಿಕ್ಕಬಳ್ಳಾಪುರ	ಓಪನ್	ಗ್ರಾಮೀಣ	16.11.23	10.00 AM
14	13	BPC	ಚಿಂತಾಮಣಿ	ಚಿಕ್ಕಬಳ್ಳಾಪುರ	ಓಪನ್	ಗ್ರಾಮೀಣ	16.11.23	10.45 AM
15	ಮರು-ಡ್ರಾ	HPC	ಕಲ್ಲೂರು	ತುಮಕೂರು	SC	ಗ್ರಾಮೀಣ	16.11.23	12.00 PM
16	ಮರು-ಡ್ರಾ	BPC	ಸುಣಕಲ್‌ಬಿದರಿ	ಹಾವೇರಿ	ಓಪನ್ (W)	ಗ್ರಾಮೀಣ	16.11.23	13.15 PM
17	ಮರು-ಡ್ರಾ	IOC	ತೂಬಿನಕೆರೆ	ಮಂಡ್ಯ	ಓಪನ್ (W)	ಗ್ರಾಮೀಣ	16.11.23	14.45 PM
18	ಮರು-ಡ್ರಾ	IOC	ಹನಬಲ್	ಹಾಸನ	SC	ಗ್ರಾಮೀಣ	16.11.23	15.45 PM
19	ಮರು-ಡ್ರಾ	IOC	ತುಗಾವ್‌ಹಲ್ಸಿ	ಬೀದರ	SC	ಡಿಕೆವಿ	16.11.23	16.00 PM

ಡ್ರಾಗೆ ಅರ್ಹರಾಗಿರುವ ಅರ್ಜಿದಾರರು ನಿಗದಿತ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಸರ್ಕಾರಿ ಇಲಾಖೆಯಿಂದ ನೀಡಿದ ಯಾವುದೇ ಭಾವಚಿತ್ರದ ಗುರುತಿನ ಚೀಟಿಯೊಂದಿಗೆ ನೇರವಾಗಿ ಹಾಜರಾಗಲು ಕೋರಲಾಗಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ನಿನ್ನೆ ನಾನು ಬುದ್ಧಿವಂತನಾಗಿದ್ದೆ. ಹೀಗಾಗಿ, ಪ್ರಪಂಚವನ್ನು ಬದಲಿಸಬೇಕೆಂದು ಬಯಸಿದ್ದೆ. ಇಂದು ನಾನು ವಿವೇಕಿಯಾಗಿದ್ದೇನೆ. ಆದ್ದರಿಂದ, ನನ್ನನ್ನು ನಾನು ಬದಲಿಸಿಕೊಳ್ಳುತ್ತಿದ್ದೇನೆ. -ರೂಮಿ

ಪ್ರಕರಣಗಳ ವಿಚಾರಣೆ ಮುಂದಕ್ಕೆ ಸಿಜೆಐ ಕಳವಳ ಅರ್ಥ ಮಾಡಿಕೊಳ್ಳಬೇಕು

ದೇಶದ ಸುಪ್ರೀಂ ಕೋರ್ಟ್ 'ತಾರೀಖ್ ಪೆ ತಾರೀಖ್' ನ್ಯಾಯಾಲಯ ಆಗುವುದನ್ನು ತಾವು ಬಯಸುವುದಿಲ್ಲ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಅವರು ಹೇಳಿದ್ದಾರೆ. ಈ ಮಾತು ದೇಶದ ಎಲ್ಲ ಹಂತಗಳ ನ್ಯಾಯಾಲಯಗಳು ಎದುರಿಸುತ್ತಿರುವ ಗಂಭೀರ ಸಮಸ್ಯೆಯೊಂದನ್ನು ಹೇಳುತ್ತಿದೆ. ಕೋರ್ಟ್‌ಗಳಲ್ಲಿ ವ್ಯಾಪಕವಾಗಿರುವ, ಪ್ರಕರಣದ ವಿಚಾರಣೆಯನ್ನು ಮುಂದಿನ ದಿನಾಂಕಕ್ಕೆ ನಿಗದಿ ಮಾಡಿಸಿಕೊಳ್ಳುವ ಸಂಸ್ಕೃತಿಯ ಬಗ್ಗೆ ಸಿಜೆಐ ಈ ಮಾತು ಆಡಿದ್ದಾರೆ. ಈ ಸಂಸ್ಕೃತಿಯು ದೇಶದ ನ್ಯಾಯಾಂಗ ವ್ಯವಸ್ಥೆಯ ಪಾಲಿಗೆ ಒಂದು ಶಾಪವಾಗಿ ಪರಿಣಮಿಸಿದೆ. ಪ್ರಕರಣಗಳ ವಿಚಾರಣೆಯನ್ನು ಮತ್ತೆ ಮತ್ತೆ ಮುಂದಕ್ಕೆ ಹಾಕುವುದು ನ್ಯಾಯ ಕೇಳಿ ಬಂದವರ ಹಿತಾಸಕ್ತಿಗಳಿಗೆ ವಿರುದ್ಧ. ಅತ್ಯಂತ ಕ್ಷುಲ್ಲಕವಾದ ಕೆಲವು ಕಾರಣಗಳಿಗೂ ಕೆಲವು ವಕೀಲರು ವಿಚಾರಣೆಯನ್ನು ಮುಂದಕ್ಕೆ ಹಾಕುವಂತೆ ಮನವಿ ಮಾಡುವುದಿದೆ. ಸಿಜೆಐ ಅವರು ಮೇಲೆ ಉಲ್ಲೇಖಿಸಿದ ಮಾತು ಆಡಿದ ದಿನ ತಮ್ಮ ಎದುರು, ಪ್ರಕರಣಗಳ ವಿಚಾರಣೆಯನ್ನು ಮುಂದಕ್ಕೆ ಹಾಕುವಂತೆ ಕೋರಿ ಒಟ್ಟು 178 ಮನವಿಗಳು ಇವೆ ಎಂದು ಹೇಳಿದ್ದರು. ಸೆಪ್ಟೆಂಬರ್ ಹಾಗೂ ಅಕ್ಟೋಬರ್‌ನಲ್ಲಿ ಪ್ರಕರಣಗಳ ವಿಚಾರಣೆಯನ್ನು ಮುಂದಕ್ಕೆ ಹಾಕುವಂತೆ ಕೋರಿ ಒಟ್ಟು 3,688 ಮನವಿಗಳು ಬಂದಿದ್ದವು ಎಂದು ಅವರು ಹೇಳಿದ್ದರು. ತೀರಾ ಅಗತ್ಯವಾದ ಸಂದರ್ಭ ಹೊರತುಪಡಿಸಿದರೆ ಬೇರೆ ಸಂದರ್ಭಗಳಲ್ಲಿ ವಿಚಾರಣೆಯನ್ನು ಮುಂದಕ್ಕೆ ಹಾಕುವಂತೆ ಮನವಿ ಮಾಡಬಾರದು ಎಂದು ಸಿಜೆಐ ಅವರು ವಕೀಲ ಸಮುದಾಯಕ್ಕೆ ಮನವಿ ಮಾಡಿದ್ದಾರೆ. ನ್ಯಾಯಾಲಯದ ಬಗೆಗಿನ ಗ್ರಹಿಕೆಯನ್ನು ಬದಲಾಯಿಸಬೇಕು ಎಂಬ ಉದ್ದೇಶದಿಂದ ಸಿಜೆಐ ಅವರು ಕಳೆದ ವರ್ಷ ಒಂದು ಪ್ರಕರಣದ ವಿಚಾರಣೆಯನ್ನು ಮುಂದಕ್ಕೆ ಹಾಕಲು ಒಪ್ಪಿರಲಿಲ್ಲ.



ವಿಚಾರಣೆಯನ್ನು ಮತ್ತೆ ಮತ್ತೆ ಮುಂದಕ್ಕೆ ಹಾಕುವುದು ನ್ಯಾಯದಾನದ ಅಂತಿಮ ಉದ್ದೇಶವನ್ನು ಹಾಳುಮಾಡುತ್ತದೆ

ವಿಚಾರಣೆಯನ್ನು ಮತ್ತೆ ಮತ್ತೆ ಮುಂದಕ್ಕೆ ಹಾಕುವುದು ನ್ಯಾಯದಾನದ ಅಂತಿಮ ಉದ್ದೇಶವನ್ನು ಹಾಳುಮಾಡುತ್ತದೆ, ನ್ಯಾಯ ಕೇಳಿ ಬಂದವರಿಗೆ ಹಲವು ಬಗೆಗಳಲ್ಲಿ ತೊಂದರೆ ಉಂಟುಮಾಡುತ್ತದೆ. ಇದರಲ್ಲಿ ಹೆಚ್ಚಿನ ತೊಂದರೆಗೆ ಒಳಗಾಗುವವರು ಬಡವರು. ಪ್ರಕರಣಗಳಲ್ಲಿ ತ್ವರಿತವಾಗಿ ನ್ಯಾಯ ಪಡೆಯಲು ಅವರಿಗೆ ಸಾಧ್ಯವಾಗುವುದಿಲ್ಲ, ಅವರು ಹಲವು ಬಗೆಗಳಲ್ಲಿ ಹೆಚ್ಚು ಹಣ ವೆಚ್ಚ ಮಾಡಬೇಕಾಗುತ್ತದೆ. ನ್ಯಾಯದಾನ ವಿಳಂಬ ಆಗುವುದು ಅಂದರೆ ನ್ಯಾಯದಾನವನ್ನು ನಿರಾಕರಿಸುವುದಕ್ಕೆ ಸಮ. ಹೀಗಾಗಿ, ತನ್ನ ಬಳಿ ನ್ಯಾಯ ಕೇಳಿ ಬರುವವರಿಗೆ ನ್ಯಾಯವನ್ನು ಆದಷ್ಟು ಬೇಗ ನೀಡಲು ನ್ಯಾಯಾಂಗ ವ್ಯವಸ್ಥೆಯು ಗಮನಹರಿಸಬೇಕು. ಒಂದಲ್ಲ ಒಂದು ಕಾರಣಕ್ಕೆ ವಿಚಾರಣೆ ಹಲವು ಬಾರಿ ಮುಂದಕ್ಕೆ ಹೋದ ಪ್ರಕರಣಗಳಿವೆ. ತುರ್ತು ವಿಚಾರಣೆಯ ಮನವಿಯೊಂದಿಗೆ ಸಲ್ಲಿಸಲಾದ ಅರ್ಜಿಗಳ ವಿಚಾರಣೆಯನ್ನು ಕೂಡ ಮುಂದಕ್ಕೆ ಹಾಕುವಂತೆ ಮನವಿ ಸಲ್ಲಿಸಿದ ನಿದರ್ಶನಗಳು ಇವೆ. 2,361 ಪ್ರಕರಣಗಳನ್ನು ಬೇಗ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು ಎಂಬ ಮನವಿಯು ವಕೀಲರ ಕಡೆಯಿಂದ ಬಂದಿತ್ತು. ಆದರೆ ಅವು ವಿಚಾರಣೆಗೆ ಬಂದಾಗ, ಅವುಗಳಲ್ಲಿ ಬಹುತೇಕ ಪ್ರಕರಣಗಳ ವಿಚಾರಣೆಯನ್ನು ಮುಂದಕ್ಕೆ ಹಾಕಬೇಕು ಎಂಬ ಮನವಿ ಕೂಡ ಬಂತು ಎಂದು ಸಿಜೆಐ ಹೇಳಿದ್ದಾರೆ. ಹಣ ಮತ್ತು ನ್ಯಾಯಾಂಗದ ಸಮಯವನ್ನು ಅತ್ಯಂತ ಉತ್ತಮವಾದ ಬಗೆಯಲ್ಲಿ ಬಳಸಿಕೊಳ್ಳಬೇಕಿರುವಾಗ, ಈ ರೀತಿ ವಿಚಾರಣೆಯನ್ನು ಮುಂದಕ್ಕೆ ಹಾಕುವುದರಿಂದ ಸಂಪನ್ಮೂಲವೂ ವ್ಯರ್ಥವಾಗುತ್ತದೆ. ಈ ಸಮಸ್ಯೆಯು ಅತ್ಯಂತ ಕೆಳಗಿನ ಹಂತದ ನ್ಯಾಯಾಲಯಗಳಿಂದ ಆರಂಭಿಸಿ ಸುಪ್ರೀಂ ಕೋರ್ಟ್‌ವರೆಗೆ ಇದೆ.

ದೇಶದಲ್ಲಿ ವಿವಿಧ ಹಂತಗಳ ನ್ಯಾಯಾಲಯಗಳಲ್ಲಿ ವಿಚಾರಣೆಗೆ ಬಾಕಿ ಇರುವ ಪ್ರಕರಣಗಳ ಸಂಖ್ಯೆಯು ದೊಡ್ಡದಿದೆ. ಈ ಸಂಖ್ಯೆಯು ಕಡಿಮೆ ಆಗುತ್ತಿಲ್ಲ. ಬೇರೆ ಬೇರೆ ನ್ಯಾಯಾಲಯಗಳಲ್ಲಿ ಐದು ಕೋಟಿಗೂ ಹೆಚ್ಚು ಪ್ರಕರಣಗಳು ವಿಚಾರಣೆಯ ಹಂತದಲ್ಲಿ ಇವೆ ಎಂದು ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು ರಾಜ್ಯಸಭೆಯಲ್ಲಿ ಜುಲೈ ತಿಂಗಳಲ್ಲಿ ಹೇಳಿದ್ದರು. ಈ ಪ್ರಕರಣಗಳಲ್ಲಿ ಹಲವು ಇನ್ನೂ ಇತ್ಯರ್ಥ ಕಾಣದಿರುವುದಕ್ಕೆ ಕಾರಣ, ಅವುಗಳ ವಿಚಾರಣೆಯನ್ನು ಮತ್ತೆ ಮತ್ತೆ ಮುಂದಕ್ಕೆ ಹಾಕಿರುವುದೂ ಆಗಿರಬಹುದು. ವಿಚಾರಣೆಯನ್ನು ಮುಂದಕ್ಕೆ ಹಾಕುವುದರಿಂದ ಆಗುವ ವಿಳಂಬವು ನ್ಯಾಯಾಂಗ ವ್ಯವಸ್ಥೆಯ ಬಗ್ಗೆ ಜನಸಾಮಾನ್ಯರು ಇಟ್ಟಿರುವ ವಿಶ್ವಾಸಕ್ಕೆ ಪೆಟ್ಟು ಕೊಡಬಹುದು. ಪ್ರಕರಣಗಳ ವಿಚಾರಣೆಯು ಬಾಕಿ ಉಳಿಯುವ ಪ್ರಮಾಣವನ್ನು ತಗ್ಗಿಸುವ ಉದ್ದೇಶದಿಂದ, ವಿಚಾರಣೆ ಮುಂದಕ್ಕೆ ಹಾಕುವುದಕ್ಕೆ ಮಿತಿ ಇರಬೇಕು ಎಂದು ಕಾನೂನು ಆಯೋಗ ಹೇಳಿದೆ. ನ್ಯಾಯಾಂಗ ವ್ಯವಸ್ಥೆಯಲ್ಲಿ ವಿಚಾರಣೆಗಳನ್ನು ಮುಂದಕ್ಕೆ ಹಾಕುವುದು ಅಗತ್ಯ ಹಾಗೂ ಅದು ಕಾನೂನುಬದ್ಧ ಕ್ರಮ ಕೂಡ ಹೌದು. ಆದರೆ, ಈ ಸೌಲಭ್ಯದ ದುರ್ಬಳಕೆಯನ್ನು ನ್ಯಾಯಾಲಯಗಳು ಕಂಡಿವೆ. ಈ ಸೌಲಭ್ಯವನ್ನು ಯಾರೂ ವ್ಯವಸ್ಥೆಯನ್ನು ಹಾಳು ಮಾಡಲು ಬಳಸದಂತೆ ಎಲ್ಲರೂ ನಿಗಾ ವಹಿಸಬೇಕಿದೆ.

ದಿನದ ಟ್ವೀಟ್

ಸಕಾರಾತ್ಮಕ ಬೆಳವಣಿಗೆ



ಅಧಿಕಾರಿಗಳು ಮತ್ತು ರಾಜಕಾರಣಿಗಳು ಎರಡೂ ವರ್ಗದವರು ಇತ್ತೀಚಿನ ದಿನಗಳಲ್ಲಿ ಬೆಂಗಳೂರಿನಲ್ಲಿ ಸಂಚರಿಸಲು 'ನಮ್ಮ ಮೆಟ್ರೊ'ವನ್ನು ಆಯ್ಕೆ ಮಾಡಿಕೊಳ್ಳುತ್ತಿರುವುದನ್ನು ನೋಡಲು ಖುಷಿಯಾಗುತ್ತದೆ. ಹೆಚ್ಚು ಜನರು ಪ್ರಯಾಣಕ್ಕೆ ಇಂತಹ ಆಯ್ಕೆಗಳನ್ನು ಮಾಡಿಕೊಳ್ಳಲು ಪ್ರೋತ್ಸಾಹ ನೀಡುವುದು ನಗರಪ್ರದೇಶದಲ್ಲಿ ಪರಿಸರ ಮತ್ತು ಸಂಚಾರದ ದೃಷ್ಟಿಯಿಂದ ಹೆಚ್ಚು ಪರಿಣಾಮಕಾರಿ. ಈ ಸಕಾರಾತ್ಮಕ ರೂಪಾಂತರವನ್ನು ನಾವೆಲ್ಲರೂ ಸೇರಿ ಮುನ್ನಡೆಸೋಣ.

ಪಿ.ಸಿ.ಮೋಹನ್, ಬಿಜೆಪಿ ಸಂಸದ

ಕಿಡಿನುಡಿ



ಬಿಹಾರದ ಜಾತಿಗಣತಿಯ ಅಂಕಿಅಂಶವು ಹಲವು ರೀತಿಯಲ್ಲಿ, ಹಲವು ಕಾರಣಗಳಿಂದಾಗಿ ಗಮನ ಸೆಳೆಯುತ್ತದೆ. ಒಂದು ಆಯಾಮದಲ್ಲಿ, ಬಿಹಾರವು ಎಷ್ಟೊಂದು ಬಡವಾಗಿದೆ ಎಂಬುದನ್ನು ಅದು ತೋರಿಸುತ್ತದೆ. ತಾವು 18 ವರ್ಷಗಳಿಂದ ಅಧಿಕಾರ ನಡೆಸುತ್ತಿರುವುದರ ನಡುವೆಯೂ ರಾಜ್ಯದ ಶೇ 14ರಷ್ಟು ಜನರು ಇನ್ನೂ ಜೋಪಡಿಗಳಲ್ಲೇ ವಾಸಿಸುತ್ತಿದ್ದಾರೆ ಎಂದಾದರೆ, ಆಡಳಿತ ನಿರ್ವಹಣೆಯಲ್ಲಿ ವಿಫಲರಾಗಿರುವುದನ್ನು ನಿತೀಶ್ ಕುಮಾರ್ ಅವರು ಒಪ್ಪಿಕೊಳ್ಳಬೇಕಾಗುತ್ತದೆ.

ಶಿವಂ ವಿಜ್, ಲೇಖಕ

25 ವರ್ಷಗಳ ಹಿಂದೆ

ಬುಧವಾರ, 11-11-1998

- **ಪಟೇಲ್ ವಿರುದ್ಧ ಅವಿಶ್ವಾಸ ನಿರ್ಣಯಕ್ಕೆ ಸೋಲು**

ಬೆಂಗಳೂರು, ನ. 10– ಜೆ.ಎಚ್. ಪಟೇಲ್ ನೇತೃತ್ವದ ರಾಜ್ಯ ಜನತಾದಳ ಸರ್ಕಾರದ ವಿರುದ್ಧ ವಿರೋಧಿ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಸಂಯುಕ್ತವಾಗಿ ಮಂಡಿಸಿದ್ದ ಅವಿಶ್ವಾಸ ನಿರ್ಣಯವನ್ನು ವಿಧಾನಸಭೆ ಇಂದು 83– 133 ಮತಗಳಿಂದ ತಿರಸ್ಕರಿಸಿತು.

ಇದರೊಂದಿಗೆ, ಈ ಸರ್ಕಾರ ಎರಡು ವರ್ಷಗಳ ಅವಧಿಯಲ್ಲಿ ಮೂರನೆಯ ಬಾರಿಗೆ ಬಹುಮತ ಸಾಬೀತುಪಡಿಸಿತು.

- **'ಎಕ್ಸ್‌ರೇನಲ್ಲಿ ಸುಂದರಿಯನ್ನು ನೋಡಿದರೆ...'**

ಬೆಂಗಳೂರು, ನ. 10– 'ನಮ್ಮ ಸರ್ಕಾರದ ಸಾಧನೆಗಳನ್ನು ನೀವು ಎಕ್ಸ್‌ರೇ ಕಣ್ಣಿನಿಂದ ನೋಡುತ್ತಿದ್ದೀರಿ. ಎಕ್ಸ್‌ರೇ ಕಣ್ಣಿನಲ್ಲಿ ಒಬ್ಬ ಸುಂದರಿ ಅಥವಾ ಪೈಲ್ವಾನ ಯಾರನ್ನು ನೋಡಿದರೂ ಕಾಣುವುದು ಬರೀ ಎಲುಬು ಮಾತ್ರ. ಎಲ್ಲವನ್ನೂ ಎಕ್ಸ್‌ರೇ ಕಣ್ಣಿನಲ್ಲಿ ನೋಡಿದರೆ ಸೌಂದರ್ಯ ನೋಡಲಾಗದೆ ಜೀವನ ಕಷ್ಟವಾಗುತ್ತದೆ. ಹಾಗೆಯೇ ಸರ್ಕಾರದ ಸಾಧನೆಗಳನ್ನು ಎಕ್ಸ್‌ರೇ ಕಣ್ಣಿನಿಂದ ನೋಡುವುದನ್ನು ಬಿಡಿ' ಎಂದು ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು ಇಂದು ವಿರೋಧಿ ಸದಸ್ಯರನ್ನು ಚುಚ್ಚಿದರು.

'ಕಣ್ಣಿದ್ದರೆ ಕಾಣುತ್ತದೆ, ಕಿವಿಯಿದ್ದರೆ ಕೇಳುತ್ತದೆ. ಆದರೆ ಕಾಣಲು, ಕೇಳಲು ತಯಾರಿಲ್ಲ ಎಂಬ ಧೋರಣೆಯನ್ನು ತಳೆದರೆ, ನಮ್ಮ ಸರ್ಕಾರದ ಸಾಧನೆಗಳಾದರೂ ಹೇಗೆ ನಿಮಗೆ ಕಾಣುತ್ತವೆ?' ಎಂದರು.

50 ವರ್ಷಗಳ ಹಿಂದೆ

ಭಾನುವಾರ, 11-11-1973

- **ರಸಗೊಬ್ಬರ ಉತ್ಪಾದನೆ ಹೆಚ್ಚಿಸಲು ಪೆಟ್ರೋಲ್ ಬಳಕೆ ಮಿತಿಗೆ ಬಿಗಿ ಕ್ರಮ**

ನವದೆಹಲಿ, ನ. 10– ಭಾರತಕ್ಕೆ ಕಚ್ಚಾ ತೈಲ ಸರಬರಾಜು ಖೋತಾ ಮಾಡುವುದಿಲ್ಲ ಎಂದು ಕೆಲವು ಅರಬ್ ರಾಷ್ಟ್ರಗಳು ಆಶ್ವಾಸನೆ ನೀಡಿದ್ದರೂ ಪೆಟ್ರೋಲ್ ಬಳಕೆಯ ಮೇಲೆ ಮಿತಿ ಹೇರುವ ಸರ್ಕಾರದ ಕ್ರಮಗಳನ್ನು ಸಡಿಲಗೊಳಿಸುವ ಸಂಭವವಿಲ್ಲ.

ಪೆಟ್ರೋಲ್ ಬಳಕೆಯಲ್ಲಿ ಶೇ 25ರಷ್ಟಾದರೂ ಕಡಿತ ಸಾಧಿಸದೇ ಹೋದರೆ ಕೃತಕ ಗೊಬ್ಬರಗಳ ಉತ್ಪಾದನೆಗೆ ಅತ್ಯಗತ್ಯವಾದ ನ್ಯಾಫ್ತಾದಲ್ಲಿ ಅರ್ಧದಷ್ಟಾದರೂ ದೊರೆಯುವುದು ಕಷ್ಟವಾಗುತ್ತದೆ ಎಂದು ಪೆಟ್ರೋಲಿಯಂ ಮತ್ತು ರಾಸಾಯನಿಕ ವಸ್ತುಗಳ ಸಚಿವಾಲಯ ಅಭಿಪ್ರಾಯಪಟ್ಟಿದೆ.

- **ಈಜಿಪ್ಟ್ –ಇಸ್ರೇಲ್ ಕದನವಿರಾಮ ಒಪ್ಪಂದಕ್ಕೆ ಇಂದು ಸಹಿ**

ಕೈರೊ, ನ. 10– ಅಮೆರಿಕ ರೂಪಿಸಿದ ಆರು ಅಂಶಗಳ ಕದನವಿರಾಮ ಒಪ್ಪಂದಕ್ಕೆ ಈಜಿಪ್ಟ್ ಮತ್ತು ಇಸ್ರೇಲ್ ಭಾನುವಾರ ಸಹಿ ಹಾಕುವುವೆಂದು ವಿಶ್ವಸಂಸ್ಥೆ ವಕ್ತಾರರೊಬ್ಬರು ಇಂದು ಇಲ್ಲಿ ಪ್ರಕಟಿಸಿದರು.

ಕೈರೊ– ಸೂಯೆಜ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಉಭಯ ರಾಷ್ಟ್ರಗಳ ಪ್ರತಿನಿಧಿಗಳೂ ಶಾಂತಿ ಒಪ್ಪಂದಕ್ಕೆ ಸಹಿ ಹಾಕುವರು.

ಕಣ್ಣುಗಳಿಗೆ ಪೊರೆ ಕವಿಸುವವರ ಅಬ್ಬರದಲ್ಲಿ ಪೊರೆ ತೆಗೆದವರು ಮರೆಯಾಗಬಾರದು

'ಕನ್ನಡದ ಕಣ್ವ'ರ ಮರೆಯಬಹುದೇ?



ಪಡಸಾಲೆ

ರಘುನಾಥ ಚ.ಹ.

'ಬಾಹುಬಲಿ' ಎಂದಕೂಡಲೇ ನಮ್ಮ ನೆನಪಿಗೆ ಬರುವುದು, ರಾಜಮೌಳಿ ನಿರ್ದೇಶನದ ಸಿನಿಮಾ. ಆದರೆ, 'ಬಾಹುಬಲಿ' ಎಂದೊಡನೆ ನಮಗೆ ನೆನಪಾಗಬೇಕಾದುದು ಶ್ರವಣಬೆಳಗೊಳದ ಗೊಮ್ಮಟ. ದುರದೃಷ್ಟವಶಾತ್, ಬಾಹುಬಲಿಯ ರೂಪದಲ್ಲಿ ಜಿಮ್‌ಗಳಲ್ಲಿ ರೂಪುಗೊಂಡ ಪ್ರಭಾಸ್ ಎನ್ನುವ ಸಿನಿಮಾ ನಟ ಪರಿಚಿತನೇ ಹೊರತು, ಗೊಮ್ಮಟ ಮೂರ್ತಿಯಲ್ಲ. ಗೊಮ್ಮಟನನ್ನಷ್ಟೇ ಅಲ್ಲ– ಈ ನೆಲದ ಅನೇಕ ಅಸ್ಮಿತೆಗಳ ಕುರಿತು ನಮಗೆ ವಿಸ್ಮೃತಿ ಆವರಿಸಿಕೊಂಡಿದೆ; ಎಂದೂ ಮರೆಯಬಾರದ ವ್ಯಕ್ತಿತ್ವಗಳನ್ನು ಮರೆವೆಯ ಮಡಿಲಿಗೆ ದೂಡಿದ್ದೇವೆ. ಹಾಗೆ, ಮರೆವಿನ ಕಣಿವೆಯ ಅಂಚಿನಲ್ಲಿರುವ 'ಮರೆಯಬಾರದ ಮಹಾನುಭಾವ'ರಲ್ಲೊಬ್ಬರು ಡಾ. ಎಂ.ಸಿ.ಮೋದಿ.

ಡಾ. ಮುರಿಗೆಪ್ಪ ಚನ್ನವೀರಪ್ಪ ಮೋದಿ (ಅ. 4, 1916 – ನ. 11, 2005) ಭಾರತದ ಪ್ರಖ್ಯಾತ ನೇತ್ರತಜ್ಞರಲ್ಲೊಬ್ಬರು. ತಾರಾವರ್ಚಸ್ಸು ಪಡೆದು, ಜನಮನಕ್ಕೆ ಹತ್ತಿರವಾದ ಕರ್ನಾಟಕದ ಮೊದಲ ವೈದ್ಯರು. ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ಮೊದಲ ವೈದ್ಯರೂ ಹೌದು. 'ಕಣ್ಣು ಕೊಡುವ ಅಣ್ಣ' ಎಂದು ಪ್ರಸಿದ್ಧರಾಗಿದ್ದ ಡಾ. ಮೋದಿ ಒಂದು ತಲೆಮಾರಿನ ಕಣ್ಣು ತೆರೆಸಿದವರು, ಕಣ್ಣುಗಳ ಪೊರೆ ನೀಗಿದವರು. ತಮ್ಮ ಸೇವಾಕಾರ್ಯಕ್ಕೆ ಕ್ಯಾಮೆರಾಗಳ ಪ್ರಭಾವಳಿ ಇಲ್ಲದಿದ್ದ ಸಂದರ್ಭದಲ್ಲೂ ದಿನಕ್ಕೆ ಹದಿನೆಂಟು ತಾಸು ದುಡಿದ ಕಾಯಕಜೀವಿ. ಭಾರತದಲ್ಲಿ ಸಾಮೂಹಿಕ ನೇತ್ರ ಶಸ್ತ್ರಚಿಕಿತ್ಸೆ ಹಾಗೂ ಸಂಚಾರಿ ಘಟಕಗಳನ್ನು ಆರಂಭಿಸಿದ ಮೊದಲ ವೈದ್ಯ. ಮಂದಿರಗಳನ್ನು ಕಟ್ಟುವ ಮೂಲಕ ಜನರಿಗೆ ಹತ್ತಿರವಾಗಲು ಮೋದಿಯವರು ಬಯಸಲಿಲ್ಲ. ಜನರನ್ನೇ ದೇವರೆಂದು ಭಾವಿಸಿದರು. 'ನನ್ನ ಆಸ್ಪತ್ರೆಯೇ ದೇವಾಲಯ. ರೋಗಿಗಳೇ ದೇವರು. ಅವರ ಸೇವೆಯೇ ದೇವರ ಪೂಜೆ' ಎಂದು ಹೇಳುತ್ತಿದ್ದರು.

ಮೋದಿಯವರ ಪಾಲಿಗೆ ಮಹಾತ್ಮ ಗಾಂಧಿ ಪ್ರಚಾರದ ಸಲಕರಣೆಯಾಗಿರಲಿಲ್ಲ, ಬದುಕಿನ ದಾರಿಗೆ ಬೆಳಕಾಗಿದ್ದರು. 1942ರ 'ಕ್ವಿಟ್ ಇಂಡಿಯಾ' ಚಳವಳಿಯಲ್ಲಿ ಬೀಳಗಿಗೆ ಬಂದಿದ್ದ ಮಹಾತ್ಮನ ಭಾಷಣ ಕೇಳಿದ್ದು ಅವರ ಬದುಕಿನ ದಿಕ್ಕನ್ನೇ ಬದಲಿಸಿತು, ಮಾಡಬೇಕಾದ ಕೆಲಸ ಯಾವುದೆನ್ನುವುದನ್ನು ನಿಚ್ಚಳಗೊಳಿಸಿತು. ಭಿಕ್ಷೆ ಬೇಡುತ್ತಿದ್ದ ಕುರುಡರನ್ನು ಕಂಡು ಮಮ್ಮಲ ಮರುಗಿದರು. ಜನಸಾಮಾನ್ಯರ ಬದುಕಿನ ಅಕಾಲಿಕ ಕತ್ತಲೆಗೆ ಉತ್ತರ ಹುಡುಕುತ್ತಾ, ಸ್ವಯಂಸೇವಕರೊಂದಿಗೆ ಹಳ್ಳಿಗಳಿಗೆ ಹೋಗಿ ಉಚಿತ ಶಸ್ತ್ರಚಿಕಿತ್ಸಾ ಶಿಬಿರಗಳನ್ನು ನಡೆಸತೊಡಗಿದರು. ಕರ್ನಾಟಕ ಮಾತ್ರವಲ್ಲ ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರದಲ್ಲೂ ಅವರ ಶಿಬಿರಗಳು ನಡೆದವು. ಶಸ್ತ್ರಚಿಕಿತ್ಸೆ ನಡೆಸಲು ಅತ್ಯಾಧುನಿಕ ಉಪಕರಣಗಳು ಹಾಗೂ ಸುಸಜ್ಜಿತ ಕಟ್ಟಡಗಳು ಇರಬೇಕೆನ್ನುವ ನಂಬಿಕೆಗಳನ್ನು ಅವರು ಮುರಿದರು. ಗ್ರಾಮಗಳಲ್ಲಿನ ಶಾಲಾಕಾಲೇಜುಗಳು ಹಾಗೂ ಛತ್ರಗಳನ್ನು ಶಸ್ತ್ರಚಿಕಿತ್ಸಾ ಕೊಠಡಿಗಳಾಗಿ ಬಳಸಿಕೊಂಡರು; ಅಲ್ಲಿನ ಮೇಜು, ಕುರ್ಚಿಗಳೇ ಶಸ್ತ್ರಚಿಕಿತ್ಸೆಗೆ ಒದಗಿಬಂದವು.

ಆರು ದಶಕಗಳಿಗೂ ಹೆಚ್ಚಿನ ಕಾಲ ವೈದ್ಯ ವೃತ್ತಿ ನಡೆಸಿದ ಮೋದಿಯವರು, 5.79 ಲಕ್ಷಕ್ಕೂ ಹೆಚ್ಚು ಶಸ್ತ್ರಚಿಕಿತ್ಸೆಗಳನ್ನು ನಡೆಸಿದರು ಹಾಗೂ ಸುಮಾರು 1 ಕೋಟಿ ಜನರ ಕಣ್ಣುತಪಾಸಣೆ ನಡೆಸಿದರು. ನಡೆಸಿದ ಶಸ್ತ್ರಚಿಕಿತ್ಸೆಗಳ ಯಶಸ್ಸಿನ ಪ್ರಮಾಣ ಶೇ 99.5ರಷ್ಟು ಎನ್ನುವುದು ವಿಶೇಷ. 1968ರಲ್ಲಿ, ತಿರುಪತಿಯಲ್ಲಿ ನಡೆಸಿದ ಶಿಬಿರದಲ್ಲಿ ಸತತ 14 ತಾಸು 833 ಶಸ್ತ್ರಚಿಕಿತ್ಸೆ ನಡೆಸಿದ್ದು ವಿಶ್ವದಾಖಲೆಯಾಗಿ ಗಿನ್ನೆಸ್ ಪುಸ್ತಕಕ್ಕೆ ಸೇರ್ಪಡೆಯಾಗಿದೆ. ಅಂದು ತಿರುಪತಿಯಲ್ಲಿ ನೆರೆದಿದ್ದ ಜನರ ಆಕರ್ಷಣೆಯ ಕೇಂದ್ರ ತಿಮ್ಮಪ್ಪನಾಗಿರದೆ, ಮೋದಿಯವರೇ ಆಗಿದ್ದರು.

ಬಿಜಾಪುರ ಜಿಲ್ಲೆಯ ಬೀಳಗಿ (ಬೀಳಗಿ ಈಗ ಬಾಗಲಕೋಟೆ ಜಿಲ್ಲೆಯಲ್ಲಿದೆ) ಮೋದಿಯವರ ಹುಟ್ಟೂರು. ಅವರು ಹುಟ್ಟಿದ್ದು ಬಡ ಕುಟುಂಬದಲ್ಲಿ. ಅಪ್ಪನನ್ನು ಬಾಲ್ಯದಲ್ಲೇ ಕಳೆದುಕೊಂಡರು. ವಿದ್ಯಾಭ್ಯಾಸ ನಡೆದುದು ಸೋದರಮಾವನ ಆಸರೆಯಲ್ಲಿ. ಬೆಳಗಾವಿ ಆಯುರ್ವೇದ ಕಾಲೇಜಿನಲ್ಲಿ ವೈದ್ಯಕೀಯ ಪದವಿ ಪೂರೈಸಿದರು. 1930ರಲ್ಲಿ, ಮುಂಬೈಯ ಖಾನ್‌ಬಹದ್ದೂರ್ ಹಾಜಿ ಬಚ್ಚೂಪಾಲಿ ಕಣ್ಣಿನ ಆಸ್ಪತ್ರೆಯು ಆಯುರ್ವೇದ ವಿದ್ಯಾರ್ಥಿಗಳಿಗೂ ಸ್ನಾತಕೋತ್ತರ ಪದವಿ ಅಧ್ಯಯನಕ್ಕೆ ಅವಕಾಶ ಕಲ್ಪಿಸಿತು. ಈ ಅವಕಾಶವನ್ನು ಬಳಸಿಕೊಂಡ ಮೋದಿಯವರು, ನೇತ್ರಚಿಕಿತ್ಸಾ ಕ್ಷೇತ್ರದಲ್ಲಿ ಪರಿಣತಿ ಪಡೆದರು. ಕಲಿತ ಆಸ್ಪತ್ರೆಯಲ್ಲಿಯೇ ಪರಿಣತ ವೈದ್ಯರೆಂದು ಹೆಸರು ಮಾಡಿದರು.

ನೇತ್ರಚಿಕಿತ್ಸಾ ಶಿಬಿರಗಳಿಗೆ ಹೋಗಲು ಮೋದಿಯವರು ಸಿಕ್ಕ ವಾಹನ ಬಳಸುತ್ತಿದ್ದರು. ಸೈಕಲ್, ಎತ್ತಿನಗಾಡಿ, ಬಸ್ಸುಗಳಲ್ಲಿ ಪಯಣಿಸುತ್ತಿದ್ದರು. 1944ರಲ್ಲಿ ಧಾರವಾಡ ಜಿಲ್ಲೆಯ ನರೇಗಲ್‌ನಲ್ಲಿ ಉಚಿತ ನೇತ್ರ ಶಸ್ತ್ರಚಿಕಿತ್ಸಾ ಶಿಬಿರ ನಡೆದಾಗ, ಕಿಟ್‌ನೊಂದಿಗೆ ಎತ್ತಿನ ಗಾಡಿಯಲ್ಲಿ ಬಂದಿದ್ದರು. 'ಎತ್ತಿನಗಾಡಿ ವೈದ್ಯ'ನನ್ನು ಜನ ಅನುಮಾನದಿಂದ ನೋಡಿದ್ದರು. ಆರಂಭದಲ್ಲಿ ಹೀಗೆ ಅನುಮಾನದಿಂದ ಕಾಣುವವರ ಸಂಖ್ಯೆ ದೊಡ್ಡದಿತ್ತು. ಮೋದಿಯವರ ಚಿಕಿತ್ಸಾಕ್ರಮದ ಬಗ್ಗೆ ವೈದ್ಯರಿಂದಲೂ ಅಪಪ್ರಚಾರಗಳು ನಡೆದವು. ಒಮ್ಮೆ ಧಾರವಾಡದ ಸಿವಿಲ್ ಸರ್ಜನ್, ಶಿಬಿರವೊಂದಕ್ಕೆ ಭೇಟಿ ಕೊಟ್ಟು, ರೋಗಿಗಳು ಸಂಪೂರ್ಣ ಗುಣಮುಖರಾಗಿರುವುದನ್ನು ದೃಢೀಕರಿಸಿದ್ದರು.

ಮೋದಿ ಅವರ ಶಸ್ತ್ರಚಿಕಿತ್ಸಾ ಶಿಬಿರಗಳು ಒಂದು ವರ್ಷದ ಮೊದಲೇ ನಿಗದಿಯಾಗಿರುತ್ತಿದ್ದವು. ಬೆಳಗಿನಿಂದ ಸಂಜೆಯವರೆಗೂ ಶಸ್ತ್ರಚಿಕಿತ್ಸೆಗಳು ನಡೆಯುತ್ತಿದ್ದವು. ಗಂಟೆಗೆ 40 ಶಸ್ತ್ರಚಿಕಿತ್ಸೆಗಳನ್ನು ಮಾಡಿದ್ದೂ ಇದೆ. ಹಳ್ಳಿಗಳನ್ನು ಯಾತ್ರಾಸ್ಥಳಗಳೆಂದು ಬಣ್ಣಿಸುತ್ತಿದ್ದ ಅವರು, ದೇವರನ್ನು ನೋಡಲು ಬರುವ ಪೂಜಾರಿ–ಭಕ್ತನೆಂದು ತಮ್ಮನ್ನು ಕರೆದುಕೊಳ್ಳುತ್ತಿದ್ದರು. ಹೀಗೆ ದೇವರುಗಳನ್ನು ಹುಡುಕಿಕೊಂಡು ತಮ್ಮ ವೃತ್ತಿಜೀವನದಲ್ಲಿ ಅವರು ಸುಮಾರು 45 ಸಾವಿರ ಹಳ್ಳಿಗಳಿಗೆ ಭೇಟಿ ಕೊಟ್ಟಿದ್ದಾರೆ. ಈ ಸುತ್ತಾಟದಿಂದ ಪತ್ನಿ, ಮಗನನ್ನು ಭೇಟಿ ಮಾಡಲಿಕ್ಕೂ ಪುರಸತ್ತು ಇರುತ್ತಿರಲಿಲ್ಲ. ವೈದ್ಯವೃತ್ತಿಗಾಗಿ ಜೀವನವನ್ನೇ ಸಮರ್ಪಿಸಿಕೊಂಡಿದ್ದ ಅವರ ಬದುಕು ಫಕೀರನ ಜೀವನಕ್ಕೆ ಹತ್ತಿರವಾಗಿತ್ತು.

ಮೋದಿಯವರು ವೈದ್ಯ ವೃತ್ತಿ ಆರಂಭಿಸಿದ ಸಂದರ್ಭದಲ್ಲಿ ಕಣ್ಣುಗಳ ಶಸ್ತ್ರಚಿಕಿತ್ಸೆಯ ಬಗ್ಗೆ ಜನರಿಗೆ ಅರಿವಿರಲಿಲ್ಲ. ಕಣ್ಣುಗಳಿಗೆ ಪೊರೆ ಬರುವುದೆಂದರೆ ಜೀವನ ಮುಗಿಯಿತೆಂದೇ ಭಾವಿಸುತ್ತಿದ್ದ ದಿನಗಳವು. ಶಸ್ತ್ರಚಿಕಿತ್ಸೆಯ ದುಬಾರಿ ವೆಚ್ಚವನ್ನು ಭರಿಸುವುದು ಬಡಬಗ್ಗರಿಗೆ ಸುಲಭವೂ ಆಗಿರಲಿಲ್ಲ. ಆ ಕಾರಣದಿಂದಾಗಿಯೇ ಊರುಕೇರಿಗಳಲ್ಲಿ ಕುರುಡರು ಸಾಮಾನ್ಯವಾಗಿರುತ್ತಿದ್ದರು. ಆ ಸಂದರ್ಭವನ್ನು ಬದಲಿಸಲು ಮೋದಿ 'ದೃಷ್ಟಿ ಕ್ರಾಂತಿ'ಯನ್ನೇ ಆರಂಭಿಸಿದರು. ಆಪರೇಷನ್ ಎಂದರೆ ಹೆದರಿ ಓಡುತ್ತಿದ್ದವರ ಮನವೊಲಿಸಿ, ಚಿಕಿತ್ಸೆ ನೀಡಿದರು. ರೈಲುಪ್ರಯಾಣದ ವೇಳೆಯನ್ನೂ ವ್ಯರ್ಥವಾಗಿ ಕಳೆಯಲು ಬಯಸದ ಅವರು, ಪ್ರಯಾಣಿಕರ ಕಣ್ಣುಗಳ ತಪಾಸಣೆ ನಡೆಸಿ, ಸಲಹೆ ನೀಡುತ್ತಿದ್ದರಂತೆ.

ಮೈಸೂರು, ಕರ್ನಾಟಕ ಹಾಗೂ ಪುಣೆ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ನೀಡಿ ಗೌರವಿಸಿವೆ. ಭಾರತ ಸರ್ಕಾರವು ಪದ್ಮಶ್ರೀ, ಪದ್ಮಭೂಷಣ ಪುರಸ್ಕಾರಗಳನ್ನು ನೀಡಿದೆ. ತಮಗೆ ದೊರೆತ ಎಲ್ಲ ಪುರಸ್ಕಾರಗಳ ಹಣವನ್ನು ಮೋದಿಯವರು ಬಡಜನರ ಸೇವೆಗೆ ವಿನಿಯೋಗಿಸುತ್ತಿದ್ದರು. ಕೆಂಗಲ್ ಹನುಮಂತಯ್ಯನವರಿಗಂತೂ ಮೋದಿಯವರ ಬಗ್ಗೆ ಅಪಾರ ಅಭಿಮಾನ. ಹನುಮಂತಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ಮೋದಿಯವರನ್ನು 'ಸರ್ಕಾರಿ ಅತಿಥಿ' ಎಂದು ಗುರುತಿಸಿ, ಅವರು ನಡೆಸುತ್ತಿದ್ದ ಶಿಬಿರಗಳಿಗೆ ಎಲ್ಲ ಸವಲತ್ತುಗಳನ್ನು ಕಲ್ಪಿಸಿದ್ದರು. ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಮೋದಿಯವರು ನಾಮಕರಣಗೊಂಡಿದ್ದರು.

'ಏಕ ವ್ಯಕ್ತಿಯ ಯುದ್ಧ' (One Man's war) ಎನ್ನುವುದು ಮೋದಿಯವರ ಬಗ್ಗೆ ಕರ್ನಾಟಕ ಸರ್ಕಾರ ನಿರ್ಮಿಸಿರುವ ಸಾಕ್ಷ್ಯಚಿತ್ರ (ನಿರ್ದೇಶನ: ಎಂ.ಎಸ್. ಸತ್ಯು). ಜನರ ದೃಷ್ಟಿದೋಷವನ್ನು ನಿವಾರಿಸುವಲ್ಲಿ ಅವರು ನಡೆಸಿದ್ದು ಅಕ್ಷರಶಃ ಯುದ್ಧವೇ. ನೇತ್ರದಾನ ಮಾಡುವ ಮೂಲಕ, ಕಣ್ಣುಗಳ ದಾನದ ಬಗ್ಗೆ ಅರಿವು ಮೂಡಿಸುವ ಪ್ರಯತ್ನವನ್ನೂ ನಡೆಸಿದ್ದರು.

ಕನ್ನಡನಾಡಿಗೆ ಕರ್ನಾಟಕವೆಂದು ನಾಮಕರಣವಾದ ಚಾರಿತ್ರಿಕ ಘಟನೆಗೆ ಐವತ್ತು ವರ್ಷಗಳು ತುಂಬಿರುವ ಸಂದರ್ಭದಲ್ಲಿ, ಕನ್ನಡಿಗರು ಹೆಮ್ಮೆಯಿಂದ ನೆನಪಿಸಿಕೊಳ್ಳಬೇಕಾದ ಹೆಸರು ಡಾ. ಎಂ.ಸಿ. ಮೋದಿ ಅವರದು. 'ಬಾಹುಬಲಿ' ಅಥವಾ 'ಮೋದಿ' ಎನ್ನುವುದು ಬರಿಯ ಹೆಸರುಗಳಲ್ಲ, ಕನ್ನಡನಾಡಿನ ಅಸ್ಮಿತೆಗಳು. ಈ ಅಸ್ಮಿತೆಗಳಿಗೆ ಪರ್ಯಾಯವೂ ಇಲ್ಲ. ಕಣ್ಣುಗಳ ಪೊರೆಗೆ ಕಾರಣವಾಗುವವರನ್ನೇ ನಾಯಕರೆಂದು ಮೆರೆಸುವ ವರ್ತಮಾನದ ವಿಸ್ಮೃತಿಯಲ್ಲಿ, ಕಣ್ಣುಗಳ ಪೊರೆ ತೆಗೆಯುವ 'ದೃಷ್ಟಿ ಕ್ರಾಂತಿ' ನಡೆಸಿದ ವೈದ್ಯರತ್ನರ ಮರೆಯಬಾರದು.



ಚುರುಮುರಿ



ನೀನಾರಿಗಾದೆಯೋ ನಿಗಮ?!

• ತುರುವೇಕೆರೆ ಪ್ರಸಾದ್

'ಲೇಯ್, ಹೋಮ್ ಮನೇಲಿ ಏನೋ ಗಮಗಮ ಅಂತಿತ್ತಂತೆ, ಗೊತ್ತಾಯ್ತೇನ್ರಲಾ?' ಸೋಟೆ ನೆಕ್ಕಿಕೊಂಡ ಗುದ್ಲಿಂಗ.

'ನೀನು ನುಂಗದ್ರಲ್ಲೇ ಇರ್ತೀಯ ಬಿಡು. ಆಕ್ಚುಯಲೀ ಅದು ಬಣ ಓರಾಟಕ್ಕೆ ಕಾವು ಕೊಡಕ್ಕೆ ಸೇರ್ಕಂಡಿದ್ದು ಅಂತ ಗುಲ್ಲೈತೆ'.

'ಬರೀ ಮುದ್ದೆ ನುಂಗಕ್ಕೆ ಸೇರಿದ್ವಿ, ಹುದ್ದೆ ಗುಂಜಕ್ಕೆ ಅಲ್ಲ ಅಂತ ಸಮಜಾಯಿಸಿ ಕೊಟ್ಟವ್ರಲ್ಲ'.

'ನೀನು ಎಂಗೇ ಯೋಳುದ್ರೂ ಅದು ಮುಸುಕಿನ ಗುದ್ದೇ ತಗ. ಈ ಗಮಗಮ ಊಟ ಅಂದ್ರ ಮೇಲ್ನೋರಿಗೆ ಕರೆಂಟ್ ಒಡ್ದಂಗಾಗಿ ಜುಮ ಜುಮ ಅನ್ನುತ್ತೆ. ಅದಕ್ಕೇ ಈ ಗಮಗಮ ಬಂದ್ ಮಾಡಕ್ಕೆ ಶಾಸಕರನ್ನ ನಿಗಮಕ್ಕೆ ನೇತು ಹಾಕ್ಬೇಕು ಅಂತ ಒಂಟರೋದು' ಎಂದ ಮಾಲಿಂಗ.

'ಕರೆದು, ದಕ್ಷಿಣೆ ಇಟ್ಟು ಕೊಡ್ತೀವಿ ಅಂದ್ರೂ ಶಾಸಕರು ನಮಗ್ ಬ್ಯಾಡ ಅಂತ ಮೂತಿ ತಿರುವಿಕೊಂಡ್ ಓಯ್ತಾವ್ರಂತಲ್ಲ'.

'ಮತ್ ಆ ಒಣ ನಿಗಮಗಳನ್ನ ಕೊರಳಿಗೆ ಕಟ್ಕಂಡು ಯಾಕ್ಲಾ ಪಾಡು ಪಟ್ಟಾರು ಅವ್ರು?'

'ಯಾಕ್ಲಾ? ಅದ್ರಾಗೆ ಏನೂ ಕಿಮ್ಮತ್ತು ಇಲ್ವ?'

'ಕಿಮ್ಮತ್ತು ಇದ್ದಿದ್ರೆ ಮಂತ್ರಿಗಳೇ ಅದ್ನೂ ತಮ್ಮ ಹೆಂಡ್ರು, ಮಕ್ಕಳಿಗೆ ಮಡಿಕ್ಕತಿದ್ರು. ಶಾಸಕರಿಗೆ ಯಾಕ್ ಕೊಡ್ತಿದ್ರು? ಎಲ್ಲೋ ಒಂದೆರಡು ಹಾಲು ಕರೀತಾವೆ. ಮಿಕ್ಕಿದೋವೆಲ್ಲಾ ಗೊಡ್ ಬಿದ್ದು ಅಡ್ಡಡ್ಡ ಮಲಕ್ಕಂಡವೆ. ಸಾಬೂನ್ ನಿಗಮದಲ್ಲಿ ಎಲ್ಲಾ ತೊಳೆದಿಟ್ಟವ್ರೆ, ಕಾಗದ ನಿಗಮ ಟಿಶ್ಯೂ ಪೇಪರ್ ಮಾಡಂಗಾಗಿದೆ, ಬಣ್ಣ ಮತ್ತು ಅರಗು ನಿಗಮದಲ್ಲಿ ಬೇಕಾದ್ ವೇಸ ಆಕ್ಕಂಡು, ತೆಂಗು ನಿಗಮದಲ್ಲಿ ನಾರು ಗುಂಜ್ಕಂಡಿರೋಕೆ ಕೋಟಿ ಖರ್ಚು ಮಾಡಿ ಶಾಸಕರಾಗ್ಬೇಕೇನ್ಲಾ?'

'ಊಕಣೇಳ್ಲಾ! ಅದೊಂತರ 16 ಜನದ್ ಕ್ರಿಕೆಟ್ ಟೀಮಲ್ಲಿ ಇದ್ದಂಗೆ. ಆಡೋ ಅಂಗೂ ಇಲ್ಲ, ಮಾತಾಡೋ ಅಂಗೂ ಇಲ್ಲ'.

'ಮಂತ್ರಿ ಮಾಡಿ ಅನ್ನೋ ಅಂಗಿಲ್ಲ, ಉಸ್ತುವಾರಿ ಕೊಡಿ ಅನ್ನೋ ಅಂಗಿಲ್ಲ. ಕಮಕ್ ಗಿಮಕ್ ಅನ್ದೆ ಲಾಯದ್ ಕುದುರೆ ತರ ಲಾಯಲ್ ಆಗಿ ಉರುಳಿ ತಿನ್ಕಂಡು ಬಿದ್ದಿರ್ಬೇಕು'.

'ನಮ್ಮಂತ ಕಾರ್ಯಕರ್ತರಿಗೆ ನಿಗಮ ಇಲ್ವಾ?'

'ಯಾವ ನಿಗಮವೂ ಇಲ್ಲ, ಐದು ವರ್ಷಕ್ಕೊಂದ್ಸಾರಿ ಗಮಗಮ, ಆಮೇಲೆ ಪಂಗನಾಮ!' ಎಂದ ಪರ್ಮೇಶಿ. ಎಲ್ಲಾ ಗೊಳ್ಳನೆ ನಕ್ಕರು.

ಸಂಗತ

'ಭಾರ'ವಾದ ಸೊಪ್ಪು, ತರಕಾರಿ!

ಮಣ್ಣಿನಲ್ಲಿ ಇರುವ ಭಾರಲೋಹಗಳ ಸಾಂದ್ರತೆಯನ್ನು ತಗ್ಗಿಸಲು ಕೃಷಿ ವಿಜ್ಞಾನಿಗಳು ಸೂಚಿಸಿರುವ ಪರಿಹಾರೋಪಾಯಗಳನ್ನು ಪಾಲಿಸಬೇಕಿದೆ

• ಡಾ. ಕೆ.ಎಸ್.ಚೈತ್ರಾ

'ನಾವು ದಿನಾ ಕುಡೀತಾ ಇರೋ ನೀರು, ಉಸಿರಾಡ್ತಿರೋ ಗಾಳಿ, ನಡೀತಾ ಇರೋ ನೆಲ ಎಲ್ಲ ವಿಷವೇ! ಮಾರೋ ತರಕಾರಿ, ಸೊಪ್ಪು ಮಾತ್ರ ಸರಿಯಾಗಿರಬೇಕು ಅಂದ್ರೆ ಹೆಂಗೆ? ಕುಡಿಯೋಕೇ ನೀರಿಲ್ಲ, ಅಂಥದ್ರಲ್ಲಿ ತರಕಾರಿ, ಸೊಪ್ಪು ಬೆಳಿಬೇಕಾದ್ರೆ ಒಳ್ಳೆ ನೀರನ್ನ ಹಾಕಿ ಅಂದ್ರೆ ಎಲ್ಲಿಂದ ತರೋದು?'– ಮೊನ್ನೆ ಗಾಡಿಯಲ್ಲಿ ಸೊಪ್ಪು, ತರಕಾರಿ ಮಾರುತ್ತಿದ್ದವರು ಬೇಸರದಿಂದ ಹೇಳಿದ ಮಾತಿದು.


ಆರೋಗ್ಯದ ಕುರಿತು ಜನರಲ್ಲಿ ಬಹಳಷ್ಟು ಜಾಗೃತಿ ಮೂಡಿ, ವಿಟಮಿನ್, ಮಿನರಲ್ ಹೆಚ್ಚಿರುವ, ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವ ತರಕಾರಿ, ಸೊಪ್ಪುಗಳ ಬಳಕೆ ಹೆಚ್ಚಾಗಿದೆ. ಆದರೆ ಅರಣ್ಯ ಇಲಾಖೆಯ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಯ ಇತ್ತೀಚಿನ ವರದಿಯ ಪ್ರಕಾರ, ಬೆಂಗಳೂರಿನಲ್ಲಿ ಸಿಗುವ ಬಹುತೇಕ ಸೊಪ್ಪು, ತರಕಾರಿಗಳಲ್ಲಿ ಮಿತಿಮೀರಿದ ಪ್ರಮಾಣದಲ್ಲಿ ಭಾರಲೋಹಗಳಿದ್ದು, ಇವು ಆರೋಗ್ಯಕ್ಕೆ ಹಾನಿಕಾರಕ.

ಹತ್ತು ಬಗೆಯ ತರಕಾರಿ ಹಾಗೂ ಪಾಲಕ್, ಕೊತ್ತಂಬರಿ ಸೊಪ್ಪಿನ ನಾಲ್ಕುನೂರು ಮಾದರಿಗಳನ್ನು ನಗರದ ವಿವಿಧ ಭಾಗಗಳಲ್ಲಿರುವ ಮಾರುಕಟ್ಟೆ, ಬೀದಿ ಗಾಡಿ, ಸೂಪರ್ ಮಾರುಕಟ್ಟೆ, ಹಾಪ್‌ಕಾಮ್ಸ್ ಮತ್ತು ಸಾವಯವ ಮಳಿಗೆಗಳಿಂದ ಸಂಗ್ರಹಿಸಿ ಅಧ್ಯಯನ ನಡೆಸಲಾಗಿದೆ. ಆತಂಕದ ವಿಷಯವೆಂದರೆ, ಆಹಾರ ಮತ್ತು ಕೃಷಿ ಸಂಸ್ಥೆ ನಿಗದಿಗೊಳಿಸಿದ ಮಿತಿಗಿಂತ ಅಧಿಕ ಕ್ಯಾಡ್ಮಿಯಂ, ಸೀಸ, ನಿಕ್ಕಲ್ ಭಾರಲೋಹಗಳು ಇವುಗಳಲ್ಲಿ ಕಂಡುಬಂದಿವೆ. ಈ ಕುರಿತು, ಕೊಳಚೆ ನೀರಿನಲ್ಲಿ ತರಕಾರಿ ಬೆಳೆಯುವುದನ್ನು ತಡೆಯಬೇಕು, ಒಳಚರಂಡಿ ನೀರು ಮತ್ತು ಕೈಗಾರಿಕಾ ತ್ಯಾಜ್ಯ ನೀರು ಬಳಸಬಾರದು ಹಾಗೂ ನಗರದ ಹೊರವಲಯದಲ್ಲಿ ತರಕಾರಿ ಬೆಳೆಯುವುದನ್ನು ನಿರ್ಬಂಧಿಸಬೇಕು ಎಂಬ ಸಲಹೆಯನ್ನು ವರದಿ ನೀಡಿದೆ. ಆದರೆ ಇವು ಪ್ರಾಯೋಗಿಕವೇ ಎಂಬುದರ ಬಗ್ಗೆಯೂ ಯೋಚಿಸಬೇಕು.

ಬೆಂಗಳೂರಿಗೆ ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಕೋಲಾರ ಮತ್ತು ರಾಮನಗರ ಜಿಲ್ಲೆಗಳಿಂದ ತರಕಾರಿಯ ಪೂರೈಕೆಯಾಗುತ್ತದೆ. ಈ ಪ್ರದೇಶಗಳಲ್ಲಿ ನೀರಾವರಿ ಸೌಲಭ್ಯ ಕಡಿಮೆ. ಕೃಷಿಗಾಗಿ ಹೆಚ್ಚಿನವರು ಮಳೆಯನ್ನೇ ಆಧರಿಸಿದ್ದಾರೆ. ಮಳೆ ಬರದೆ ನೀರಿಗೆ ಕೊರತೆಯಾಗಿದೆ. ಹಿಂದಿದ್ದ ನೀರಿನ ಮೂಲಗಳಾದ ಕೆರೆ, ಹಳ್ಳಗಳು ಬತ್ತಿ, ಸಂಸ್ಕರಿಸಿದ ಕೊಳಚೆ ನೀರನ್ನು ಕೆರೆಗಳಲ್ಲಿ ತುಂಬಿಸಲಾಗಿದೆ. ಆದರೆ ಮಹಾನಗರಿ ಬೆಂಗಳೂರಿನಲ್ಲಿ ತರಕಾರಿ, ಸೊಪ್ಪಿಗೆ ಒಳ್ಳೆಯ ಬೇಡಿಕೆಯಿದ್ದು, ಬದುಕು ಸಾಗಿಸಲು ಕೊಳಚೆ ನೀರನ್ನೇ ಬಳಸಿ ತರಕಾರಿಗಳನ್ನು ಬೆಳೆಯುವುದು ರೈತರಿಗೆ ಅನಿವಾರ್ಯವಾಗಿದೆ.

ನೀರಷ್ಟೇ ಅಲ್ಲ, ಗಿಡಗಳಿಗೆ ಬಳಸುವ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳಿಂದಲೂ ಈ ಭಾರಲೋಹಗಳು ಬೆಳೆಯಲ್ಲಿ ಸೇರುತ್ತಿವೆ. ನಮ್ಮ ದಿನನಿತ್ಯದ ಚಟುವಟಿಕೆಗಳು ಮತ್ತು ದಿನಬಳಕೆಯ ವಸ್ತುಗಳಿಂದಲೂ ನಮಗರಿವಿಲ್ಲದೆ ಈ ಭಾರಲೋಹಗಳು ಪರಿಸರದಲ್ಲಿ ಸೇರ್ಪಡೆಯಾಗುತ್ತಿವೆ. ಎಲೆಕ್ಟ್ರಾನಿಕ್ ವಸ್ತುಗಳು, ಬ್ಯಾಟರಿ, ಚರಂಡಿಗಳ ಕೊಳಚೆ ನೀರು ಎಲ್ಲವೂ ಭಾರಲೋಹಗಳನ್ನು ಹೊಂದಿರುತ್ತವೆ. ಬೃಹದಾಕಾರವಾಗಿ ಬೆಳೆಯುತ್ತಿರುವ ಬೆಂಗಳೂರಿನಲ್ಲಿ ಕಾರ್ಖಾನೆಗಳಿಂದ ಉತ್ಪತ್ತಿಯಾಗುವ ಅಪಾರ ತ್ಯಾಜ್ಯವು ಭಾರಲೋಹದ ಮೂಲ. ಇವುಗಳಿಂದ ಮಣ್ಣಿನಲ್ಲಿ ಸಹಜವಾಗಿ ಇರುವ ಸೂಕ್ಷ್ಮಜೀವಿಗಳ ಸಂಖ್ಯೆ ಕಡಿಮೆಯಾಗುತ್ತದೆ. ಹೀಗಾಗಿ, ಮಣ್ಣಿನ ಫಲವತ್ತತೆ ಹಾಗೂ ತರಕಾರಿಗಳ ಪೌಷ್ಟಿಕಾಂಶ ಎರಡೂ ಕಡಿಮೆಯಾಗುತ್ತವೆ.

ಇದಲ್ಲದೆ, ಈ ತರಕಾರಿ ಹಾಗೂ ಹುಲ್ಲನ್ನು ಸೇವನೆ ಮಾಡುವ ಎಮ್ಮೆ, ಹಸುವಿನ ಹಾಲಿನಲ್ಲಿ ಕೂಡ ಭಾರಲೋಹದ ಅಂಶ ಹೆಚ್ಚಿರಬಹುದು. ಹೀಗಾಗಿ, ಶಕ್ತಿ, ಪುಷ್ಟಿ ನೀಡುವ ಹಾಲು ಕೂಡ ಹಾಲಾಹಲ ಆಗಬಹುದು! ಮಣ್ಣಿನಲ್ಲಿ ಇರುವ ಭಾರಲೋಹಗಳ ಸಾಂದ್ರತೆಯನ್ನು ತಗ್ಗಿಸಲು ಕೃಷಿ ವಿಜ್ಞಾನಿಗಳು ಅನೇಕ ವಿಧಾನಗಳನ್ನು ಸೂಚಿಸಿದ್ದಾರೆ. ನೆಲದಲ್ಲಿ ಆಳವಾಗಿ ಉಳುಮೆ, ಮಣ್ಣಿನ ರಸಸಾರವನ್ನು ಹೆಚ್ಚಿಸುವುದು, ಭೂಮಿಯಲ್ಲಿರುವ ಕಲ್ಮಶಗಳನ್ನು ಹೀರಿಕೊಳ್ಳುವ ಗಿಡಗಳನ್ನು ಬೆಳೆಸುವುದು ಮತ್ತು ಜಮೀನಿನಲ್ಲಿ ಮಣ್ಣು, ನೀರನ್ನು ಆಗಾಗ ಪರೀಕ್ಷೆ ಮಾಡಿಸುವುದು... ಕೃಷಿ ವಿಜ್ಞಾನಿಗಳು ನೀಡಿರುವ ಸಲಹೆಗಳು.



ಇವುಗಳನ್ನು ರೈತರು ಪ್ರಾಯೋಗಿಕವಾಗಿ ಅಳವಡಿಸಲು ಕೃಷಿ ಇಲಾಖೆ ನೆರವು ನೀಡುವುದು ಅಗತ್ಯ. ಭಾರಲೋಹ ಹೊಂದಿರುವ ತರಕಾರಿಗಳನ್ನು ಗುರುತಿಸುವ ಬಗ್ಗೆ ಆಹಾರ ತಜ್ಞರ ಅಭಿಪ್ರಾಯ ಹೀಗಿದೆ: ಭಾರಲೋಹದ ಅಂಶ ಹೆಚ್ಚಿದ್ದಲ್ಲಿ ತರಕಾರಿಗಳ ಮೇಲೆ ಗಾಢ ಬಣ್ಣದ ಚುಕ್ಕಿಗಳು ಅಥವಾ ಅಸಹಜ ಬಣ್ಣಗಳು, ವಿಚಿತ್ರವಾದ ಕೆಟ್ಟ ವಾಸನೆ ಕಂಡುಬರುವ ಸಾಧ್ಯತೆ ಇದೆ. ಅವುಗಳನ್ನು ಉಪಯೋಗಿಸಬಾರದು. ತರಕಾರಿಗಳನ್ನು ಸಿಪ್ಪೆ ತೆಗೆದು ಉಪಯೋಗಿಸುವುದರಿಂದ ಹೊರಪದರದ ರಾಸಾಯನಿಕಗಳನ್ನು ತೆಗೆಯಲು ಸಾಧ್ಯವಿದೆ. ಸೊಪ್ಪು, ತರಕಾರಿಗಳನ್ನು ಶುದ್ಧ ನೀರಿನಿಂದ ಎರಡು– ಮೂರು ಬಾರಿ ಚೆನ್ನಾಗಿ ತೊಳೆದು, ನಂತರ ಉಪ್ಪು ಸೇರಿಸಿದ ನೀರಿನಲ್ಲಿ ಮುಳುಗಿಸಿ ಮತ್ತೆ ತೊಳೆಯಬೇಕು. ಹಾಗೆಯೇ ವಿಟಮಿನ್ 'ಸಿ' ಹೆಚ್ಚಿರುವ ನೆಲ್ಲಿಕಾಯಿ, ನಿಂಬೆಹಣ್ಣು, ಕಿತ್ತಳೆಹಣ್ಣನ್ನು ಬಳಸುವುದರಿಂದ ಈ ಭಾರಲೋಹದ ಅಡ್ಡಪರಿಣಾಮಗಳನ್ನು ಕಡಿಮೆ ಮಾಡಬಹುದು.

ಹಾಗೆ ನೋಡಿದರೆ, ತರಕಾರಿ, ಸೊಪ್ಪು ಮಾತ್ರವಲ್ಲ, ವಿಷಮಯವಾಗುತ್ತಿರುವ ಇಡೀ ಪರಿಸರವನ್ನು ಸ್ವಚ್ಛಗೊಳಿಸುವ ನಿರ್ಧಾರ ನಮ್ಮದಾಗದಿದ್ದಲ್ಲಿ ಬದುಕೇ ಭಾರವಾಗಲಿದೆ!

ವಾಚಕರ ವಾಣಿ

ವಿಳಂಬರಹಿತ ಕೆಲಸಕ್ಕೂ ಆದ್ಯತೆ ಇರಲಿ

ಹಾಸನದ ಕ್ಷೇತ್ರಶಿಕ್ಷಣಾಧಿಕಾರಿ ಕಚೇರಿಯ ಅಧೀಕ್ಷಕ ಡಿ.ಎಸ್.ಲೋಕೇಶ್ ಅವರು ತಮ್ಮ ಮೇಜಿನ ಮೇಲೆ 'ನಾನು ಭ್ರಷ್ಟನಲ್ಲ, ಇಲ್ಲಿ ಲಂಚ ಸ್ವೀಕರಿಸುವುದಿಲ್ಲ' ಎಂಬ ಫಲಕ ಇಡುವ ಮೂಲಕ ತಮ್ಮ ಪ್ರಾಮಾಣಿಕತೆಯ ಸಾಬೀತಿಗೆ ಮುಂದಾಗಿರುವುದು ಶ್ಲಾಘನೀಯ. ಸರ್ಕಾರಿ ಕಚೇರಿಗಳಲ್ಲಿ ಲಂಚವೊಂದೇ ಪಿಡುಗಲ್ಲ. ಅದಕ್ಕಿಂತ ಹೆಚ್ಚು ಕಿರುಕುಳ ಅನವಶ್ಯಕವಾಗಿ ಅಲೆದಾಡಿಸುವುದು, ಭೇಟಿಯ ಸಮಯದಲ್ಲಿ ಸಂಬಂಧಿಸಿದವರ ಅಲಭ್ಯತೆ, ಭೇಟಿಗೆ ಅವಕಾಶ ನೀಡದಿರುವುದು ಅಥವಾ ನಿಗದಿತ ಕಾಲದಲ್ಲಿ ಕೆಲಸ ಮಾಡಿಕೊಡದಿರುವುದು. ಕೆಲವರಿಗೆ ಲಂಚ ಕೊಡುವುದು ದೊಡ್ಡ ತೊಂದರೆ ಎನಿಸುವುದಿಲ್ಲ. ಅದನ್ನು ಭಕ್ಷೀಸು ಅನ್ನುವ ರೀತಿಯಲ್ಲಾದರೂ ಕೊಡುತ್ತಾರೆ. ಆದರೆ ಅನಗತ್ಯವಾಗಿ ಅಲೆದಾಡಿಸಿ ಕಿರುಕುಳ ಕೊಡುವುದರಿಂದ ಸಮಯ ವ್ಯರ್ಥವಾಗುವುದಲ್ಲದೆ ಹಣವೂ ವ್ಯರ್ಥ, ಮಾನಸಿಕ ನೆಮ್ಮದಿಯೂ ಹಾಳು. ಈ ರೀತಿಯ ವರ್ತನೆ ಲಂಚ ತೆಗೆದುಕೊಳ್ಳುವುದಕ್ಕಿಂತ ದೊಡ್ಡ ಮಟ್ಟದ ಭ್ರಷ್ಟಾಚಾರವಾಗುತ್ತದೆ.

ಕೆಲವರು ಲಂಚ ತೆಗೆದುಕೊಳ್ಳದಿದ್ದರೂ ನಿಯಮಗಳನ್ನು ಹುಡುಕಿ ಅನಗತ್ಯವಾಗಿ ಆಕ್ಷೇಪಗಳನ್ನು ತೆಗೆದು ತೊಂದರೆ ಕೊಡುತ್ತಾರೆ. ಜನರಿಗಾಗಿ ಕಾನೂನೇ ವಿನಾ ಕಾನೂನಿಗಾಗಿ ಜನರಲ್ಲ ಎಂಬುದನ್ನು ನೌಕರರು ಮತ್ತು ಅಧಿಕಾರಿಗಳು ಅರಿಯಬೇಕು. ಕಾನೂನನ್ನು ಕುರುಡಾಗಿ ಜಾರಿಗೆ ತರುವುದರ ಬದಲು ತಮ್ಮ ವಿವೇಚನೆ ಬಳಸಿ, ಸಮಯ ಸಂದರ್ಭವನ್ನು ಗಮನದಲ್ಲಿಟ್ಟು, ನಿಯಮಾವಳಿಯ ಅಡಿಯಲ್ಲಿಯೇ ಜನರಿಗೆ ಒಳಿತು ಮಾಡಬಹುದು. ಆದ್ದರಿಂದ ಲಂಚ ಸ್ವೀಕರಿಸುವುದಿಲ್ಲ ಎಂಬುದರ ಜೊತೆಗೆ 'ನಿಗದಿತ ಕಾಲಾವಧಿಯಲ್ಲಿ ನಿಮ್ಮ ಕೆಲಸ ಮಾಡಿಕೊಡಲಾಗುವುದು' ಎಂಬುದನ್ನೂ ಸೇರಿಸಿದಲ್ಲಿ ಇಂತಹ ಫಲಕ ಸಾರ್ಥಕತೆ ಕಾಣಬಹುದು.

ಕೆ.ಎಂ.ನಾಗರಾಜು, ಮೈಸೂರು

ಅಂಗರಕ್ಷಕ ಪಡೆ: ಅಂಧಾಭಿಮಾನ ಬೇಡ

ಮಾನವೀಯ ನೆಲೆ ಮತ್ತು ವ್ಯಕ್ತಿಗೌರವವನ್ನು ಈ ರೀತಿಯೂ ಕಾಣಬಹುದು ಎಂಬುದನ್ನು ಸಮಾಜ ಕಲ್ಯಾಣ ಸಚಿವರು ಧಾರವಾಡ ಭೇಟಿ ಸಂದರ್ಭದಲ್ಲಿ ತಮ್ಮ ಅಂಗರಕ್ಷಕನಿಂದ ಶೂ ಹಾಕಿಸಿಕೊಳ್ಳುವ ಮೂಲಕ ತೋರಿಸಿ ಕೊಟ್ಟಿದ್ದಾರೆ! ರಾಜ್ಯದ ಸಚಿವರು ಮತ್ತು ಶಾಸಕರ ರಕ್ಷಣೆಗೆ ಸರ್ಕಾರವು ಅಂಗರಕ್ಷಕರನ್ನು (ಗನ್‌ಮ್ಯಾನ್) ನೇಮಿಸುತ್ತದೆ. ಇತ್ತೀಚೆಗೆ ಇದರ ಸ್ವರೂಪ ಬದಲಾಗಿ, ಶಾಸಕರು ಮತ್ತು ಸಚಿವರನ್ನು ಖುದ್ದು ಪೊಲೀಸರೇ ಭೇಟಿಯಾಗಿ, ಅಂಗರಕ್ಷಕರಾಗಿ ಕೆಲಸ ನಿರ್ವಹಿಸುತ್ತೇವೆ ಎಂದು ಶಿಫಾರಸು ಮಾಡಿಸಿಕೊಂಡು ಅವರ ಬಳಿ ಸೇರಿಕೊಳ್ಳುತ್ತಾರೆ. ಅಂತಹವರು ಅವರ ರಕ್ಷಣೆ ಮಾಡುವುದನ್ನು ಹೊರತುಪಡಿಸಿ ಇಂತಹ ಮಿಕ್ಕ ಎಲ್ಲಾ ಕೆಲಸ ಮಾಡುವುದನ್ನು ರೂಢಿ ಮಾಡಿಕೊಳ್ಳುತ್ತಾರೆ.

ಯಾವುದೋ ಅಂಧಾಭಿಮಾನದಿಂದ ಸಾರ್ವಜನಿಕವಾಗಿ ಈ ರೀತಿ ನಡೆದುಕೊಂಡಲ್ಲಿ, ಸರ್ಕಾರಿ ನೌಕರನಾಗಿರುವ ತಾನು ಪ್ರಶ್ನೆಗೆ ಒಳಗಾಗುತ್ತೇನೆ ಎನ್ನುವ ಎಚ್ಚರ ಅವರಲ್ಲಿ ಇರಬೇಕು. ರಾಜ್ಯದ ಪೊಲೀಸ್ ಮುಖ್ಯಸ್ಥರು ಅಂಗರಕ್ಷಕರ ನೇಮಕದ ನಿಯಮಗಳನ್ನು ಬಿಗಿಗೊಳಿಸಿ, ಆ ಸ್ಥಾನಕ್ಕಿರುವ ಜವಾಬ್ದಾರಿ ಹಾಗೂ ಕರ್ತವ್ಯಗಳ ಬಗ್ಗೆ ನೌಕರರಲ್ಲಿ ಅರಿವು ಮೂಡಿಸಬೇಕು.

ತಿಮ್ಮೇಶ ಮುಸ್ಟೂರು, ಜಗಳೂರು

ಹೆಜ್ಜೇನು ದಾಳಿ: ದುರ್ವರ್ತನೆ ಸಲ್ಲದು

ಹೂವಿನಹಡಗಲಿಯಲ್ಲಿ ಕಿಡಿಗೇಡಿಗಳು ಹೆಜ್ಜೇನು ಗೂಡಿಗೆ ಕಲ್ಲು ಎಸೆದಿದ್ದರಿಂದ, ಗೂಡಿಗೆ ಸಮೀಪವೇ ಇದ್ದ ಕಾಲೇಜು ವಿದ್ಯಾರ್ಥಿಗಳು ಹೆಜ್ಜೇನು ದಾಳಿಗೆ ತುತ್ತಾಗಿ ಅಸ್ವಸ್ಥರಾಗಿದ್ದು ವರದಿಯಾಗಿದೆ (ಪ್ರ.ವಾ., ನ. 9). ಹೆಜ್ಜೇನು ಸುರಕ್ಷತೆ ಬಗ್ಗೆ ತಜ್ಞರಿಂದ ಹೇರಳವಾದ ಸಲಹೆಗಳು ಲಭ್ಯವಿದ್ದರೂ ಪದೇಪದೇ ಇಂಥ ಪ್ರಕರಣಗಳಲ್ಲಿ ಜನರು ಸಿಲುಕಿಕೊಳ್ಳುವುದರ ಬಗ್ಗೆ ಚಿಂತನೆ ಅಗತ್ಯ. ತಮಗೆ ಶತ್ರುಕಾಟವಿದೆ ಎಂದು ಭಾವಿಸಿದರೆ ಮಾತ್ರ ಹೆಜ್ಜೇನುಗಳು ಕೋಪೋದ್ರೇಕದಿಂದ ಮನುಷ್ಯರ ಮೇಲೆ ದಾಳಿ ಮಾಡುತ್ತವೆ ಅಷ್ಟೆ. ಇದನ್ನು ಹೊರತುಪಡಿಸಿ ಅನಗತ್ಯವಾಗಿ ಇವು ದಾಳಿ ಮಾಡುವುದಿಲ್ಲ. ಕಿಡಿಗೇಡಿಗಳು ಜೇನುಗೂಡಿಗೆ ಕಲ್ಲು ಎಸೆದಿರುವುದು ದುರ್ವರ್ತನೆಯೇ ಸರಿ.

ಸರ್ಕಾರಿ ಕಾಲೇಜಿಗೆ ಬರೀ 300 ಮೀಟರ್ ಅಂತರದಲ್ಲಿ ಮರದ ಮೇಲೆ ಹೆಜ್ಜೇನು ಕಟ್ಟಿರುವ ಗೂಡನ್ನು ವಿದ್ಯಾರ್ಥಿಗಳ ಸುರಕ್ಷತೆ ದೃಷ್ಟಿಯಿಂದ ಸ್ಥಳಾಂತರ ಮಾಡಿಸಬಹುದಿತ್ತು, ಅಲ್ಲವೇ? ಬಸ್ ನಿಲ್ದಾಣ, ಶಾಲಾ ಕಟ್ಟಡ, ಸಾರ್ವಜನಿಕ ಕಚೇರಿಗಳಂತಹ ಸ್ಥಳಗಳಲ್ಲಿ ಜೇನುಗೂಡು ಕಂಡುಬಂದರೆ ತಕ್ಷಣವೇ ಗೂಡನ್ನು ಸ್ಥಳಾಂತರ ಮಾಡಿಸುವುದು ಮುಖ್ಯ. ಇಲ್ಲವಾದರೆ, ಸ್ಥಳೀಯ ಆಡಳಿತವು ಸುತ್ತಮುತ್ತಲಿನ ಜನರನ್ನು ಸೇರಿಸಿ, ಜೇನಿನಿಂದಾಗುವ ಅನುಕೂಲಗಳು ಮತ್ತು ಸುರಕ್ಷತೆ ಕಾಯ್ದುಕೊಳ್ಳುವ ಬಗ್ಗೆ ಅರಿವು ಮೂಡಿಸಬೇಕು.

ಡಿ.ರಾಜಗೋಪಾಲ್, ಬೆಂಗಳೂರು

ಅತಿಯಾದರೆ ಜಾಮೂನೂ ವಿಷವೇ!

'ಬಿಜೆಪಿಯವರು ಬೇರೆಯವರಿಗೆ ಮೊದಲು ಸಿಹಿಯಾದ ಜಾಮೂನು ಕೊಟ್ಟು ತಮ್ಮ ಪಕ್ಷಕ್ಕೆ ಕರೆತರುತ್ತಾರೆ. ಅಧಿಕಾರ ಮುಗಿದ ಮೇಲೆ ವಿಷ ಕೊಡುತ್ತಾರೆ' ಎಂದು ಶಾಸಕ ಎಸ್.ಟಿ.ಸೋಮಶೇಖರ್ ಅವರು ಸ್ವಪಕ್ಷದ ವಿರುದ್ಧವೇ ಕಿಡಿಕಾರಿದ್ದಾರೆ. ಅತಿಯಾದರೆ ಅಮೃತವೂ ವಿಷವಾಗುತ್ತದೆ ಎಂಬ ನಾಣ್ಣುಡಿಯೇ ಇದೆ. ಮೊದಲು ಸಿಹಿಯಾದ ಜಾಮೂನನ್ನು ಕಂಠಪೂರ್ತಿ ತಿಂದು ತೇಗುವಾಗ, ಅದರಿಂದ ಅಜೀರ್ಣವಾಗುತ್ತದೆ, ವಾಂತಿಯಾಗುತ್ತದೆ, ದಿನವೂ ಸಿಹಿಯನ್ನು ತಿನ್ನುತ್ತಿದ್ದರೆ ಸಕ್ಕರೆ ಕಾಯಿಲೆ ಬರುವ ಸಂಭವವೂ ಇರುತ್ತದೆ ಎಂಬ ಅರಿವು ಅವರಿಗೆ ಇರಲಿಲ್ಲವೇ? ಜಿಲ್ಲಾ ಉಸ್ತುವಾರಿ ಸಚಿವರಾಗಿ ಬಿಡುವಿಲ್ಲದೇ ದುಡಿಯುತ್ತಿದ್ದ ಅವರಿಗೆ ಪಾಪ, ಆ ಬಗ್ಗೆ ಆಗ ಗಮನ ಕೊಡಲು ಆಗಲಿಲ್ಲವೇನೊ!

ಈಗ ಬಿಜೆಪಿಯವರ ಬಳಿ ಜಾಮೂನು (ಅಧಿಕಾರ) ಇಲ್ಲದಿರುವುದರಿಂದ, ಮಾಜಿ ಸಚಿವರು ಈಗ ಜಾಮೂನು ಇರುವ ಹೊಸ ಸ್ವೀಟ್ ಸ್ಟಾಲ್ ಹುಡುಕುತ್ತಿದ್ದಾರೆ ಎನ್ನುವುದು ಇತ್ತೀಚಿನ ಬೆಳವಣಿಗೆಗಳನ್ನು ಗಮನಿಸಿದರೆ ತಿಳಿಯುತ್ತದೆ. ಆದರೆ ಈಗ ಎಲ್ಲಾ ಅಂಗಡಿಗಳ ಜಾಮೂನುಗಳೂ ಆನ್‌ಲೈನ್‌ನಲ್ಲೇ ಸೋಲ್ಡ್‌ಔಟ್ ಆಗಿರುವುದರಿಂದ, ಅವರಿಗೆ ಸದ್ಯ ಜಾಮೂನು ಸಿಗುವುದು ಕಷ್ಟವೇ. ಸಿಕ್ಕರೂ ಅಲ್ಲಿಯೂ ಜಾಮೂನು ಮುಗಿದ ಮೇಲೆ ಅವರು ಕೂಡ ವಿಷವನ್ನೇ ಕೊಡುತ್ತಾರೆ ಎನ್ನುವುದನ್ನು ಮರೆಯಬಾರದು. ಸದ್ಯ ಅವರು ವಿಷಕಂಠನಾಗಿಯೇ ಇರಬೇಕಾಗುತ್ತದೆ. ಜಾಮೂನು ಸಿಕ್ಕಿದರೆ ಅವರ ಅದೃಷ್ಟ!

ಮುಳ್ಳೂರು ಪ್ರಕಾಶ್, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಎಲ್ಲಕ್ಕೂ ಸಜ್ಜುಗೊಳಿಸುವ ಸೀಮಾತೀತವಾದ ಕಲಿಕೆಗಾಗಿ

ಬೇಕಿದೆ ಸ್ವಂತ ಶಿಕ್ಷಣ ನೀತಿ



● ಪುರುಷೋತ್ತಮ ಬಿಳಿಮಲೆ

2020ರಲ್ಲಿ ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಹೊಸ ಶಿಕ್ಷಣ ನೀತಿಯು ಮುಂದಿನ 2040ರವರೆಗಿನ ತನ್ನ ಶೈಕ್ಷಣಿಕ ಯೋಜನೆಗಳನ್ನು ಪ್ರಕಟಿಸಿದೆ. ಆದರೆ ಕರ್ನಾಟಕ ಸರ್ಕಾರವನ್ನು ಹೊರತುಪಡಿಸಿದರೆ, ಬೇರಾವ ರಾಜ್ಯವೂ ಅದನ್ನು ಇನ್ನೂ ಅನುಷ್ಠಾನಕ್ಕೆ ತಂದಿಲ್ಲ. ಈ ನಡುವೆ ತಮಿಳುನಾಡು ಸರ್ಕಾರವು ಹೊಸ ಶಿಕ್ಷಣ ನೀತಿಯನ್ನು ಇಡಿಯಾಗಿ ತಿರಸ್ಕರಿಸಿ, ತನ್ನದೇ ಆದ ರಾಜ್ಯ ಶಿಕ್ಷಣ ನೀತಿಯನ್ನು ಜಾರಿಗೆ ತರುವುದಾಗಿ ಘೋಷಿಸಿ, ಸಮಿತಿಯೊಂದನ್ನು ರಚಿಸಿದೆ. ಈ ಬೆಳವಣಿಗೆಗಳು ಸದ್ಯಕ್ಕೆ ಪ್ರಾಥಮಿಕ, ಉನ್ನತ ಶಿಕ್ಷಣ, ವೃತ್ತಿಪರ ಶಿಕ್ಷಣ, ಶಿಕ್ಷಣ ಮಾಧ್ಯಮ ತತ್ಸಂಬಂಧಿ ವಿಷಯಗಳಲ್ಲಿ ಹಲವು ಗೊಂದಲ ಹುಟ್ಟುಹಾಕಿದೆ. ಇದಕ್ಕೆ ಹಲವು ಆಯಾಮಗಳಿವೆ.

ಅಂತರರಾಷ್ಟ್ರೀಯ ಆಯಾಮಗಳು: 1990ರ ದಶಕದಲ್ಲಿ ಆರಂಭಗೊಂಡ ಜಾಗತೀಕರಣ ಪ್ರಕ್ರಿಯೆಯು ಜಗತ್ತಿನ ಭಾಷೆಗಳ ವ್ಯಾಕರಣವನ್ನು ಏಕರೂಪಿಯಾಗಿ ಮಾರ್ಪಡಿಸಿದೆ. ಉನ್ನತ ಶಿಕ್ಷಣದ ಅಂತರರಾಷ್ಟ್ರೀಕರಣವು ಜೋರಾಗಿ ನಡೆಯುತ್ತಿದೆ. ಈ ಬೆಳವಣಿಗೆಗಳು ಶಿಕ್ಷಣದ ಪರಿಕಲ್ಪನೆಯನ್ನೇ ಆಮೂಲಾಗ್ರವಾಗಿ ಬದಲಾಯಿಸಿವೆ.

ಖಾಸಗೀಕರಣ, ವ್ಯಾಪಾರೀಕರಣ ಹಾಗೂ ಮಾರುಕಟ್ಟೆಯ ರೀತಿ-ನೀತಿಗಳು ಶಿಕ್ಷಣ ಕ್ಷೇತ್ರವನ್ನು ಲಾಗಾಯ್ತಿನಿಂದಲೂ ಪ್ರಭಾವಿಸುತ್ತಿವೆ. ಶಿಕ್ಷಣ ಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ವಿದ್ಯಾರ್ಥಿಗಳ ಹಾಜರಾತಿ, ದೇಶೀಯ ಮತ್ತು ವಿದೇಶೀ ವಿದ್ಯಾಲಯಗಳು ಒಟ್ಟಿಗೆ ಕೆಲಸ ಮಾಡುವ ಅವಳಿ ಕಾರ್ಯಕ್ರಮಗಳು ಹಾಗೂ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮಗಳು ಈಗಾಗಲೇ ಅನುಷ್ಠಾನಕ್ಕೆ ಬಂದಿವೆ. ವಿದೇಶಿ ವಿಶ್ವವಿದ್ಯಾಲಯಗಳು ಭಾರತದಲ್ಲಿ ತಮ್ಮ ಅಧ್ಯಯನ ಮತ್ತು ಪ್ರವೇಶ ಕೇಂದ್ರಗಳನ್ನು ತೆರೆದಿವೆ. 'ವಿದೇಶದಲ್ಲಿ ಒಂದು ಸೆಮಿಸ್ಟರ್ ಅಭ್ಯಾಸ' (SAP – Study Abroad Program) ಎಂಬ ಕಾರ್ಯಕ್ರಮದ ಅಡಿಯಲ್ಲಿ ಲಕ್ಷಾಂತರ ವಿದ್ಯಾರ್ಥಿಗಳು ದೇಶ ವಿದೇಶಗಳ ನಡುವೆ ಓಡಾಡುತ್ತಿದ್ದಾರೆ. ಇವುಗಳಿಗೆ ಪೂರಕವಾಗಿ, ಮಾರುಕಟ್ಟೆ ಕೇಂದ್ರಿತ ಪಠ್ಯಕ್ರಮಗಳ ಸಿದ್ಧತೆ, ಅಧ್ಯಯನದ ಅವಧಿ, ಕಂಪ್ಯೂಟರ್ ಆಧಾರಿತ ಮೌಲ್ಯಮಾಪನ ವಿಧಾನ ಮತ್ತು ಗುಣಾಂಕಗಳ ಹಂಚುವಿಕೆಯು ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ವೀಕಾರಗೊಂಡು ಚಾಲ್ತಿಗೆ ಬರುತ್ತಿವೆ.

ಮಕ್ಕಳಿಗೆ ಕೆಲವು ಕೌಶಲಗಳನ್ನು ಕಲಿಸಿ, ಅವರಿಗೆ ಉದ್ಯೋಗಾವಕಾಶ ಕಲ್ಪಿಸಿಕೊಡುವುದು ಇಲ್ಲವೇ ವಿದೇಶಗಳಿಗೆ ಕಳಿಸಿಕೊಡುವುದು ಮುಖ್ಯ ಎಂದು ಬಹುತೇಕ ಎಲ್ಲರನ್ನೂ ನಂಬಿಸಲಾಗಿದೆ. ಸ್ವಾರ್ಥಪರ ಆರ್ಥಿಕತೆಯ ಹಿಂದೆ ಬಿದ್ದಿರುವ ಜನರ ಆದ್ಯತೆಗಳು ಇವತ್ತು ಆಮೂಲಾಗ್ರವಾಗಿ ಬದಲಾಗಿವೆ. ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಅಧ್ಯಯನಗಳನ್ನು 'ಅನುತ್ಪಾದಕ' ಎಂದು ಘೋಷಿಸಲಾಗಿದೆ.

ಇವೆಲ್ಲದರ ಪರಿಣಾಮವಾಗಿ ಇವತ್ತಿನ ಶಿಕ್ಷಣವು ಯಾವುದೇ ದೇಶದ ಗಡಿಗಳಿಗೆ ಸೀಮಿತವಾಗಿ ಉಳಿದಿಲ್ಲ, 'ಸೀಮಾತೀತ'ವಾಗಿದೆ. ಇಂಥ ಬೆಳವಣಿಗೆಗಳಿಗೆ ಕರ್ನಾಟಕ ಸರ್ಕಾರವು ತನ್ನನ್ನು ಬೌದ್ಧಿಕವಾಗಿ ಮತ್ತು ಭೌತಿಕವಾಗಿ ಸಜ್ಜುಗೊಳಿಸಿಕೊಳ್ಳಬೇಕಾದ್ದು ಬಹಳ ಅಗತ್ಯ. ಒಂದೋ ಈ ಬೆಳವಣಿಗೆಗಳನ್ನು ಅದು ವಿರೋಧಿಸಬೇಕು ಅಥವಾ ಹೊಸ ಬದಲಾವಣೆಗಳಿಗೆ ಅದು ತನ್ನನ್ನು ಪೂರ್ತಿ ತೆರೆದುಕೊಳ್ಳಬೇಕು, ಇಲ್ಲವೇ ಕೆಲವನ್ನು ಪರಿಷ್ಕರಿಸಿ ಒಪ್ಪಿಕೊಳ್ಳಬೇಕು. ಬೋಧನಾಂಗವನ್ನು ಸಶಕ್ತಗೊಳಿಸಬೇಕು, ಕ್ಯಾಂಪಸ್‌ಗಳನ್ನು ಅತ್ಯಾಧುನಿಕವಾಗಿಸಬೇಕು. ಆದರೆ ಏನೂ ಮಾಡದೆ 'ದುಡ್ಡಿಲ್ಲ' ಎಂದು ಕುಳಿತರೆ ಮುಂದಿನ 25 ವರ್ಷಗಳಲ್ಲಿ ಕನ್ನಡಿಗರು ಅನಾಥರಾಗುವುದಂತೂ ಖಂಡಿತ.

ರಾಷ್ಟ್ರೀಯ ಆಯಾಮಗಳು: ಶಿಕ್ಷಣದ ಜಾಗತೀಕರಣಕ್ಕೆ ಸಂಬಂಧಿಸಿದಂತೆ ಅನೇಕ ವಿಷಯಗಳಿದ್ದರೂ ಕರ್ನಾಟಕಕ್ಕೆ ಹೆಚ್ಚು ಪ್ರಸ್ತುತವಾಗಿರುವ ಭಾಷಾ ಮಾಧ್ಯಮದ ವಿಷಯವನ್ನು ಇಲ್ಲಿ ಪರಿಶೀಲಿಸಬಹುದು. ಹೊಸ ಶಿಕ್ಷಣ ನೀತಿಯು ಈ ಸಮಸ್ಯೆಯನ್ನು ಗಮನಿಸಿದೆ. ಅದರ ಶಿಫಾರಸು 4.11ರಲ್ಲಿ ಸಾಧ್ಯವಾದ ಮಟ್ಟಿಗೆ ಕಡೇ ಪಕ್ಷ ಐದನೆಯ ತರಗತಿವರೆಗೆ ಅಥವಾ ಆದ್ಯತೆ ಮೇರೆಗೆ ಎಂಟನೆಯ ತರಗತಿವರೆಗೆ ಅಥವಾ ಅದಕ್ಕೂ ಮುಂದೆ ಶಿಕ್ಷಣದ ಮಾಧ್ಯಮವು ಮನೆ ಭಾಷೆ/ಪ್ರಾದೇಶಿಕ ಭಾಷೆ/ ಮಾತೃ ಭಾಷೆ/ ಸ್ಥಳೀಯ ಭಾಷೆ/ ಆಗಿರಬೇಕಾಗುತ್ತದೆ ಎಂಬ ಮಾತನ್ನು ಸ್ಪಷ್ಟವಾಗಿ ಹೇಳಲಾಗಿದೆ. ಆದರೆ ಇದನ್ನು ಸಾಧ್ಯ ಮಾಡುವುದು ಹೇಗೆ?

ಕರ್ನಾಟಕ ಸರ್ಕಾರವು ಕನ್ನಡದಲ್ಲಿ ಕಲಿಯುವುದನ್ನು ಪ್ರಾಥಮಿಕ ಹಂತದಲ್ಲಿ ಕಡ್ಡಾಯ ಮಾಡಲು 1984ರಲ್ಲಿಯೇ ಆದೇಶ ಹೊರಡಿಸಿದೆ. ಆದರೆ, ಸುಪ್ರೀಂ ಕೋರ್ಟಿನ ಐವರು ನ್ಯಾಯಾಧೀಶರ ಪೀಠವು ಸಂವಿಧಾನದ ವಿಧಿ 19(1)(ಎ), 19(1)(ಜಿ), 21(ಎ), 26, 29, 30 ಮತ್ತು 350ಎಗಳನ್ನು ಆಧರಿಸಿ ಕರ್ನಾಟಕ ಸರ್ಕಾರದ ಆದೇಶವನ್ನು 2015ರಲ್ಲಿಯೇ ರದ್ದುಗೊಳಿಸಿದೆ. ಈಗ ಈ ಕುರಿತು ಸಂವಿಧಾನದಲ್ಲಿಯೇ ಸೂಕ್ತ ತಿದ್ದುಪಡಿ ತಂದರೆ ಮಾತ್ರ ಕನ್ನಡ ಮಾಧ್ಯಮವನ್ನು ಉಳಿಸಲು ಸಾಧ್ಯ. ಈ ವಿಷಯದಲ್ಲಿ ಕರ್ನಾಟಕ ಮುಂದಾಳತ್ವ ವಹಿಸಿದರೆ ದೇಶದ ಇತರ ರಾಜ್ಯಗಳ ಬೆಂಬಲ ಸಿಗುತ್ತದೆ.

ಹಿಂದಿಯ ಸಮಸ್ಯೆ: ಗೃಹಮಂತ್ರಿಗಳ ನೇತೃತ್ವದ 'ಹಿಂದಿ ಅಭಿವೃದ್ಧಿ ಸಮಿತಿ'ಯು ಮಾಡಿದ ಶಿಫಾರಸುಗಳು ಪಾರ್ಲಿಮೆಂಟಿನಲ್ಲಿ ಮಂಡನೆಯಾಗಬೇಕಿಲ್ಲ, ರಾಷ್ಟ್ರಪತಿಗಳ ಅಂಕಿತ ಬಿದ್ದರೆ ಅದು ಕಾನೂನಾಗುತ್ತದೆ. ಪರಿಣಾಮವಾಗಿ ಹಿಂದಿಯು ಕಳೆದ 40 ವರ್ಷಗಳಲ್ಲಿ 66% ಬೆಳವಣಿಗೆ ತೋರಿಸಿದೆ. ಉಳಿದೆಲ್ಲಾ ಭಾಷೆಗಳು ಮಾನವ ಸಂಪನ್ಮೂಲ ಇಲಾಖೆಯ ಅಡಿಯಲ್ಲಿ ಬರುತ್ತಿದ್ದು ಶೇಕಡಾ 8-9ರ ಬೆಳವಣಿಗೆ ತೋರಿಸುತ್ತಿವೆ. ಕನ್ನಡ ಅತಿ ಕನಿಷ್ಠ ಎಂದರೆ ಶೇಕಡಾ 3.62 ಬೆಳವಣಿಗೆ ತೋರಿಸುತ್ತಿದೆ. ಇದನ್ನು ಕರ್ನಾಟಕವು ಗಂಭೀರವಾಗಿ ಗಮನಿಸಿ, ಎಲ್ಲ ಭಾಷೆಗಳೂ ಒಂದೇ ಸಚಿವಾಲಯದ ಅಡಿಯಲ್ಲಿ ಬರುವಂತೆ ಮಾಡಲು ಮುಂದಿನ ದಿನಗಳಲ್ಲಿ ರಾಷ್ಟ್ರ ಮಟ್ಟದ ಚಳವಳಿ ರೂಪಿಸಬೇಕು.

ತ್ರಿಭಾಷಾ ಸೂತ್ರದ ಹೊರೆ: ಹೊಸ ಶಿಕ್ಷಣ ನೀತಿಯು ತ್ರಿಭಾಷಾ ನೀತಿಯನ್ನು ಅನುಸರಿಸಲು ಕರೆನೀಡಿದೆ. ಕರ್ನಾಟಕವು ಅದನ್ನು 1968ರಿಂದಲೂ ಅನುಸರಿಸಿಕೊಂಡು ಬಂದಿದೆ. ಆದರೆ ತಮಿಳುನಾಡು ದ್ವಿಭಾಷಾ ನೀತಿಗೆ ಅಂಟಿಕೊಂಡಿದೆ. ಇದರಿಂದ ಕರ್ನಾಟಕ ಮತ್ತು ತಮಿಳುನಾಡುಗಳಿಗಾದ ಲಾಭ ನಷ್ಟಗಳೇನು ಎಂಬ ಕುರಿತು ಚರ್ಚೆ ನಡೆಯಬೇಕು. ತ್ರಿಭಾಷಾ ಸೂತ್ರದ ಅಂಗವಾಗಿ ಉತ್ತರ ಭಾರತೀಯರು ದಕ್ಷಿಣ ಭಾರತದ ಒಂದು ಭಾಷೆಯನ್ನು ಕಲಿಯಬೇಕು. ಆದರೆ ಅವರು ಕಲಿತೇ ಇಲ್ಲ. ಹೀಗೆ ಯಾರಿಗೂ ಬೇಡವಾದ ತ್ರಿಭಾಷಾ ನೀತಿ ಕರ್ನಾಟಕಕ್ಕೆ ಏಕೆ ಬೇಕು? ಎಂಬುದರ ಕುರಿತು ಕರ್ನಾಟಕ ಸರ್ಕಾರವು ಮುಂದಿನ ದಿನಗಳಲ್ಲಿ ಗಂಭೀರವಾಗಿ ಯೋಚಿಸಬೇಕು.

ಪ್ರಾದೇಶಿಕ ಸಮಸ್ಯೆಗಳು: ಕರ್ನಾಟಕದಲ್ಲಿ ಕನ್ನಡದ ಜೊತೆಗೆ ಇತರ ಸುಮಾರು 72 ಭಾಷೆಗಳಿವೆ. ಭಾಷಾವಾರು ಪ್ರಾಂತ್ಯಗಳ ರಚನೆಯಾದಾಗ ಪ್ರಭಾವೀ ಪ್ರಾದೇಶಿಕ ಭಾಷೆಗಳಿಗೇನೋ ಮಹತ್ವ ಬಂದಿತು. ಆದರೆ ಈ ಹಂತದಲ್ಲಿ ಪ್ರಾದೇಶಿಕ ಭಾಷೆಗಳ ಆಶ್ರಯದಲ್ಲಿರುವ ಸಣ್ಣ ಭಾಷೆಗಳು ತೀವ್ರ ಉಪೇಕ್ಷೆಗೆ ಒಳಗಾದವು. ಸಣ್ಣ ಭಾಷೆಗಳನ್ನು ಅನೇಕ ರಾಜ್ಯ ಸರ್ಕಾರಗಳು ತಮ್ಮ ರಾಜ್ಯದ ಅಧಿಕೃತ ಭಾಷೆಗಳೆಂದು ಘೋಷಿಸಿವೆ. ಆಂಧ್ರ ಪ್ರದೇಶವು ತೆಲುಗು ಜೊತೆಗೆ ಉರ್ದುವನ್ನು, ಬಿಹಾರವು ಬಿಹಾರಿ ಭಾಷೆಯ ಜೊತೆಗೆ ಬಾಂಗ್ಲಾವನ್ನು(ಬಂಗಾಳಿ), ಪಶ್ಚಿಮ ಬಂಗಾಳವು ಬಾಂಗ್ಲಾ ಜೊತೆಗೆ ಉರ್ದು, ಪಂಜಾಬಿ, ನೇಪಾಲಿ, ಒರಿಯಾ ಮತ್ತು ಹಿಂದಿಯನ್ನು ಅಧಿಕೃತ ಭಾಷೆಗಳೆಂದು ಘೋಷಿಸಿವೆ. ಆದರೆ ಕರ್ನಾಟಕವು ಇತರ ಯಾವುದೇ ಭಾಷೆಗಳಿಗೆ ಅಧಿಕೃತ ಮನ್ನಣೆ ನೀಡಿಲ್ಲ.

ಈ ತಿಳಿವಳಿಕೆಗಳ ಚೌಕಟ್ಟಿನಲ್ಲಿ ಕರ್ನಾಟಕ ಸರ್ಕಾರವು ಮುಂದಿನ ದಿನಗಳಲ್ಲಿ ತನ್ನದೇ ಆದ ಶೈಕ್ಷಣಿಕ ನೀತಿಯೊಂದನ್ನು ರೂಪಿಸುವ ಅಗತ್ಯವಿದೆ.

ಇವತ್ತಿನ ಶಿಕ್ಷಣವು ಯಾವುದೇ ದೇಶದ ಗಡಿಗಳಿಗೆ ಸೀಮಿತವಾಗಿ ಉಳಿದಿದೆ, 'ಸೀಮಾತೀತ'ವಾಗಿದೆ. ಇಂಥ ಬೆಳವಣಿಗೆಗಳಿಗೆ ಕರ್ನಾಟಕ ಸರ್ಕಾರವು ತನ್ನನ್ನು ಬೌದ್ಧಿಕವಾಗಿ ಮತ್ತು ಭೌತಿಕವಾಗಿ ಸಜ್ಜುಗೊಳಿಸಿಕೊಳ್ಳಬೇಕಾದ್ದು ಬಹಳ ಅಗತ್ಯ. ಒಂದೋ ಈ ಬೆಳವಣಿಗೆಗಳನ್ನು ಅದು ವಿರೋಧಿಸಬೇಕು ಅಥವಾ ಹೊಸ ಬದಲಾವಣೆಗಳಿಗೆ ಅದು ತನ್ನನ್ನು ಪೂರ್ತಿ ತೆರೆದುಕೊಳ್ಳಬೇಕು, ಇಲ್ಲವೇ ಕೆಲವನ್ನು ಪರಿಷ್ಕರಿಸಿ ಒಪ್ಪಿಕೊಳ್ಳಬೇಕು

ಲೇಖಕ: ನಿವೃತ್ತ ಪ್ರಾಧ್ಯಾಪಕ,
ಜವಾಹರ ಲಾಲ್ ನೆಹರೂ ವಿಶ್ವವಿದ್ಯಾಲಯ

ಕರ್ನಾಟಕ ೫೦
25 ವರ್ಷಗಳ ಮುನ್ನೋಟ

ಸಮತೋಲಿತ ಅಭಿವೃದ್ಧಿ

ಎಲ್ಲರ ಒಳಗೊಳ್ಳುವಿಕೆಗೆ ಕೈಗಾರಿಕೋದ್ಯಮ ವಿಕೇಂದ್ರೀಕರಣವಾಗಬೇಕು

● ಮಾಲಿನಿ ಎಲ್. ತಂತ್ರಿ/ಸಿ. ನಳಿನ್ ಕುಮಾರ್





ಇತರ ರಾಜ್ಯಗಳು ಸಶಕ್ತವಾದಂಥ ಕೈಗಾರಿಕಾ ಅಡಿಪಾಯದ ಕುರಿತು ಆಲೋಚಿಸುವ ಬಹಳ ವರ್ಷಗಳ ಮೊದಲೇ, ಕರ್ನಾಟಕದ ದಾರ್ಶನಿಕ ನೀತಿ ನಿರೂಪಕರು ರಾಜ್ಯದಲ್ಲಿ ಸಶಕ್ತವಾದ ಕೈಗಾರಿಕಾ ಕ್ಷೇತ್ರದ ಅಡಿಪಾಯವನ್ನು ಹಾಕಿದ್ದರು. ಇದಕ್ಕಾಗಿ ಹಲವು ನೀತಿಗಳನ್ನು ಜಾರಿಗೆ ತರಲಾಗಿತ್ತು.

ಕೈಗಾರಿಕಾ ನೀತಿಯೊಂದನ್ನು ಜಾರಿ ಮಾಡಿದ ಮೊದಲ ರಾಜ್ಯ ಕರ್ನಾಟಕ. 1983ರಲ್ಲಿಯೇ ಇಂಥದೊಂದು ನೀತಿಯನ್ನು ಜಾರಿ ಮಾಡಲಾಗಿದೆ. ರಾಜ್ಯ ಮಟ್ಟದ ರಫ್ತು ಉತ್ತೇಜನ ನೀತಿ, ರಾಜ್ಯವನ್ನು ವೈಮಾನಿಕ ಉದ್ಯಮಗಳ ಕೇಂದ್ರವನ್ನಾಗಿಸಿದ್ದು, 2013–2023ರ ವರೆಗಿನ 10 ವರ್ಷಗಳ ವೈಮಾನಿಕ ನೀತಿ ಜಾರಿ ಮಾಡಿದ್ದು, 2012ರ ಔಷಧೀಯ ನೀತಿ ಜಾರಿ ಮಾಡಿದ್ದು... ಹೀಗೆ ರಾಜ್ಯದ ಹಲವು ನೀತಿಗಳನ್ನು ಉದಾಹರಿಸಬಹುದು. 2015–2020ವರೆಗಿನ ನವೋದ್ಯಮ ನೀತಿಯನ್ನು ಜಾರಿ ಮಾಡಿದ್ದು ಕೂಡ ದೇಶದಲ್ಲಿ ಪ್ರಥಮ ಪ್ರಯತ್ನವೇ ಆಗಿದೆ. ನವೋದ್ಯಮ ನೀತಿಯ ಕಾರಣದಿಂದಾಗಿ, ಕರ್ನಾಟಕವು ದೇಶದಲ್ಲಿಯೇ ಅತಿ ಹೆಚ್ಚು ನವೋದ್ಯಮಗಳು ಇರುವ ಎರಡನೇ ರಾಜ್ಯವೆನಿಸಿದೆ. ಸಾಫ್ಟ್‌ವೇರ್ ರಫ್ತಿನಲ್ಲಿ ರಾಜ್ಯವು ಪ್ರಥಮ ಸ್ಥಾನದಲ್ಲಿದೆ. 2022ರಲ್ಲಿ ₹41,678 ಕೋಟಿಯಷ್ಟು ವಿದೇಶಿ ನೇರ ಬಂಡವಾಳ ರಾಜ್ಯದಲ್ಲಿ ಹೂಡಿಕೆಯಾಗಿದ್ದು, ಇದು ಬೇರೆ ರಾಜ್ಯಗಳ ಹೋಲಿಕೆಯಲ್ಲಿ ಎರಡನೇ ದೊಡ್ಡ ಮೊತ್ತ.

ಇಷ್ಟೊಂದು ಸಶಕ್ತ ನೀತಿಗಳನ್ನು ಜಾರಿ ಮಾಡಲಾಗಿದ್ದರೂ ದೇಶದ ಕೈಗಾರಿಕಾ ಕ್ಷೇತ್ರದಲ್ಲಿ ಮೊದಲ ಮೂರು ಸ್ಥಾನಗಳನ್ನು ದಕ್ಕಿಸಿಕೊಳ್ಳಲು ರಾಜ್ಯಕ್ಕೆ ಸಾಧ್ಯವಾಗಿಲ್ಲ. ರಾಜ್ಯದ ಒಟ್ಟು ಜಿಡಿಪಿಯಲ್ಲಿ ಕೈಗಾರಿಕಾ ಕ್ಷೇತ್ರದ ಕೊಡುಗೆ ಬಹಳ ಕಡಿಮೆ ಅಂದರೆ ಶೇ 21ರಷ್ಟಿದೆ. ಗುಜರಾತ್ (ಶೇ 42), ತಮಿಳುನಾಡು (ಶೇ 33), ಮಹಾರಾಷ್ಟ್ರ (ಶೇ 28) ಮತ್ತು ಉತ್ತರ ಪ್ರದೇಶಕ್ಕೆ (ಶೇ 27) ಹೋಲಿಸಿದರೆ, ಕರ್ನಾಟಕದ ಪ್ರಮಾಣವು ಕಡಿಮೆ.

ಸಶಕ್ತ ನೀತಿಗಳನ್ನು ಜಾರಿ ಮಾಡಲಾಗಿದ್ದರೂ ದೇಶದ ಕೈಗಾರಿಕಾ ಕ್ಷೇತ್ರದಲ್ಲಿ ಮೊದಲ ಮೂರು ಸ್ಥಾನಗಳನ್ನು ದಕ್ಕಿಸಿಕೊಳ್ಳಲು ರಾಜ್ಯಕ್ಕೆ ಸಾಧ್ಯವಾಗಿಲ್ಲ. ರಾಜ್ಯದ ಒಟ್ಟು ಜಿಡಿಪಿಯಲ್ಲಿ ಕೈಗಾರಿಕಾ ಕ್ಷೇತ್ರದ ಕೊಡುಗೆ ಬಹಳ ಕಡಿಮೆ ಅಂದರೆ ಶೇ 21ರಷ್ಟಿದೆ. ಗುಜರಾತ್, ತಮಿಳುನಾಡು, ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶಕ್ಕೆ ಹೋಲಿಸಿದರೆ, ಕರ್ನಾಟಕದ ಪ್ರಮಾಣವು ಕಡಿಮೆ



ರಾಜ್ಯದಲ್ಲಿ ಕೈಗಾರಿಕಾ ಪ್ರದೇಶ, ಕೈಗಾರಿಕಾ ಪಾರ್ಕ್‌ಗಳ ಸಂಖ್ಯೆಯು ಏರಿಕೆಯಾಗುತ್ತಲೇ ಇದೆ ನಿಜ. ಆದರೆ, ಇಂಥ ಏರಿಕೆಯು ಕೆಲವೇ ಜಿಲ್ಲೆಗಳಿಗೆ ಸೀಮಿತವಾಗಿದೆ. ಈ ಕಾರಣದಿಂದಾಗಿ ಅಸಮತೋಲಿತ ಬೆಳವಣಿಗೆ ಆಗುತ್ತಿದೆ. ರಾಜ್ಯದ ಎಲ್ಲ ಪ್ರದೇಶಗಳಲ್ಲೂ ಏಕರೂಪದ ಬೆಳವಣಿಗೆ ಸಾಧ್ಯವಾಗಿಲ್ಲ. ಬೆಂಗಳೂರು ಕೇಂದ್ರಿತ ಅಭಿವೃದ್ಧಿಯು ಅಸಮತೋಲಿತ ಬೆಳವಣಿಗೆಗೆ ದಾರಿ ಮಾಡಿಕೊಟ್ಟಿದೆ.

2022–23ರ ರಾಜ್ಯದ ಆರ್ಥಿಕ ಸಮೀಕ್ಷೆಯ ಪ್ರಕಾರ, ಬೆಂಗಳೂರು ನಗರ ಜಿಲ್ಲೆಯೊಂದರಲ್ಲಿಯೇ 78.24 ಲಕ್ಷ ಉದ್ಯಮಗಳಿವೆ. ನಂತರದ ಸ್ಥಾನದಲ್ಲಿ ಬೆಳಗಾವಿ (2.99 ಲಕ್ಷ), ತುಮಕೂರು (2.28 ಲಕ್ಷ), ದಕ್ಷಿಣ ಕನ್ನಡ (2.08 ಲಕ್ಷ) ಮತ್ತು ಹಾಸನ (2.07 ಲಕ್ಷ) ಜಿಲ್ಲೆಗಳಿವೆ. ಈ ಜಿಲ್ಲೆಗಳಲ್ಲಿ ಲಕ್ಷದ ಸಂಖ್ಯೆಯಲ್ಲಿ ಉದ್ಯಮಗಳು ಇರುವಾಗ, ಯಾದಗಿರಿ ಜಿಲ್ಲೆಯಲ್ಲಿ ಮಾತ್ರ 40,162 ಉದ್ಯಮಗಳಿವೆ. ಒಂದೆಡೆ ಅತಿಯಾದ ಅಭಿವೃದ್ಧಿ, ಮತ್ತೊಂದೆಡೆ ಅಭಿವೃದ್ಧಿಯೇ ಇಲ್ಲದ ಸ್ಥಿತಿ.

ರಫ್ತು ಉತ್ತೇಜನವು ಸ್ಥಳೀಯ ಆರ್ಥಿಕತೆಗೆ ಜೀವ ತುಂಬಬಲ್ಲದು. ಆದರೆ, ನೀತಿ ಆಯೋಗದ ರಫ್ತು ಸಿದ್ಧತಾ ಸೂಚ್ಯಂಕ–2022ರ ಪ್ರಕಾರ ದೇಶದಲ್ಲಿ ಇಂಥ ವಾತಾವರಣ ಇಲ್ಲ. ದೇಶದ ಒಟ್ಟು ರಫ್ತಿಗೆ 680 ಜಿಲ್ಲೆಗಳು ಕೊಡುಗೆ ನೀಡುತ್ತವೆ. ಇವುಗಳಲ್ಲಿ 100 ಜಿಲ್ಲೆಗಳು ದೇಶದ ಒಟ್ಟು ರಫ್ತು ಪ್ರಮಾಣದಲ್ಲಿ ಅತೀ ಹೆಚ್ಚು ಅಂದರೆ, ಶೇ 87ರಷ್ಟು ಕೊಡುಗೆ ನೀಡುತ್ತವೆ. ಈ 100 ಜಿಲ್ಲೆಗಳ ಪಟ್ಟಿಯಲ್ಲಿ ರಾಜ್ಯದ ಕೇವಲ ಆರು ಜಿಲ್ಲೆಗಳಿದ್ದರೆ, ಗುಜರಾತ್‌ನ 14 ಮತ್ತು ಮಹಾರಾಷ್ಟ್ರದ 12 ಜಿಲ್ಲೆಗಳು ಸ್ಥಾನ ಪಡೆದುಕೊಂಡಿವೆ.

ಕೈಗಾರಿಕಾ ನೀತಿ, ಉದ್ಯಮಸ್ನೇಹಿ ವಾತಾವರಣ, ರಫ್ತು ಉತ್ತೇಜನ ಮತ್ತು ರಫ್ತು ಸ್ಥಿತಿಗತಿ ಎಂಬ ನಾಲ್ಕು ವಿಭಾಗಗಳ ಆಧಾರದಲ್ಲಿ ಜಿಲ್ಲೆಗಳಿಗೆ ಸ್ಥಾನಗಳನ್ನು ನೀಡಲಾಗುತ್ತದೆ. ನೀತಿ ನಿರೂಪಣೆ, ಉದ್ಯಮಸ್ನೇಹಿ ವಾತಾವರಣ ವಿಭಾಗಗಳಲ್ಲಿ ರಾಜ್ಯವು ಪ್ರಥಮ ಸ್ಥಾನದಲ್ಲಿದೆ. ಆದರೆ, ರಫ್ತು ಉತ್ತೇಜನದಲ್ಲಿ ಮೂರನೇ ಸ್ಥಾನ ಹಾಗೂ ರಫ್ತು ಸ್ಥಿತಿಗತಿಯಲ್ಲಿ 9ನೇ ಸ್ಥಾನದಲ್ಲಿದೆ.

ಈ ವಿಭಾಗಗಳಲ್ಲಿ ಉತ್ತಮ ಸ್ಥಾನ ಪಡೆದುಕೊಳ್ಳಬೇಕು ಎಂದಾದರೆ, ಅಸಮತೋಲಿತ ಬೆಳವಣಿಗೆಯ ಸವಾಲನ್ನು ಮೀರಲೇಬೇಕಿದೆ. ನೀತಿ ನಿರೂಪಣೆ ಹಾಗೂ ಅದರ ಜಾರಿಯಿಂದ ಆಗುವ ಪರಿಣಾಮದ ಮಧ್ಯೆ ದೊಡ್ಡ ಅಂತರವಿದೆ. ಇದಕ್ಕೆ ಸೇತುವೆ ಕಟ್ಟಲೇಬೇಕಿದೆ. ಈ ಸವಾಲುಗಳನ್ನು ಎದುರಿಸುವ ಪ್ರಯತ್ನಗಳೇ ನಮ್ಮ ಮುಂದಿನ 25 ವರ್ಷಗಳಿಗೆ ಗುರಿಯಾಗಬೇಕಿದೆ. ಈ ಹಿನ್ನೆಲೆಯಲ್ಲಿ, ಎರಡು ಪ್ರಮುಖ ಸವಾಲು ಹಾಗೂ ಆದ್ಯತೆಗಳನ್ನು ಪಟ್ಟಿ ಮಾಡಬಹುದಾಗಿದೆ. ಒಂದು: ಉದ್ಯಮಸ್ನೇಹಿ ವಾತಾವರಣ ನಿರ್ಮಾಣ ಹಾಗೂ ಉದ್ಯಮದಲ್ಲಿ ಸ್ಪರ್ಧಾತ್ಮಕತೆ. ಎರಡು: ಕೈಗಾರಿಕಾ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆ ಮೀರುವುದು ಹಾಗೂ ಉದ್ಯೋಗ ಸೃಷ್ಟಿ.

ವಿನಾಯಿತಿಗಳ ಬದಲಿಗೆ ಮೂಲಸೌಕರ್ಯಕ್ಕೆ ಆದ್ಯತೆ: ಕೈಗಾರಿಕೆ ಮತ್ತು ಉದ್ದಿಮೆ ವಲಯಗಳಿಗೆ ಸಂಬಂಧಿಸಿದಂತೆ ಸಾಂಸ್ಥಿಕ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಬೇಕಿದೆ. ಹಾಗೆ ಮಾಡುವಾಗ ಏಕರೂಪದ ನೀತಿಯನ್ನು ಅನುಸರಿಸುವ ಬದಲಿಗೆ ಕ್ಷೇತ್ರವಾರು ಪ್ರತ್ಯೇಕ ನೀತಿಯನ್ನು ರೂಪಿಸಬೇಕಾದ ಅವಶ್ಯಕತೆ ಇದೆ. ಉದ್ದಿಮೆಗಳ ಅಭಿವೃದ್ಧಿಯಲ್ಲಿ ವಿನಾಯಿತಿಗಳ ಬದಲಿಗೆ ಸಾಂಸ್ಥಿಕ ಮತ್ತು ಮೂಲಸೌಕರ್ಯಗಳ ಮೂಲಕ ಅದನ್ನು ಸಾಧಿಸುವುದಕ್ಕೆ ಆದ್ಯತೆ ನೀಡಬೇಕು. ಏಕೆಂದರೆ ವಿನಾಯಿತಿಗಳು ವಿದೇಶಿ ಬಂಡವಾಳವನ್ನು ಆಕರ್ಷಿಸಬಹುದೇ ಹೊರತು, ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆಗೆ ಬೇಕಾದ ಸ್ಪರ್ಧಾತ್ಮಕತೆಯನ್ನು ರೂಪಿಸುವುದಿಲ್ಲ. ಆದರೆ ಮೂಲಸೌಕರ್ಯ ಅಭಿವೃದ್ಧಿಯು ಅಂತಹ ಸ್ಪರ್ಧಾತ್ಮಕತೆ ಸಾಧಿಸಲು ನೆರವಾಗುತ್ತದೆ.

ಕಾರ್ಮಿಕರ ಯೋಜಿತ ಪೂರೈಕೆ ಮತ್ತು ವಲಸೆ: ಯಾವುದೇ ಉದ್ದಿಮೆಗಳ ವಿಸ್ತರಣೆಯಲ್ಲಿ ಕಾರ್ಮಿಕರನ್ನು ಹೇಗೆ ಪೂರೈಸಬೇಕು ಎಂಬುದರ ಅತ್ಯಂತ ವ್ಯವಸ್ಥಿತವಾದ ಯೋಜನೆಯ ಅವಶ್ಯಕತೆ ಇರುತ್ತದೆ. ಇದನ್ನು ಹೇಗೆ ಸಾಧಿಸಬೇಕು ಎಂಬುದಕ್ಕೆ ಚೀನಾದ ವಿಶೇಷ ಆರ್ಥಿಕ ವಲಯ ಯೋಜನೆಗಳನ್ನು ಪರಿಶೀಲಿಸಬಹುದು. ಅಲ್ಲಿ ಯಾವುದೇ ಎಸ್‌ಇಝೆಡ್‌ಗಳನ್ನು ಸ್ಥಾಪಿಸುವುದಕ್ಕೆ ಮೊದಲು ಅಲ್ಲಿನ ವಿವಿಧ ವಲಯಗಳಿಗೆ ಅಗತ್ಯವಿರುವ ಕಾರ್ಮಿಕರ ಸಂಖ್ಯೆ, ಕಾರ್ಮಿಕರಿಗೆ ಇರಬೇಕಾದ ಕೌಶಲದ ಮಟ್ಟ ಮತ್ತು ಸ್ವರೂಪ ಎಂಥದ್ದು ಎಂಬುದನ್ನು ನಿರ್ಧರಿಸಲಾಗುತ್ತದೆ. ಅದಕ್ಕೆ ತಕ್ಕಂತೆ ಕಾರ್ಮಿಕರ ಪೂರೈಕೆ ಯೋಜನೆಯನ್ನು ರೂಪಿಸಲಾಗುತ್ತದೆ. ಗ್ರಾಮೀಣ ಪ್ರದೇಶಗಳಿಂದ ಕೌಶಲಭರಿತ ಕಾರ್ಮಿಕರನ್ನು ಅತ್ಯಂತ ವ್ಯವಸ್ಥಿತವಾಗಿ ಎಸ್‌ಇಝೆಡ್‌ಗಳಿಗೆ ಪೂರೈಸಲಾಗುತ್ತದೆ.

ಕಲಿಕಾವೃತ್ತಿ ವ್ಯವಸ್ಥೆಯನ್ನು ಬಲಪಡಿಸುವಿಕೆ: ಕಲಿಕಾವೃತ್ತಿಯ ಸಾಫಲ್ಯತೆಯ ದರದಲ್ಲಿ ಕರ್ನಾಟಕವು ಬೇರೆ ರಾಜ್ಯಗಳಿಗಿಂತ ಬಹಳ ಹಿಂದೆ ಉಳಿದಿದೆ. ಉದ್ದಿಮೆಗಳ ವಿಸ್ತರಣೆಗೆ ಅಗತ್ಯವಿರುವ ಕೌಶಲಭರಿತ ಕಾರ್ಮಿಕರ ಪೂರೈಕೆ ಮತ್ತು ಯುವಜನರಲ್ಲಿ ಕೌಶಲ ಅಭಿವೃದ್ಧಿಗೆ ಸರ್ಕಾರವು ಸಮಗ್ರ ಕಲಿಕಾವೃತ್ತಿ ನೀತಿಯನ್ನು ರೂಪಿಸಬೇಕಾದ ಅವಶ್ಯಕತೆ ಇದೆ. ಕೌಶಲ ಅಭಿವೃದ್ಧಿ ಮತ್ತು ಉದ್ದಿಮೆ ವಿಸ್ತರಣೆ ಏಕದರದಲ್ಲಿ ಸಾಧ್ಯವಾದರೆ ಆರ್ಥಿಕತೆಯ ಸಮಗ್ರ ಬೆಳವಣಿಗೆ ಸಾಧ್ಯವಾಗಲಿದೆ.

ಹಾಗಾದರೆ, ಮುಂದಿನ 25 ವರ್ಷಗಳಲ್ಲಿ ಏನು ಮಾಡಬಹುದು? ಉತ್ತರ ಸ್ಪಷ್ಟ. ಗ್ರಾಮೀಣ ಭಾಗದಲ್ಲಿ ಮೂಲಸೌಕರ್ಯ ಅಭಿವೃದ್ಧಿಯ ಕಡೆಗೆ ಕರ್ನಾಟಕವು ಹೆಚ್ಚು ಗಮನ ಹರಿಸಬೇಕಿದೆ. ಕೈಗಾರಿಕೆ ಹಾಗೂ ರಫ್ತು ಉದ್ಯಮಗಳ ಅಭಿವೃದ್ಧಿಯು ಪರಿಸರದ ಸುಸ್ಥಿರ ಕಾಳಜಿಯೊಂದಿಗೆ ಆಗಬೇಕಿದೆ. ಹೀಗಾದಾಗ ಮಾತ್ರವೇ ಸಮತೋಲಿತ ಅಭಿವೃದ್ಧಿ ಸಾಧ್ಯವಾಗಲಿದೆ.

ಲೇಖಕಿ: ಪ್ರಾಧ್ಯಾಪಕಿ, ಐಸೆಕ್, ಬೆಂಗಳೂರು
ಲೇಖಕ: ಪ್ರಾಧ್ಯಾಪಕ, ಪಿಇಎಸ್ ವಿಶ್ವವಿದ್ಯಾಲಯ, ಬೆಂಗಳೂರು

ಕಥೆಯ ಸಡಿಲ 'ಪಟ್ಟು', ಕೊನೆಗೆ ಭರ್ಜರಿ ಫೈಟು



ಸುಜಯ್ ಬೇಲೂರು ಹಾಗೂ ಯಶಸ್ ಸೂರ್ಯ

ನಾವು ನೋಡಿದ ಸಿನಿಮಾ

ಗರಡಿ ಬಿ–ರೆಡಿ (ಕನ್ನಡ)

- **ನಿರ್ದೇಶನ:** ಯೋಗರಾಜ ಭಟ್
- **ನಿರ್ಮಾಣ:** ವನಜಾ ಪಾಟೀಲ್
- **ತಾರಾಗಣ:** ಯಶಸ್ ಸೂರ್ಯ, ಬಿ.ಸಿ. ಪಾಟೀಲ್, ರವಿಶಂಕರ್, ದರ್ಶನ್, ಸೋನಲ್ ಮೊಂತೆರೋ, ಸುಜಯ್ ಬೇಲೂರು, ಧರ್ಮಣ್ಣ ಕಡೂರು ಮತ್ತಿತರರು

ಪ್ರೇಮ ಕಥೆ ಕೊಡುತ್ತಿದ್ದ ನಿರ್ದೇಶಕ ಯೋಗರಾಜ್ ಭಟ್ ಅವರು 'ಗರಡಿ' ಪ್ರವೇಶಿಸಿ ಆ್ಯಕ್ಷನ್ ಕಥೆ ಹೆಣೆದಿದ್ದಾರೆ. ಇಲ್ಲಿ ಪ್ರೀತಿಗೆ, ಹಾಸ್ಯಕ್ಕೆ ಸ್ಥಳಾವಕಾಶ ಕಡಿಮೆ; ಕುಸ್ತಿಗೇ ಆದ್ಯತೆ. ಸಿದ್ಧ ಸೂತ್ರಗಳನ್ನು ಇಟ್ಟುಕೊಂಡು ಹೆಣೆದ ಈ ಸಿನಿಮಾ ಕಥೆಯ 'ಪಟ್ಟು' ಸಮಯ ಉರುಳಿದಂತೆ ಸಡಿಲವಾಗಿ, ಮತ್ತೆ ಗಟ್ಟಿಗೊಳ್ಳಲು ದರ್ಶನ್ ಪ್ರವೇಶದವರೆಗೆ ಕಾಯುತ್ತದೆ. 'ಗಾಳಿಪಟ–2'ರಂತೆಯೇ ಬಿಗಿಯಾದ ಕಥೆ ಇಲ್ಲದೆ ನಿರ್ದೇಶಕರು 'ಗರಡಿ' ಪ್ರವೇಶಿಸಿದಂತೆ ತೋರುತ್ತದೆ.

ರಾಣೆ ಕುಟುಂಬ(ರವಿಶಂಕರ್) ಗರಡಿ ಮನೆಯನ್ನು ನಡೆಸಿಕೊಂಡು ಬಂದಿದೆ. ಇದೇ 'ಗರಡಿ'ಯ ಮುಖ್ಯಸ್ಥ ಕೋರಾಪಿಟ್ ರಂಗಪ್ಪ(ಬಿ.ಸಿ.ಪಾಟೀಲ್). ಕೋರಾಪಿಟ್ ಎಂದರೆ ಸೋಲಿಸಲು ಸಾಧ್ಯವಿಲ್ಲದ ಪೈಲ್ವಾನ್. ರಂಗಪ್ಪನ ಸ್ನೇಹಿತನ ಮಕ್ಕಳು ಶಂಕರ(ದರ್ಶನ್) ಹಾಗೂ ಸೂರಿ(ಸೂರ್ಯ). ತನ್ನ ಸ್ನೇಹಿತ ಹತ್ಯೆಯಾದ ಬಳಿಕ ಆತನ ಮಕ್ಕಳನ್ನು ರಂಗಪ್ಪ ಸಾಕಿ, ಶಂಕರನನ್ನು ಕುಸ್ತಿ ಪಟುವನ್ನಾಗಿ ಮಾಡುತ್ತಾನೆ. ಆದರೆ ಶಂಕರ ಊರು ಬಿಡುವ ಪರಿಸ್ಥಿತಿ ಬರುತ್ತದೆ. ಶಂಕರ, ಸೂರಿಯಲ್ಲಿ ಪೈಲ್ವಾನರ ರಕ್ತ ಹರಿಯುತ್ತಿದ್ದರೂ ಅವರು ಕುಸ್ತಿಯ ಅಖಾಡಕ್ಕೆ ಇಳಿಯುವಂತಿಲ್ಲ ಎಂಬ ರಂಗಪ್ಪನ ನಿರ್ಬಂಧ ಕಥೆಗೆ ಮುನ್ನುಡಿ. ಹೀಗಿದ್ದರೂ ಸೂರಿ ಅಖಾಡಕ್ಕೆ ಇಳಿಯುತ್ತಾನೆ. ಇಲ್ಲಿಂದ ಕಥೆ ಆರಂಭ. ಊಹಿಸಿದಂತೆಯೇ ಕಥೆ ಮುಂದಡಿ ಇಡುತ್ತಾ ಸಾಗುತ್ತದೆ. ಹೀಗಾಗಿ ಕಥೆಯಲ್ಲಿ ಹೊಸದೇನಿಲ್ಲ ಅನಿಸಿಬಿಡುತ್ತದೆ.

ಚಿತ್ರದ ಮೊದಲಾರ್ಧದ ಕಥೆ ಹಿಡಿದಿಡುವ ಸಾಮರ್ಥ್ಯವನ್ನು ಹೊಂದಿದೆ. ಹಲವು ಘಟನೆಗಳು ಈ ಅವಧಿಯಲ್ಲಿ ನಡೆಯುವ ಕಾರಣ ಚಿತ್ರಕಥೆಗೂ ವೇಗವಿದೆ. ಆದರೆ ಸಮಯ ಉರುಳಿದಂತೆ ದುರ್ಬಲವಾಗುವ ಕಥೆ, ಸೂತ್ರವಿಲ್ಲದ ಗಾಳಿಪಟದಂತೆ ತಿರುಗುತ್ತದೆ. ಎಲ್ಲವೂ ಅಸಹಜವಾಗಿ ಭಾಸವಾಗುತ್ತವೆ. ಚಿತ್ರಕಥೆಗೆ ಕ್ಲೈಮ್ಯಾಕ್ಸ್‌ನಲ್ಲಿ ಜೀವ ತುಂಬಿದ್ದಾರೆ ಅತಿಥಿ ಪಾತ್ರದಲ್ಲಿ ಬರುವ ನಟ ದರ್ಶನ್. ಹೀರೊ ಅಣ್ಣನಾಗಿ ಪ್ರವೇಶಿಸುವ ಅವರ ಆ್ಯಕ್ಷನ್‌ಗೇ ಜೋತುಬಿದ್ದಂತೆ ಕಥೆಯನ್ನು ಹೆಣೆದಿರುವುದು ಸ್ಪಷ್ಟ. ಕ್ಲೈಮ್ಯಾಕ್ಸ್‌ನಲ್ಲಿ ಹೊಡೆದಾಟಗಳನ್ನು ಸಾಕಪ್ಪಾ ಸಾಕು ಎನಿಸುವಷ್ಟು ತೂರಿಸಿದ್ದಾರೆ ನಿರ್ದೇಶಕರು! ಜೊತೆಗೊಂದಿಷ್ಟು ದೃಶ್ಯಗಳು ತರ್ಕಕ್ಕೆ ನಿಲುಕುವುದಿಲ್ಲ. ನಾಲ್ಕು ಗುಂಡು ಬಿದ್ದರೂ, ರಂಗಪ್ಪ ಮತ್ತೆ ಎದ್ದುಬರುವುದನ್ನು ಜೀರ್ಣಿಸಿಕೊಳ್ಳುವುದು ಕಷ್ಟ.

ನಟನೆಯಲ್ಲಿ ಯಶಸ್ ಸೂರ್ಯ ಹಾಗೂ ಸುಜಯ್ ಬೇಲೂರು ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ. ರಂಗಪ್ಪನಾಗಿ ಬಿ.ಸಿ.ಪಾಟೀಲ್ ಅವರ ನಟನೆ ನೈಜವಾಗಿದೆ. ರವಿಶಂಕರ್ ವಿಭಿನ್ನವಾದ ಹಾವಭಾವದೊಂದಿಗೆ ತೆರೆ ಮೇಲೆ ಬಂದಿದ್ದಾರೆ. ಸೋನಲ್ ಮೊಂತೆರೋ ಅವರ ನಟನೆಗೆ ಸಿನಿಮಾ ದ್ವಿತೀಯಾರ್ಧದಲ್ಲಿ ಹೆಚ್ಚಿನ ತೂಕವಿದೆ. ಕಥೆಯಲ್ಲಿ ಹಾಸ್ಯಕ್ಕೆ ಅವಕಾಶಗಳು ಕಡಿಮೆ. ಹೀಗಾಗಿ ಧರ್ಮಣ್ಣ ಕಡೂರು ಅವರ ಪಾತ್ರವೂ ಇಲ್ಲಿ ಹೆಸರಿಗಷ್ಟೇ ಇದೆ. ಚಿತ್ರದ ಶೀರ್ಷಿಕೆ ಹಾಡನ್ನು ಹೊರತುಪಡಿಸಿ, ಉಳಿದೆಲ್ಲ ಹಾಡುಗಳು ತುರುಕಿದಂತೆ ಭಾಸವಾಗುತ್ತವೆ. 'ಹೊಡಿರೆಲೆ ಹಲಗಿ' ಐಟಂ ಹಾಡು ಮಸಾಲೆಯ ಮಿಶ್ರಣ! ಹರಿಕೃಷ್ಣ ಅವರ ಸಂಗೀತ ಕುಣಿಸುತ್ತದೆ. ನಿರಂಜನ್ ಬಾಬು ಛಾಯಾಚಿತ್ರಗ್ರಹಣ ಬಾದಾಮಿಯನ್ನು ಚೆಂದವಾಗಿ ಸೆರೆಹಿಡಿದಿದೆ.

ಅಭಿಲಾಷ್ ಪಿ.ಎಸ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ
https://www.prajavani.net

ಪದಬಂಧ 5497


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅಪ್ಪುಗೆಯನ್ನು ಹೀಗೆ ಹೇಳಿ (4)
3.ನಿಯಮದಂತೆ ಕನ್ನಡಿಗ ಮಾಡಿಕೊಂಡ ಎಕ್ಸ್‌ಚೇಂಜ್! (4)
5.ಕೊನೆಗೆ ಮಗ ತಿರುಗಿದರೆ ಇದು ಸಲೀಸು (3)
6.ನಡುಗುತ್ತಿರುವವಳ ಸೊಂಟ (2)
8.ಯೌವ್ವನದಲ್ಲಿ ನೋಡಿದ ಕಾಡು! (2)
9.ಕಂಬನಿ ಮಿಡಿವಾಗ ಕಾಣಿಸಿದ ಸ್ತಂಭ (2)
10.ಕರ್ತಾರನ ಕೈ(2)
12.ಪರಾಕ್ರಮವನ್ನು ಹೀಗೆ ತೋರಿಸಿ (3)
14.ಜೈನ ತೀರ್ಥಂಕರರಲ್ಲಿ ಕೊನೆಯವನು (4)
15.ಚಾರ ಹೇಳಿದ ಸುದ್ದಿ (4)

ಮೇಲಿಂದ ಕೆಳಕ್ಕೆ

1.ಊಟಕ್ಕೆ ಮೊದಲು ಮಂತ್ರಪೂರ್ವಕವಾಗಿ ಅಂಗೈಯಲ್ಲಿ ನೀರನ್ನು ಹೀರುವುದು (4)
2.ಕನಸು ಇಲ್ಲಿ ಸತ್ಯವಾಗಿದೆ (3)
3.ಬಿಡುವು ಹೀಗೆ ದೊರೆತಿದೆ (3)
4.ಮಾನವನ್ನು ಹೊಂದಿರುವ ಒಡೆಯ (4)
7.ತಿರುಗಿದಾಗ ಪೊಳ್ಳು ಕಾಣಿಸಿತಲ್ಲಾ! (3)
8.ತರ್ಕ ಮಾಡುತ್ತಿರುವ ವ್ಯಾಪಾರಿ (3)
9.ಸಿಂಹವನ್ನು ಹೀಗೂ ಕರೆವರು (4)
11.ಸಮುದ್ರ ಇಲ್ಲಿಕಾಣುತ್ತಿದೆ (4)
12.ಧನ ನೀಡಿ ಖರೀದಿಸಿದ ಉಪಕರಣ ಸಾಮಗ್ರಿ (3)
13.ಮಾಸದ ಕೊನೆಗೆ ಒಂದಾಗಿ ಸೇರಿಸಿದುದು (3)



5883ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಗಸ 4.ಹೊಡೆತ
6.ಮರಣಕಾಲ
7.ನಪುಂಸಕ 9.ಉಪಕಾರಿ
10.ಅಹವಾಲು
11.ದುರಾಚಾರಿ 13.ಕರತಾಡನ
16.ರಕ್ಕಸ
17.ವದಂತಿ

ಮೇಲಿಂದ ಕೆಳಕ್ಕೆ:
1.ಅನುಮಾನ 2.ಸಮ
3.ಜಾಣ 4.ಹೊಲ
5.ತರಕಾರಿ 8.ಕಡಲು
9.ಉಮೇದು
10.ಅನಾದರ
12.ರಿಯಾಯಿತಿ 13.ಕಸ
14.ತಾರೆ 15.ನವ

ಸುಡೊಕು 5883

6				5		2		8
5		4	1		8		3	
	8			7			5	4
	6			3		1		2
2		5		1	7			
	3			8		5		6
		8			6		2	
3		2	7	4				
	5			2		4		1

5882 ಸುಡೊಕು

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಶನಿವಾರ ನವೆಂಬರ್ 11, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ತ್ರಯೋದಶಿ ಗಂ. 13-58 ನಕ್ಷತ್ರ: ಚಿತ್ತಾ ಗಂ. 25-47 ಯೋಗ: ಪ್ರೀತಿ ಗಂ 16-58 ಕರಣ: ವಣಿಜ ಗಂ. 13-58, ತುಲಾ ಮಾಸದ 24 ನೇ ದಿನ, ಮಳೆನಕ್ಷತ್ರ: ವಿಶಾಖ 2.
ರಾಹುಕಾಲ : ಬೆಳಿಗ್ಗೆ 09-00 - 10-30
ಸೂರ್ಯೋದಯ : 06-31 ಸೂರ್ಯಾಸ್ತ : 05-58
ಮುಸ್ಲಿಂ ದಿನಾಂಕ : 25 ರಬಿಯುಸ್ಸಾನಿ, ದಿನ ವಿಶೇಷ : ಕಲಿ ಚತುರ್ದಶಿ, ನೀರು ತುಂಬುವ ಹಬ್ಬ, ಅದೃಷ್ಟ ಸಂಖ್ಯೆ : 6, 12

ಮೇಷ: ವಿದ್ಯಾರ್ಥಿಗಳು ಬಿಡುವಿನ ಸಮಯದಲ್ಲಿ ಕಂಪ್ಯೂಟರ್ ಅಧ್ಯಯನದಂತಹ ಉದ್ಯೋಗಕ್ಕೆ ಅನಿವಾರ್ಯವಾದ ವಿಚಾರಗಳ ಅಧ್ಯಯನ ಮಾಡುವ ಬಗ್ಗೆ ಯೋಚಿಸಿ. ಗೆಳೆಯರೊಂದಿಗೆ ಸಂತೋಷಕೂಟದಲ್ಲಿ ಪಾಲ್ಗೊಳ್ಳುವಿರಿ.

ವೃಷಭ: ಕಥೆಗಾರರಿಗೆ, ಕಾದಂಬರಿಗಾರರಿಗೆ ಈ ದಿನದಲ್ಲಿ ಅನುಭವಕ್ಕೆ ಬರುವ ಘಟನೆಗಳನ್ನೆ ಬರವಣಿಗೆಯಲ್ಲಿ ತರುವ ಪ್ರಯತ್ನವನ್ನು ನಡೆಸಬಹುದು. ನಿಮ್ಮ ಸಮಸ್ಯೆಗಳನ್ನು ಸ್ನೇಹಿತರೊಂದಿಗೆ ಚರ್ಚಿಸಿದಲ್ಲಿ ಪರಿಹಾರ ಸಿಗಲಿದೆ.

ಮಿಥುನ: ಇಂದು ನಿಮ್ಮ ಸುತ್ತಮುತ್ತಲಿನ ಸಹೋದ್ಯೋಗಿಗಳ ಪ್ರತಿಕ್ರಿಯೆಗಳತ್ತ ಗಮನ ನೀಡುವುದು ಉತ್ತಮ. ಕುಟುಂಬದಲ್ಲಿ ಹೆಣ್ಣು ಮಗುವಿನ ಸಂತಾನದ ಶುಭ ಸುದ್ದಿ ಸಿಗಲಿದೆ. ವಾಣಿಜ್ಯೋದ್ಯಮಿಗಳು ಭದ್ರತೆಯ ಬಗ್ಗೆ ಗಮನ ಹರಿಸಿ.

ಕರ್ಕಾಟಕ: ಇಂದಿನ ದಿನವನ್ನು ಬಹುದಿನಗಳಿಂದ ನಿಮ್ಮ ಮನಸ್ಸಿನಲ್ಲಿರುವ ಕನಸುಗಳನ್ನು ಪೂರೈಸಿಕೊಳ್ಳಲು ಉಪಯೋಗಿಸಬಹುದು. ಸಿನಿಮಾ ರಂಗಕ್ಕೆ ಸೇರಿಕೊಳ್ಳುವ ಬಗ್ಗೆ ಯೋಚಿಸುವವರಿಗೆ ಈ ದಿನ ಅವಕಾಶ ಸಿಗಬಹುದು.

ಸಿಂಹ: ನೇರ ನಡೆ-ನುಡಿಯು ಕಲಹಕ್ಕೆ ಕಾರಣವಾಗಬಹುದು, ಅದರಿಂದಾಗಿ ಭವಿಷ್ಯದ ಭರವಸೆ ಕಳೆದುಕೊಳ್ಳುವಂತಾಗಲಿದೆ. ಇಂದಿನ ನಿಮ್ಮ ಸಂತೋಷದ ಬಗ್ಗೆ ಗಮನ ಕೊಡುವುದಕ್ಕಿಂತ ನಾಳೆಯ ಭವಿಷ್ಯದ ಬಗ್ಗೆ ಗಮನಹರಿಸಿ.

ಕನ್ಯಾ: ದೇಹದಲ್ಲಿ ಉತ್ಸಾಹ ಇರುವುದರಿಂದ ಎಲ್ಲ ಕಾರ್ಯಗಳಲ್ಲಿ ಯಶಸ್ಸು ದೊರೆಯುವುದು. ರಾಜಕೀಯ ವ್ಯಕ್ತಿಗಳು ತಮ್ಮ ವಿವಾದಾತ್ಮಕ ಹೇಳಿಕೆಯಿಂದ ಸಂಕಷ್ಟಕ್ಕೆ ಸಿಲುಕಿಕೊಳ್ಳುವಂತಾಗಬಹುದು.

ತುಲಾ: ಹಿರಿಯ ಅಧಿಕಾರಿಗಳ ಆಕಸ್ಮಿಕ ಭೇಟಿಯ ಫಲವಾಗಿ ಉದ್ಯೋಗದಲ್ಲಿ ಹುದ್ದೆ, ಅಧಿಕಾರ ಪ್ರಾಪ್ತಿಯಾಗುತ್ತದೆ. ಅಧಿಕಾರಿಗಳಿಗೆ ವರ್ಗಾವಣೆ ಸಂಭವವಿರುವುದು. ಹಳೆಯ ಸ್ನೇಹಿತರೊಂದಿಗೆ ಸಂಪರ್ಕದಲ್ಲಿರಿ.

ವೃಶ್ಚಿಕ: ಗುರು-ಹಿರಿಯರ ಸ್ಮರಣೆಯ ಪೂರ್ವಕವಾಗಿ ಹೊಸ ಹಾದಿಯಲ್ಲಿ ಹೆಜ್ಜೆ ಇಡಲು ಸುದಿನ. ಕೃಷಿಕರಿಗೆ ಸಸ್ಯಗಳ ಬೆಳವಣಿಗೆಯಲ್ಲಿನ ಅಡೆತಡೆ, ಮಂದಗತಿ, ಯೋಚನೆಗೆ ಕಾರಣವಾಗುವುದು. ಮರಗೆಲಸದವರಿಗೆ ಸುದಿನ.

ಧನು: ಬದುಕಿನಲ್ಲಿ ನಿಮ್ಮ ಆಸೆ ಬಹುಮಟ್ಟಿಗೆ ಈಡೇರುವುದರಿಂದ ಹೊಸ ಹುರುಪು ಮೂಡಲಿದೆ. ನ್ಯಾಯವಾದಿಗಳಿಗೆ ತಮ್ಮ ವೃತ್ತಿಯಿಂದ ಹೆಚ್ಚಿನ ಆದಾಯ ಗಳಿಕೆ. ದಾಂಪತ್ಯದಲ್ಲಿ ಸಮಸ್ಯೆ ಉಂಟಾಗದಂತೆ ಜಾಗ್ರತೆವಹಿಸಿ.

ಮಕರ: ಮಗನ ಆರೋಗ್ಯದಲ್ಲಿ ಉಂಟಾದ ವ್ಯತ್ಯಾಸದಿಂದ ನಿಮಗೆ ಸಾಂಸಾರಿಕ ಜವಾಬ್ದಾರಿ ಹೆಚ್ಚಾಗುವುದು. ನ್ಯಾಯಾಲಯದ ಮೆಟ್ಟಿಲೇರಿದ ನಿಮ್ಮ ಸಮಸ್ಯೆ ಹೊಸ ತಿರು ಹೊಂದುವುದು. ಹಾರ್ಡ್‌ವೇರ್ ವ್ಯಾಪಾರಸ್ಥರಿಗೆ ಹೆಚ್ಚಿನ ಲಾಭ.

ಕುಂಭ: ಆರ್ಥಿಕ ಸಮಸ್ಯೆಗೆ ಶಾಶ್ವತ ಪರಿಹಾರವಾಗಿ ಸಂಪೂರ್ಣವಾಗಿ ಸಾಲ ತೀರಿಸಲು ಪ್ರಯತ್ನಿಸಿ. ನಿಮ್ಮ ರೀತಿ ನೀತಿಗಳು ಕುಟುಂಬದ ಗೌರವಕ್ಕೆ ಧಕ್ಕೆ ತರುವಂತಾಗುವುದು. ಬಾಡಿಗೆದಾರರಿಂದ ಸಣ್ಣ-ಪುಟ್ಟ ಕಿರಿಕಿರಿ ತಪ್ಪಿದ್ದಲ್ಲ.

ಮೀನ: ಮನೋಭಿಲಾಷೆಗೆ ಪೆಟ್ಟು ಬೀಳುವ ಕಾರಣದಿಂದಾಗಿ ಪ್ರೀತಿ ಪಾತ್ರರು ದೂರವಾಗುವ ಸಂಭವವಿದೆ. ಪೋಲಿಸ್ ವರಿಷ್ಠಾಧಿಕಾರಿಗಳಿಗೆ ಜವಾಬ್ದಾರಿ ಕಡಿಮೆಯಾಗುವುದು. ಕಟ್ಟಡ ನಿರ್ಮಾಣಗಾರರಿಗೆ ಹೆಚ್ಚಿನ ಕೆಲಸ ಇರುವುದು.

ಏಕದಿನ ಕ್ರಿಕೆಟ್ ವಿಶ್ವಕಪ್ – 2023



ಅಗ್ರ ಐವರು

ಬ್ಯಾಟಿಂಗ್

ಕ್ವಿಂಟನ್ ಡಿ ಕಾಕ್ (ದಕ್ಷಿಣ ಆಫ್ರಿಕಾ)	591
ರಚಿನ್ ರವೀಂದ್ರ (ನ್ಯೂಜಿಲೆಂಡ್)	565
ವಿರಾಟ್ ಕೊಹ್ಲಿ (ಭಾರತ)	543
ಡೇವಿಡ್ ವಾರ್ನರ್ (ಆಸ್ಟ್ರೇಲಿಯಾ)	446
ರೋಹಿತ್ ಶರ್ಮಾ (ಭಾರತ)	442

ಬೌಲಿಂಗ್

ದಿಲ್ಶಾನ್ ಮಧುಶಂಕ (ಶ್ರೀಲಂಕಾ)	21
ಆ್ಯಡಂ ಜಂಪಾ (ಆಸ್ಟ್ರೇಲಿಯಾ)	20
ಜೆರಾಲ್ಡ್ ಕೋಜಿ (ದಕ್ಷಿಣ ಆಫ್ರಿಕಾ)	18
ಮಾರ್ಕೊ ಯಾನ್ಸನ್ (ದಕ್ಷಿಣ ಆಫ್ರಿಕಾ)	17
ಮೊಹಮ್ಮದ್ ಶಮಿ (ಭಾರತ)	16

ಅಜ್ಮತ್‌ವುಲ್ಲ ಒಮರ್‌ಝೈ ಅಜೇಯ 97: ಅಭಿಯಾನ ಮುಗಿಸಿದ ಶಾಹಿದಿ ಬಳಗ

ದಕ್ಷಿಣ ಆಫ್ರಿಕಾಗೆ ಅಫ್ಗನ್ ಶರಣು





ದಕ್ಷಿಣ ಆಫ್ರಿಕಾ ತಂಡದ ರೆಸಿ ವ್ಯಾನ್ ಡರ್ ಡಸೆ ಅವರ ಬ್ಯಾಟಿಂಗ್ ಸೊಬಗು (ಎಡ) ವಿಕೆಟ್ ಪಡೆದ ಸಂಭ್ರಮದಲ್ಲಿ ಜೆರಾಲ್ಡ್ ಕೋಜಿ –ಎಎಫ್‌ಪಿ/ ಪಿಟಿಐ ಚಿತ್ರ

ಅಹಮದಾಬಾದ್ (ಪಿಟಿಐ): ಅಜೇಯ ಅರ್ಧಶತಕ ದಾಖಲಿಸಿದ ರೆಸಿ ವ್ಯಾನ್ ಡರ್ ಡಸೆ ಆಟದಿಂದ ದಕ್ಷಿಣ ಆಫ್ರಿಕಾ ತಂಡವು ರೌಂಡ್ ರಾಬಿನ್ ಲೀಗ್ ಸುತ್ತಿನಲ್ಲಿ ಅಫ್ಗಾನಿಸ್ತಾನ ವಿರುದ್ಧ ಜಯಿಸಿತು.

ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು 5 ವಿಕೆಟ್‌ಗಳಿಂದ ಗೆದ್ದಿತು. ಉಭಯ ತಂಡಗಳಿಗೂ ಇದು ಲೀಗ್ ಹಂತದ ಕೊನೆಯ ಪಂದ್ಯವಾಗಿತ್ತು.

ಈಗಾಗಲೇ ಸೆಮಿಫೈನಲ್ ಪ್ರವೇಶಿಸಿರುವ ತೆಂಬಾ ಬವುಮಾ ಬಳಗವು ಒಟ್ಟು 14 ಅಂಕ ಗಳಿಸಿ, ಎರಡನೇ ಸ್ಥಾನದಲ್ಲಿ ಮುಂದುವರಿಯಿತು. ಟೂರ್ನಿಯುದ್ದಕ್ಕೂ ಗಮನ ಸೆಳೆಯುವಂತಹ ಆಟವಾಡಿರುವ ಅಫ್ಗಾನಿಸ್ತಾನವು ಎಂಟು ಅಂಕ ಗಳಿಸಿ ಅಭಿಯಾನ ಮುಗಿಸಿತು.

ಇಲ್ಲಿ ಟಾಸ್ ಗೆದ್ದ ಅಫ್ಗಾನಿಸ್ತಾನ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಅಜ್ಮತ್‌ವುಲ್ಲ ಒಮರ್‌ಝೈ ಅಜೇಯ 97 ರನ್ ಗಳಿಸಿದರು. ಅವರ ಚೆಂದದ ಆಟದ ಬಲದಿಂದ ಅಫ್ಗಾನಿಸ್ತಾನವು 50 ಓವರ್‌ಗಳಲ್ಲಿ 244 ರನ್ ಗಳಿಸಿತು.

ಉಳಿದ ಬ್ಯಾಟರ್‌ಗಳು ದಕ್ಷಿಣ ಆಫ್ರಿಕಾದ ಜೆರಾಲ್ಡ್ ಕೋಜಿ (44ಕ್ಕೆ4) ಅವರ ದಾಳಿಗೆ ತತ್ತರಿಸಿದರು. ಒಮರ್‌ಝೈ ಏಕಾಂಗಿ ಹೋರಾಟ ನಡೆಸಿದರು. ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡವು 47.3 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 247 ರನ್ ಗಳಿಸಿತು.

ಕ್ವಿಂಟನ್ ಡಿ ಕಾಕ್ (41; 47ಎ) ಮತ್ತು ನಾಯಕ ಬವುಮಾ (23; 28ಎ) ಅವರು ತಂಡಕ್ಕೆ ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 64 ರನ್ ಸೇರಿಸಿದರು. ಬವುಮಾ 11ನೇ ಓವರ್‌ನಲ್ಲಿ ಮುಜೀಬ್ ಉರ್ ರೆಹಮಾನ್ ಎಸೆತದಲ್ಲಿ ಔಟಾದರು. ಆಗ ಕ್ರೀಸ್‌ಗೆ ಬಂದ ರಸಿ ವ್ಯಾನ್ 95 ಎಸೆತಗಳಲ್ಲಿ 76 ರನ್ ಗಳಿಸಿದರು. ಅದರಲ್ಲಿ ಆರು ಬೌಂಡರಿ ಮತ್ತು ಒಂದು ಸಿಕ್ಸರ್ ಸೇರಿದ್ದವು.

ಏಡನ್ ಮರ್ಕರಂ, ಡೇವಿಡ್ ಮಿಲ್ಲರ್ ಮತ್ತು ಆ್ಯಂಡಿಲೆ ಕೂಡ ಉಪಯುಕ್ತ ಕಾಣಿಕೆ ನೀಡಿದರು.

ಸಂಕ್ಷಿಪ್ತ ಸ್ಕೋರು: ಅಫ್ಗಾನಿಸ್ತಾನ: 50 ಓವರ್‌ಗಳಲ್ಲಿ 244 (ಗುರ್ಬಾಜ್ 25, ರೆಹಮತ್ ಶಾ 26, ಅಜ್ಮತ್‌ವುಲ್ಲಾ ಔಟಾಗದೆ 97, ನೂರ್ ಅಹಮದ್ 26, ಲುಂಗಿ ಗಿಡಿ 69ಕ್ಕೆ2, ಜೆರಾಲ್ಡ್ ಕೋಜಿ 44ಕ್ಕೆ4, ಕೇಶವ್ ಮಹಾರಾಜ್ 25ಕ್ಕೆ2) **ದಕ್ಷಿಣ ಆಫ್ರಿಕಾ:** 47.3 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 247 (ಕ್ವಿಂಟನ್ ಡಿಕಾಕ್ 41, ತೆಂಬಾ ಬವುಮಾ 23, ರೆಸಿ ವ್ಯಾನ್ ಡೆರ್ ಡಸೆ ಔಟಾಗದೆ 76, ಏಡನ್ ಮರ್ಕರಂ 25, ಡೇವಿಡ್ ಮಿಲ್ಲರ್ 24, ಆ್ಯಂಡಿಲೆ ಪೆಹ್ಲುಕ್ವಾಯೊ ಔಟಾಗದೆ 39, ಮೊಹಮ್ಮದ್ ನಬಿ 35ಕ್ಕೆ2, ರಶೀದ್ ಖಾನ್ 37ಕ್ಕೆ2)

ಫಲಿತಾಂಶ: ದಕ್ಷಿಣ ಆಫ್ರಿಕಾ ತಂಡಕ್ಕೆ 5 ವಿಕೆಟ್‌ಗಳ ಜಯ.

ಪಂದ್ಯಶ್ರೇಷ್ಠ: ರೆಸಿ ವ್ಯಾನ್ ಡರ್ ಡಸೆ.



ಅರ್ಧಶತಕ ಗಳಿಸಿದ ಅಜ್ಮತ್‌ವುಲ್ಲ ಒಮರ್‌ಝೈ –ಎಎಫ್‌ಪಿ ಚಿತ್ರ



ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ಅಭ್ಯಾಸ ನಡೆಸಿದ ಭಾರತ ತಂಡದ ಆಟಗಾರರಾದ ಶ್ರೇಯಸ್ ಅಯ್ಯರ್, ವಿರಾಟ್ ಕೊಹ್ಲಿ, ಶುಭಮನ್ ಗಿಲ್ ಮತ್ತು ಕೆ.ಎಲ್. ರಾಹುಲ್ –ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

ರೋಹಿತ್ ಪಡೆ ತಾಲೀಮು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದ ಮೊದಲ ತಂಡವಾಗಿರುವ ಭಾರತಕ್ಕೆ ರೌಂಡ್ ರಾಬಿನ್ ಲೀಗ್‌ನಲ್ಲಿ ಒಂದು ಪಂದ್ಯ ಉಳಿದಿದೆ.

ಭಾನುವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನೆದರ್ಲೆಂಡ್ಸ್ ವಿರುದ್ಧ ತಂಡವು ಆಡಬೇಕಿದೆ. ಲೀಗ್ ಹಂತದಲ್ಲಿ ಸತತ ಎಂಟು ಪಂದ್ಯಗಳಲ್ಲಿಯೂ ಗೆದ್ದಿದೆ. ಉಳಿದಿರುವ ಇನ್ನೊಂದು ಪಂದ್ಯವನ್ನೂ ಜಯಿಸಿ ಅಜೇಯವಾಗುಳಿಯುವತ್ತ ಚಿತ್ತ ನೆಟ್ಟಿದೆ.

ಆದರೆ ನೆದರ್ಲೆಂಡ್ಸ್ ತಂಡವನ್ನು ಹಗುರವಾಗಿ ಪರಿಗಣಿಸುವಂತಿಲ್ಲ. ದಕ್ಷಿಣ ಆಫ್ರಿಕಾಕ್ಕೆ ಸೋಲುಣಿಸಿರುವ ಬಳಗದ ವಿರುದ್ಧ ಆಡಲು ಆತಿಥೇಯ ಆಟಗಾರರು ಅಭ್ಯಾಸವನ್ನು ಗಂಭೀರವಾಗಿಯೇ ಮಾಡುತ್ತಿದ್ದಾರೆ. ಶುಕ್ರವಾರ ಹೊನಲು ಬೆಳಕಿನಲ್ಲಿ ತಂಡದ ಆಟಗಾರರು ಅಭ್ಯಾಸ ನಡೆಸಿದರು. ಸಂಜೆ 6.30ರ ಸುಮಾರಿಗೆ ಮೈದಾನಕ್ಕೆ ಬಂದ ತಂಡದಲ್ಲಿ ವಿರಾಟ್ ಕೊಹ್ಲಿ ಕೂಡ ಇದ್ದರು.

ಅವರು ನೆಟ್ಸ್‌ನಲ್ಲಿ ಎಡಗೈ ಸ್ಪಿನ್ನರ್‌ಗಳ ಎಸೆತಗಳನ್ನು ಎದುರಿಸಿದರು. ಭಾರತವು ನ.15ರಂದು ಮುಂಬೈನಲ್ಲಿ ನಡೆಯುವ ಸೆಮಿಫೈನಲ್‌ನಲ್ಲಿ ನ್ಯೂಜಿಲೆಂಡ್ ಎದುರು ಕಣಕ್ಕಿಳಿಯುವುದು ಬಹುತೇಕ ಖಚಿತವಾಗಿದೆ. ಆದ್ದರಿಂದ ಕಿವೀಸ್ ತಂಡದಲ್ಲಿರುವ ಎಡಗೈ ಸ್ಪಿನ್ನರ್‌ಗಳನ್ನು ಎದುರಿಸುವ ತಯಾರಿಯನ್ನೂ ವಿರಾಟ್ ಇಲ್ಲಿ ಮಾಡಿದ್ದು ಸ್ಪಷ್ಟವಾಗಿತ್ತು. ಮಧ್ಯಮವೇಗಿ ಶಾರ್ದೂಲ್ ಠಾಕೂರ್ ಮತ್ತು ಸೈಡ್ ಆರ್ಮ್ ಥ್ರೋ ಪರಿಣತರಿಂದ ವೇಗದ ಎಸೆತಗಳನ್ನೂ ಕೊಹ್ಲಿ ಎದುರಿಸಿದರು. ಶುಭಮನ್ ಗಿಲ್, ಕೆ.ಎಲ್. ರಾಹುಲ್, ರವೀಂದ್ರ ಜಡೇಜ, ಶಾರ್ದೂಲ್ ಠಾಕೂರ್ ಅವರೊಂದಿಗೆ ಫುಟ್‌ಬಾಲ್ ಕೂಡ ಆಡಿದರು.

ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಮತ್ತು ನಾಯಕ ರೋಹಿತ್ ಶರ್ಮಾ ಅವರು ಪಿಚ್‌ನತ್ತ ಸಾಗಿ ಪರಿಶೀಲಿಸಿದರು. ರೋಹಿತ್ ಕೆಲಕಾಲ ನೆಟ್ಸ್‌ನಲ್ಲಿ ಬ್ಯಾಟಿಂಗ್ ಕೂಡ ಮಾಡಿದರು. ಮೊಹಮ್ಮದ್ ಶಮಿ, ಪ್ರಸಿದ್ಧ ಕೃಷ್ಣ ಬೌಲಿಂಗ್ ಅಭ್ಯಾಸ ನಡೆಸಿದರು.

ಭಾನುವಾರದ ಪಂದ್ಯದಲ್ಲಿ ಸೂರ್ಯಕುಮಾರ್ ಯಾದವ್, ಜಸ್‌ಪ್ರೀತ್ ಬೂಮ್ರಾ ಮತ್ತು ವಿರಾಟ್ ಕೊಹ್ಲಿ ಅವರಿಗೆ ವಿಶ್ರಾಂತಿ ನೀಡುವ ಸಾಧ್ಯತೆ ಇದೆ ಎನ್ನಲಾಗಿದೆ.

ಡಚ್ ಪಡೆ ಅಭ್ಯಾಸ: ಮಧ್ಯಾಹ್ನವೇ ಮೈದಾನಕ್ಕೆ ಬಂದಿದ್ದ ನೆದರ್ಲೆಂಡ್ಸ್ ತಂಡದ ಆಟಗಾರರು ಸಂಜೆ ಆರು ಗಂಟೆಯವರೆಗೂ ಅಭ್ಯಾಸ ನಡೆಸಿದರು.

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ಭಾರತ	8	8	0	0	16	2.456
ದಕ್ಷಿಣ ಆಫ್ರಿಕಾ	9	7	2	0	14	1.261
ಆಸ್ಟ್ರೇಲಿಯಾ	8	6	2	0	12	0.861
ನ್ಯೂಜಿಲೆಂಡ್	9	5	4	0	10	0.743
ಪಾಕಿಸ್ತಾನ	8	4	4	0	8	-0.036
ಅಫ್ಗಾನಿಸ್ತಾನ	9	4	5	0	8	-0.336
ಇಂಗ್ಲೆಂಡ್	8	2	6	0	4	-0.885
ಬಾಂಗ್ಲಾದೇಶ	8	2	6	0	4	-1.142
ಶ್ರೀಲಂಕಾ	9	2	7	0	4	-1.419
ನೆದರ್ಲೆಂಡ್ಸ್	8	2	6	0	4	-1.635

ನಜ್ಮುಲ್ ಬಳಗಕ್ಕೆ ಸುಧಾರಿತ ಆಟದ ಸವಾಲು: ಈಗಾಗಲೇ ಸೆಮಿಗೆ ಪ್ರವೇಶಿಸಿರುವ ಕಮಿನ್ಸ್ ಪಡೆ

ಆಸ್ಟ್ರೇಲಿಯಾ– ಬಾಂಗ್ಲಾ ಪಂದ್ಯ ಇಂದು

ಪುಣೆ (ಪಿಟಿಐ): ಮ್ಯಾಕ್ಸ್‌ವೆಲ್ ಅವರ ವಿಸ್ಮಯಕಾರಿ ಬ್ಯಾಟಿಂಗ್‌ನಿಂದ ಅಫ್ಗಾನಿಸ್ತಾನ ವಿರುದ್ಧ ಕಳೆದ ಪಂದ್ಯವನ್ನು ಪವಾಡದ ರೀತಿಯಲ್ಲಿ ಗೆದ್ದು ಸೆಮಿಫೈನಲ್‌ಗೆ ಸ್ಥಾನ ಭದ್ರಪಡಿಸಿಕೊಂಡಿರುವ ಆಸ್ಟ್ರೇಲಿಯಾ ತಂಡ, ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಕೊನೆಯ ಲೀಗ್ ಪಂದ್ಯದಲ್ಲಿ ಶನಿವಾರ ಬಾಂಗ್ಲಾದೇಶ ತಂಡವನ್ನು ಎದುರಿಸಲಿದೆ.

ಆಸ್ಟ್ರೇಲಿಯಾ ತಂಡ, ಈ ಬಾರಿ ಆರಂಭದ ಹಿನ್ನಡೆ ನಂತರ ಚೇತರಿಸಿಕೊಂಡ ರೀತಿ ಅಮೋಘ. ಕೊನೆಯ ಆರು ಪಂದ್ಯಗಳಲ್ಲಿ ಸತತವಾಗಿ ಜಯಗಳಿಸಿ ಬಲಪ್ರದರ್ಶನ ಮಾಡಿದೆ. ಬಾಂಗ್ಲಾದೇಶ ಟೂರ್ನಿಯಿಂದ ಈಗಾಗಲೇ ಹೊರಬಿದ್ದಿದೆ. ಎಡಗೈ ತೋರು ಬೆರಳಿನ ಗಾಯದಿಂದ ಶನಿವಾರದ ಪಂದ್ಯದಲ್ಲಿ ನಾಯಕ ಶಕಿಬ್ ಅಲ್ ಹಸನ್ ಅವರು ಶನಿವಾರ ಪಂದ್ಯದಲ್ಲಿ ಆಡುತ್ತಿಲ್ಲ.

ಬುಧವಾರ, ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಪವಾಡಸದೃಶ ಬ್ಯಾಟಿಂಗ್ (128 ಎಸೆತಗಳಲ್ಲಿ ಅಜೇಯ 201) ಕಾಂಗರೂ ಪಡೆಯನ್ನು ಸೋಲಿನ ಸುಳಿಯಿಂದ ಸ್ಮರಣೀಯ ವಿಜಯದೆಡೆಗೆ ತಲುಪಿಸಿತ್ತು. 7 ವಿಕೆಟ್‌ಗೆ 91 ರನ್‌ಗಳ ದಯನೀಯ ಸ್ಥಿತಿಯಿಂದ ತಂಡವು ಮತ್ತಷ್ಟು ವಿಕೆಟ್ ಕಳೆದುಕೊಳ್ಳದೇ 292 ರನ್‌ಗಳ ಗುರಿಯನ್ನು ತಲುಪಿತ್ತು.

ಇನ್ನೊಂದೆಡೆ, 'ಕಾವು ಏರಿದ' ಪಂದ್ಯದಲ್ಲಿ ಬಾಂಗ್ಲಾದೇಶ ಮೂರು ವಿಕೆಟ್‌ಗಳಿಂದ ಶ್ರೀಲಂಕಾ ತಂಡವನ್ನು ಸೋಲಿಸಿತ್ತು. ಶ್ರೀಲಂಕಾದ ಅನುಭವಿ ಆಲ್‌ರೌಂಡರ್ ಏಂಜೆಲೊ ಮ್ಯಾಥ್ಯೂಸ್ ಈ ಪಂದ್ಯದಲ್ಲೇ 'ಟೈಮ್ಡ್ ಔಟ್' ಆಗಿದ್ದು, ಶಕಿಬ್ ಅವರ ಕ್ರೀಡಾ ಸ್ಫೂರ್ತಿಯ ಬಗ್ಗೆ ಚರ್ಚೆಗೆ ದಾರಿ ಮಾಡಿಕೊಟ್ಟಿತ್ತು.

ಈ ಗೆಲುವಿನ ಮೂಲಕ ಬಾಂಗ್ಲಾ ತಂಡ 2025ರ ಚಾಂಪಿಯನ್ಸ್ ಟ್ರೋಫಿಯಲ್ಲಿ ಆಡುವ ಆಸೆಯನ್ನು ಜೀವಂತವಾಗಿ ಉಳಿಸಿದೆ. ಆತಿಥೇಯ ಪಾಕಿಸ್ತಾನ ಸೇರಿದಂತೆ ಎಂಟು ತಂಡಗಳು ಈ ಟೂರ್ನಿಗೆ ಅರ್ಹತೆ ಪಡೆಯುತ್ತದೆ.

ಎಡಗೈ ತೋರು ಬೆರಳಿನ ಗಾಯದಿಂದ ಶಕೀಬ್ ಈ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ. ಹಿಂದಿನ ಪಂದ್ಯದಲ್ಲಿ ಅವರು ಎರಡು ವಿಕೆಟ್ ಗಳಿಸಿದ್ದರ ಜೊತೆಗೆ ಅಮೂಲ್ಯ 82 ರನ್ (65 ಎಸೆತ) ಗಳಿಸಿದ್ದರು.

ಅವರ ಅನುಪಸ್ಥಿತಿಯಲ್ಲಿ ನಜ್ಮುಲ್ ಹಸನ್ ಶಾಂತೊ ನಾಯಕತ್ವ ವಹಿಸಲಿದ್ದಾರೆ. ಅವರೂ ಲಯಕ್ಕೆ ಮರಳಿದ್ದು ಕಳೆದ ಪಂದ್ಯದಲ್ಲಿ 90 ರನ್ ಗಳಿಸಿದ್ದಾರೆ.

ಡೇವಿಡ್ ವಾರ್ನರ್ (446 ರನ್) ಈ ವಿಶ್ವಕಪ್‌ನಲ್ಲಿ ಒಳ್ಳೆಯ ಫಾರ್ಮ್‌ನಲ್ಲಿದ್ದಾರೆ. ವಿಶ್ವಕಪ್‌ನ ಅತಿ ವೇಗದ ಶತಕ ಮತ್ತು ದ್ವಿಶತಕದೊಡನೆ ಮ್ಯಾಕ್ಸ್‌ವೆಲ್ 397 ರನ್ ಗಳಿಸಿದ್ದಾರೆ. ಮಿಚೆಲ್ ಮಾರ್ಷ್, ಟ್ರಾವಿಸ್ ಹೆಡ್ ಕೂಡ ವಿವಿಧ ಪಂದ್ಯಗಳಲ್ಲಿ ಉಪಯುಕ್ತ ಆಟವಾಡಿದ್ದಾರೆ.

ಬಾಂಗ್ಲಾ ಬ್ಯಾಟರ್‌ಗಳಿಗೆ ಮಿಚೆಲ್ ಸ್ಟಾರ್ಕ್, ಜೋಶ್ ಹ್ಯಾಜಲ್‌ವುಡ್ ಅವರ ವೇಗದ ದಾಳಿಯನ್ನು ನಿಭಾಯಿಸುವ ಸವಾಲು ಇದೆ. ಇನಿಂಗ್ಸ್‌ನ ಮಧ್ಯದಲ್ಲಿ ಆ್ಯಡಂ ಜಂಪಾ ಅವರ ಮೊನಚಾದ ಸ್ಪಿನ್ ದಾಳಿ ಈವರೆಗೆ ಎದುರಾಳಿ ತಂಡಗಳಿಗೆ ಲಗಾಮು ತೊಡಿಸಿದೆ. ಅವರು ಟೂರ್ನಿಯಲ್ಲಿ 20 ವಿಕೆಟ್ ಪಡೆದಿದ್ದಾರೆ.



ಆಸ್ಟ್ರೇಲಿಯಾ ತಂಡದ ಸೀನ್ ಅಬಾಟ್ ಶುಕ್ರವಾರ ಬೌಲಿಂಗ್ ಅಭ್ಯಾಸ ನಡೆಸಿದರು –ಎಎಫ್‌ಪಿ ಚಿತ್ರ

ಮುಖಾಮುಖಿ

21 ಆಡಿದ ಪಂದ್ಯಗಳು	19 ಆಸ್ಟ್ರೇಲಿಯಾ ಗೆಲುವು	1 ಬಾಂಗ್ಲಾ ಗೆಲುವು	1 ಫಲಿತಾಂಶವಿಲ್ಲ	ಕೊನೆಯ 10 ಮುಖಾಮುಖಿಗಳಲ್ಲಿ 9ರಲ್ಲಿ ಆಸ್ಟ್ರೇಲಿಯಾ ಜಯಗಳಿಸಿದ್ದು, ಒಂದರಲ್ಲಿ ಫಲಿತಾಂಶ ಬಂದಿಲ್ಲ.

ಮ್ಯಾಕ್ಸ್‌ವೆಲ್ ಆಡುವುದು ಅನುಮಾನ

ಪುಣೆ: ಅಫ್ಗಾನಿಸ್ತಾನ ವಿರುದ್ಧ ಮುಂಬೈನಲ್ಲಿ 'ಅತಿಮಾನುಷ'ನಂತೆ ಆಡಿ ಅಜೇಯ ದ್ವಿಶತಕ ಸಿಡಿಸಿದ್ದ ಮ್ಯಾಕ್ಸ್‌ವೆಲ್ ಅಂದಿನ ಸ್ನಾಯು ಸೆಳೆತದ ನೋವಿನಿಂದ ಪೂರ್ಣ ಗುಣಮುಖರಾಗಿಲ್ಲ. ಹೀಗಾಗಿ ಶನಿವಾರ ಪುಣೆಯಲ್ಲಿ ಬಾಂಗ್ಲಾದೇಶ ವಿರುದ್ಧ ಅವರು ಆಡುವುದು ಅನುಮಾನವಾಗಿದೆ.

ಈ ಪಂದ್ಯ ಆಸ್ಟ್ರೇಲಿಯಾ ಪಾಲಿಗೆ ಮಹತ್ವದ್ದೇನೂ ಅಲ್ಲ. ಹೀಗಾಗಿ ತಂಡ ವೇಗದ ಬೌಲರ್ ಸೀನ್ ಅಬೋಟ್ ಅವರಿಗೆ ಅವಕಾಶ ನೀಡಿ, ಸತತವಾಗಿ ಆಡಿರುವ ಮೂವರು ವೇಗದ ಬೌಲರ್‌ಗಳಲ್ಲಿ (ಪ್ಯಾಟ್ ಕಮಿನ್ಸ್, ಮಿಚೆಲ್ ಸ್ಟಾರ್ಕ್ ಮತ್ತು ಹೇಜಲ್‌ವುಡ್) ಒಬ್ಬರಿಗೆ ವಿಶ್ರಾಂತಿ ನೀಡುವ ನಿರೀಕ್ಷೆಯಿದೆ.

'ಮ್ಯಾಕ್ಸ್‌ವೆಲ್ ಚೇತರಿಸಿಕೊಂಡಿದ್ದಾರೆ. ಶುಕ್ರವಾರವೂ ವಿಶ್ರಾಂತಿ ಪಡೆದಿರುವ ಕಾರಣ ಶನಿವಾರ ಬೆಳಿಗ್ಗೆ ಪರಿಸ್ಥಿತಿ ನೋಡಿಕೊಂಡು ತೀರ್ಮಾನಿಸುತ್ತೇವೆ' ಎಂದು ಆಸ್ಟ್ರೇಲಿಯಾ ತಂಡ ಸಹಾಯಕ ಕೋಚ್ ಡೇನಿಯಲ್ ವೆಟೋರಿ ತಿಳಿಸಿದರು. ದ್ವಿಶತಕದ ಹಾದಿಯಲ್ಲಿ 147ನೇ ರನ್ ಗಳಿಸುವಾಗ ಅವರ ಕಾಲುಗಳು ನೋವಿನಿಂದ ಸೋತುಹೋಗಿದ್ದವು. ಬೆನ್ನು ನೋವೂ ಕಾಡತೊಡಗಿತ್ತು. ಫಿಸಿಯೊ ಧಾವಿಸಿ 35 ವರ್ಷದ ಆಟಗಾರನಿಗೆ ಚಿಕಿತ್ಸೆ ನೀಡಿದ್ದರು.



ಬಾಂಗ್ಲಾ ತಂಡದ ಮುಷ್ಫಿಕುರ್ ರಹೀಮ್

ರಚಿನ್ ರವೀಂದ್ರ ದೃಷ್ಟಿ ತೆಗೆದ ಅಜ್ಜಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನ್ಯೂಜಿಲೆಂಡ್ ತಂಡದಲ್ಲಿ ಆಡುತ್ತಿರುವ ಭಾರತ ಮೂಲದ ರಚಿನ್ ರವೀಂದ್ರ ಈಗ ಬೆಂಗಳೂರು ಕ್ರಿಕೆಟ್ ಅಭಿಮಾನಿಗಳ ಆಕರ್ಷಣೆಯ ಕೇಂದ್ರಬಿಂದುವಾಗಿದ್ದಾರೆ.

ಇಲ್ಲಿ ನಡೆದ ಎರಡೂ ಪಂದ್ಯಗಳಲ್ಲಿ ಅಮೋಘವಾಗಿ ಬ್ಯಾಟಿಂಗ್ ಮಾಡಿರುವ ಅವರು ಎಲ್ಲರ ಗಮನ ಸೆಳೆದಿದ್ದಾರೆ. ಗುರುವಾರ ಶ್ರೀಲಂಕಾ ವಿರುದ್ಧದ ಪಂದ್ಯ ಮುಗಿದ ನಂತರ ಅವರು ಬೆಂಗಳೂರಿನಲ್ಲಿರುವ ತಮ್ಮ ಅಜ್ಜಿಯ ಮನೆಗೆ ಭೇಟಿ ನೀಡಿದ್ದರು. ಆ ಸಂದರ್ಭದಲ್ಲಿ ಮೊಮ್ಮಗನಿಗೆ ದೃಷ್ಟಿ ತೆಗೆಯುವ ಸಂಪ್ರದಾಯವನ್ನು ಅಜ್ಜಿ ಮಾಡಿದರು. ಅದರ ವಿಡಿಯೊ ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅಜ್ಜಿಯು ದೃಷ್ಟಿ ತೆಗೆಯುವ ಕ್ರಿಯೆಯನ್ನು ರಚಿನ್ ಅಚ್ಚರಿಯಿಂದ ನೋಡುತ್ತಿದ್ದಾರೆ. ರಚಿನ್ ತಂದೆ, ಸಾಫ್ಟ್‌ವೇರ್ ಸಿಸ್ಟಮ್ ಆರ್ಕಿಟೆಕ್ಟ್ ಆಗಿರುವ ರವೀಂದ್ರ ಕೃಷ್ಣಮೂರ್ತಿ ಮತ್ತು ತಾಯಿ ದೀಪಾ ದಶಕಗಳ ಹಿಂದೆಯೇ ನ್ಯೂಜಿಲೆಂಡ್‌ಗೆ ತೆರಳಿದ್ದರು.

ರವೀಂದ್ರ ಅವರೂ ಕಾಲೇಜು ದಿನಗಳಲ್ಲಿ ಕ್ರಿಕೆಟ್ ಆಡಿದ್ದರು. ರಾಹುಲ್ ದ್ರಾವಿಡ್ ಮತ್ತು ಸಚಿನ್ ತೆಂಡೂಲ್ಕರ್ ಅವರ ಅಭಿಮಾನಿಯಾಗಿದ್ದ ರವೀಂದ್ರ ಅವರು ಇಬ್ಬರೂ ದಿಗ್ಗಜರ ಹೆಸರಿನಲ್ಲಿರುವ ಅಕ್ಷರಗಳನ್ನು ಜೋಡಿಸಿ ಮಗನಿಗೆ ರಚಿನ್ ಎಂದು ಹೆಸರಿಟ್ಟಿದ್ದರು. ಇದು ಅವರಿಗೆ ಮೊದಲ ವಿಶ್ವಕಪ್ ಟೂರ್ನಿಯಾಗಿದೆ. 9 ಪಂದ್ಯಗಳಿಂದ 565 ರನ್ ಗಳಿಸಿದ್ದಾರೆ. ಬೌಲಿಂಗ್‌ನಲ್ಲಿಯೂ ಮಿಂಚಿದ್ದಾರೆ.

ಟೀಕಾಕಾರರ ವಿರುದ್ಧ ಬಾಬರ್ ಕಿಡಿ

ಕೋಲ್ಕತ್ತ (ಎಎಫ್‌ಪಿ): ಪಾಕಿಸ್ತಾನ ತಂಡದ ಪ್ರದರ್ಶನದ ಬಗ್ಗೆ ಟೀಕೆ ನಡೆಸುತ್ತಿರುವವರನ್ನು ತಂಡದ ನಾಯಕ ಬಾಬರ್ ಆಜಂ ಶುಕ್ರವಾರ ತರಾಟೆಗೆ ತೆಗೆದುಕೊಂಡಿದ್ದಾರೆ. ತಮ್ಮ ತಂಡದ ಗೆಲುವಿನ ಅವಕಾಶ ಕ್ಷೀಣವಾಗಿದ್ದರೂ ಆ ಆಸೆಯನ್ನು ಬಿಟ್ಟುಕೊಡದ ಅವರು, 'ಟಿ.ವಿ. ಚರ್ಚೆಯಲ್ಲಿ ಕುಳಿತು ಸಲಹೆ ಕೊಡುವುದು ಸುಲಭ' ಎಂದು ಟೀಕಿಸಿದ್ದಾರೆ.

'ವಿಶ್ವಕಪ್‌ನಲ್ಲಿ ನನ್ನ ಮೇಲಿಟ್ಟ ನಿರೀಕ್ಷೆಗೆ ತಕ್ಕಂತೆ ನಾನು ಆಡಿಲ್ಲ. ಹೀಗಾಗಿ ನಾನು ಒತ್ತಡದಲ್ಲಿದ್ದೇನೆಂದು ಹೇಳುತ್ತಾರೆ. ಆದರೆ ಹಾಗೇನೂ ಇಲ್ಲ' ಎಂದು 29 ವರ್ಷದ ಬಾಬರ್ ಹೇಳಿದರು.

ಪಾಕ್ ಮುಂದೆ 'ಅಸಾಧ್ಯ' ಗುರಿ

ಇಂಗ್ಲೆಂಡ್ ತಂಡಕ್ಕೆ ಚಾಂಪಿಯನ್ಸ್ ಟ್ರೋಫಿ ಅರ್ಹತೆ ಮೇಲೆ ಕಣ್ಣು

ಕೋಲ್ಕತ್ತ (ಪಿಟಿಐ): ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸುವುದು ಬಹುತೇಕ ಅಸಾಧ್ಯವೇ ಎನ್ನುವಂತಹ ಸವಾಲು ಎನ್ನುವಂತಹ ಘಟ್ಟಕ್ಕೆ ಪಾಕಿಸ್ತಾನ ತಂಡವು ಬಂದು ನಿಂತಿದೆ.

ರೌಂಡ್ ರಾಬಿನ್ ಲೀಗ್ ಸುತ್ತಿನಲ್ಲಿ ಪಾಕ್ ತಂಡವು ತನ್ನ ಕೊನೆಯ ಪಂದ್ಯವನ್ನು ಈಡನ್ ಗಾರ್ಡನ್‌ನಲ್ಲಿ ಆಡಲಿದೆ. 'ಹಾಲಿ ಚಾಂಪಿಯನ್' ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ.

ಈಗಾಗಲೇ ಸೆಮಿಫೈನಲ್ ಹಾದಿಯಿಂದ ಇಂಗ್ಲೆಂಡ್ ಹೊರಬಿದ್ದಾಗಿದೆ. ಆದರೆ ಮುಂಬರುವ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಅರ್ಹತೆಗಾಗಿ ಈ ಪಂದ್ಯದಲ್ಲಿ ಗೆಲ್ಲುವತ್ತ ಚಿತ್ತ ನೆಟ್ಟಿದೆ. ಪಾಕಿಸ್ತಾನ ತಂಡಕ್ಕೆ ಸೆಮಿಫೈನಲ್ ಹೋಗಬೇಕಾದರೆ ಅಸಾಧ್ಯವೆನ್ನುವ ಸವಾಲುಗಳನ್ನು ಪಾರು ಮಾಡಬೇಕಿದೆ. ಸದ್ಯ ನಾಲ್ಕನೇ ಸ್ಥಾನದಲ್ಲಿರುವ ನ್ಯೂಜಿಲೆಂಡ್ (ನೆಟ್ ರನ್‌ರೇಟ್: 0.743) ತಂಡವನ್ನು ಹಿಂದಿಕ್ಕಬೇಕಾದರೆ ಪಾಕ್ ತಂಡವು (0.036) ದೊಡ್ಡ ಅಂತರದ ಜಯ ಗಳಿಸಬೇಕು.


ಪಾಕ್ ತಂಡವು ಮೊದಲು ಬ್ಯಾಟಿಂಗ್ ಮಾಡಿದರೆ 287 ರನ್‌ಗಳ ಅಂತರದ ಜಯ ಸಾಧಿಸಬೇಕು. ಗುರಿ ಬೆನ್ನಟ್ಟಿದರೆ 284 ಎಸೆತಗಳು ಬಾಕಿಯಿರುವಾಗಲೇ ಜಯಸಾಧಿಸಬೇಕು. ಆದ್ದರಿಂದ ಪಾಕ್ ತಂಡದ ನಾಲ್ಕರ ಘಟ್ಟದ ಕನಸು ಬಹುತೇಕ ಕಮರಿದಂತಾಗಿದೆ.


ಆದರೆ ಸಮಾಧಾನಕರ ಗೆಲುವಿಗಾಗಿ ಬಾಬರ್ ಆಜಂ ಬಳಗವು ಪ್ರಯತ್ನಿಸಬಹುದು. 2025ರ ಚಾಂಪಿಯನ್ಸ್ ಟ್ರೋಫಿಗೆ ಆತಿಥ್ಯ ವಹಿಸುತ್ತಿರುವ ಪಾಕಿಸ್ತಾನಕ್ಕೆ ನೇರಪ್ರವೇಶ ಸಿಗುವುದರಿಂದ ವಿಶ್ವಕಪ್ ಅಂಕಪಟ್ಟಿಯಲ್ಲಿ ಸ್ಥಾನ ಗಣನೆಗೆ ಬರುವುದಿಲ್ಲ.

ಆದರೆ ಇಂಗ್ಲೆಂಡ್ ತಂಡವು ಗೆದ್ದರೆ ಸರಾಗವಾಗಿ ಅಗ್ರ ಎಂಟರಲ್ಲಿ ಸ್ಥಾನ ಪಡೆಯುತ್ತದೆ. ಬಾಂಗ್ಲಾ ಮತ್ತು ನೆದರ್ಲೆಂಡ್ಸ್ ತಂಡಗಳೂ ಈ ಪೈಪೋಟಿಯಲ್ಲಿವೆ. ಆದರೆ ಬಾಂಗ್ಲಾ ತಂಡವು ಆಸ್ಟ್ರೇಲಿಯಾ ಎದುರು ಹಾಗೂ ನೆದರ್ಲೆಂಡ್ಸ್ ಭಾರತದ ಎದುರು ಆಡುವುದರಿಂದ ಗೆಲ್ಲುವುದು ಸುಲಭವಲ್ಲ.

ಪಾಕ್ ತಂಡವು ತನ್ನ ಬ್ಯಾಟಿಂಗ್ ಶಕ್ತಿಯ ಮೇಲೆ ಹೆಚ್ಚು ಅವಲಂಬಿತವಾಗಿದೆ. ನ್ಯೂಜಿಲೆಂಡ್ ಎದುರು ಸ್ಫೋಟಕ ಇನಿಂಗ್ಸ್ ಆಡಿದ್ದ ಫಕಾರ್ ಜಮಾನ್, ಮೊಹಮ್ಮದ್ ರಿಜ್ವಾನ್, ಅಬ್ದುಲ್ಲಾ ಅವರು ಉತ್ತಮ ಲಯದಲ್ಲಿದ್ದಾರೆ. ಬಾಬರ್ ಆಜಂ ಫಾರ್ಮ್‌ಗೆ ಮರಳುವ ಪ್ರಯತ್ನದಲ್ಲಿದ್ದಾರೆ.

ಇಂಗ್ಲೆಂಡ್ ಸತತ ಐದು ಪಂದ್ಯಗಳ ಸೋಲಿನ ನಂತರ ಗೆಲುವಿನ ಹಾದಿಗೆ ಮರಳಿದೆ. ಬೆನ್ ಸ್ಟೋಕ್ಸ್ ಕಳೆದ ಪಂದ್ಯದಲ್ಲಿ ಶತಕ ಬಾರಿಸಿದ್ದರು. ಡೇವಿಡ್ ಮಲಾನ್ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಆದ್ದರಿಂದ ಅವರು ಪಾಕ್ ಬೌಲರ್‌ಗಳಿಗೆ ಕಠಿಣ ಸವಾಲೊಡ್ಡಬಹುದು.






ಇಂಗ್ಲೆಂಡ್ ತಂಡದ ನಾಯಕ ಜೋಸ್ ಬಟ್ಲರ್ (ಎಡಚಿತ್ರ). ಪಾಕಿಸ್ತಾನ ತಂಡದ ನಾಯಕ ಬಾಬರ್ ಆಜಂ –ಎಎಫ್‌ಪಿ ಚಿತ್ರಗಳು

ಇನ್ನಷ್ಟು ಕ್ರೀಡಾ ಸುದ್ದಿಗಳು 14

ಷೇರುಪೇಟೆ ವಹಿವಾಟು 72



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,395
ಇಂದಿನ ಅಂತ್ಯ	19,425
▲	30
ದಿನದ ಗರಿಷ್ಠ	19,451

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹595
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹595

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1540 (1530)
ಸೋಯಾ (ರಿಫೈನ್ಡ್)	₹930 (920)
ಸೂರ್ಯಕಾಂತಿ (ರಿಫೈನ್ಡ್)	₹925 (915)
ಪಾಮೋಲಿನ್	₹828 (820)

ವಿನಿಮಯ ದರ

$ ಡಾಲರ್	83.28
£ ಪೌಂಡ್	101.82
€ ಯುರೊ	88.99
¥ ಯೆನ್ (100ಕ್ಕೆ)	55

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ತಿಪಟೂರು	₹7500-8500
ತುಮಕೂರು	₹7500-8250
ತುರುವೇಕೆರೆ	₹8100-8100

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹180-426
ದ್ವಿತಳಿ (ಬಿ.ವಿ)	₹200-585

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹150.50
ಆರ್‌ಎಸ್‌ಎಸ್-5	₹146
ಗುಡ್ ಲಾಟ್	₹133

ಆಯ್ದ ಸಣ್ಣ ಉಳಿತಾಯ ಯೋಜನೆಗಳ ನಿಯಮ ಸಡಿಲ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು, ಹಿರಿಯ ನಾಗರಿಕ ಉಳಿತಾಯ ಯೋಜನೆ ಮತ್ತು ಸಾರ್ವಜನಿಕ ಭವಿಷ್ಯ ನಿಧಿ (ಪಿಪಿಎಫ್) ಯೋಜನೆಗೆ ಸಂಬಂಧಿಸಿದ ನಿಯಮಗಳನ್ನು ತುಸು ಸಡಿಲಿಸಿದೆ.

ಹೊಸ ನಿಯಮದ ಪ್ರಕಾರ, ಹಿರಿಯ ನಾಗರಿಕ ಉಳಿತಾಯ ಯೋಜನೆಯ ಖಾತೆ ತೆರೆಯಲು ಈಗಿರುವ ಒಂದು ತಿಂಗಳ ಬದಲಾಗಿ ಮೂರು ತಿಂಗಳ ಅವಕಾಶ ನೀಡಲಾಗಿದೆ. ನವೆಂಬರ್ 9ರ ಅಧಿಸೂಚನೆಯ ಪ್ರಕಾರ, ಒಬ್ಬ ವ್ಯಕ್ತಿಯು ನಿವೃತ್ತಿ ಪ್ರಯೋಜನಗಳನ್ನು ಸ್ವೀಕರಿಸಿದ ಮತ್ತು ನಿವೃತ್ತಿ ಪ್ರಯೋಜನಗಳ ವಿತರಣೆಯ ದಿನಾಂಕಕ್ಕೆ ಸಂಬಂಧಿಸಿದ ದಾಖಲೆ ಪಡೆದುಕೊಂಡ ಮೂರು ತಿಂಗಳೊಳಗೆ ಹಿರಿಯ



ನಾಗರಿಕರ ಉಳಿತಾಯ ಯೋಜನೆಯಡಿ ಖಾತೆಯನ್ನು ತೆರೆಯಬಹುದು.

ಅಂತಹ ಖಾತೆಯಲ್ಲಿನ ಠೇವಣಿಯನ್ನು, ಅವಧಿ ಮುಕ್ತಾಯದ ದಿನಾಂಕ ಅಥವಾ ವಿಸ್ತೃತ ಅವಧಿಯ ಮುಕ್ತಾಯದ ದಿನಾಂಕದಂದು ಯೋಜನೆಗೆ ಅನ್ವಯವಾಗುವ ದರದಲ್ಲಿ ಬಡ್ಡಿ ಸಿಗಲಿದೆ ಎಂದು ಅಧಿಸೂಚನೆ ತಿಳಿಸಿದೆ.

ರಾಷ್ಟ್ರೀಯ ಉಳಿತಾಯ ಅವಧಿ ಠೇವಣಿ ಯೋಜನೆಯಲ್ಲಿ ಅವಧಿಗೂ ಮುನ್ನ ಹಣ ಹಿಂಪಡೆಯುವ ನಿಯಮದಲ್ಲಿ ಬದಲಾವಣೆ ಮಾಡಲಾಗಿದೆ. ಐದು ವರ್ಷಗಳ ಖಾತೆಯಲ್ಲಿನ ಠೇವಣಿಯನ್ನು ಖಾತೆ ತೆರೆದ ದಿನಾಂಕದಿಂದ ನಾಲ್ಕು ವರ್ಷಗಳ ನಂತರ ಹಿಂಪಡೆದರೆ, ಅಂಚೆ ಕಚೇರಿಯ ಉಳಿತಾಯ ಖಾತೆಗೆ ಅನ್ವಯವಾಗುವ ದರದಲ್ಲಿ ಬಡ್ಡಿಯನ್ನು ಪಾವತಿಸಲಾಗುವುದು.

ಹಾಲಿ ಇರುವ ನಿಯಮಗಳ ಪ್ರಕಾರ, ಠೇವಣಿ ಮಾಡಿದ ದಿನಾಂಕದಿಂದ ನಾಲ್ಕು ವರ್ಷಗಳ ನಂತರ ಖಾತೆಯನ್ನು ಮುಚ್ಚಿದರೆ, ಮೂರು ವರ್ಷಗಳ ಅವಧಿ ಠೇವಣಿ ಖಾತೆಗೆ ಅನ್ವಯಿಸುವ ದರದಲ್ಲಿ ಬಡ್ಡಿಯನ್ನು ಲೆಕ್ಕಾಚಾರ ಹಾಕಲಾಗುತ್ತಿದೆ.

ಕರಡು ನೀತಿ ಸಿದ್ಧ, ಶೀಘ್ರವೇ ಬಿಡುಗಡೆ: ಎಂ.ಬಿ.ಪಾಟೀಲ • 1 ಲಕ್ಷ ಉದ್ಯೋಗ ಸೃಷ್ಟಿ ಗುರಿ

ಇ.ವಿ: ₹50 ಸಾವಿರ ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ವಿದ್ಯುತ್ ಚಾಲಿತ ವಾಹನಗಳ ಉತ್ಪಾದನಾ ಕ್ಷೇತ್ರದಲ್ಲಿ ದೇಶಕ್ಕೆ 'ನಂಬರ್ 1' ಆಗುವ ಗುರಿಯೊಂದಿಗೆ ಕರಡು ನೀತಿ (ಕ್ಲೀನ್ ಮೊಬಿಲಿಟಿ ಪಾಲಿಸಿ) ರೂಪಿಸಿದ್ದು, ಇದರಿಂದ ಮುಂದಿನ ಐದು ವರ್ಷಗಳಲ್ಲಿ ₹50 ಸಾವಿರ ಕೋಟಿ ಬಂಡವಾಳ ಆಕರ್ಷಿಸಲಿದ್ದು, ಸುಮಾರು 1 ಲಕ್ಷ ಕೋಟಿ ಉದ್ಯೋಗ ಸೃಷ್ಟಿಯಾಗಲಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ವಾಹನ ಉದ್ಯಮಗಳ ಪ್ರತಿನಿಧಿಗಳ ಸಮಾಲೋಚನಾ ಸಭೆಯ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರಗಳನ್ನು ನೀಡಿದರು.

ಇದಕ್ಕಾಗಿ ಎರಡು ಕ್ಲಸ್ಟರ್‌ಗಳನ್ನು ರೂಪಿಸಲಾಗುವುದು. ಒಂದು ಕ್ಲಸ್ಟರ್ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರಿನಲ್ಲಿ, ಮತ್ತೊಂದು ಕ್ಲಸ್ಟರ್ ಧಾರವಾಡ ಸಮೀಪದ ಚಿಕ್ಕಮಲ್ಲಿಗೆವಾಡದಲ್ಲಿ ಸ್ಥಾಪಿಸಲಾಗುವುದು. ಭೂಮಿ ಕಳೆದುಕೊಳ್ಳುವವರಿಗೆ ಮತ್ತು ಕನ್ನಡಿಗರಿಗೆ ಉದ್ಯೋಗದಲ್ಲಿ ಆದ್ಯತೆ ನೀಡಲಾಗುವುದು ಎಂದು ಅವರು ಭರವಸೆ ನೀಡಿದರು.

ಕರಡು ನೀತಿಯಲ್ಲಿ ವಿದ್ಯುತ್ ಚಾಲಿತ ವಾಹನಗಳಲ್ಲದೇ, ಬ್ಯಾಟರಿಗಳಲ್ಲಿನ ಅನೋಡ್, ಕ್ಯಾಥೋಡ್, ಸಪರೇಟರ್ಸ್, ಕಾರ್ಬೋನೇಟ್, ಸಾಲ್ವೆಂಟ್, ಶಕ್ತಿಶಾಲಿ ಹೈಬ್ರೀಡ್ ವಾಹನಗಳು, ಬ್ಯಾಟರಿ ರೀಸೈಕ್ಲಿಂಗ್ ಸೌಲಭ್ಯ, ಪರೀಕ್ಷಾರ್ಥ ಮೂಲಸೌಕರ್ಯಗಳನ್ನೂ ಒಳಗೊಂಡಿದೆ ಎಂದರು.

ಉದ್ದೇಶಿತ ಕ್ಲಸ್ಟರ್‌ಗಳಲ್ಲಿ ಉತ್ಪಾದನಾ ಚಟುವಟಿಕೆ ಆರಂಭಿಸಲು ಸಜ್ಜುಗೊಳಿಸುತ್ತಿರುವ ಕೈಗಾರಿಕಾ ಶೆಡ್, ಪ್ಲಗ್ ಮತ್ತು ಪ್ಲೇ ಇನ್‌ಕ್ಯುಬೇಷನ್ ಸೌಲಭ್ಯ, ಪರೀಕ್ಷಾ ಪ್ರಯೋಗಾಲಯಗಳು, ತ್ವರಿತ ಅನುಮೋದನೆ ಮುಂತಾದ ಆರು ಅಂಶಗಳಿಗೆ ಒತ್ತು ಕೊಡಲಾಗುವುದು ಎಂದು ಪಾಟೀಲ ಹೇಳಿದರು.

ಸನ್ ಮೊಬಿಲಿಟಿ ಅಧ್ಯಕ್ಷ ಸಂದೀಪ ಮೈನಿ, ಟೊಯೊಟಾ ಉಪ ವ್ಯವಸ್ಥಾಪಕ ನಿರ್ದೇಶಕ ಪರಶುರಾಮನ್, ಕಾಂಟಿನೆಂಟಲ್ ಅಧ್ಯಕ್ಷ ಪ್ರಶಾಂತ್ ದೊರೆಸ್ವಾಮಿ, ಎಕ್ಸೆಲ್ ಪಾರ್ಟ್‌ನರ್ಸ್ ವ್ಯವಸ್ಥಾಪಕ ಪ್ರಶಾಂತ ಪ್ರಕಾಶ ಸೇರಿದಂತೆ 40ಕ್ಕೂ ಹೆಚ್ಚು ಮಂದಿ ಸಭೆಗಳಲ್ಲಿ ಭಾಗವಹಿಸಿದ್ದರು.

ಇ.ವಿ ಕ್ಲಸ್ಟರ್ಸ್ ಸ್ಥಾಪನೆ, ಚಾರ್ಜಿಂಗ್ ಸೌಲಭ್ಯಕ್ಕೆ ಸಲಹೆ

ಮೈಸೂರು, ಹುಬ್ಬಳ್ಳಿ ಮತ್ತಿತರ ನಗರಗಳಲ್ಲಿ ಇ.ವಿ.ಕಸ್ಟರ್‌ಗಳನ್ನು ಸ್ಥಾಪಿಸಬೇಕು ಎಂದು ಸಭೆಯಲ್ಲಿ ಭಾಗವಹಿಸಿದ್ದ ಉದ್ಯಮಿಗಳು ಸಲಹೆ ನೀಡಿದರು.

ಬೆಂಗಳೂರು– ಪುಣೆ ಮಧ್ಯೆ 10 ಹೆದ್ದಾರಿ ಟೋಲ್‌ಗಳು ಇದ್ದು, ಇಲ್ಲಿ ಎರಡೂ ಬದಿಗಳಲ್ಲಿ ಇ.ವಿ.ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಲಾಗುವುದು. ರಾಜ್ಯದ ಉಳಿದ ಕಡೆಗಳಲ್ಲೂ ಚಾರ್ಜಿಂಗ್ ಸೌಲಭ್ಯ ಕಲ್ಪಿಸುವ ಸಲಹೆಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು ಎಂದು ಪಾಟೀಲ ತಿಳಿಸಿದರು.

ವರದಿ ಬಿಡುಗಡೆ ಮಾಡಿದ ಎನ್‌ಎಸ್‌ಒ

ತಗ್ಗಿದ ಕೈಗಾರಿಕಾ ಉತ್ಪಾದನೆ

ನವದೆಹಲಿ (ಪಿಟಿಐ/ರಾಯಿಟರ್ಸ್): ದೇಶದ ಕೈಗಾರಿಕಾ ಉತ್ಪಾದನೆಯು ಆಗಸ್ಟ್‌ನಲ್ಲಿ ಇದ್ದ ಶೇ 10.3ಕ್ಕೆ ಹೋಲಿಸಿದರೆ ಸೆಪ್ಟೆಂಬರ್‌ನಲ್ಲಿ ಶೇ 5.8ಕ್ಕೆ ಇಳಿಕೆ ಕಂಡಿದೆ.



ಮುಖ್ಯವಾಗಿ, ತಯಾರಿಕೆ ಮತ್ತು ವಿದ್ಯುತ್ ವಲಯದ ಬೆಳವಣಿಗೆ ಕಡಿಮೆ ಆಗಿರುವುದರಿಂದ ಕೈಗಾರಿಕಾ ವಲಯದ ಒಟ್ಟಾರೆ ಬೆಳವಣಿಗೆ ಮೇಲೆ ಪರಿಣಾಮ ಆಗಿದೆ. ಆದರೆ ಕಳೆದ ವರ್ಷದ ಸೆಪ್ಟೆಂಬರ್‌ಗೆ ಹೋಲಿಸಿದರೆ (ಶೇ 3.3) ಏರಿಕೆ ಕಂಡುಬಂದಿದೆ.

ತಯಾರಿಕಾ ವಲಯದ ಬೆಳವಣಿಗೆಯು ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಶೇ 2 ಇದ್ದಿದ್ದು ಈ ವರ್ಷದ ಸೆಪ್ಟೆಂಬರ್‌ನಲ್ಲಿ ಶೇ 4.5ಕ್ಕೆ ಏರಿಕೆ ಕಂಡಿದೆ. ವಿದ್ಯುತ್ ಉತ್ಪಾದನೆಯು ಶೇ 11.6ರಿಂದ ಶೇ 9.9ಕ್ಕೆ ಇಳಿಕೆ ಕಂಡಿದೆ. ಗಣಿ ಉತ್ಪಾದನೆಯು ಶೇ 5.2 ರಿಂದ ಶೇ 11.5ಕ್ಕೆ ಏರಿಕೆ ಕಂಡಿದೆ. ಬಂಡವಾಳ ಸರಕುಗಳ ಉತ್ಪಾದನೆಯು ಶೇ 11.4 ರಿಂದ ಶೇ 7.4ಕ್ಕೆ ಇಳಿಕೆ ಕಂಡಿದೆ. ಮೂಲಸೌಕರ್ಯ/ನಿರ್ಮಾಣ ಸರಕುಗಳ ವಲಯದ ಬೆಳವಣಿಗೆಯು ಶೇ 8.2 ರಿಂದ ಶೇ 7.5ಕ್ಕೆ ಇಳಿಕೆ ಕಡಿದೆ.

ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಈ ವರದಿ ಬಿಡುಗಡೆ ಮಾಡಿದೆ. ಕೈಗಾರಿಕಾ ಉತ್ಪಾದನೆ ಸೂಚ್ಯಂಕದ (ಐಐಪಿ) ಆಧಾರದ ಮೇಲೆ ಲೆಕ್ಕ ಹಾಕುವ ಬೆಳವಣಿಗೆಯು 2023–24ರ ಏಪ್ರಿಲ್‌–ಸೆಪ್ಟೆಂಬರ್ ಅವಧಿಯಲ್ಲಿ ಶೇ 6ರಷ್ಟು ಆಗಿದೆ. 2022–23ರ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ಆಗಿದ್ದ ಬೆಳವಣಿಗೆಗೆ ಹೋಲಿಸಿದರೆ (ಶೇ 7.1) ಇಳಿಕೆ ಕಂಡುಬಂದಿದೆ.

ಅತಿಯಾದ ಮಳೆ ಮತ್ತು ಕೈಗಾರಿಕಾ ಚಟುವಟಿಕೆಗಳು ನಿಧಾನವಾಗಿ ಆರಂಭ ಆಗಿದ್ದರಿಂದ ಉತ್ಪಾದನೆ ಕಡಿಮೆ ಆಗಿದೆ ಎಂದು ಐಸಿಆರ್‌ಎ ಆರ್ಥಿಕತಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಆರ್ಥಿಕ ಬೆಳವಣಿಗೆಯನ್ನು ಸೂಚಿಸುವ ಬಹುತೇಕ ಎಲ್ಲ ವಲಯಗಳು ಸೆಪ್ಟೆಂಬರ್‌ಗೆ ಹೋಲಿಸಿದರೆ ಅಕ್ಟೋಬರ್‌ನಲ್ಲಿ ಸುಧಾರಣೆ ಕಂಡಿವೆ. ಮುಂದಿನ ತಿಂಗಳು ಕೈಗಾರಿಕಾ ಉತ್ಪಾದನೆಯು ಶೇ 7 ರಿಂದ ಶೇ 10ವರೆಗೆ ಆಗುವ ನಿರೀಕ್ಷೆ ಇದೆ ಎಂದು ಅವರು ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ಫ್ಯಾಕ್ಟರಿ	10169-25299	ಕೆಂಪುಗೋಟು	32509-33219
ಕೋಕ	15000-27500	ಹಳೆಚಾಲಿ	39099-39639	ರಾಶಿ	44509-46499
ಹಳತು	43500-48500	ಹೊಸಚಾಲಿ	37809-39599	ತಟ್ಟಿಬೆಟ್ಟೆ	37909-42469
ಬೆಳ್ತಂಗಡಿ		**ಕುಂದಾಪುರ**		**ಶಿರಸಿ**	
ಹೊಸತು	30500-37500	ಹಳೆಚಾಲಿ	41000-42500	ಬೆಟ್ಟೆ	35699-45439
ಭದ್ರಾವತಿ		ಹೊಸಚಾಲಿ	30000-36500	ಬಿಳಿಗೋಟು	28209-35599
ರಾಶಿ	37199-46899	**ಪಾವಗಡ**		ಚಾಲಿ	37000-41101
ಹೊನ್ನಳ್ಳಿ		ಕೆಂಪು	40000-42800	ಕೆಂಪುಗೋಟು	30629-34269
ರಾಶಿ	46995-46995	**ಪುತ್ತೂರು**		ರಾಶಿ	44489-47719
ಹೊಸನಗರ		ಹೊಸತು	27000-36500	**ತುಮಕೂರು**	
ಬಿಳಿಗೋಟು	20899-20899	**ಶಿವಮೊಗ್ಗ**		ರಾಶಿ	44600-46500
ಚಾಲಿ	33399-36289	ಬೆಟ್ಟೆ	46399-53299	**ಯಲ್ಲಾಪುರ**	
ಕೆಂಪುಗೋಟು	28099-34370	ಗೊರಬಾಲು	27111-37569	ಬಿಳಿಗೋಟು	26899-35770
ರಾಶಿ	43299-48170	ಹೊಸತು	45369-47199	ಚಾಲಿ	36819-40970
ಕಾರ್ಕಳ		ರಾಶಿ	40299-47199	ಕೋಕ	18499-32570
ಹೊಸತು	25000-36500	ಸರಕು	58669-72800	ಕೆಂಪುಗೋಟು	30101-35055
ಹಳತು	30000-48500	**ಸಿದ್ದಾಪುರ**		ರಾಶಿ	45550-55009
ಕುಮಟ		ಬಿಳಿಗೋಟು	31699-33819	ತಟ್ಟಿಬೆಟ್ಟೆ	37599-43800
ಚಿಪ್ಪು	27099-34609	ಚಾಲಿ	37809-40009		
ಕೋಕ	19089-32509	ಕೋಕ	29099-33699		

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹4400-5000
ಮಧ್ಯಮ	₹3500-4500
ಸಣ್ಣ	₹2000-3500

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹11500
ಎಸಿ	₹6750
ಆರ್‌ಪಿ	₹9800
ಆರ್‌ಸಿ	₹5960

ಮಹೀಂದ್ರ: ತೆರಿಗೆ ನಂತರದ ಲಾಭ ಶೇ 60ರಷ್ಟು ಹೆಚ್ಚಳ

ಮುಂಬೈ (ಪಿಟಿಐ): ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ತೆರಿಗೆ ನಂತರದ ಲಾಭವು 2023–24ರ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 60ರಷ್ಟು ಹೆಚ್ಚಾಗಿ ₹2,348 ಕೋಟಿಗೆ ತಲುಪಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ತೆರಿಗೆ ನಂತರದ ಲಾಭವು ₹2,348 ಕೋಟಿಯಷ್ಟು ಆಗಿತ್ತು ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ವರಮಾನ ಶೇ 15ರಷ್ಟು ಹೆಚ್ಚಾಗಿ ₹34,436 ಕೋಟಿಗೆ ಏರಿಕೆ ಕಂಡಿದೆ. ಕಂಪನಿಯ ವಾಹನ ವಹಿವಾಟಿನಿಂದ ಬಂದಿರುವ ವರಮಾನವು ಶೇ 20ರಷ್ಟು ಹೆಚ್ಚಾಗಿ ₹18,869 ಕೋಟಿಗೆ ತಲುಪಿದೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು 2.12 ಲಕ್ಷ ವಾಹನ ಮಾರಾಟ ಮಾಡಿದೆ ಎಂದು ಕಂಪನಿಯು ಮಾಹಿತಿ ನೀಡಿದೆ.

ಚಿನ್ನದ ಇಟಿಎಫ್: ₹841 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಅನಿಶ್ಚಿತ ಸಂದರ್ಭಗಳಲ್ಲಿ ಚಿನ್ನದ ಮೇಲಿನ ಹೂಡಿಕೆ ಹೆಚ್ಚು ಸುರಕ್ಷಿತ ಎನ್ನುವ ಭಾವನೆ ಹೂಡಿಕೆದಾರರಲ್ಲಿ ಇದೆ. ಹೀಗಾಗಿ ಅಕ್ಟೋಬರ್‌ನಲ್ಲಿ ಚಿನ್ನದ ವಿನಿಮಯ ವಹಿವಾಟು ನಿಧಿಗಳಲ್ಲಿ (ಚಿನ್ನದ–ಇಟಿಎಫ್) ಹೂಡಿಕೆ ಮಾಡಲು ಹೆಚ್ಚು ಗಮನ ಹರಿಸುತ್ತಿದ್ದಾರೆ ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಶುಕ್ರವಾರ ಹೇಳಿದೆ.

ಹೂಡಿಕೆದಾರರು ಅಕ್ಟೋಬರ್‌ನಲ್ಲಿ ಚಿನ್ನದ ಇಟಿಎಫ್‌ಗಳಲ್ಲಿ ₹841 ಕೋಟಿಯಷ್ಟು ಬಂಡವಾಳ ಹೂಡಿಕೆ ಮಾಡಿದ್ದಾರೆ. ಸೆಪ್ಟೆಂಬರ್‌ನಲ್ಲಿ ಹೂಡಿಕೆ ಮಾಡಿದ್ದ ₹175 ಕೋಟಿ ಹೋಲಿಸಿದರೆ



ಹೂಡಿಕೆಯಲ್ಲಿ ಗರಿಷ್ಠ ಹೆಚ್ಚಳ ಕಂಡಬಂದಿದೆ ಎಂದು ಒಕ್ಕೂಟವು ಮಾಹಿತಿ ನೀಡಿದೆ.

'ಸದ್ಯ ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವ ಜಾಗತಿಕ ಬಿಕ್ಕಟ್ಟುಗಳು, ಅಮೆರಿಕದಲ್ಲಿ ಬಡ್ಡಿದರ ಇನ್ನಷ್ಟು ಏರಿಕೆ ಆಗುವ ಆತಂಕ, ಹಣದುಬ್ಬರವು ನಿರೀಕ್ಷೆಗಿಂತಲೂ ಹೆಚ್ಚಿಗೆ ಇರುವುದು ಮತ್ತು ಜಾಗತಿಕ ಆರ್ಥಿಕತೆಯ ಮಂದಗತಿಯ ಬೆಳವಣಿಗೆ... ಹೀಗೆ ಹಲವು ಕಾರಣಗಳು ಚಿನ್ನದ ಮೇಲೆ ಹೂಡಿಕೆ ಹೆಚ್ಚಾಗುವಂತೆ ಮಾಡುತ್ತಿವೆ' ಎಂದು ಮಾರ್ನಿಂಗ್‌ಸ್ಟಾರ್ ಇನ್‌ವೆಸ್ಟ್‌ಮೆಂಟ್ ಅಡ್ವೈಸರ್ ಇಂಡಿಯಾದ ವಿಶ್ಲೇಷಕರ ಮೆಲ್ವಿನ್ ಸಾಂಟರಿಟಾ ಹೇಳಿದ್ದಾರೆ.

'ಚಿನ್ನದ ಬೆಲೆಯು ಈಚಿನ ದಿನಗಳಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟದಿಂದ ತುಸು ಕಡಿಮೆ ಆಗಿದೆ. ಇದು ಸಹ ಖರೀದಿ ಅವಕಾಶವನ್ನು ಒದಗಿಸಿಕೊಟ್ಟಿದೆ' ಎಂದು ಅವರು ತಿಳಿಸಿದ್ದಾರೆ.

ಚಿನ್ನದ ಇಟಿಎಫ್‌ನಲ್ಲಿ ಹೂಡಿಕೆ (₹ ಕೋಟಿಗಳಲ್ಲಿ)

ಜುಲೈ	456
ಆಗಸ್ಟ್	1,028
ಸೆಪ್ಟೆಂಬರ್	175
ಅಕ್ಟೋಬರ್	841

ಚಿನ್ನದ ಇಟಿಎಫ್ ನಿರ್ವಹಣಾ ಸಂಪತ್ತು

₹26,163 ಕೋಟಿ ಅಕ್ಟೋಬರ್ ಅಂತ್ಯಕ್ಕೆ

₹23,800 ಕೋಟಿ ಸೆಪ್ಟೆಂಬರ್ ಅಂತ್ಯಕ್ಕೆ

ಪ್ರಯಾಣಿಕರಿಗೆ ಖಾಲಿಸ್ತಾನಿಗಳ ಬೆದರಿಕೆ: ಕೆನಡಾ ತನಿಖೆ

ಒಟ್ಟಾವ (ಕೆನಡಾ) (ಪಿಟಿಐ): ಏರ್ ಇಂಡಿಯಾ ವಿಮಾನದಲ್ಲಿ ನವೆಂಬರ್ 19ರಂದು ಪ್ರಯಾಣಿಸುವವರಿಗೆ ಖಾಲಿಸ್ತಾನ ಬೆಂಬಲಿತ ಸಂಘಟನೆ ಬೆದರಿಕೆಯೊಡ್ಡಿದೆ. ಈ ಹಿನ್ನೆಲೆಯಲ್ಲಿ ಪ್ರತಿಕ್ರಿಯಿಸಿರುವ ಕೆನಡಾ ಸರ್ಕಾರ, ವೈಮಾನಿಕ ಸೇವೆಗೆ ಎದುರಾಗುವ ಯಾವುದೇ ಬೆದರಿಕೆ ಮತ್ತು ಆನ್‌ಲೈನ್ ಎಚ್ಚರಿಕೆಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿಸುವುದಾಗಿ ತಿಳಿಸಿದೆ.

ಅಹಮದಾಬಾದ್‌ನಲ್ಲಿ ಇದೇ 19ರಂದು ಐಸಿಸಿ ಕ್ರಿಕೆಟ್ ವಿಶ್ವಕಪ್ ಫೈನಲ್ ಪಂದ್ಯ ನಡೆಯಲಿದೆ. ಆ ದಿನ ಏರ್‌ಇಂಡಿಯಾ ವಿಮಾನದಲ್ಲಿ ಪ್ರಯಾಣಿಸುವವರಿಗೆ ಎಚ್ಚರಿಕೆ ನೀಡಿ ನಿಷೇಧಿತ ಸಂಘಟನೆ 'ಸಿಖ್ ಫಾರ್ ಜಸ್ಟೀಸ್ (ಎಸ್‌ಎಫ್‌ಜೆ)'ನ ಸಂಸ್ಥಾಪಕ ಗುರುಪತ್ವಂತ್ ಸಿಂಗ್ ಪನ್ನು ವಿಡಿಯೊ ಬಿಡುಗಡೆ ಮಾಡಿದ್ದ.

ಬೆದರಿಕೆಯನ್ನು ಸಂಭಾವ್ಯ ಭಯೋತ್ಪಾದನಾ ಬೆದರಿಕೆ ಎಂದು ಪರಿಗಣಿಸಲಾಗಿದ್ದು, ಈ ನಿಟ್ಟಿನಲ್ಲಿ ತನಿಖೆ ನಡೆಸುತ್ತಿರುವುದಾಗಿ ಕೆನಡಾ ಸರ್ಕಾರ ಮತ್ತು ಪೊಲೀಸ್ ಇಲಾಖೆ ಖಚಿತಪಡಿಸಿದೆ.

ಸಂಕ್ಷಿಪ್ತ ಸುದ್ದಿ

ಪವನ್‌ಕಾಂತ್: ಆಸ್ತಿ ಜಪ್ತಿ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಹೀರೊ ಮೊಟೊಕಾರ್ಪ್‌ನ ಕಾರ್ಯಾಧ್ಯಕ್ಷ ಪವನ್ ಕಾಂತ್ ಮುಂಜಾಲ್ ಅವರಿಗೆ ಸೇರಿದ ₹24.95 ಕೋಟಿ ಮೌಲ್ಯದ ಆಸ್ತಿಯನ್ನು ಜಾರಿ ನಿರ್ದೇಶನಾಲಯ (ಇ.ಡಿ) ಮುಟ್ಟುಗೋಲು ಹಾಕಿದೆ.

ಪವನ್ ಅವರು ಆರ್‌ಬಿಐನ ನಿಯಮಗಳನ್ನು ಉಲ್ಲಂಘಿಸಿ, ಇತರರ ಹೆಸರಿನಲ್ಲಿ ವಿದೇಶಿ ಕರೆನ್ಸಿ ಪಡೆದು ಅದನ್ನು ವಿದೇಶದಲ್ಲಿ ತಮ್ಮ ವೈಯಕ್ತಿಕ ಖರ್ಚುಗಳಿಗೆ ವಿನಿಯೋಗಿಸಿರುವುದು ತನಿಖೆಯಲ್ಲಿ ತಿಳಿದು ಬಂದಿರುವುದಾಗಿ ಇ.ಡಿ. ಶುಕ್ರವಾರ ಹೇಳಿಕೆಯಲ್ಲಿ ತಿಳಿಸಿದೆ.

ಚಿಕೂನ್‌ಗುನ್ಯಾ ಲಸಿಕೆಗೆ ಅಮೆರಿಕದ ಅನುಮೋದನೆ

ನವದೆಹಲಿ (ಪಿಟಿಐ): ವಿಶ್ವದ ಮೊದಲ ಚಿಕೂನ್‌ಗುನ್ಯಾ ಲಸಿಕೆ 'ಇಕ್ಸ್‌ಚಿಕ್'ಗೆ ಅಮೆರಿಕದ ಆಹಾರ ಮತ್ತು ಔಷಧ ಆಡಳಿತವು (ಎಫ್‌ಡಿಎ) ಅನುಮೋದನೆ ನೀಡಿದೆ.

18 ವರ್ಷ ಮತ್ತು ಅದಕ್ಕಿಂತ ಮೇಲ್ಪಟ್ಟ ವಯಸ್ಸಿನವರಿಗೆ ಹಾಗೂ ಸೊಳ್ಳೆಯಿಂದ ಹರಡುವ ಈ ರೋಗದಿಂದ ಬಳಲುತ್ತಿರುವವರಿಗೆ ಈ ಲಸಿಕೆ ನೀಡಲು ಅನುಮೋದನೆ ನೀಡಲಾಗಿದೆ. ಈ ಲಸಿಕೆ ಒಂದೇ ಡೋಸ್ ನೀಡಲಾಗುವುದು ಎಂದು ಹೇಳಿದೆ.

ಆಯುರ್ವೇದ ಹೊಸ ಎತ್ತರಕ್ಕೆ: ಮೋದಿ

ನವದೆಹಲಿ (ಪಿಟಿಐ): ಆಯುರ್ವೇದಕ್ಕೆ ಬೆಂಬಲ ನೀಡುತ್ತಿರುವುದು ಸ್ಥಳೀಯತೆಯನ್ನು ಉತ್ತೇಜಿಸುವ 'ವೋಕಲ್ ಫಾರ್ ಲೋಕಲ್'ಗೆ ಉತ್ತಮ ಉದಾಹರಣೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದ್ದಾರೆ.

ಎಲ್‌ಐಸಿ ಲಾಭ ಶೇ 50ರಷ್ಟು ಕುಸಿತ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 50ರಷ್ಟು ಕುಸಿತ ಕಂಡು ₹7,925 ಕೋಟಿಗೆ ತಲುಪಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹15,952 ಕೋಟಿಯಷ್ಟು ಲಾಭ ಆಗಿತ್ತು ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.



ವರಮಾನ ಇಳಿಕೆ ಆಗಿರುವುದೇ ಲಾಭದಲ್ಲಿ ಕುಸಿತಕ್ಕೆ ಕಾರಣ ಎಂದು ಹೇಳಿದೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಪ್ರೀಮಿಯಂ ವರಮಾನವು ₹1.32 ಲಕ್ಷ ಕೋಟಿಯಿಂದ ₹1.07 ಲಕ್ಷ ಕೋಟಿಗೆ ಇಳಿಕೆ ಕಂಡಿದೆ. ಕಂಪನಿಯ ಒಟ್ಟು ವರಮಾನವು ₹2.22 ಲಕ್ಷ ಕೋಟಿಯಿಂದ ₹2.01 ಲಕ್ಷ ಕೋಟಿಗೆ ಇಳಿಕೆ ಆಗಿದೆ ಎಂದು ತಿಳಿಸಿದೆ.

ಪ್ರೀಮಿಯಂ ಸಂಗ್ರಹವು ₹9,125 ಕೋಟಿಯಿಂದ ₹9,988 ಕೋಟಿಗೆ ಏರಿಕೆ ಆಗಿದೆ. ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಜಿಎನ್‌ಪಿಎ) ಶೇ 5.60 ರಿಂದ ಶೇ 2.43ಕ್ಕೆ ಇಳಿಕೆ ಕಂಡಿದೆ.

ಪ್ರಸಕ್ತ ಹಣಕಾಸು ವರ್ಷದ ಮೊದಲಾರ್ಧದಲ್ಲಿ ತೆರಿಗೆ ನಂತರದ ಲಾಭವು ದಾಖಲೆಯ ₹17,469 ಕೋಟಿಗೆ ತಲುಪಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹16,635 ಕೋಟಿಯಷ್ಟು ಲಾಭ ಆಗಿತ್ತು ಎಂದು ಹೇಳಿದೆ.

ಮುಂಬೈ ಧಾರಣೆ

ಶೇಂಗಾ

10-11-2023

ಜಾವಾ 70/80(ಹೊಸ)	10800-10900
ಜಾವಾ 80/90(ಹೊಸ)	10200-10300
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	10400-10500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1540)
ಒಂದು ವಾರದ ಡೆಲಿವರಿ	1545 (1535)
ಸೋಯಾ ಕಚ್ಚಾ	900 (885)
ಪಾಮ್ ವಾರದ ಡೆಲಿವರಿ	830 (822)
ಸೂರ್ಯಕಾಂತಿ ಎಣ್ಣೆ ಕಚ್ಚಾ	860 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

59,950 (59,950)

ಬೆಳ್ಳಿ ಕೆ.ಜಿ 70,400 (70,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಹಮಾಸ್ ಆಸ್ಪತ್ರೆಯನ್ನೇ ನೆಲೆಯಾಗಿಸಿದೆ ಎಂದು ಆರೋಪ

ಆಸ್ಪತ್ರೆ ಗುರಿಯಾಗಿಸಿ ಇಸ್ರೇಲ್ ದಾಳಿ

ಗಾಜಾ ಪಟ್ಟಿ, ಪ್ಯಾಲೆಸ್ಟೀನ್ ವಲಯ (ಎಎಫ್‌ಪಿ): ಇಸ್ರೇಲ್ ಸೇನೆಯು ಶುಕ್ರವಾರ ಬೆಳಿಗ್ಗೆ ಗಾಜಾ ನಗರದ ಹಲವು ಆಸ್ಪತ್ರೆಗಳನ್ನು ಗುರಿಯಾಗಿಸಿ ದಾಳಿ ನಡೆಸಿದೆ. '13 ಜನರು ಸತ್ತಿದ್ದು, 12ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ' ಹಮಾಸ್ ಆಡಳಿತ ತಿಳಿಸಿದೆ.

ಗಾಜಾದ ಹಮಾಸ್ ಸರ್ಕಾರದ ಪ್ರಕಾರ, ಇಲ್ಲಿನ ಅಲ್ ಶಿಫಾ ಆಸ್ಪತ್ರೆಯ ಮೇಲೆ ದಾಳಿ ನಡೆದಿದೆ. ನಗರದಿಂದ ಗುಳೆ ಹೊರಟಿದ್ದ ಜನರು ತಾತ್ಕಾಲಿಕವಾಗಿ ಇಲ್ಲಿ ಆಶ್ರಯ ಪಡೆದಿದ್ದರು. ಇಸ್ರೇಲ್ ಈ ಬಗ್ಗೆ ತಕ್ಷಣಕ್ಕೆ ಪ್ರತಿಕ್ರಿಯಿಸಿಲ್ಲ.

ಆಸ್ಪತ್ರೆಯ ಹೆರಿಗೆ ವಿಭಾಗದ ಸಮೀಪ ದಾಳಿ ನಡೆದಿದೆ, ಇಬ್ಬರು ಸತ್ತು, 10 ಜನರು ಗಾಯಗೊಂಡರು ಎಂದು ಆಸ್ಪತ್ರೆಯ ನಿರ್ದೇಶಕ ಮೊಹಮ್ಮದ್ ಅಬು ಸಾಲ್ಮಿಯ ತಿಳಿಸಿದರು.

ಗುರುವಾರ ಆಸ್ಪತ್ರೆಯ ಬಳಿಯೇ ಇಸ್ರೇಲ್ ಸೇನೆಯು ಕದನ ನಡೆಸಿದ್ದು, 12ಕ್ಕೂ ಹೆಚ್ಚು ಹಮಾಸ್ ಪ್ರತ್ಯೇಕತಾವಾದಿಗಳ ಹತ್ಯೆ ಮಾಡಿತ್ತು. ಅವರ ಅಡಗುತಾಣವಾಗಿದ್ದ ಸುರಂಗ ಮಾರ್ಗಗಳನ್ನು ನಾಶಪಡಿಸಿತ್ತು.



ಗಾಜಾಪಟ್ಟಿಯ ನಗರಗಳ ಮೇಲೆ ಇಸ್ರೇಲ್ ಸೇನೆ ದಾಳಿ ತೀವ್ರಗೊಳಿಸಿರುವ ಹಿನ್ನೆಲೆಯಲ್ಲಿ ನಾಗರಿಕರು ಸಾಮೂಹಿಕವಾಗಿ ಗಾಜಾಪಟ್ಟಿಯ ದಕ್ಷಿಣ ಭಾಗದತ್ತ ಗುಳೆ ಹೊರಟಿರುವುದು –ಎಪಿ ಚಿತ್ರ

ಹಮಾಸ್ ಪ್ರತ್ಯೇಕತಾವಾದಿಗಳು ಆಸ್ಪತ್ರೆಗಳನ್ನು ಮುಖ್ಯವಾಗಿ ಅಲ್ ಶಿಫಾ ಆಸ್ಪತ್ರೆಯನ್ನು ತನ್ನ ದಾಳಿಗೆ ನೆಲೆ ಹಾಗೂ ಅಡಗುತಾಣವಾಗಿ ಬಳಸಿಕೊಳ್ಳುತ್ತಿದೆ ಎಂದು ಇಸ್ರೇಲ್ ಸೇನೆ ಆರೋಪಿಸಿದೆ. ಈ ಆರೋಪವನ್ನು ಹಮಾಸ್ ತಳ್ಳಿಹಾಕಿದೆ.

ಅಕ್ಟೋಬರ್ 7ರಂದು ದಾಳಿ ಶುರುವಾದ ನಂತರ ಇದುವರೆಗೂ 11 ಸಾವಿರ ಪ್ಯಾಲೆಸ್ಟೀನಿಯರು ಹತರಾಗಿದ್ದಾರೆ. ಉಳಿದಂತೆ 2,650 ಜನರು ನಾಪತ್ತೆಯಾಗಿದ್ದು, ಕಟ್ಟಡದ ಅವಶೇಷಗಳ ನಡುವೆ ಸಿಲುಕಿರುವ ಅಥವಾ ಸತ್ತಿರುವ ಸಾಧ್ಯತೆಗಳಿವೆ.

ಸರ್ಕಾರದ ಹಸ್ತಕ್ಷೇಪ ತಡೆಯಲು ಮಂಡಳಿ ವಿಫಲ ಎಂದ ಐಸಿಸಿ

ಶ್ರೀಲಂಕಾ ಕ್ರಿಕೆಟ್ ಮಂಡಳಿ ಅಮಾನತು

ಕೊಲಂಬೊ (ಎಎಫ್‌ಪಿ): ಕರ್ತವ್ಯ ನಿರ್ವಹಣೆಯಲ್ಲಿ ಸರ್ಕಾರದ ಹಸ್ತಕ್ಷೇಪವನ್ನು ತಡೆಯಲು ಶ್ರೀಲಂಕಾದ ಕ್ರಿಕೆಟ್ ಮಂಡಳಿ ವಿಫಲವಾಗಿದೆ ಎಂದು ಹೇಳಿರುವ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್, ತಕ್ಷಣದಿಂದ ಜಾರಿಗೆ ಬರುವಂತೆ ಆ ದೇಶದ ಕ್ರಿಕೆಟ್ ಮಂಡಳಿಯನ್ನು ಪೂರ್ಣಾವಧಿ ಸದಸ್ಯ ಸ್ಥಾನದಿಂದ ಅಮಾನತುಗೊಳಿಸಿದೆ.

ಮಂಡಳಿಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪದ ನಡುವೆಯೇ, ರಾಜೀನಾಮೆ ನೀಡುವಂತೆ ಮಂಡಳಿಯ ಪದಾಧಿಕಾರಿಗಳಿಗೆ ಸೂಚಿಸಿ ಶ್ರೀಲಂಕಾದ ಸಂಸತ್ತು ಗುರುವಾರ ಸರ್ವಾನುಮತದ ನಿರ್ಣಯ ಕೈಗೊಂಡಿತ್ತು. ಇದರ ಮರುದಿನವೇ ಐಸಿಸಿ ಈ ಕ್ರಮ ಕೈಗೊಂಡಿದೆ.

‘ಕೌನ್ಸಿಲ್ ಸದಸ್ಯತ್ವ ಹೊಂದಿರುವ ಮಂಡಳಿ ತನ್ನ ಕರ್ತವ್ಯ ನಿರ್ವಹಣೆಯಲ್ಲಿ ವಿಫಲವಾಗಿದೆ. ಸ್ವಾಯತ್ತತೆ ಇದ್ದರೂ ತನ್ನ ವ್ಯವಹಾರ ಮತ್ತು ಆಡಳಿತದಲ್ಲಿ ಸರ್ಕಾರದ ಹಸ್ತಕ್ಷೇಪವನ್ನು ತಡೆಯುವಲ್ಲಿಯೂ ಮಂಡಳಿ ಗಂಭೀರ ಲೋಪ ಎಸಗಿದೆ ಎಂದು ಶುಕ್ರವಾರ ಸೇರಿದ ಐಸಿಸಿ ಮಂಡಳಿ ನಿರ್ಧಾರಕ್ಕೆ ಬಂದಿದೆ’ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

‘ಅಮಾನತಿಗೆ ಸಂಬಂಧಿಸಿದ ಷರತ್ತುಗಳನ್ನು ಐಸಿಸಿಯ ಆಡಳಿತ ಮಂಡಳಿ ಮುಂದಿನ ದಿನಗಳಲ್ಲಿ ನಿರ್ಧರಿಸಲಿದೆ’ ಎಂದೂ ಹೇಳಿಕೆ ತಿಳಿಸಿದೆ.

ಕಳೆದ ಕೆಲವು ದಿನಗಳಿಂದ ಲಂಕಾ ಕ್ರಿಕೆಟ್ ಮಂಡಳಿ ಸಾಕಷ್ಟು ವಿವಾದಗಳಿಂದ ಸುದ್ದಿಯಲ್ಲಿದೆ. ಕಳೆದ ಸೋಮವಾರ, ಅಲ್ಲಿನ ಕ್ರೀಡಾ ಸಚಿವ ರೋಷನ್ ರಣಸಿಂಘೆ ಅವರು ಮಂಡಳಿಯನ್ನು ವಜಾಗೊಳಿಸಿ ಅರ್ಜುನ ರಣತುಂಗ ನೇತೃತ್ವದಲ್ಲಿ ಮಧ್ಯಂತರ ಸಮಿತಿ ನೇಮಕ ಮಾಡಿದ್ದರು. ಮರುದಿನವೇ ಅಲ್ಲಿನ ಮೇಲ್ಮನವಿ ನ್ಯಾಯಾಲಯ ಇದಕ್ಕೆ ತಡೆ ನೀಡಿ ಹಳೆಯ ಮಂಡಳಿಗೇ ಅಧಿಕಾರ ವಹಿಸಿತ್ತು.

ಇದರ ಬೆನ್ನಲ್ಲೇ, ಮಂಡಳಿಯ ಪದಾಧಿಕಾರಿಗಳಿಗೆ ರಾಜೀನಾಮೆ ನೀಡುವಂತೆ ಸೂಚಿಸಿ ಆಡಳಿತ ಮತ್ತು ವಿಪಕ್ಷ ಸದಸ್ಯರು ಸಂಸತ್ತಿನಲ್ಲಿ, ಗುರುವಾರ ನಿರ್ಣಯ ಅಂಗೀಕರಿಸಿದ್ದರು. ಶ್ರೀಲಂಕಾ ಕ್ರಿಕೆಟ್‌ನಲ್ಲಿ ಹಣಕಾಸು ಅವ್ಯವಹಾರ, ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ ಎಂಬ ದೂರುಗಳು ಕೇಳಿಬಂದಿವೆ.

‘ಹೊರಗಿನ ಶಕ್ತಿಗಳ ಸಂಚಿನಿಂದ ಲಂಕಾ ಕಳಪೆ ಪ್ರದರ್ಶನ’

ಕೊಲಂಬೊ (ಪಿಟಿಐ): ‘ಬಾಹ್ಯ ಸಂಚಿನ’ ಪರಿಣಾಮದಿಂದ ಶ್ರೀಲಂಕಾ ಕ್ರಿಕೆಟ್ ತಂಡದ ನಿರಾಶಾದಾಯಕ ಪ್ರದರ್ಶನ ನೀಡಿದೆ ಎಂದು ಕ್ರಿಕೆಟ್ ತಂಡದ ಮುಖ್ಯ ಆಯ್ಕೆಗಾರ ಪ್ರಮೋದಯ ವಿಕ್ರಮಸಿಂಘೆ ಶುಕ್ರವಾರ ಇಲ್ಲಿ ಆರೋಪಿಸಿದರು.

ಶುಕ್ರವಾರ ಬೆಳಿಗ್ಗೆ ಶ್ರೀಲಂಕಾ ತಂಡ ಬೆಂಗಳೂರಿನಿಂದ ಇಲ್ಲಿಗೆ ಬಂದಿಳಿಯಿತು. ಈ ತಂಡ ಗುರುವಾರ ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ನ್ಯೂಜಿಲೆಂಡ್ ಎದುರು ಐದು ವಿಕೆಟ್‌ಗಳ ಸೋಲನುಭವಿಸಿತ್ತು.

ಈ ಬಗ್ಗೆ ಹೆಚ್ಚಿನ ಮಾಹಿತಿ ನೀಡುವಂತೆ ಕೇಳಿದಾಗ, ‘ಈ ಬಗ್ಗೆ ವಿವರ ಬಹಿರಂಗಪಡಿಸಲು ನನಗೆ ಎರಡು ದಿನ ಕೊಡಿ. ಹೊರಗಿನ ಸಂಚಿನ ಪರಿಣಾಮ ಇದು’ ಎಂದು ತಮ್ಮ ಹೇಳಿಕೆ ಸಮರ್ಥಿಸಿಕೊಂಡರು. ವಿಕ್ರಮಸಿಂಘೆ ಅವರು 1996ರಲ್ಲಿ ವಿಶ್ವಕಪ್ ಗೆದ್ದ ಲಂಕಾ ತಂಡದಲ್ಲಿ ಆಡಿದ್ದರು.

‘ತಂಡದ ಸೋಲಿನ ಹೊಣೆಯನ್ನು ನಾನೇ ಹೊರುತ್ತೇನೆ’ ಎಂದು ಅವರು ವಿಮಾನನಿಲ್ದಾಣದಲ್ಲಿದ್ದ ಸುದ್ದಿಗಾರರಿಗೆ ತಿಳಿಸಿದರು.

1992ರ ನಂತರ ಇದು ಶ್ರೀಲಂಕಾ ತಂಡದ ಅತಿ ಕಳಪೆ ಪ್ರದರ್ಶನ ಎನಿಸಿತು. ಈ ಬಾರಿ ಭಾರತದಲ್ಲಿ ಆ ತಂಡ ಆಡಿದ 9 ಪಂದ್ಯಗಳಲ್ಲಿ ಗೆದ್ದಿದ್ದು ಬರೇ ಎರಡರಲ್ಲಿ. ತಂಡವನ್ನು ಗಾಯಾಳುಗಳ ಸಮಸ್ಯೆ ಕಾಡಿತು. ಹೀಗಾಗಿ ಮೂಲ ತಂಡದಲ್ಲಿ ಇಲ್ಲದ ಆಟಗಾರರು ತಂಡವನ್ನು ಸೇರಿಕೊಳ್ಳಬೇಕಾಯಿತು. ತಂಡದ ನಾಯಕರಾಗಿದ್ದ ದಸುನ್ ಶನಕ ಕೂಡ ಗಾಯಾಳಾಗಿದ ಪರಿಣಾಮ ಟೂರ್ನಿಯ ಮಧ್ಯದಲ್ಲೇ ನಾಯಕತ್ವ ಬದಲಾಯಿತು.

ಜರ್ಮನಿಯ ಭಯವಿಲ್ಲ: ಹಾಕಿ ತಂಡದ ನಾಯಕಿ ಸವಿತಾ

ನವದೆಹಲಿ (ಪಿಟಿಐ): ಒಲಿಂಪಿಕ್ಸ್ ಹಾಕಿ ಅರ್ಹತಾ ಟೂರ್ನಿಯಲ್ಲಿ ಭಾರತ ತಂಡವು, ಐದನೇ ಕ್ರಮಾಂಕದ ಜರ್ಮನಿ ಎದುರು ಮುಖಾಮುಖಿ ಆಗಿರಬಹುದು. ಆದರೆ ಈ ಸವಾಲು ನಮ್ಮ ತಂಡದ ಪ್ರದರ್ಶನದ ಮೇಲೆ ಪರಿಣಾಮವಾಗುವುದಿಲ್ಲ ಎಂದು ನಾಯಕಿ ಸವಿತಾ ಪೂನಿಯಾ ಅವರು ಹೇಳಿದ್ದಾರೆ.

ಭಾರತ ತಂಡ ವಿಶ್ವ ಕ್ರಮಾಂಕದಲ್ಲಿ ಆರನೇ ಸ್ಥಾನದಲ್ಲಿದ್ದು, ಟೂರ್ನಿಯಲ್ಲಿ ಎರಡನೇ ಉತ್ತಮ ರ‍್ಯಾಂಕಿಂಗ್ ಹೊಂದಿರುವ ತಂಡವಾಗಿದೆ. ರಾಂಚಿಯಲ್ಲಿ ಜನವರಿ 13 ರಿಂದ 19ರವರೆಗೆ ಅರ್ಹತಾ ಟೂರ್ನಿ ನಡೆಯಲಿದ್ದು ಎಂಟು ತಂಡಗಳು ಕಣದಲ್ಲಿವೆ. ಭಾಗವಹಿಸುವ ಇತರ ತಂಡಗಳೆಂದರೆ– ನ್ಯೂಜಿಲೆಂಡ್ (9ನೇ ರ‍್ಯಾಂಕ್), ಜಪಾನ್ (11ನೇ), ಚಿಲಿ (14ನೇ), ಅಮೆರಿಕ (15ನೇ), ಇಟಲಿ (19ನೇ) ಮತ್ತು ಝೆಕ್ ರಿಪಬ್ಲಿಕ್ (25ನೇ).

ಸ್ಪೇನ್ ವಲೆನ್ಸಿಯಾದಲ್ಲಿ ಇನ್ನೊಂದು ಅರ್ಹತಾ ಟೂರ್ನಿ ನಡೆಯಲಿದ್ದು, ಎರಡೂ ಕ್ವಾಲಿಫೈರ್‌ಗಳಲ್ಲಿ ಮೊದಲ ಮೂರು ಸ್ಥಾನ ಪಡೆಯುವ ತಂಡಗಳು ಪ್ಯಾರಿಸ್ ಕ್ರೀಡೆಗಳಿಗೆ ಅರ್ಹತೆ ಪಡೆಯಲಿವೆ.

‘ನಾವು ಈಗಾಗಲೇ– ಜುಲೈನಲ್ಲಿ ಜರ್ಮನಿ ವಿರುದ್ಧ ಆಡಲಿದ್ದೇವೆ. ಹೀಗಾಗಿ ನಮ್ಮ ಮುಂದಿರುವ ಸವಾಲು ಯಾವ ರೀತಿಯದ್ದೆಂದು ತಿಳಿದಿದೆ’ ಎಂದು ಸವಿತಾ ಹೇಳಿದರು.

ಅಥ್ಲೆಟಿಕ್ಸ್: ಪ್ರಿಯಾಂಕಾಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಪ್ರಿಯಾಂಕಾ ಓಲೇಕಾರ ಅವರು ಕೊಯಮತ್ತೂರಿನಲ್ಲಿ ನಡೆದ 38ನೇ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ 18 ವರ್ಷದೊಳಗಿನವರ ಮಹಿಳೆಯರ 800 ಮೀಟರ್ ಓಟದಲ್ಲಿ ಚಿನ್ನ ಗೆದ್ದರು.



ಪ್ರಿಯಾಂಕಾ ಓಲೇಕಾರ

ಪ್ರಿಯಾಂಕಾ 2 ನಿಮಿಷ 10.55 ಸೆಕೆಂಡ್‌ನಲ್ಲಿ ಗುರಿ ತಲುಪಿದರು.

ಕರ್ನಾಟಕಕ್ಕೆ ದಿನದ ಎರಡನೇ ಚಿನ್ನ 16 ವರ್ಷದೊಳಗಿನ ಬಾಲಕರ 1000 ಮೀ. ಸ್ಪ್ರಿಂಟ್ ಮೆಡ್ಲೆ ಓಟದಲ್ಲಿ ಲಭಿಸಿತು. ಸವಿನ್ ತಿಂಗಳಾಯ, ಎಸ್. ಸೈಯದ್ ಸುಲೇಮಾನ್, ಮೋನಿಶ್ ಮತ್ತು ಆಯುಷ್ ಪ್ರಾಂಜಲ್ ಅವರು 1 ನಿ.58 ಸೆಕೆಂಡ್‌ನಲ್ಲಿ ಗುರಿ ತಲುಪಿದರು. 18 ವರ್ಷದೊಳಗಿನವರ ಮಹಿಳೆಯರ ವಿಭಾಗದ ಓಟದಲ್ಲಿ ಸ್ತುತಿ ಶೆಟ್ಟಿ, ವೈಭವಿ, ಗೀತಾ ಚೌಕಾಶಿ ಮತ್ತು ರೀತುಶ್ರೀ ಅವರು 2ನಿ. 14.27 ಸೆಕೆಂಡ್‌ನಲ್ಲಿ ಗುರಿ ಮುಟ್ಟಿ ಬೆಳ್ಳಿ ಗೆದ್ದರು.

20 ವರ್ಷದೊಳಗಿನವರ ಪುರುಷರ 5,000 ಮೀಟರ್ ಓಟದಲ್ಲಿ ಶಿವಾಜಿ ಪರಶು ಮಾದಪ್ಪ ಬೆಳ್ಳಿ ಗೆದ್ದರೆ, 20 ವರ್ಷದೊಳಗಿನ ಮಹಿಳೆಯರ 400 ಮೀಟರ್ ಹರ್ಡಲ್ಸ್‌ನಲ್ಲಿ ಶ್ರೀಯಾ ರಾಜೇಶ್ ವೈಯಕ್ತಿಕ ಶ್ರೇಷ್ಠ ಸಾಧನೆಯೊಂದಿಗೆ ಬೆಳ್ಳಿ ಜಯಿಸಿದರು.

20 ವರ್ಷದೊಳಗಿನ ಮಹಿಳೆಯರ ಹೆಪ್ಟಾಥ್ಲಾನ್‌ನಲ್ಲಿ ಕರ್ನಾಟಕದ ಪವನಾ ನಾಗರಾಜ್ ಬೆಳ್ಳಿ ಗೆದ್ದರು.

ಐಪಿಎಲ್‌ಗೆ ಪಂತ್ ಲಭ್ಯ: ಗಂಗೂಲಿ

ಕೋಲ್ಕತ್ತ (ಪಿಟಿಐ): ಭಾರತ ತಂಡದ ವಿಕೆಟ್ ಕೀಪರ್ ರಿಷಭ್ ಪಂತ್ ಅವರು ಗುಣಮುಖರಾಗಿದ್ದು, ಮುಂದಿನ ಐಪಿಎಲ್‌ನಲ್ಲಿ ಆಡಲಿದ್ದಾರೆ ಎಂದು ದೆಹಲಿ ಕ್ಯಾಪಿಟಲ್ಸ್ ತಂಡದ ನಿರ್ದೇಶಕ ಸೌರವ್ ಗಂಗೂಲಿ ಹೇಳಿದರು.

ದೆಹಲಿ ತಂಡದ ನಾಯಕರೂ ಆಗಿರುವ ಪಂತ್, ಕಳೆದ ವರ್ಷದ ಡಿಸೆಂಬರ್‌ನಲ್ಲಿ ಕಾರು ಅಪಘಾತದಲ್ಲಿ ತೀವ್ರ ಗಾಯಗೊಂಡಿದ್ದರು. ದೆಹಲಿ– ಡೆಹ್ರಾಡೂನ್ ಹೆದ್ದಾರಿಯ ರೂರ್ಕಿ ಬಳಿ ಅವರು ಚಲಾಯಿಸುತ್ತಿದ್ದ ಮರ್ಸಿಡಿಸ್ ಕಾರು ರಸ್ತೆ ವಿಭಜಕಕ್ಕೆ ಡಿಕ್ಕಿಹೊಡೆದಿತ್ತು.

ಜಾಧವಪುರ ವಿಶ್ವವಿದ್ಯಾಲಯದ ಸಾಲ್ಟ್‌ಲೇಕ್ ಕ್ಯಾಂಪಸ್ ಮೈದಾನದಲ್ಲಿ ದೆಹಲಿ ಕ್ಯಾಪಿಟಲ್ಸ್ ತಂಡದ ಆಟಗಾರರ ಜೊತೆ ಪಂತ್ ಗುರುವಾರ ಕೆಲ ಕಾಲ ಕಳೆದರು.

‘ಪಂತ್ ಗುಣಮುಖರಾಗಿದ್ದಾರೆ. ಬರುವ ಐಪಿಎಲ್‌ನಲ್ಲಿ ಆಡಲಿದ್ದಾರೆ’ ಎಂದು ಗಂಗೂಲಿ ವರದಿಗಾರರಿಗೆ ತಿಳಿಸಿದರು. ಪಂತ್ ಅನುಪಸ್ಥಿತಿಯಲ್ಲಿ ಕಳೆದ ಐಪಿಎಲ್ ಆವೃತ್ತಿಯಲ್ಲಿ ಡೇವಿಡ್ ವಾರ್ನರ್ ತಂಡವನ್ನು ಮುನ್ನಡೆಸಿದ್ದರು. ಆದರೆ ತಂಡ ಕೊನೆಯಿಂದ ಎರಡನೇ ಸ್ಥಾನ ಗಳಿಸಿ ದಯನೀಯ ಹಿನ್ನಡೆ ಕಂಡಿತ್ತು.

‘ಅವರು ಗುರುವಾರ ಅಭ್ಯಾಸ ನಡೆಸಿಲ್ಲ. ಅದಕ್ಕಾಗಿ ಅವರಿಗೆ ಸಾಕಷ್ಟು ಸಮಯವಿದೆ. ಜನವರಿಯೊಳಗೆ (2024) ಅವರು ಇನ್ನಷ್ಟು ಫಿಟ್ ಆಗಲಿದ್ದಾರೆ’ ಎಂದು ಗಂಗೂಲಿ ಹೇಳಿದರು.

ಐಪಿಎಲ್ ಆಟಗಾರರ ಬಿಡ್ ಡಿಸೆಂಬರ್ 19ರಂದು ದುಬೈನಲ್ಲಿ ನಡೆಯಲಿದೆ. ಬರುವ ಆವೃತ್ತಿಗೆ ತಂಡವನ್ನು ಸಿದ್ಧಗೊಳಿಸುವ ನಿಟ್ಟಿನಲ್ಲಿ ಪಂತ್ ಅವರು ಇಲ್ಲಿಗೆ ಮೂರು ದಿನಗಳ ಭೇಟಿ ನೀಡಿದ್ದಾರೆ. ಪಂತ್ ಅವರು ಅಪಘಾತಕ್ಕೆ ಮುನ್ನ ಕಳೆದ ವರ್ಷದ ಡಿಸೆಂಬರ್‌ನಲ್ಲಿ ಮೀರ್‌ಪುರ್‌ನಲ್ಲಿ ಬಾಂಗ್ಲಾದೇಶ ವಿರುದ್ಧ ಟೆಸ್ಟ್‌ನಲ್ಲಿ ಕೊನೆಯ ಬಾರಿ ರಾಷ್ಟ್ರೀಯ ತಂಡಕ್ಕೆ ಆಡಿದ್ದರು.



ಟ್ರೋಫಿಯೊಂದಿಗೆ ತನಿಷ್ಕಾ ಕಪಿಲ್

ಟಿಟಿ: ತನಿಷ್ಕಾಗೆ ಮೂರನೇ ಪ್ರಶಸ್ತಿ

ಬೆಂಗಳೂರು: ತನಿಷ್ಕಾ ಕಪಿಲ್ ಕಾಲಭೈರವ ಅವರು ಮಲ್ಲೇಶ್ವರಂ ಅಸೋಸಿಯೇಷನ್‌ನಲ್ಲಿ ನಡೆಯುತ್ತಿರುವ 25ನೇ ವರ್ಷದ ಎಂ.ಎಸ್.ರಾಮಯ್ಯ ಸ್ಮಾರಕ ಟೇಬಲ್ ಟೆನಿಸ್ ಟೂರ್ನಿಯಲ್ಲಿ 17 ವರ್ಷದೊಳಗಿನ ಬಾಲಕಿಯರ ವಿಭಾಗದ ಸಿಂಗಲ್ಸ್‌ನಲ್ಲಿ ಪ್ರಶಸ್ತಿ ಗೆದ್ದರು. ಟೂರ್ನಿಯಲ್ಲಿ ಅವರಿಗೆ ಇದು ಮೂರನೇ ಪ್ರಶಸ್ತಿಯಾಗಿದೆ. 13 ಮತ್ತು 15 ವರ್ಷದೊಳಗಿನ ವಿಭಾಗದಲ್ಲೂ ಅವರು ಚಾಂಪಿಯನ್ ಆಗಿ ಹೊರಹೊಮ್ಮಿದ್ದರು.

ಶುಕ್ರವಾರ ನಡೆದ ಫೈನಲ್‌ನಲ್ಲಿ ತನಿಷ್ಕಾ 11-9, 11-6, 11-7ರಿಂದ ಹಿಯಾ ಸಿಂಗ್ ಅವರನ್ನು ಮಣಿಸಿದರು. ಸೆಮಿಫೈನಲ್‌ನಲ್ಲಿ ತನಿಷ್ಕಾ 11-7, 11-5, 11-8ರಿಂದ ನೀತಿ ಅಗರ್‌ವಾಲ್ ವಿರುದ್ಧ; ಹಿಯಾ 3-11, 11-8, 11-6, 11-7ರಿಂದ ಆಯುಷಿ ಬಿ. ಗೋಡ್ಸೆ ವಿರುದ್ಧ ಗೆಲುವು ಸಾಧಿಸಿದ್ದರು.

17 ವರ್ಷದೊಳಗಿನ ಬಾಲಕರ ವಿಭಾಗದ ಸಿಂಗಲ್ಸ್‌ನಲ್ಲಿ ವರುಣ್ ಬಿ. ಕಶ್ಯಪ್ 13-11, 11-4, 11-13, 12-14, 11-8ರಿಂದ ಅಭಿನವ್ ಕೆ. ಮೂರ್ತಿ ಅವರನ್ನು ಮಣಿಸಿ ಪ್ರಶಸ್ತಿ ಗೆದ್ದರು. ಸೆಮಿಫೈನಲ್‌ನಲ್ಲಿ ವರುಣ್ 11-5, 12-10, 11-9ರಿಂದ ಬಿ.ಆರ್. ಗೌರವ್ ಅವರನ್ನು, ಅಭಿನವ್ 12-14, 11-4, 13-11, 11-9ರಿಂದ ತೇಶುಬ್ ದಿನೇಶ್ ಅವರನನ್ನು ಸೋಲಿಸಿದರು.

ಎನ್‌ಎಂಎಸ್ ವಿಭಾಗದ ಫೈನಲ್‌ನಲ್ಲಿ ಯು.ಎನ್. ರಾಮ್ ಕುಮಾರ್ ಅವರು 13-11, 11-8, 11-6ರಿಂದ ಕೈರಾ ಬಾಳಿಗಾ ಅವರನ್ನು ಮಣಿಸಿ ಚಾಂಪಿಯನ್ ಆದರು.




ಟ್ರೋಫಿಯೊಂದಿಗೆ ರಾಮ್‌ಕುಮಾರ್ ಮತ್ತು ವರುಣ್ ಕಶ್ಯಪ್



ಪ್ರತಿಷ್ಠಿತ ಶಂಕರ್‌ನಾಗ್ ರಂಗಭೂಮಿ ಪ್ರಶಸ್ತಿ ಪಡೆದಿರುವ ರಂಗನಿರ್ದೇಶಕ ಲಕ್ಷಣ ಕೆ.ಪಿ. ಸಂದರ್ಶನ

ಪುಟ 2



ಸಂಕ್ರಾಂತಿಗೆ 'ಕ್ಯಾಪ್ಟನ್ ಮಿಲ್ಲರ್'

ದೀಪಾವಳಿಗೆ ಬೆಳಕಿನ ಅಲಂಕಾರ

ಈ ದೀಪಾವಳಿಯಲ್ಲಿ ಮನೆಯಲ್ಲಿ ನೀವೆ ಮಾಡಬಹುದಾದ ಅಲಂಕಾರದ ಒಂದಿಷ್ಟು ಮಾಹಿತಿ ಇಲ್ಲಿದೆ. ದೀಪಾಲಂಕಾರಕ್ಕೆ ಇನ್ನಷ್ಟು ಮೆರುಗು ತನ್ನಿ.

ಬೆಳಕಿನ ಅಲಂಕಾರ: ದೀಪಗಳನ್ನು ಒಂದೇ ಸಾಲಿನಲ್ಲಿ ಇರಿಸುವ ಸರಳ ಹಾಗೂ ಆಕರ್ಷಕ ಅಲಂಕಾರ. ತೇಲುವ ದೀಪ, ದೀಪದ ಸೆಂಟರ್‌ಪೀಸ್‌ಗಳು, ರಂಗೋಲಿ ಜೊತೆಗೆ ದೀಪಗಳು, ತೂಗುವ ದೀಪ, ದೀಪ ಮೊಬೈಲ್‌ಗಳು ಇತ್ಯಾದಿ.

ರಂಗೋಲಿಯ ಮರುವಿನ್ಯಾಸ: ನೀವೇ ಮಾಡಬಹುದಾದ ದೀಪಾವಳಿ ಹೊರಾಂಗಣ ಅಲಂಕಾರ. ಸಾಂಪ್ರದಾಯಿಕ ವಿನ್ಯಾಸದ ರಂಗೋಲಿಯ ಬದಲು ಜ್ಯಾಮಿತಿಯ ಮಾದರಿ ಅಥವಾ ಹೂವುಗಳನ್ನು ಬಳಸಿ ಆಕರ್ಷಕ ಬಣ್ಣಗಳ ರಂಗೋಲಿ ರಚಿಸಬಹುದು. ಹೀಗೆ ಮಾಡಿ ಅತಿಥಿಗಳನ್ನು ವಿಭಿನ್ನವಾಗಿ ಸ್ವಾಗತಿಸಬಹುದು. ಇದಕ್ಕೆ ಸೃಜನಶೀಲತೆಯ ಸ್ಪರ್ಶ ನೀಡಿ, ವಿನ್ಯಾಸಕ್ಕೆ ವಿಶಿಷ್ಟತೆ ನೀಡಲು ಹೂವಿನ ಎಸಳು ಅಥವಾ ಬಣ್ಣ ಬಳಿದ ಅಕ್ಕಿ ಕಾಳನ್ನು ಬಳಸಬಹುದು.

ದೀಪಗಳಲ್ಲಿ ಮನ ಸೆಳೆಯುವ ಸಂಕೀರ್ಣ ವಿನ್ಯಾಸ (ಅಥವಾ ಚಿತ್ರ) ಬಿಡಿಸುವ ಮೂಲಕ ಅಥವಾ ಆಧುನಿಕವಾಗಿ ಕಾಣುವಂತೆ ಹೊಳಪು ತರುವ ಮೂಲಕ, ದೀಪಾವಳಿ ಅಲಂಕಾರಕ್ಕೆ ಸುಧಾರಣೆ ತರಬಹುದು. ಇದು ದೀಪಾವಳಿಗೆ ಸಕಾರಾತ್ಮಕ ಚಿಂತನೆ ತರುವ ಅಲಂಕಾರವಾಗಲಿದೆ.



ದೀಪಾವಳಿಅಲಂಕಾರ

ಅಂತರಂಗವನ್ನು ಬೆಳಗಿಸಿ: ದೀಪಗಳನ್ನು ಬೆಳಗಿಸುವ ಮೂಲಕ ಯಾವುದೇ ಸ್ಥಳವನ್ನು ಆಧ್ಯಾತ್ಮಿಕವಾಗಿಸಬಹುದು. ಪೂಜೆಯ ಪೀಠದ ಮೇಲೆ ದೀಪಗಳ ಸಾಲು ಇರಿಸಬಹುದು ಅಥವಾ ಕೋಣೆಯ ಮೂಲೆಗಳಲ್ಲಿ ಇರಿಸಬಹುದು. ಮೂಲೆಯಲ್ಲಿರಿಸಿದ ದೀಪಗಳು ಅಧ್ಯಾತ್ಮ ಮತ್ತು ಪ್ರಶಾಂತತೆಯ ವಾತಾವರಣ ಸೃಷ್ಟಿಸುತ್ತದೆ.

ರಾತ್ರಿಯನ್ನು ಬೆಳಗಿಸಿ: ದೀಪಾವಳಿಗಾಗಿ ಇನ್ನಷ್ಟು ಆಲಂಕಾರಿಕ ವಸ್ತುಗಳು. ಬೆಳಕು ಚದುರಿಸುವ ಆಕರ್ಷಕ ಪರದೆಗಳು ಮತ್ತು ವಿದ್ಯುತ್ ದೀಪಗಳ ಗೊಂಚಲುಗಳೊಂದಿಗೆ (chandeliers) ನಿಮ್ಮ ದೀಪಾವಳಿ ಅಲಂಕಾರಕ್ಕೆ ಸೊಬಗು ತರಬಹುದು. ಆಲಂಕಾರಿಕ ವಸ್ತುಗಳನ್ನು ತೂಗುಹಾಕುವುದು ಕೂಡ ಆಕರ್ಷಕ. ಉದಾಹರಣೆಗೆ ಲ್ಯಾಂಟರ್ನ್‌ಗಳು ಅಥವಾ ಸ್ಫಟಿಕದಂತಹ ಆಭರಣಗಳನ್ನು ತೂಗುಹಾಕಬಹುದು.

ರಂಗೋಲಿ ಸ್ಪರ್ಧೆ

ದೀಪಾವಳಿ ಪ್ರಯುಕ್ತ ಪೂಜಾ ಎನ್ ಪೂಜಾರಿ ಸಂಸ್ಥೆ (pujanpujari) ದೀಪಗಳ ರಂಗೋಲಿ ಸ್ಪರ್ಧೆ ಆಯೋಜಿಸಿದೆ. ಆಕರ್ಷಕವಾದ ರಂಗೋಲಿಗಳಿಗೆ ಬಹುಮಾನ ಇರಲಿದೆ

ಭಾಗವಹಿಸುವುದು ಹೇಗೆ?

ದೀಪಗಳನ್ನು ಬಳಸಿ ಮನ ಮುಟ್ಟುವ ರಂಗೋಲಿ ರಚಿಸಿ. ನಂತರ ಆ ರಂಗೋಲಿಯ ಫೋಟೊ ಸೆರೆಹಿಡಿದು info@pujanpujari.com ಗೆ ಇಮೇಲ್ ಕಳುಹಿಸಿ. ವಿಜೇತರಿಗೆ ಬಹುಮಾನಗಳನ್ನು ಮನೆಗೆ ಕಳುಹಿಸಲಾಗುತ್ತದೆ. ಫೋಟೊ ಕಳುಹಿಸಲು ಕೊನೆಯ ದಿನಾಂಕ ನವೆಂಬರ್ 14.

- ಪ್ರಥಮ ಬಹುಮಾನ ₹10 ಸಾವಿರ
- ದ್ವಿತೀಯ ₹ 5000 ಸಾವಿರ
- ತೃತೀಯ ₹2,500



ಸಂಭ್ರಮ

ಸಂತಸ, ಸುರಕ್ಷಿತ ದೀಪಾವಳಿ ಆಚರಿಸಿ

ಬೆಳಕಿನ ದೀಪಾವಳಿ ಸಂತಸ ತರುವುದರ ಜತೆಗೆ ಸುರಕ್ಷಿತವಾಗಿಯೂ ಇರಬೇಕು. ಈ ಕಡೆಗೆ ಎಲ್ಲರ ಕಾಳಜಿ ಇರಲಿ. ಪಟಾಕಿ ಸಿಡಿಸುವಾಗ ಕಣ್ಣಿನ ಬಗ್ಗೆ ಆದಷ್ಟು ಜಾಗ್ರತೆ ವಹಿಸಿ.

ಪಟಾಕಿಗಳನ್ನು ಅತಿಯಾಗಿ ಸಿಡಿಸುವುದರಿಂದ ವಾತಾವರಣದಲ್ಲಿ ನೈಟ್ರಸ್ ಆಕ್ಸೈಡ್ ಮತ್ತು ಸಲ್ಫರ್ ಡೈ ಆಕ್ಸೈಡ್‌ಗಳ ಮಟ್ಟ ಹೆಚ್ಚಿರುತ್ತದೆ. ಪಟಾಕಿಗಳನ್ನು ಸಿಡಿಸುವವರಷ್ಟೆ ಅಲ್ಲದೇ ನೋಡುಗರು ಕೆಲವೊಮ್ಮೆ ಅಪಾಯಕ್ಕೆ ಒಳಗಾಗುತ್ತಾರೆ.

ಈ ಬಗ್ಗೆ ಡಾ. ಅಗರ್‌ವಾಲ್ ಕಣ್ಣಿನ ಆಸ್ಪತ್ರೆಯ ವೈದ್ಯೆ ಡಾ.ಬಿಂದಿಯಾ ಹೇಳುವುದಿಷ್ಟು, ಪಟಾಕಿಗಳನ್ನು ಸಿಡಿಸುವವರು ಮಾತ್ರವಲ್ಲದೆ ನೋಡುಗರು ಅಪಾಯದಲ್ಲಿ ಇರುತ್ತಾರೆ. ಪಟಾಕಿ ಸಿಡಿಸುವಾಗ ಜಾಗ್ರತೆ ವಹಿಸದೇ ಇದ್ದರೆ ಕಣ್ಣಿಗೆ ತೀವ್ರ ತೊಂದರೆ ಉಂಟಾಗಬಹುದು. ಅಕ್ಷಿಪಟಲದ ಸವೆತ, ಹಾನಿಯಾಗಿ ಕುರುಡುತನ ಬರಬಹುದು. ಪಟಾಕಿಯ ಹೊಗೆ ಗಂಟಲು ಸೋಂಕಿಗೆ ಕಾರಣವಾಗಬಹುದು. ಇದರಿಂದ ಉಂಟಾಗುವ ಕಿಡಿಗಳು ಬಹಳ ಅಪಾಯಕಾರಿಯಾಗಿದ್ದು, ಚಿನ್ನ ಕರಗಿಸುವಷ್ಟು ತಾಪಮಾನ ಹೊಂದಿರುತ್ತವೆ. ಇದರಿಂದ ತೀವ್ರ ಸುಟ್ಟಗಾಯಗಳು ಉಂಟಾಗಬಹುದು ಎನ್ನುತ್ತಾರೆ.

ಗಾಯಗಳನ್ನು ತಪ್ಪಿಸಲು ಮುನ್ನೆಚ್ಚರಿಕೆ ಕ್ರಮವನ್ನು ಅನುಸರಿಸಿ. ಕಾಂಟ್ಯಾಕ್ಟ್ ಲೆನ್ಸ್ ಧರಿಸುವವರು ಪಟಾಕಿಗಳನ್ನು ಸಿಡಿಸುವಾಗ ಎಚ್ಚರ ವಹಿಸಿ. ಒಂದೊಮ್ಮೆ ಪಟಾಕಿಯ ಕಣದಿಂದ ತೊಂದರೆ ಉಂಟಾದರೆ, ಕಣ್ಣುಗಳನ್ನು ಉಜ್ಜದೇ ಮುಖವನ್ನು ತಣ್ಣೀರಿನಲ್ಲಿ ತೊಳೆಯಿರಿ. ತಕ್ಷಣ ವೈದ್ಯಕೀಯ ನೆರವು ಪಡೆಯಿರಿ. ರಾಸಾಯನಿಕಗಳಿಗೆ ಕಣ್ಣನ್ನು ಒಡ್ಡಿಕೊಂಡರೆ ಅವುಗಳಿಗೆ 30 ನಿಮಿಷಗಳ ಕಾಲ ನೀರು ಹಾಕಿ ತೊಳೆಯಿರಿ. ವೈದ್ಯರ ಸೂಚನೆಯಿಲ್ಲದೇ ಅಂಗಡಿಯಲ್ಲಿ ಸಿಗುವ ಔಷಧಿಗಳನ್ನು ಬಳಸುವುದನ್ನು ತಪ್ಪಿಸಿ. ಮೇಲ್ವಿಚಾರಣೆಯಿಲ್ಲದೆ ಮಕ್ಕಳ ಕೈಗೆ ಪಟಾಕಿ ಕೊಡಬೇಡಿ. ಪಟಾಕಿಗಳನ್ನು ಸಿಡಿಸುವ ಮೊದಲು ಕನ್ನಡಕಗಳನ್ನು ಬಳಸಿ. ಪಾದಗಳನ್ನು ರಕ್ಷಿಸಲು ಗಟ್ಟಿಯಾದ ಚಪ್ಪಲಿಗಳನ್ನು ಧರಿಸಿ ಎನ್ನುವ ಸಲಹೆ ಅವರದ್ದು.

ರಂಗಭೂಮಿ

ಲೋಕದೃಷ್ಟಿ ಬದಲಿಸಿದ ಸ್ತ್ರೀವಾದ

‘ವಿ ದ ಪೀಪಲ್’, ‘ದಕ್ಲ ಕಥಾದೇವಿ ಕಾವ್ಯ’ ಮತ್ತಿತರ ನಾಟಕಗಳಿಂದ ಕನ್ನಡ ರಂಗಭೂಮಿಯಲ್ಲಿ ಹೊಸ ಸಂಚಲನ ಮೂಡಿಸಿದವರು ನಿರ್ದೇಶಕ ಕೆ.ಪಿ ಲಕ್ಷ್ಮಣ. ತಳ ಸಮುದಾಯಗಳ ದುಃಖ ದುಮ್ಮಾನಗಳಷ್ಟೇ ಅಲ್ಲ ಸೌಂದರ್ಯವನ್ನೂ ರಂಗದ ಮೇಲೆ ತೆರೆದಿಡಬೇಕೆಂಬ ಆಶಯ ಅವರದ್ದು. ಕವಿ, ನಟ, ನಿರ್ದೇಶಕ, ಬೋಧಕ ಹೀಗೆ ಹತ್ತು ಹಲವು ಆಯಾಮಗಳಲ್ಲಿ ತೊಡಗಿಕೊಂಡಿರುವ ಲಕ್ಷ್ಮಣ ಅವರಿಗೆ ಈ ಬಾರಿಯ ಪ್ರತಿಷ್ಠಿತ ಶಂಕರನಾಗ್ ರಂಗಭೂಮಿ ಪ್ರಶಸ್ತಿ ಸಂದಿದೆ. ಈ ಹಿನ್ನೆಲೆಯಲ್ಲಿ ಅವರೊಂದಿಗೆ ನಡೆಸಿದ ಮಾತುಕತೆ ಇಲ್ಲಿದೆ.

ಮಂಜುಶ್ರೀ ಕಡಕೋಳ



● ರಂಗಭೂಮಿಯ ಒಡನಾಟ ಶುರುವಾಗಿದ್ದು ಹೇಗೆ?

ನಾನು ರಂಗಭೂಮಿಗೆ ಬಂದದ್ದು ಬೇರೆಬೇರೆ ಕಾರಣಗಳಿಗಾಗಿ. ನಮ್ಮೂರು ನೆಲಮಂಗಲ ಸಮೀಪದ ಕಾಚನಹಳ್ಳಿ. ಪ್ರತಿವರ್ಷ ನಮ್ಮೂರಿನಲ್ಲಿ ಸಂಪೂರ್ಣ ರಾಮಾಯಣ, ಕುರುಕ್ಷೇತ್ರದ ಪೌರಾಣಿಕ ನಾಟಕಗಳನ್ನು ಆಡಿಸುತ್ತಿದ್ದರು. ಅವುಗಳನ್ನು ನೋಡಿ ಬೆಳೆದ ನನಗೆ ಬಾಲ್ಯದಲ್ಲೇ ನಾಟಕಗಳ ಬಗ್ಗೆ ಒಲವಿತ್ತು. ರಂಗಕ್ಕೆ ಬರಬೇಕೆಂಬ ತುಡಿತ ಸಾಕಾರವಾಗಿದ್ದು ತಿಪಟೂರಿನ ಭೂಮಿ ಹಾಗೂ ನೀನಾಸಂ ಆಯೋಜಿಸಿದ್ದ ರಂಗ ಕಾರ್ಯಾಗಾರದ ಮೂಲಕ. ರಂಗಭೂಮಿಯನ್ನೇ ಕಾಯಕವನ್ನಾಗಿಸಿಕೊಳ್ಳಬೇಕೆಂಬ ಆಸೆ ಮೊಳೆತದ್ದು ಇಲ್ಲಿಯೇ.

● ನೀನಾಸಂನತ್ತ ಆಕರ್ಷಣೆ ಮೂಡಿದ್ದು ಯಾವಾಗ?

ತಿಪಟೂರಿನ ರಂಗ ಕಾರ್ಯಾಗಾರ ರಂಗಭೂಮಿಯತ್ತ ಆಕರ್ಷಣೆ ಬೆಳೆಸಿತ್ತಾದರೂ ಓದು ಮುಗಿದಿರಲಿಲ್ಲ. ಕಾರ್ಯಾಗಾರದಲ್ಲಿ ನೀನಾಸಂನ ವೆಂಕಟರಮಣ ಐತಾಳ, ಭವಾನಿ ಪ್ರಕಾಶ್ ಮತ್ತು ಪ್ರದೀಪ್ ತಿಪಟೂರು ಅವರಂಥ ಮೇಷ್ಟ್ರುಗಳು ಸಿಕ್ಕಿದರು. ಅವರ ಪ್ರಭಾವವಿಂದಾಗಿ ಡಿಪ್ಲೊಮಾ ಎಂಜಿನಿಯರಿಂಗ್ ಮುಗಿಯುತ್ತಿದ್ದಂತೆಯೇ ನೀನಾಸಂಗೆ ಸೇರಿದೆ. ಇದರ ಜತೆಗೆ ಆದಿಮ ಹಾಗೂ ಕೋಟಗಾನಹಳ್ಳಿ ರಾಮಯ್ಯ ಅವರ ಕುರಿತು ಅವರ ಶಿಷ್ಯಂದಿರು ಹೇಳುತ್ತಿದ್ದ ಮಾತುಗಳು ರಂಗಕ್ಕೆ ಬರಲು ಪ್ರೇರಣೆಯಾದವು.

● ಅಂಬೇಡ್ಕರ್ ಓದಿಗೆ ತೆರೆದುಕೊಂಡಿದ್ದು, ಅದನ್ನು ರಂಗಕ್ಕೆ ತರಬೇಕೆಂಬ ತುಡಿತ ಮೂಡಿದ್ದು ಹೇಗೆ?

ಬಾಲ್ಯದಿಂದಲೇ ದಲಿತ ಸಂಘರ್ಷ ಸಮಿತಿ (ಡಿಎಸ್‌ಎಸ್) ಪರಿಚಯವಿತ್ತು. ಡಿಎಸ್‌ಎಸ್ ಹೋರಾಟದ ಹಾಡುಗಳನ್ನು ಕೇಳಿ ಬೆಳೆದವನು ನಾನು. ಅಲ್ಲಿಂದಲೇ ಅಂಬೇಡ್ಕರ್ ಪರಿಚಯವಾದರು. ಆಗ ಇವೆಲ್ಲ ಕಲೆಯ ಮುಖ್ಯಭಾಗವಾಗಹುದು ಎಂದು ಅನಿಸಿರಲಿಲ್ಲ. ಮುಂದೆ ಆದಿಮ, ಜನಮನದಾಟದ ರಂಗ ಪ್ರಯೋಗಗಳಲ್ಲಿ ತೊಡಗಿಸಿಕೊಂಡಾಗ ಬೇರೆ ಬೇರೆ ರೀತಿಯ ಓದಿನ ಹರವು ವಿಸ್ತಾರವಾಗತೊಡಗಿತು. ಮತ್ತೆ ಮತ್ತೆ ಅಂಬೇಡ್ಕರ್ ಅವರನ್ನು ಓದತೊಡಗಿದಾಗ ತಳಸಮುದಾಯಗಳ ದುಃಖ ದುಮ್ಮಾನಗಳಷ್ಟೆ ಅಲ್ಲ ಅವುಗಳ ಸೌಂದರ್ಯ,ಸಂಸ್ಕೃತಿಯನ್ನು ರಂಗದ ಮೇಲೆ ತರಬೇಕೆನಿಸಿತು.

● ಸಿಂಗಪುರದ ಇಂಟರ್ ಕಲ್ಚರಲ್ ಥಿಯೇಟರ್ ಇನ್‌ಸ್ಟಿಟ್ಯೂಟ್‌ನ (ಐಟಿಐ) ಅನುಭವದ ಬಗ್ಗೆ ಹೇಳಿ...

ಐಟಿಐನಲ್ಲಿದ್ದ ಮೂರು ವರ್ಷಗಳು ನನ್ನ ವೃತ್ತಿ ಜೀವನದ ಮೇಲೆ ಅಗಾಧವಾದ ಪರಿಣಾಮ ಬೀರಿದೆ. ಜಗತ್ತಿನ ಬೇರೆ ಬೇರೆ ಸಂಸ್ಕೃತಿಯ ಜನರೊಂದಿಗಿನ ಒಡನಾಟ ನನ್ನ ದೃಷ್ಟಿಕೋನ ಬದಲಿಸಿತು. ಅಲ್ಲಿ ಮುಖ್ಯವಾಗಿ ಕೇಂದ್ರೀಕೃತವಾಗಿದ್ದ ವಿಷಯ ಸಂಸ್ಕೃತಿ. ಆಗ ಆಗ ನನ್ನ ಸಂಸ್ಕೃತಿ ಯಾವುದು ಎಂಬ ಪ್ರಶ್ನೆ ಕಾಡತೊಡಗಿದಾಗ ಮತ್ತೆ ಅಂಬೇಡ್ಕರ್ ಜತೆಯಾದರು. ಸಿಂಗಪುರಕ್ಕೆ ಹೋಗಲು ಹೈದರಾಬಾದ್ ಮೂಲಕ ಹೋಗಬೇಕಿತ್ತು. ಆಗ ವಿದ್ಯಾರ್ಥಿ ರೋಹಿತ್ ವೇಮುಲ ಪ್ರತಿಭಟನೆ ನಡೆಸುತ್ತಿದ್ದರು. ಸಿಂಗಪುರಕ್ಕೆ ತಲುಪುವಷ್ಟರಲ್ಲಿ ಅವರು ಆತ್ಮಹತ್ಯೆ ಮಾಡಿಕೊಂಡರು. ರೋಹಿತ್ ಬರೆದಿದ್ದ ಪತ್ರ ಓದಿ ತುಂಬಾ ವಿಚಲಿತನಾಗಿದ್ದೆ. ಅದೇ ಪತ್ರವನ್ನಿಟ್ಟುಕೊಂಡು ಸಿಂಗಪುರದಲ್ಲಿ ಫೈರ್ ಫ್ಲೀಸ್ ಏಕವ್ಯಕ್ತಿ ಪ್ರದರ್ಶನವನ್ನು ಇಂಗ್ಲಿಷಿನಲ್ಲಿ ಮಾಡಿದೆ. ಅದು ಸಿಂಗಪುರ ಲಿಟರೇಚರ್ ಫೆಸ್ಟಿವಲ್‌ನಲ್ಲೂ ಪ್ರದರ್ಶನವಾಯಿತು.

ವೇಮುಲನನ್ನು ಕಾಡಿದ್ದು ವ್ಯವಸ್ಥೆಯಲ್ಲಿ ತಾನು ಏಕಾಂಗಿ ಅನ್ನುವಂಥ ಭಾವ.ಅಂಬೇಡ್ಕರ್ ಕೂಡಾ ಏಕಾಂಗಿತನದ ಬಗ್ಗೆ ತುಂಬಾ ಮಾತನಾಡುತ್ತಾರೆ. ದೇಶದಲ್ಲಿ ಈ ರೀತಿಯ ಏಕಾಂಗಿತನ, ಅನಾಥ ಪ್ರಜ್ಞೆಯನ್ನು ಸೃಷ್ಟಿ ಮಾಡುವಂಥ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿದೆ. ಆದರೆ, ಅದರಿಂದ ನಾವು ಪಲಾಯನ ಮಾಡಲಾಗದು. ಅದನ್ನು ಎದುರಿಸಲೇ ಬೇಕು.

ಸಿಂಗಪುರದಲ್ಲಿ ಮೊದಲ ಆರು ತಿಂಗಳು ಕಷ್ಟವೆನಿಸಿ, ವಾಪಸ್ ಬಂದುಬಿಡಬೇಕು ಅನಿಸಿತ್ತು. ಆದರೆ, ರಂಗಭೂಮಿಯಲ್ಲಿ ತೀವ್ರವಾಗಿ ತೊಡಗಿಸಿಕೊಂಡ ಬಳಿಕ ಈ ಏಕಾಂಗಿತನ ಕಡಿಮೆಯಾಯಿತು. ಮೊದಲ ನಾಟಕಕ್ಕೆ ಉತ್ತಮ ಪ್ರತಿಕ್ರಿಯೆ ದೊರೆತಿದ್ದು, ಇದು ನನ್ನಲ್ಲಿ ಬಲ ತುಂಬಿತು. ನನಗೆ ಮುಖ್ಯವಾಗಿ ಅನಿಸಿದ್ದು ಅಂದರೆ, ನಾವು ರಂಗದಲ್ಲಿ ತಳಸಮುದಾಯಗಳ ದುಃಖ ದುಮ್ಮಾನಗಳಷ್ಟೇ ಅಲ್ಲ, ಆ ಸಮುದಾಯಗಳ ಸಂಸ್ಕೃತಿ ಮತ್ತು ಸೌಂದರ್ಯವನ್ನೂ ತೆರೆದಿಡಬೇಕಿದೆ. ಈ ಎಲ್ಲ ಸಮಸ್ಯೆಗಳಾಚೆಗೂ ಈ ಸಮುದಾಯಗಳಿಗೆ ಇರುವ ದೊಡ್ಡ ಜಗತ್ತನ್ನು ಪರಿಚಯಿಸಬೇಕಿದೆ.

● ನಿಮ್ಮ ಪದ್ಯ, ನಾಟಕಗಳಲ್ಲಿ ಅಂಬೇಡ್ಕರ್ ವಾದದ ಜತೆಗೆ ಸ್ತ್ರೀವಾದಕ್ಕೆ ಹೆಚ್ಚು ಒತ್ತು ಕೊಟ್ಟಿದ್ದೀರಿ....


ನನ್ನ ಕುಟುಂಬದಲ್ಲಿ ನಾನು ಹೆಚ್ಚು ಬೆಳೆದಿದ್ದು ಹೆಣ್ಣುಮಕ್ಕಳ ಒಡನಾಟದಲ್ಲಿ. ಅದು ನನ್ನ ತಾಯಿ, ಸಹೋದರಿ, ಹೆಂಡತಿ ಆಗಿರಬಹುದು. ಅಂಬೇಡ್ಕರ್ ಕೂಡಾ ನಿಜದ ಅರ್ಥದಲ್ಲಿ ದೊಡ್ಡ ಸ್ತ್ರೀವಾದಿ. ಅದು ನನ್ನನ್ನು ತುಂಬಾ ಪ್ರಭಾವಿಸಿದೆ. ನಾನು ಸ್ತ್ರೀವಾದಿ ಅಲ್ಲವೋ ಇಲ್ಲವೋ ಗೊತ್ತಿಲ್ಲ. ಆದರೆ, ಅದರಲ್ಲಿ ನನ್ನ ಬಿಡುಗಡೆಯ ಸ್ಪೇಸ್ ಕೂಡಾ ಇದೆ. ಇದು ಸರಳವಾದ ಪ್ರಕ್ರಿಯೆ ಅಲ್ಲ. ಸ್ತ್ರೀಲೋಕದ ಒಡನಾಟ ನನ್ನ ಇಡೀ ಸಂವೇದನೆ ಮತ್ತು ಪ್ರಜ್ಞೆಯನ್ನು ರೂಪಿಸಿದೆ. ಅಂತೆಯೇ ಲೋಕದೃಷ್ಟಿಯನ್ನೂ ಬದಲಿಸಿದೆ. ಇದರ ಜತೆಗೆ ಅಂಬೇಡ್ಕರ್, ಬೆಲ್ ಹುಕ್‌ನಂಥವರು ನನ್ನನ್ನು ಪ್ರಭಾವಿಸಿದ್ದಾರೆ. ನನ್ನ ಕುಟುಂಬ, ನನ್ನೂರಿನ ಹೆಣ್ಣುಮಕ್ಕಳು ಕಲಾ ಪ್ರಪಂಚಕ್ಕೆ ಬಂದರೆ ಇಂತಿಂಥ ವಿಷಯಗಳನ್ನು ಹೇಗೆ ನೋಡಬಹುದು, ಪ್ರಸ್ತುತಪಡಿಸಬಹುದು ಎಂಬುದನ್ನು ಯೋಚಿಸಿ ಅದನ್ನು ರಂಗಕ್ಕೆ ತರಲು ಪ್ರಯತ್ನಿಸುತ್ತೇನೆ.

● ಹೊರದೇಶಗಳ ರಂಗಭೂಮಿಯನ್ನು ನೋಡಿದಾಗ ನಮ್ಮ ರಂಗಭೂಮಿಯ ಬಗ್ಗೆ ಏನನ್ನಿಸುತ್ತದೆ?

ರಾಜ್ಯದ ರಂಗಶಾಲೆಗಳಲ್ಲಿರುವ ಪಠ್ಯಗಳು ಸಮಕಾಲೀನವಾಗಬೇಕಿದೆ. ನಾವಿನ್ನೂ ಹಿಂದಿನ ಪಠ್ಯಕ್ರಮಗಳನ್ನು ಅನುಸರಿಸುತ್ತಿದ್ದೇವೆ. ಇಲ್ಲಿನ ರಂಗಶಾಲೆಗಳಲ್ಲಿ ಒಂದು ವರ್ಷದ ಕೋರ್ಸ್‌ಗಳಿವೆ. ಆದರೆ, ವಿದ್ಯಾರ್ಥಿಗಳಿಗೆ ಆ ಸಮಯದಲ್ಲಿ ಕಸುಬುದಾರಿಕೆ ಕಲಿಯಲಾಗದು. ಆಧುನಿಕ ಕಾಲಕ್ಕೆ ಬೇಕಾದ ಪಠ್ಯಕ್ರಮವನ್ನು ನಾವು ಒಳಗೊಳ್ಳಬೇಕಿದೆ. ಹೊಸ ರೀತಿಯ ಪಠ್ಯಕ್ರಮ ರೂಪುಗೊಳ್ಳಬೇಕಾದರೆ ನಾವು ಕಲಿಸುವ ರೀತಿ, ಕಲಿಸುವ ಪಠ್ಯ, ಮಾಡುವ ನಾಟಕ, ಸಿನಿಮಾ, ಕಥೆಗಳಲ್ಲಿ ಬೇರೆ ರೀತಿಯ ಪಲ್ಲಟಗಳು ಆಗಬೇಕಿದೆ. ಆ ಪಲ್ಲಟಕ್ಕೆ ಬೇಕಾಗಿರುವ ಮಾರ್ಗವನ್ನು ಅವರವರೇ ವೈಯಕ್ತಿಕವಾಗಿ ಆಯ್ಕೆ ಮಾಡಿಕೊಳ್ಳಬೇಕು. ನನಗೆ ದಾರಿ ಕಂಡುಕೊಳ್ಳಲು ಇರುವ ಮಾರ್ಗ ಅಂಬೇಡ್ಕರ್. ಅವರು ರಾಜಕಾರಣದ ಐಕಾನ್ ಮಾತ್ರವಲ್ಲ ಸಾಂಸ್ಕೃತಿಕ ನಾಯಕರೂ ಹೌದು. ನನ್ನ ಆಯ್ಕೆಯೇ ಎಲ್ಲರ ಆಯ್ಕೆ ಆಗಿರಬೇಕಿಲ್ಲ. ❖

ಸಿನಿ ಹನಿ

ಸಂಕ್ರಾಂತಿಗೆ ‘ಕ್ಯಾಪ್ಟನ್ ಮಿಲ್ಲರ್’


ಧನುಷ್

ತಮಿಳಿನ ಖ್ಯಾತ ನಟ ಧನುಷ್ ಹಾಗೂ ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ಅಭಿನಯದ ‘ಕ್ಯಾಪ್ಟನ್ ಮಿಲ್ಲರ್’ ಸಿನಿಮಾ ಬಿಡುಗಡೆ ದಿನಾಂಕ ಘೋಷಣೆಯಾಗಿದೆ.

2024ರ ಸಂಕ್ರಾಂತಿ ಹಬ್ಬದಂದು (ಜನವರಿ 2ನೇ ವಾರ) ಸಿನಿಮಾ ತೆರೆಕಾಣಲಿದೆ ಎಂದು ಚಿತ್ರತಂಡ ಘೋಷಿಸಿದೆ. ಈ ಹಿಂದೆ ಡಿಸೆಂಬರ್‌ನಲ್ಲಿ ಸಿನಿಮಾ ಬಿಡುಗಡೆಯಾಗಲಿದೆ ಎಂದು ಘೋಷಿಸಲಾಗಿತ್ತು. ‘ಕ್ಯಾಪ್ಟನ್ ಮಿಲ್ಲರ್’ ಸಿನಿಮಾವನ್ನು ಅರುಣ್ ಮಾದೇಶ್ವರನ್ ನಿರ್ದೇಶನ ಮಾಡಿದ್ದು, ಇದು ಧನುಷ್ ಅವರ ವೃತ್ತಿಜೀವನದ ಅತ್ಯಂತ ಬಿಗ್ ಬಜೆಟ್ ಸಿನಿಮಾ ಎಂದು ಗುರುತಿಸಿಕೊಂಡಿದೆ. ಈಗಾಗಲೇ ಬಿಡುಗಡೆಯಾಗಿರುವ ಚಿತ್ರದ ಟೀಸರ್ ಪ್ರೇಕ್ಷಕರನ್ನು ಸೆಳೆದಿದ್ದು, ಈ ಪ್ಯಾನ್ ಇಂಡಿಯಾ ಚಲನಚಿತ್ರವು 2024ರ ಸಂಕ್ರಾಂತಿಯಂದು ಬಿಡುಗಡೆಯಾಗಲಿದೆ.

ಈ ಸಿನಿಮಾವನ್ನು 1930-40ರ ಬ್ಯಾಕ್‌ಡ್ರಾಪ್‌ನಲ್ಲಿ ಚಿತ್ರೀಕರಿಸಲಾಗಿದೆ. ‘ಜೈಲರ್’ ಸಿನಿಮಾ ಬಳಿಕ ಶಿವರಾಜ್‌ಕುಮಾರ್ ನಟಿಸಿರುವ ಎರಡನೇ ತಮಿಳು ಸಿನಿಮಾ ಇದಾಗಿದೆ. ಸಂದೀಪ್ ಕಿಶನ್, ಪ್ರಿಯಾಂಕಾ ಅರುಳ್ ಮೋಹನ್ ಮುಂತಾದವರು ನಟಿಸಿದ್ದಾರೆ. ❖

‘ದಿ ವೆಕೆಂಟ್ ಹೌಸ್’ ನ.17ಕ್ಕೆ ತೆರೆಗೆ


ಎಸ್ತರ್ ನರೋನ್ಹಾ

ಗ್ಲ್ಯಾಮರ್ ಪಾತ್ರಗಳ ಮೂಲಕ ಸದ್ದು ಮಾಡಿರುವ ನಟಿ ಎಸ್ತರ್ ನರೋನ್ಹಾ ಆ್ಯಕ್ಷನ್ ಕಟ್ ಹೇಳಿರುವ ‘ದಿ ವೆಕೆಂಟ್ ಹೌಸ್’ ಸಿನಿಮಾ ನ.17ರಂದು ತೆರೆಕಾಣಲಿದೆ.

‘ನಾವಿಕ’, ‘ಅತಿರಥ’, ‘ಲೋಕಲ್ ಟ್ರೈನ್’, ‘ಲಂಕೆ’, ‘ಇನಾಮ್ದಾರ್’ ಸೇರಿದಂತೆ ಹಲವು ಕನ್ನಡ ಸಿನಿಮಾಗಳಲ್ಲಿ ನಟಿಸಿರುವ ಎಸ್ತರ್, ಈ ಸಿನಿಮಾ ಮೂಲಕ ನಿರ್ದೇಶಕಿಯಾಗಿ ಬಡ್ತಿ ಪಡೆದಿದ್ದಾರೆ. ‘ಇದು ಹಾರರ್ ಸಿನಿಮಾವಲ್ಲ. ಇದೊಂದು ಖಾಲಿ ಮನೆ ಸುತ್ತ ಸಾಗುವ ಕಥೆ. ಈಗಿನ ಪ್ರೇಕ್ಷಕರಿಗೆ ಬಹಳ ಹತ್ತಿರವಾಗುವ ಸಿನಿಮಾವಿದು. ಪ್ರೀತಿ ಮತ್ತು ಭಾವನೆಗಳನ್ನು ಸೇರಿಸಿ ಹೆಣೆದ ಕಥೆ ಇದಾಗಿದೆ. ನಿರ್ದೇಶನ ಖುಷಿ ನೀಡಿದೆ. ನನ್ನ ಆಲೋಚನೆಗಳನ್ನು ನಾನು ನೇರವಾಗಿ ಹೇಳುವ ಸ್ವಾತಂತ್ರ್ಯ ಸಿನಿಮಾದಲ್ಲಿ ಸಿಕ್ಕಿದೆ. ನಾನು ರಂಗಭೂಮಿಗೆ ಓರ್ವ ಗಾಯಕಿಯಾಗಿಯೇ ಹೆಜ್ಜೆ ಇಟ್ಟಿದ್ದೆ. ಹೀಗಾಗಿ ಈ ಸಿನಿಮಾದಲ್ಲಿ ಸಂಗೀತ ನಿರ್ದೇಶಕಿಯಾಗಿಯೂ ಕಾರ್ಯನಿರ್ವಹಿಸಿದ್ದೇನೆ. ಇದು ನೈಜ ಘಟನೆ ಆಧಾರಿತ ಚಿತ್ರವಲ್ಲ’ ಎನ್ನುತ್ತಾರೆ ಎಸ್ತರ್.

ಕನ್ನಡ ಹಾಗೂ ಕೊಂಕಣಿ ಭಾಷೆಯಲ್ಲಿ ಮೂಡಿಬಂದಿರುವ ಈ ಚಿತ್ರಕ್ಕೆ ನರೇಂದ್ರ ಗೌಡ ಛಾಯಾಚಿತ್ರಗ್ರಹಣವಿದ್ದು, ವಿಜಯ್ ರಾಜ್ ಸಂಕಲನವಿದೆ. ಸಿನಿಮಾವನ್ನು ಬಹುತೇಕ ಮಂಗಳೂರಿನಲ್ಲಿ ಚಿತ್ರೀಕರಣ ಮಾಡಲಾಗಿದೆ. ‘ಉಸಿರಿಗಿಂತ ನೀನೇ ಹತ್ತಿರ’ ಎಂಬ ಸಿನಿಮಾ ಮೂಲಕ ಸ್ಯಾಂಡಲ್‌ವುಡ್‌ಗೆ ಹೆಜ್ಜೆ ಇಟ್ಟಿದ್ದ ಎಸ್ತರ್, ಬಳಿಕ ತೆಲುಗು, ತುಳು ಸಿನಿಮಾಗಳಲ್ಲೂ ನಟಿಸಿದ್ದಾರೆ. ❖

20ರಿಂದ ‘ಶಂಕರ್‌ನಾಗ್ ನಾಟಕೋತ್ಸವ’

ಸ್ಮರಣೆ



ರಂಗಪಯಣ ತಂಡವು ನಗರದಲ್ಲಿ ಶಂಕರ್‌ನಾಗ್ ನಾಟಕೋತ್ಸವವನ್ನು ಐದು ದಿನಗಳ ಕಾಲ ಹಮ್ಮಿಕೊಂಡಿದೆ. ಉದ್ಘಾಟನಾ ಸಮಾರಂಭವು ನ.20ರಂದು ನಡೆಯಲಿದ್ದು, ರಂಗಗೀತೆ ಗಾಯನ ನಡೆಯಲಿದೆ. ಕಾರ್ಯಕ್ರಮದಲ್ಲಿ ಕೆ.ವೈ. ನಾರಾಯಣಸ್ವಾಮಿ, ಎಚ್.ಎನ್.ಆರತಿ, ಸುಬ್ಬು ಹೊಲೆಯಾರ್, ರಘುನಂದನ್ ಬಿ.ಆರ್, ಅರುಣ್ ಸಾಗರ್ ಇರಲಿದ್ದಾರೆ. ಶಶಿಧರ್ ಅಡಪ ಅವರಿಗೆ ರಂಗಗೌರವ ಸಲ್ಲಿಸಲಾಗುತ್ತದೆ.

- ಸಂಜೆ 7.30ಕ್ಕೆ ಸೋಮಾಲಿಯದ ಕಡಲುಗಳ್ಳರು ನಾಟಕ ಪ್ರದರ್ಶನ ನಡೆಯಲಿದೆ. ರಚನೆ/ಸಂಗೀತ/ ನಿರ್ದೇಶನ –ರಾಜ್‌ಗುರು
- 21 ರಂದು ಸಂಜೆ 5ಕ್ಕೆ – ಪ್ರವೀಣ್ ಬಿ.ಎಂ ಅವರಿಂದ ಕಾವ್ಯವಾಚನ, ನನ್ನೊಳಗಿನ ಕಡಲು ಪುಸ್ತಕ ಬಿಡುಗಡೆ ಸಮಾರಂಭ. ಪುಸ್ತಕದ ಕುರಿತು: ಕೋಟಿಗಾನಹಳ್ಳಿ ರಾಮಯ್ಯ. ಅಧ್ಯಕ್ಷತೆ: ಚಂದ್ರಶೇಖರ ಮೂರ್ತಿ, ಸಿದ್ಧಾರ್ಥ್ ಆನಂದ್ ಮಾಲೂರು.
- ಸಂಜೆ 7.15ಕ್ಕೆ ಬದುಕು ಜಟಕಾ ಬಂಡಿ: ರಚನೆ /ರಾಜ್‌ಗುರು– ವಿನ್ಯಾಸ ಮತ್ತು ನಿರ್ದೇಶನ– ಕೃಷ್ಣಮೂರ್ತಿ ಕವತ್ತಾರ್– ಸಾತ್ವಿಕ ತಂಡದ ಅಭಿನಯ.
- 22ರಂದು ಸಂಜೆ 5ಕ್ಕೆ :‘ನಾಗರಕಟ್ಟೆ ವೇದಿಕೆ’– ಶಂಕರ್‌ನಾಗ್ ಅವರ ಜತೆಗಿನ ನೆನಪಿನ ಬುತ್ತಿ. ಬಿ.ಎಂ.ಗಿರಿರಾಜ್. ಸಂಜೆ 6ಕ್ಕೆ ನಾಟಕ– ರೋಹಿತ್ ವೇಮುಲ ಬದುಕ್ಕನಾಧರಿಸಿದ ರಂಗಪ್ರಸ್ತುತಿ ನಕ್ಷತ್ರದ ಧೂಳು– ರಚನೆ: ಹರ್ಷಕುಮಾರ್ ಕುಗ್ವೆ, ನಿರ್ದೇಶನ: ಪ್ರವೀಣ್ ರೆಡ್ಡಿ ಗುಂಜಹಳ್ಳಿ. ಸಂಜೆ 7.30ಕ್ಕೆ – ಗುಲಾಬಿ ಗ್ಯಾಂಗ್ ನಾಟಕ ಪ್ರದರ್ಶನ. ರಂಗರೂಪ:ಪ್ರವೀಣ್ ಸೂಡ. ರಚನೆ/ ಸಂಗೀತ/ನಿರ್ದೇಶನ: ರಾಜ್‌ಗುರು
- 23ರಂದು ಸಂಜೆ 5ಕ್ಕೆ ಕಾವ್ಯಕಾರಣ– ಅಧ್ಯಕ್ಷತೆ: ಕೆ.ವೈ.ನಾರಾಯಣಸ್ವಾಮಿ. ಕಾವ್ಯದ ಕುರಿತು: ದಯಾ ಗಂಗನಘಟ್ಟ. ಭಾಗವಹಿಸುವ ಕವಿಗಳು: ರೂಮಿ ಹರೀಶ್, ಉಮಾ ವೈ.ಜಿ, ಅಶ್ವಿನಿ ಬೋಧ್, ಯಂಶ ಬೆಂಗಿಲ, ವಿಕಾಸ ಮೌರ್ಯ, ಪುನೀತ್ ತಥಾಗತ, ಯತಿರಾಜ್ ಬ್ಯಾಲಹಳ್ಳಿ, ಮಂಜುಳಾ ಕಿರುಗಾವಲು, ಮಂಜುನಾರಾಯಣ್, ಸ್ಫೂರ್ತಿ ಹರವು, ವನಿತಾ ಪಿ, ವಿಶಾಲ್ ಮಾಸ್ಟರ್, ಕ.ನಾ. ವಿಜಯ್‌ಕುಮಾರ್. ಸಂಜೆ 6ಕ್ಕೆ– ಸಂತ ಶಿಶುನಾಳ ಶರೀಫ ಹಾಗೂ ದ.ರಾ.ಬೇಂದ್ರೆ ವಿರಚಿತ ಹಾಡುಗಳ ಹಬ್ಬ
- ಸಂಜೆ 7ಕ್ಕೆ ಮಹಾಬಲಯ್ಯನ ಕೋಟು ನಾಟಕ ಪ್ರದರ್ಶನ: ನಮ್ಮಹಳ್ಳಿ ಥಿಯೇಟರ್ ತಂಡದಿಂದ. ರಚನೆ/ ನಿಕೋಲಾಯ್ ಗೋಗಲ್. ರಂಗರೂಪ/ ನಿರ್ದೇಶನ : ಪ್ರೊ ಎಸ್. ಸಿ. ಗೌರಿಶಂಕರ್.
- 24ಕ್ಕೆ ಸಮಾರೋಪ ಸಮಾರಂಭ: ಸಂಜೆ 5ಕ್ಕೆ ರಂಗಗೀತೆಗಳು. ಕಾರ್ಯಕ್ರಮದಲ್ಲಿ : ಮೈಮ್ ರಮೇಶ್, ಬೈರಮಂಗಲ ರಾಮೇಗೌಡ್ರು, ಎಚ್.ಎಲ್.ಪುಷ್ಪ, ಮಾಗಡಿ ಗಿರೀಶ್. 7.30ಕ್ಕೆ ನಾಟಕ: ಆಲ್ ರೈಟ್ ಮಂತ್ರ ಮಾಂಗಲ್ಯ. ರಚನೆ: ಗಣೇಶ್ ಅಮೀನಗಡ, ಜಿಪಿಐಇಆರ್ ರಂಗತಂಡದಿಂದ ಅಭಿನಯ. ನಿರ್ದೇಶನ: ಮೈಮ್ ರಮೇಶ್ ರಂಗಾಯಣ.

ಕಾರ್ಯಕ್ರಮ ನಡೆಯುವ ಸ್ಥಳ **ರವೀಂದ್ರ ಕಲಾಕ್ಷೇತ್ರ**


ರಿಶಿ ಹಿರೇಮಠ್, ಸಂಗೀತಾ

‘ಬರ್ಗೆಟ್ ಬಸ್ಯಾ’ ಡಬ್ಬಿಂಗ್ ಮುಕ್ತಾಯ

ಯರ್ರಂ ರೆಡ್ಡಿ ಪಿಚ್ಚರ್ ಸಂಸ್ಥೆಯಡಿ ವೈ.ನಾಗಾರ್ಜುನ ರೆಡ್ಡಿ ನಿರ್ಮಿಸುತ್ತಿರುವ ‘ಬರ್ಗೆಟ್ ಬಸ್ಯಾ’ ಚಿತ್ರದ ಡಬ್ಬಿಂಗ್ ಕಾರ್ಯ ಪೂರ್ಣಗೊಂಡಿತು.

ಈ ಚಿತ್ರವನ್ನು ರಿಶಿ ಹಿರೇಮಠ್ ನಿರ್ದೇಶಿಸಿದ್ದು, ನಾಯಕನಾಗಿಯೂ ಅಭಿನಯಿಸುತ್ತಿದ್ದಾರೆ.

ಹಿರೇಮಠ್ ಕೆಲವು ನುರಿತ ನಿರ್ದೇಶಕರ ಬಳಿ ಕೆಲಸ ಕಲಿತು ಕೆಲವು ಕಿರು ಚಿತ್ರಗಳನ್ನು ಮಾಡಿದ್ದಾರೆ. ಚಿತ್ರದ ನಾಯಕಿ ಸಂಗೀತ. ಎನ್.ಸ್ವಾಮಿ ಮೊದಲ ಬಾರಿಗೆ ಕ್ಯಾಮೆರಾ ಎದುರಿಸುತ್ತಿದ್ದಾರೆ. ಛಾಯಾಗ್ರಹಣ-ಶ್ಯಾಮ್ ಸಾಲ್ವಿನ್, ಸಾಹಿತ್ಯ- ಡಾ.ವಿ.ನಾಗೇಂದ್ರ ಪ್ರಸಾದ್, ಸಂಕಲನ-ಸಿದ್ದು ದಳವಾಯಿ, ಅನುಜ್.ಎಸ್. ಪರಿವೃದ್ ರವರ ಸಂಗೀತವಿದೆ.

‘ಕಂಡ ಕಂಡ ಹುಡುಗಿಯರನ್ನೆಲ್ಲ ಲವ್ ಮಾಡಿ ಎಂದು ಬರ್ಗೆಟ್ ಬಸ್ಯ ಎನ್ನುವ ಪಾತ್ರಧಾರಿ ಅವರನ್ನು ಹಿಂಬಾಲಿಸುವುದರ ಬಗ್ಗೆ’ ಕಥಾವಸ್ತುವಿದೆ. ಇದನ್ನು ಸಂಪೂರ್ಣ ಹಾಸ್ಯ ರೂಪದಲ್ಲಿ ತರಲಾಗಿದೆ. ಈ ಚಿತ್ರದಲ್ಲಿ ಬರುವ 40 ಹುಡುಗಿಯರು ಬಸ್ಯನ ಜೀವನದಲ್ಲಿ ಹಾದುಹೋಗುತ್ತಾರೆ ಎಂದು ಚಿತ್ರತಂಡ ಹೇಳಿಕೊಂಡಿದೆ. ❖

ಟಾಸ್ಕ್ ಮತ್ತು ನಟನಾಮೀಮಾಂಸೆ!

ಒಳ್ಳೆಯ ಕಲಾವಿದ ಹೇಗಿರಬೇಕು? ಅವನು ವ್ಯಕ್ತಪಡಿಸುವ ಭಾವಾಭಿವ್ಯಕ್ತಿ ಪ್ರೇಕ್ಷಕರ ಮೇಲೆ ಪರಿಣಾಮ ಬೀರಬೇಕು. ತನ್ನ ನಟನೆಯ ಮೂಲಕವೇ ಪ್ರೇಕ್ಷಕನ್ನು ಅಳಿಸುವುದು, ನಗಿಸುವುದು, ಕೋಪಗೊಳಿಸುವುದು ಎಲ್ಲವೂ ಒಳ್ಳೆಯ ಕಲಾವಿದನಿಗೆ ಮಾತ್ರ ಸಾಧ್ಯ. ಹೌದು, ಈಗ ಕಲಾವಿದ ಲಕ್ಷಣಗಳ ಕುರಿತಾದ ಚರ್ಚೆ ಯಾಕೆ ಬಂತು ಅಂತೀರಾ? ಖಂಡಿತ ಕಾರಣವಿದೆ. ಆ ಕಾರಣದ ಮೂಲ ಇರುವುದು ಬಹುಜನಪ್ರಿಯ ರಿಯಾಲಿಟಿ ಷೋ ಬಿಗ್‌ಬಾಸ್‌ನಲ್ಲಿ!

ಜಿಯೊ ಸಿನಿಮಾದಲ್ಲಿ ಇಪ್ಪತ್ನಾಲ್ಕು ಗಂಟೆ ನೇರಪ್ರಸಾರವಾಗುತ್ತಿರುವ ಬಿಗ್‌ಬಾಸ್ ರಿಯಾಲಿಟಿ ಷೋದಲ್ಲಿ ಪ್ರತಿದಿನ ಮನೆಯೊಳಗಿನ ಸದಸ್ಯರು ಹಲವು ಬಗೆಯ ಟಾಸ್ಕ್‌ಗಳನ್ನು ಎದುರಿಸಬೇಕಾಗುತ್ತದೆ. ಅದರ ಮೂಲಕ ಮನೆಯೊಳಗೆ ಅವರು ಎಷ್ಟು ದಿನ ಇರಬಹುದು ಎಂಬುದೂ ನಿರ್ಧಾರವಾಗುತ್ತದೆ. ಇತ್ತೀಚೆಗೆ ಬಿಗ್‌ಬಾಸ್ ಸ್ಪರ್ಧಿಗಳಿಗೆ ಒಂದು ಟಾಸ್ಕ್ ಕೊಟ್ಟಿದ್ದರು. ಮನೆಯೊಳಗಿನ ಎರಡು ತಂಡಗಳಲ್ಲಿ ಒಂದು ತಂಡದ ಸದಸ್ಯರು ಕುರ್ಚಿಯ ಮೇಲೆ ಪ್ರತಿಮೆಯ ಹಾಗೆ ಕೂತಿರಬೇಕು. ಎದುರಾಳಿ ತಂಡದ ಸದಸ್ಯರು ಅವರ ಬಳಿಗೆ ತೆರಳಿ ಬಿಗ್‌ಬಾಸ್ ಸೂಚಿಸಿದ ಭಾವ ಮುಖದ ಮೇಲೆ ಮೂಡುವ ಹಾಗೆ ಮಾಡಬೇಕು. ಉದಾಹರಣೆಗೆ ಹಾಸ್ಯಭಾವವನ್ನು ಬಿಗ್‌ಬಾಸ್ ಸೂಚಿಸಿದರೆ ಎದುರಾಳಿ ತಂಡದ ಸದಸ್ಯರು, ಪ್ರತಿಮೆಯ ಹಾಗೆ ಕೂತಿರುವವರ ಬಳಿ ಹೋಗಿ ಅವರನ್ನು ನಗಿಸಬೇಕು. ಹಾಗೆಯೇ ‘ಕೋಪ’, ‘ದುಃಖ’ ಭಾವಗಳನ್ನೂ ಮೂಡಿಸುವ ಹಾಗೆ ಬಿಗ್‌ಬಾಸ್ ಸೂಚಿಸಿದರು.


ಟಾಸ್ಕ್ ಒಂದರಲ್ಲಿ ಬಿಗ್‌ಬಾಸ್ ಸ್ಪರ್ಧಿಗಳು... ಚಿತ್ರ ಕೃಪೆ: ಜಿಯೊ ಸಿನಿಮಾ

ಮನೆಯೊಳಗಿನ ಸ್ಪರ್ಧಿಗಳಲ್ಲಿ ಅರ್ಧಕ್ಕಿಂತ ಹೆಚ್ಚು ಜನರು ಅಭಿನಯದ ಹಿನ್ನೆಲೆಯಿಂದ ಬಂದವರು! ಅಂದರೆ ಕಲಾವಿದರು. ಸಾಕಷ್ಟು ಉತ್ಸಾಹದಿಂದಲೇ ಈ ಟಾಸ್ಕ್‌ನಲ್ಲಿ ಪಾಲ್ಗೊಂಡರು. ಆದರೆ ಇಡೀ ಟಾಸ್ಕ್‌ನಲ್ಲಿ ಯಾರ ಮುಖದಲ್ಲಿಯೂ ಬಿಗ್‌ಬಾಸ್ ಸೂಚಿಸಿದ ಭಾವವನ್ನು ಮೂಡಿಸುವುದು ಸಾಧ್ಯವಾಗಲೇ ಇಲ್ಲ! ಎರಡೂ ತಂಡಗಳು ಇದರಲ್ಲಿ ವಿಫಲರಾದವರು.

ಹಾಸ್ಯಭಾವ ಸೂಚಿಸುವಾಗ ಚಿತ್ರ ವಿಚಿತ್ರ ವೇಷ ತೊಟ್ಟು, ಪ್ರತಿಮೆಯ ಹಾಗೆ ಕೂತಿರುವವರ ಎದುರಿಗೆ ಕುಣಿದಾಡಿದರು. ತಮ್ಮ ಜೋಕಿಗೆ ತಾವೇ ನಕ್ಕರು. ಕೋಪವನ್ನು ತರಿಸಬೇಕೆಂದಾದಾಗ ಹಳೆಯ ನೆನಪುಗಳನ್ನು, ಟಾಸ್ಕ್‌ನಲ್ಲಿ ಆದ ಅವಮಾನಗಳನ್ನು, ವೈಯಕ್ತಿಕ ನಿಂದನೆಗಳನ್ನು ಮಾಡಿದರು.ತಾವೇ ಕೋಪಗೊಂಡು ಕಿರುಚಾಡಿದರು. ದುಃಖಭಾವ ಮೂಡಿಸಬೇಕು ಎಂದಾಗ, ತಾವೇ ಕಣ್ಣೀರು ಹಾಕಿದರು. ಆದರೆ ಎದುರಿನಲ್ಲಿ ಪ್ರತಿಮೆಯಾಗಿ ಕೂತಿರುವವರ ಮುಖದಲ್ಲಿ ಮಾತ್ರ ಯಾವುದೇ ಭಾವ ಮೂಡಲೇ ಇಲ್ಲ!


ಇಂದಿನ ಒಟ್ಟಾರೆ ಮುಖ್ಯವಾಹಿನಿಯ ದೃಶ್ಯ ಮಾಧ್ಯಮ ಮತ್ತು ಪ್ರೇಕ್ಷಕನ ನಡುವಿನ ಸಂಬಂಧಕ್ಕೂ ಒಂದು ರೂಪಕವಾಗಿಯೇ ಕಾಣಿಸುತ್ತಿದೆ. ಇಂದಿನ ಬಹುತೇಕ ಕಲಾವಿದರು ತೆರೆಯ ಮೇಲೆ ತಾವು ಅಳುತ್ತಿದ್ದಾರೆ, ಕೋಪಗೊಳ್ಳುತ್ತಿದ್ದಾರೆ, ತಮ್ಮ ಜೋಕಿಗೆ ತಾವೇ ನಗುತ್ತಿದ್ದಾರೆ.... ಆದರೆ ಎದುರಿಗೆ ಕೂತು ನೋಡುತ್ತಿರುವ ಪ್ರೇಕ್ಷಕನ ಮುಖದಲ್ಲಿ, ಮನಸಲ್ಲಿ ಆ ಭಾವ ಮೂಡಿಸಲು ಸಾಧ್ಯವಾಗುತ್ತಿಲ್ಲ. ಒಂದು ಸಿನಿಮಾ, ಧಾರಾವಾಹಿ ಯಾವುದೇ ಇರಲಿ ಅದು ಪ್ರೇಕ್ಷಕ ಮನಸಲ್ಲಿ ಹಲವು ಭಾವಗಳನ್ನು ಮೂಡಿಸಬೇಕಲ್ಲವೇ? ಅದರ ಬದಲು ತಾವೇ ಅದರಲ್ಲಿ ಮುಳುಗಿ ಹೋದರೆ ಹೊರಗಿನಿಂದ ನೋಡುವವರ ಕಣ್ಣಿನಲ್ಲಿ ಹಾಸ್ಯ, ಹಾಸ್ಯಾಸ್ಪದವಾಗುತ್ತದೆ, ಕೋಪ ವೃಥಾ ಕಿರುಚಾಟವಾಗಿ ಕಾಣುತ್ತದೆ, ದುಃಖ ಗೋಳಾಗಿ ಕಾಣಿಸುತ್ತದೆ. ಜನರ ಭಾವನೆಗಳನ್ನು ಕೆರಳಿಸುವುದನ್ನೇ ಬಂಡವಾಳವಾಗಿಸಿಕೊಂಡಿರುವ ಬಿಗ್‌ಬಾಸ್‌ನ ಭಾಗವಾಗಿ ಇಂಥದ್ದೊಂದು ಟಾಸ್ಕ್ ಬಂದಿದ್ದನ್ನು, ಇನ್ನೊಂದು ರೀತಿಯಲ್ಲಿ, ಬಿಗ್‌ಬಾಸ್ ತನಗೆ ತಾನೇ ಮಾಡಿಕೊಂಡ ಸ್ವವಿಮರ್ಶೆಯಾಗಿಯೂ ನೋಡಬಹುದು. ❖

ಬಿಗ್‌ಬಾಸ್

ಬದಲಾಯ್ತು ವೇಷ; ಮತ್ತೆ ಶುರುವಾಯ್ತು ‘ತುಕಾಲಿ’ ಹಾಸ್ಯ!

ಕಳೆದ ಕೆಲವು ದಿನಗಳಿಂದ ತುಕಾಲಿ ಸಂತೋಷ್ ಗಂಭೀರವಾಗಿಬಿಟ್ಟಿದ್ದರು. ಮೊದಲ ವಾರದಲ್ಲಿ ಅವರು ಮಾಡಿದ ಕಾಮಿಡಿಯ ಕ್ವಾಲಿಟಿ ಬಗ್ಗೆ ಸ್ವತಃ ಕಿಚ್ಚ ಸುದೀಪ್ ಅವರೇ ತರಾಟೆಗೆ ತೆಗೆದುಕೊಂಡಿದ್ದರು. ‘ನಿಮ್ಮ ಕಾಮಿಡಿ ಬೇರೆಯವರ ಮನಸ್ಸನ್ನು ನೋಯಿಸುತ್ತದೆ’ ಎಂಬ ಮಾತು ಪದೇ ಪದೇ ಮನೆಮಂದಿಯ ಬಾಯಲ್ಲಿ ಬರುತ್ತಿತ್ತು. ಇದರಿಂದ ಹಾಸ್ಯ ಮಾಡಲೇ ಹಿಂಜರಿಯುತ್ತಿದ್ದ ತುಕಾಲಿ ಅವರು ಗಂಭೀರವಾಗಿಬಿಟ್ಟಿದ್ದರು. ಮನೆಯೊಳಗಿನ ಸನ್ನಿವೇಶಗಳು, ಟಾಸ್ಕ್‌ಗಳು ಮತ್ತು ಜಗಳಗಳೂ ಅವರು ಗಂಭೀರವಾಗಲು ಕಾರಣವಿರಬಹುದು. ಆದರೆ ಈವತ್ತು ಬಿಗ್‌ಬಾಸ್ ಮನೆಯಲ್ಲಿ ಮತ್ತೆ ನಗೆಯ ಹೊನಲು ಹರಡಿದೆ. ಆ ನಗೆಯ ಅಲೆಯಲ್ಲಿ ಮನೆಯ ಸದಸ್ಯರು ಪರಸ್ಪರ ಭಿನ್ನಾಭಿಪ್ರಾಯಗಳನ್ನು ಮರೆತು ನಕ್ಕು ನಲಿದಿದ್ದಾರೆ. ಆ ನಗುವಿಗೆ ಕಾರಣವಾದವರು ತುಕಾಲಿ ಸಂತೋಷ್!

‘ಬಾರೇ ರಾಜಕುಮಾರಿ’ ಎಂದು ಕಾರ್ತಿಕ್ ಅವರು ತುಕಾಲಿ ಸಂತೋಷ್ ಹೆಗಲ ಮೇಲೆ ಕೈ ಹಾಕಿ ಕರೆದುಕೊಂಡು ಬಂದಾಗ ಇಡೀ ಮನೆಯೇ ದಂಗಾಬಿಟ್ಟಿದೆ. ಯಾಕೆಂದರೆ ತುಕಾಲಿ ಅವರ ವೇಷ ಬದಲಾಗಿತ್ತು! ಅವರು ‘ಚೂಡಿದಾರ ತೊಟ್ಟ ಮರಿಜಿಂಕೆ’ಯಾಗಿ ಬದಲಾಗಿದ್ದರು! ಬಂದವರು ವರ್ತೂರ್ ಸಂತೋಷ್ ಅವರ ಹೆಗಲಿಗೆ ಕೈ ಹಾಕಿ ನುಲಿಯುತ್ತ, ‘ವರ್ತೂ... ಯಾಕೆ ನನ್ನನ್ನ ಬಿಟ್ಬಿಟ್ಟು ಒಬ್ನೇ ಟೊಮೆಟೊ ಮಾರೋಕೆ ಹೋಗಿದ್ದೆ’ ಎಂದು ಕೇಳಿದಾಗಲಂತೂ ಮನೆಯವರೆಲ್ಲರೂ ಬಿದ್ದು ಬಿದ್ದು ನಗುವಂತಾಯ್ತು.‘ಇನ್ನೊಂದ್ ವಿಷ್ಯ ಗೊತ್ತಾ? ಯಾವಾಗ ನನ್ನ ತಂಗಿ ಸಿಕ್ರೂ ನಾನು ಜೋರಾಗಿ ತಬ್ಕೋತೀನಿ’ ಎಂದು ನಮ್ರತಾ ಕಡೆಗೆ ಹೋದರೆ, ನಮ್ರತಾಕಿರುಚುತ್ತ ಓಡಿಹೋಗಿಬಿಟ್ಟರು.ಅಷ್ಟೇ ಅಲ್ಲ, ಈ ‘ಹೊಸ ಹುಡುಗಿ’ಯಿಂದ ‘ಪಪ್ಪಿ’ ತೆಗೆದುಕೊಳ್ಳಲು ಪೈಪೋಟಿಯೇ ನಡೆದಿದೆ.‘ನೀವೆಷ್ಟು ಬರ್ಗೆಟ್ಟಿದೀರಾ ಅಂತ ಈವಾಗ ಗೊತ್ತಾಗ್ತಿದೆ’ ಎಂದು ಸಂತೋಷ್ ಹಣೆ ಹಣೆ ಚಚ್ಚಿಕೊಳ್ತಿದ್ದಾರೆ. ❖


ಸ್ತ್ರೀವೇಷದಲ್ಲಿ ತುಕಾಲಿ ಸಂತೋಷ್

ಸಿಬಿಲ್ ಸ್ಕೋರ್, ವರದಿ ಎರಡೂ ಉತ್ತಮವಾಗಿರಲಿ

ಇ.ಎಸ್.ಸುಧೀಂದ್ರ ಪ್ರಸಾದ್

ಕ್ರೆಡಿಟ್ ಕಾರ್ಡ್, ಮನೆ ಸಾಲ, ವಾಹನ ಸಾಲ ಹೀಗೆ ಆರ್ಥಿಕ ನೆರವು ನೀಡುವ ಯಾವುದೇ ಹಣಕಾಸು ಸಂಸ್ಥೆಯು ವ್ಯಕ್ತಿಯ ಸಾಲ ಭರಿಸುವ ಸಾಮರ್ಥ್ಯ ನೋಡುವುದು ಸಾಮಾನ್ಯ. ಹಾಗಿದ್ದರೆ ಸಿಬಿಲ್ ಸ್ಕೋರ್ ಅಥವಾ ಸಿಬಿಲ್ ವರದಿ... ಈ ಎರಡರಲ್ಲಿ ಯಾವುದನ್ನು ಪರಿಗಣಿಸಲಾಗುವುದು ಎಂಬ ಗೊಂದಲ ಇದ್ದೇ ಇದೆ.



ಸಿಬಿಲ್ ಜೊತೆಗೆ ಇರುವ ಈ ಎರಡು ಪದಗಳು ಸದಾ ನಮ್ಮಲ್ಲಿ ಗೊಂದಲ ಉಂಟು ಮಾಡುತ್ತವೆ. ಹಲವರು ಈ ಎರಡನ್ನೂ ಒಂದೊಕ್ಕೊಂದು ಪರಸ್ಪರ ತಪ್ಪಾಗಿ ಅರ್ಥೈಸಿಕೊಂಡ ಉದಾಹರಣೆಗಳೂ ಇವೆ. ಆದರೆ ವ್ಯಕ್ತಿಯ ಹಣಕಾಸಿನ ಪಯಣದಲ್ಲಿ ಸಿಬಿಲ್ ಸ್ಕೋರ್ ಮತ್ತು ಸಿಬಿಲ್ ವರದಿ ಎರಡೂ ಪ್ರಮುಖ ಪಾತ್ರ ವಹಿಸುತ್ತವೆ.

ಸಿಬಿಲ್ ಸ್ಕೋರ್: ಸಾಲ ಮರುಪಾವತಿಯ ಸಾಂಖಿಕ ಪ್ರಾತಿನಿಧಿತ್ವವೇ ಸಿಬಿಲ್ ಸ್ಕೋರ್. ಇದು 300ರಿಂದ 900ರವರೆಗೂ ಇದ್ದು, ಸಾಲ ಪಡೆಯುವ ಸಾಮರ್ಥ್ಯವನ್ನು ತಿಳಿಸುತ್ತವೆ. ಸಾಲ ಪಡೆದ ಹಾಗೂ ಸಾಲ ಮರು ಪಾವತಿಸಿದ ಈ ಹಿಂದಿನ ವರದಿಗಳನ್ನು ಆಧರಿಸಿ ಈ ಸಂಖ್ಯೆಯಲ್ಲಿ ಏರಿಳಿತ ಆಗುತ್ತಿರುತ್ತದೆ. ಸಕಾಲಕ್ಕೆ ಸಾಲ ಮರುಪಾವತಿ, ಸಾಲ ಬಳಕೆಯ ಪ್ರಮಾಣ, ಯಾವೆಲ್ಲಾ ಉದ್ದೇಶಗಳಿಗೆ ಸಾಲ ಪಡೆಯಲಾಗಿದೆ ಎಂಬುದನ್ನು ಇದು ಪರಿಗಣಿಸಿ ಸಿಬಿಲ್ ಸ್ಕೋರ್ ದಾಖಲಾಗುತ್ತದೆ. ಸಾಲ ಕೊಡುವ ಹಣಕಾಸು ಸಂಸ್ಥೆಯು ಈ ಸಂಖ್ಯೆಯನ್ನೇ ಅವಲಂಬಿಸಿ ಸಾಲ ನೀಡುತ್ತದೆ.

ಅಂದರೆ, ವ್ಯಕ್ತಿಯ ಸಿಬಿಲ್ ಸ್ಕೋರ್ ಹೆಚ್ಚಿದ್ದಷ್ಟೂ, ಹಣಕಾಸು ಸಂಸ್ಥೆಗೆ ಸಾಲ ಮರಳಿ ಬರುವ ಚಿಂತೆ ಕಡಿಮೆ ಎಂದರ್ಥ. ಇಂಥವರು ಹಣಕಾಸು ಸಂಸ್ಥೆಗೆ ಅಚ್ಚುಮೆಚ್ಚು. ಸಿಬಿಲ್ ಸ್ಕೋರ್ ಉಚಿತವಾಗಿ ನೀಡುವ ಬಹಳಷ್ಟು ಅಂತರ್ಜಾಲ ತಾಣಗಳು ಇವೆ. ಇದರ ಮೂಲಕ ಸಿಬಿಲ್ ವರದಿಯನ್ನು ಪಡೆಯಲು ಸಾಧ್ಯ.

ಸಿಬಿಲ್ ರಿಪೋರ್ಟ್: ಸಾಲ ಪಡೆದ ಹಾಗೂ ಅದನ್ನು ಮರು ಪಾವತಿಸಿದ ವಿವರವಾದ ವರದಿಯೇ ಸಿಬಿಲ್ ರಿಪೋರ್ಟ್. ಇದರಲ್ಲಿ ಸದ್ಯ ಚಾಲ್ತಿಯಲ್ಲಿರುವ ಸಾಲ ಹಾಗೂ ಹಿಂದೆ ಪಡೆದು, ತೀರಿಸಿದ ಅಥವಾ ತೀರಿಸಲಾಗದ ಸಾಲ ಸೇರಿದಂತೆ ಎಲ್ಲಾ ವರದಿಗಳೂ ಇರಲಿವೆ. ಹೀಗಾಗಿ ಸಿಬಿಲ್ ವರದಿಯು ವ್ಯಕ್ತಿಯ ಸಾಲ ಪಡೆಯುವ ಕ್ರಮ, ಅದನ್ನು ತೀರಿಸಿದ ರೀತಿ ಕುರಿತ ಸಮಗ್ರ ವರದಿಯನ್ನು ಒಳಗೊಂಡಿರುತ್ತದೆ. ಇದರೊಂದಿಗೆ ವೈಯಕ್ತಿಕ ಮಾಹಿತಿಯಾದ ಹೆಸರು, ವಿಳಾಸ, ಪಾನ್ ವಿವರಗಳೂ ಇರಲಿವೆ.

ಸಿಬಿಲ್ ಸ್ಕೋರ್ ಎನ್ನುವುದು ಅ ತಕ್ಷಣಕ್ಕೆ ವ್ಯಕ್ತಿಯ ಸಾಲ ಮರುಪಾವತಿಯ ಸಾಮರ್ಥ್ಯ ನೋಡಲು ಪಡೆಯಬಹುದಾದ ಅಂಕಿಅಂಶ. ಆದರೆ ಸಾಲ ನೀಡುವ ಮೊದಲು ಹಣಕಾಸು ಸಂಸ್ಥೆಯೊಂದು ಅರ್ಜಿದಾರರ ಕುರಿತು ಸಂಪೂರ್ಣ ದಾಖಲಾತಿ ಪರಿಶೀಲಿಸುವ ಸಂದರ್ಭದಲ್ಲಿ ಸಿಬಿಲ್ ವರದಿಯನ್ನು ನೋಡುತ್ತದೆ. ಅದನ್ನು ಆಧರಿಸಿ ಸಾಲದ ಮೊತ್ತ ಹಾಗೂ ಮಿತಿ ನಿರ್ಧಾರವಾಗಲಿದೆ.

ಹೀಗಾಗಿ ಆರ್ಥಿಕವಾಗಿ ಸದೃಢರಾಗಿರಬೇಕೆಂದರೆ ವ್ಯಕ್ತಿಯ ಸಿಬಿಲ್ ಸ್ಕೋರ್ ಮತ್ತು ಸಿಬಿಲ್ ವರದಿ ಎರಡೂ ಉತ್ತಮವಾಗಿರಬೇಕು. ಜತೆಗೆ ಸಿಬಿಲ್ ವರದಿ ಮೂಲಕ ನಮ್ಮ ಹಣಕಾಸಿನ ವ್ಯವಹಾರವನ್ನು ಉತ್ತಮಪಡಿಸಿಕೊಳ್ಳಲು ಸಾಧ್ಯ. ಆ ಮೂಲಕ ಸಿಬಿಲ್ ಸ್ಕೋರ್ ಹೆಚ್ಚಿಸಿಕೊಳ್ಳಬಹುದು. ❖



ರಶ್ಮಿಕಾ ಅಲ್ಲ, ನನ್ನ ವಿಡಿಯೊ ಎಂದ ಝರಾ ಪಟೇಲ್

ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ನಟಿ ರಶ್ಮಿಕಾ ಮಂದಣ್ಣ ಅವರ ಡೀಪ್‌ಫೇಕ್ ವಿಡಿಯೊಕ್ಕೆ ಸಂಬಂಧಪಟ್ಟಂತೆ ಆ ವಿಡಿಯೊದಲ್ಲಿರುವ ನಿಜವಾದ ಯುವತಿ ಪ್ರತಿಕ್ರಿಯೆ ನೀಡಿದ್ದಾರೆ.

ಲಿಫ್ಟ್‌ನಲ್ಲಿ ಝರಾ ಪಟೇಲ್ ಎಂಬ ಯುವತಿ ಪ್ರವೇಶ ಮಾಡುತ್ತಿರುವ ವಿಡಿಯೊ ಇಟ್ಟುಕೊಂಡು ಯಾರೊ ಕಿಡಿಗೇಡಿಗಳು, ರಶ್ಮಿಕಾ ಮಂದಣ್ಣ ಮುಖ ಜೋಡಿಸಿ ವಿಡಿಯೊ ಮಾಡಿ ಹರಿಬಿಟ್ಟಿದ್ದರು. ಇದೊಂದು ಡೀಪ್‌ಫೇಕ್ ವಿಡಿಯೊ ಆಗಿದ್ದು ಹೊರದೇಶದಲ್ಲಿರುವ ಭಾರತೀಯ ಮೂಲದ ಸೋಶಿಯಲ್ ಮೀಡಿಯಾ ಇನ್‌ಫ್ಲುಯೇನ್ಸರ್ ಝರಾ ಪಟೇಲ್ ಎನ್ನುವ ಯುವತಿಗೆ ಸಂಬಂಧಿಸಿದ್ದು ಎಂದು ಬಹಿರಂಗವಾಗಿದೆ.

ತುಂಬಾ ಭಯ ಆಗುತ್ತಿದೆ: ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಈ ವಿಡಿಯೊ ಬಗ್ಗೆ ಆಘಾತ ವ್ಯಕ್ತಪಡಿಸಿ ಪೋಸ್ಟ್ ಹಂಚಿಕೊಂಡಿರುವ ಝರಾ ಪಟೇಲ್ ಅವರು, 'ವಿಡಿಯೊ ನೋಡಿ ನನ್ನ ಮನಸ್ಸು ತೀವ್ರ ಆಘಾತಗೊಂಡಿದೆ' ಎಂದಿದ್ದಾರೆ. 'ಸಾಮಾಜಿಕ ಮಾಧ್ಯಮಗಳಲ್ಲಿ ಮಹಿಳೆಯರು ಮತ್ತು ಯುವತಿಯರ ಭವಿಷ್ಯದ ಬಗೆಗಿನ ಚಿಂತೆಯನ್ನು ಈ ವಿಡಿಯೊ ಹುಟ್ಟುಹಾಕಿದೆ. ಭವಿಷ್ಯ ನೋಡಿದರೆ ತುಂಬಾ ಭಯವಾಗುತ್ತಿದೆ' ಎಂದಿದ್ದಾರೆ. ನನ್ನ ವಿಡಿಯೊಕ್ಕೆ ಭಾರತದ ಜನಪ್ರಿಯ ನಟಿಯೊಬ್ಬರ ಮುಖವನ್ನು ಡೀಪ್‌ಫೇಕ್ ಮಾಡಿ ವಿಡಿಯೊ ಮಾಡಿರುವುದು ನನ್ನ ಗಮನಕ್ಕೆ ಬಂದಿದೆ. ಡೀಪ್‌ಫೇಕ್ ಮಾಡಿರುವುದರಲ್ಲಿ ನನ್ನ ಪಾತ್ರವಿಲ್ಲ. ಇಂಟರ್‌ನೆಟ್‌ನಲ್ಲಿರುವುದೆಲ್ಲ ನಿಜವಲ್ಲ. ಅನುಮಾನ ಬರುವ ವಿಷಯಗಳನ್ನು ದಯವಿಟ್ಟು ಫ್ಯಾಕ್ಟ್ ಚೆಕ್‌ಗೆ ಒಳಪಡಿಸಿ' ಎಂದು ಮನವಿ ಮಾಡಿಕೊಂಡಿದ್ದಾರೆ. ಝರಾ ಪಟೇಲ್ ಅವರು ಲಂಡನ್‌ನಲ್ಲಿ ಇರುವ ಒಬ್ಬ ಬ್ರಿಟಿಷ್ ಇಂಡಿಯನ್ ಇನ್‌ಫ್ಲುಯೆನ್ಸರ್ ಆಗಿದ್ದು ಇವರಿಗೆ ಇನ್‌ಸ್ಟಾಗ್ರಾಂನಲ್ಲಿ 4.5 ಲಕ್ಷಕ್ಕೂ ಅಧಿಕ ಫಾಲೋವರ್‌ಗಳು ಇದ್ದಾರೆ. ❖

ಐಫೋನ್ 15 ಪ್ರೊ ಮ್ಯಾಕ್ಸ್, 15 ಪ್ಲಸ್

ಅವಿನಾಶ್ ಬಿ.

ತಂತ್ರಜ್ಞಾನ

ಆ್ಯಪಲ್ ತನ್ನ 15ನೇ ಸರಣಿಯ ಫೋನ್‌ಗಳನ್ನು ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಬಿಡುಗಡೆ ಮಾಡಿದ್ದು, ಪ್ರಜಾವಾಣಿಗೆ ರಿವ್ಯೂಗೆ ದೊರೆತಿರುವ ಐಫೋನ್ 15 ಪ್ರೊ ಮ್ಯಾಕ್ಸ್ ಎಂಬ ಐಷಾರಾಮಿ ಫೋನ್ ಹಾಗೂ ಸ್ವಲ್ಪ ಕಡಿಮೆ ಬೆಲೆಯ ಐಫೋನ್ 15 ಪ್ಲಸ್ - ಇವೆರಡು ಹೇಗಿವೆ? ಪಕ್ಷಿ ನೋಟ ಇಲ್ಲಿದೆ.

ಐಫೋನ್ 15 ಪ್ರೊ ಮ್ಯಾಕ್ಸ್ ವಿಶಿಷ್ಟವಾದ ಟೈಟಾನಿಯಂ ಚೌಕಟ್ಟು ಹೊಂದಿರುವ ಐಫೋನ್ 15 ಪ್ರೊಮ್ಯಾಕ್ಸ್. ಇದು 6.7 ಇಂಚಿನ ದೊಡ್ಡ ಪರದೆಯೊಂದಿಗೆ, ಇದೀಗ ಸಾರ್ವತ್ರಿಕವಾಗುತ್ತಿರುವ ಯುಎಸ್‌ಬಿ ಟೈಪ್ ಸಿ ಚಾರ್ಜಿಂಗ್ ಪೋರ್ಟ್ ಒಳಗೊಂಡಿದೆ. ಆ್ಯಕ್ಷನ್ ಬಟನ್ ಅನ್ನು ಸ್ಲೈಡ್ ಮಾಡುವ ಬದಲು, ಒತ್ತಿ ಹಿಡಿಯುವಂತೆ ಮಾಡಲಾಗಿದ್ದು, ಅದಕ್ಕೆ ವಿಭಿನ್ನ ಕೆಲಸಗಳನ್ನು ಶಾರ್ಟ್‌ಕಟ್ ರೂಪದಲ್ಲಿ ಅನ್ವಯಿಸಬಹುದಾಗಿದೆ. ಐಫೋನ್ 15 ಸರಣಿಯ ಅತ್ಯಂತ ದುಬಾರಿ ಫೋನ್ ಇದು.



ಎರಡು ಕ್ಯಾಮೆರಾ ಲೆನ್ಸ್ ಇರುವ ಐಫೋನ್ 15 ಪ್ಲಸ್



ತ್ರಿವಳಿ ಕ್ಯಾಮೆರಾ ಲೆನ್ಸ್ ಇರುವ ಐಫೋನ್ 15 ಪ್ರೊ ಮ್ಯಾಕ್ಸ್

ಹಿಂಭಾಗದ ಕವಚ ಪ್ಲಾಸ್ಟಿಕ್‌ನದ್ದಾಗಿದ್ದು, ಐಫೋನ್ ಐಪಿ68 ಪ್ರಮಾಣೀಕೃತವಾಗಿದೆ. ಎಂದರೆ, ಸಾಮಾನ್ಯ ದೂಳು ಹಾಗೂ ಜಲನಿರೋಧಕತೆ ಇದಕ್ಕಿದೆ. ಗಾತ್ರದಲ್ಲಿ ದೊಡ್ಡದೂ, ಹೆಚ್ಚು ತೂಕದ್ದೂ ಆಗಿರುವ ಐಫೋನ್ 15 ಪ್ರೊ ಮ್ಯಾಕ್ಸ್, ಗೇಮ್-ಪ್ರಿಯರಿಗಂತೂ ಅಚ್ಚುಮೆಚ್ಚಿನ ಸಾಧನವಾಗಬಹುದು. ಇದರಲ್ಲಿ ಡ್ಯುಯಲ್ ಸ್ಪೀಕರ್‌ಗಳು ಉತ್ತಮ ಗುಣಮಟ್ಟದ ಧ್ವನಿ ಹೊರಡಿಸುತ್ತವೆ. ಕಪ್ಪು ಟೈಟಾನಿಯಂ, ಬಿಳಿ ಟೈಟಾನಿಯಂ, ನೀಲಿ ಟೈಟಾನಿಯಂ ಹಾಗೂ ನ್ಯಾಚುರಲ್ ಟೈಟಾನಿಯಂ ಬಣ್ಣಗಳಲ್ಲಿ ಐಫೋನ್ 15 ಪ್ರೊ ಮ್ಯಾಕ್ಸ್ ಲಭ್ಯ.

ಹೇಗಿದೆ?

ಸೂಪರ್ ರೆಟಿನಾ ಎಕ್ಸ್‌ಡಿಆರ್ ಡಿಸ್‌ಪ್ಲೇ (ಪರದೆ)ಯಲ್ಲಿ ಚಿತ್ರಗಳೆಲ್ಲವೂ ಅತ್ಯಂತ ನಿಖರವಾಗಿ ಗೋಚರಿಸುತ್ತವೆ. ಫೋಟೊಗ್ರಫಿ ಭಾಷೆಯಲ್ಲಿ ಹೇಳುವುದಾದರೆ ವಸ್ತುವಿನ 'ಡೀಟೇಲ್ಸ್' ತುಂಬ ಚೆನ್ನಾಗಿ ಸೆರೆಯಾಗುತ್ತವೆ. ಬಿಸಿಲಿನಲ್ಲಿಯೂ ಸ್ಕ್ರೀನ್ ನೋಡುವುದರಿಂದ ಕಣ್ಣಿಗೆ ತ್ರಾಸವೇ ಆಗುವುದಿಲ್ಲ. ಸ್ಕ್ರೀನ್ ಸುತ್ತಲಿನ ಕಪ್ಪು ಜಾಗ (ಬೆಝೆಲ್) ತೀರಾ ಕಡಿಮೆ ಇರುವುದರಿಂದ ಚಿತ್ರಗಳ ಪೂರ್ಣ ಗೋಚರತೆ ಸಾಧ್ಯವಾಗಿದೆ. ಡಿಸ್‌ಪ್ಲೇಗೆ ಸಿರಾಮಿಕ್ ಶೀಲ್ಡ್ ರಕ್ಷಣೆಯಿದೆ.

120Hz ಪ್ರೊ-ಮೋಶನ್ ಡಿಸ್‌ಪ್ಲೇ ಅತ್ಯಂತ ಶಕ್ತಿಶಾಲಿ ಗೇಮ್ ಆಡುವುದನ್ನು, ಹೆಚ್ಚು ರೆಸೊಲ್ಯುಶನ್‌ನ ವಿಡಿಯೊ ವೀಕ್ಷಣೆಯನ್ನು ಸುಲಭವಾಗಿಸಿದೆ. ಬ್ರೌಸಿಂಗ್, ಆನಿಮೇಶನ್ ವೀಕ್ಷಣೆ ತೀರಾ ಸುಲಲಿತವಾಗಿದೆ. ಇದಕ್ಕೆ ಪೂರಕವಾಗಿ ಅತ್ಯಾಧುನಿಕ ಐಒಎಸ್ 17 ಕಾರ್ಯಾಚರಣಾ ವ್ಯವಸ್ಥೆಯು ಈ ಸಾಧನವನ್ನು ಮತ್ತಷ್ಟು ಆಪ್ತವಾಗಿಸಿದೆ.

ಎ17 ಪ್ರೊ-ಬಯೋನಿಕ್ ಚಿಪ್‌ಸೆಟ್ ಐಫೋನ್ 15 ಪ್ರೊ ಮ್ಯಾಕ್ಸ್‌ನ ಅತಿದೊಡ್ಡ ವಿಶೇಷತೆ. 6 ಕೋರ್ ಸಿಪಿಯು ಜೊತೆಗೂಡಿ ಇದು ಸಾಧನದ ವೇಗವನ್ನು ಹೆಚ್ಚಿಸಿದೆ. ಗ್ರಾಫಿಕ್ಸ್ ಜಾಸ್ತಿ ಇರುವ ಮೊಬೈಲ್ ಗೇಮ್‌ಗಳಂತೂ ಆಡುವುದಕ್ಕೆ ಅತ್ಯಂತ ಖುಶಿಯಾಗುತ್ತದೆ. ಗೇಮಿಂಗ್ ಕನ್ಸೋಲ್‌ನ ಅನುಭವ ಇದರಲ್ಲಿ ದೊರೆಯುತ್ತದೆ.

ಪ್ರೊ ಸರಣಿಯಲ್ಲಿ ಈ ಬಾರಿ 128ಜಿಬಿ ಆವೃತ್ತಿಯನ್ನು ಕೈಬಿಟ್ಟಿರುವ ಆ್ಯಪಲ್, ಮೂರು ಸ್ಟೋರೇಜ್ ಸಾಮರ್ಥ್ಯದವುಗಳನ್ನಷ್ಟೇ ಮಾರುಕಟ್ಟೆಗೆ ಬಿಟ್ಟಿದೆ. 256GB/512GB/1TB ಸಾಮರ್ಥ್ಯದ ಸ್ಟೋರೇಜ್ ಮಾದರಿಗಳಿವೆ. ಬ್ಯಾಟರಿ ಚೆನ್ನಾಗಿದ್ದು, 27W ವರೆಗಿನ ವೇಗದ ಚಾರ್ಜಿಂಗನ್ನು ಐಫೋನ್ ಬೆಂಬಲಿಸುತ್ತದೆ. 20 ವ್ಯಾಟ್ಸ್ ಚಾರ್ಜರ್ ಮೂಲಕ ಅರ್ಧ ಗಂಟೆಯಲ್ಲಿ 50% ಚಾರ್ಜ್ ಮಾಡಬಹುದು. ರಿವರ್ಸ್ ಚಾರ್ಜಿಂಗ್ ವೈಶಿಷ್ಟ್ಯವೂ ಇರುವುದರಿಂದ ತೀರಾ ಅಗತ್ಯ ಬಿದ್ದರೆ ಬೇರೆ ಸಾಧನಗಳನ್ನು ಐಫೋನ್ ಬ್ಯಾಟರಿಯಿಂದಲೇ ಚಾರ್ಜ್ ಮಾಡಬಹುದು.

ಐಫೋನ್ 15 ಪ್ಲಸ್

ಪ್ರೊ ಮಾಡೆಲ್‌ಗಳ ಹಲವು ವೈಶಿಷ್ಟ್ಯಗಳನ್ನು ತನ್ನದಾಗಿಸಿಕೊಂಡಿರುವ ಐಫೋನ್ 15 ಪ್ಲಸ್ ಸ್ವಲ್ಪ ಕಡಿಮೆ ಬೆಲೆಯಲ್ಲಿ ಲಭ್ಯ. ಟೈಪ್ ಸಿ ಚಾರ್ಜಿಂಗ್ ಪೋರ್ಟ್, ಡೈನಮಿಕ್ ಐಲೆಂಡ್, ಹೊಸ ಚಿಪ್ ಮತ್ತು ವಿನೂತನ ಕ್ಯಾಮೆರಾ ವ್ಯವಸ್ಥೆ ಗಮನ ಸೆಳೆಯುತ್ತದೆ. ಹಿಂಭಾಗದ ಕವಚದಲ್ಲಿ ಹೊಳೆಯುವ ಗ್ಲಾಸೀ ವಿನ್ಯಾಸದ ಬದಲು ಮ್ಯಾಟ್ ಫಿನಿಶ್ ಇದೆ. 6.7 ಇಂಚಿನ XDR OLED ಪ್ಯಾನೆಲ್ ಇದೆ. ಆದರೆ 60Hz ರಿಫ್ರೆಶ್ ರೇಟ್ ಇದೆ. ಡಿಸ್‌ಪ್ಲೇ ಚೆನ್ನಾಗಿದೆ, ಬಿಸಿಲಿನಲ್ಲಿ ಫೋನ್ ನೋಡುವುದೂ ಕಣ್ಣಿಗೆ ಅನುಕೂಲಕರ. ಚಿತ್ರ ಮತ್ತು ವಿಡಿಯೊಗಳ ಅದ್ಭುತವಾದ ವರ್ಣವೈಭವವನ್ನು ಇದರಲ್ಲಿ ಆನಂದಿಸಬಹುದು.

ಕಾರ್ಯನಿರ್ವಹಣೆ ಹೇಗಿದೆ

ಐಫೋನ್ 15 ಪ್ಲಸ್‌ನಲ್ಲಿ 14 ಸರಣಿಯ ಪ್ರೊ ಫೋನ್‌ಗಳಲ್ಲಿದ್ದ ಎ16 ಬಯೋನಿಕ್ ಚಿಪ್ ಅಳವಡಿಸಲಾಗಿದೆ. ಹೀಗಾಗಿ ಬ್ರೌಸಿಂಗ್ ವೇಗವಾಗಿದೆ, ವಿಡಿಯೊ ವೀಕ್ಷಣೆ, ಫೋಟೊಗಳ ವೀಕ್ಷಣೆ ಅತ್ಯಂತ ಸುಲಲಿತವೂ, ಕಣ್ಣಿಗೆ ಹಿತಕರವೂ ಆಗಿದೆ.

ಕ್ಯಾಮೆರಾ

48 ಮೆಗಾಪಿಕ್ಸೆಲ್ ಪ್ರಧಾನ ಕ್ಯಾಮೆರಾದೊಂದಿಗೆ 12MP ಅಲ್ಟ್ರಾ ವೈಡ್ ಆ್ಯಂಗಲ್ ಸೆನ್ಸರ್ ಇದೆ. ಜೊತೆಗೆ 12MP ಸೆಲ್ಫೀ ಕ್ಯಾಮೆರಾ ಇದೆ. ಸಿನಿಮ್ಯಾಟಿಕ್ ವಿಡಿಯೊ ವೈಶಿಷ್ಟ್ಯವಂತೂ ಚೆನ್ನಾಗಿದೆ. ವ್ಯತ್ಯಸ್ತ ಬೆಳಕಿನ ಪರಿಸ್ಥಿತಿಗಳಲ್ಲಿ ಸ್ಥಿರಚಿತ್ರಗಳು, ವಿಡಿಯೊ ಚೆನ್ನಾಗಿಯೇ ಮೂಡಿಬರುತ್ತವೆ. ಪೋರ್ಟ್ರೇಟ್ ಫೋಟೋಗ್ರಫಿ ಗಮನಿಸಬೇಕಾದ ವಿಚಾರ. ಹಿನ್ನೆಲೆಯನ್ನು ಮಬ್ಬಾಗಿಸುವ ವ್ಯವಸ್ಥೆಯಲ್ಲಿ ಉತ್ತಮ ಪೋರ್ಟ್ರೇಟ್ ಫೋಟೊಗಳು ಮೂಡುತ್ತವೆ.

ಬ್ಯಾಟರಿ ಸಾಮಾನ್ಯ ಬಳಕೆಯಲ್ಲಿ ಒಂದುವರೆ ದಿನದ ಚಾರ್ಜ್‌ಗೇನೂ ಅಡ್ಡಿಯಾಗಿಲ್ಲ.

ಕ್ಯಾಮೆರಾ

ಆ್ಯಪಲ್ ಈ ಬಾರಿ 5X ಟೆಲಿಫೋಟೊ ಲೆನ್ಸ್ ಸೇರ್ಪಡೆ ಮಾಡಿದೆ. 48 ಮೆಗಾಪಿಕ್ಸೆಲ್ ಸಾಮರ್ಥ್ಯದ ಪ್ರಧಾನ ಲೆನ್ಸ್, 12 ಮೆಗಾಪಿಕ್ಸೆಲ್‌ನ ಅಲ್ಟ್ರಾವೈಡ್ ಮತ್ತು 12MP ಮ್ಯಾಕ್ರೊ ಲೆನ್ಸ್‌ಗಳ ಮೂಲಕ ಇದರ ಆಟೋ ಫೋಕಸ್ ಸಾಮರ್ಥ್ಯವು ಅತ್ಯುತ್ತಮ ಗುಣಮಟ್ಟದ ಚಿತ್ರಗಳನ್ನು ಸೆರೆಹಿಡಿಯುತ್ತವೆ. ವಿಶೇಷವೆಂದರೆ, ಫೋಟೊ ತೆಗೆದ ಬಳಿಕವೂ ತಿದ್ದುಪಡಿ ಮಾಡಿ ಪೋರ್ಟ್ರೇಟ್ ಮಾದರಿಗೆ (ಹಿನ್ನೆಲೆ ಮಸುಕಾಗಿಸುವ) ಬದಲಾಯಿಸಲು ಐಫೋನ್ ಅನುವು ಮಾಡಿಕೊಡುತ್ತದೆ. ಮುಂಭಾಗದಲ್ಲಿ 12 ಮೆಗಾಪಿಕ್ಸೆಲ್ ಸಾಮರ್ಥ್ಯದ ಸೆಲ್ಫೀ ಲೆನ್ಸ್ ಇದ್ದು, ಇದು ಕೂಡ ಸ್ಪಷ್ಟ ಚಿತ್ರಗಳನ್ನು ಸೆರೆಹಿಡಿಯುತ್ತದೆ. ನೈಟ್ ಮೋಡ್ ಚೆನ್ನಾಗಿ ಕೆಲಸ ಮಾಡುತ್ತದೆ.

ಐಫೋನ್ 15 ಪ್ರೊ ಮ್ಯಾಕ್ಸ್ ಸಾಧನದ ಈಗಿನ ಗರಿಷ್ಠ ಮಾರಾಟ ಬೆಲೆ 256GB ಮಾದರಿಗೆ ₹1,59,900, 512GB ಮಾದರಿಗೆ ₹1,79,900 ಹಾಗೂ 1TB ಸಾಮರ್ಥ್ಯದ ಐಫೋನ್ 15 ಪ್ರೊ ಮ್ಯಾಕ್ಸ್ ಬೆಲೆ ₹1,99,900. ❖

ಮ್ಯೂನಿಕ್‌ನಲ್ಲಿ ರಾಜ್ಯೋತ್ಸವ

ಜರ್ಮನಿಯ ಮ್ಯೂನಿಕ್ ನಗರದಲ್ಲಿ ರಾಜ್ಯೋತ್ಸವ ಆಚರಿಸಲಾಯಿತು. ಕಾನ್ಸುಲೇಟ್ ಜನರಲ್ ಆಫ್ ಇಂಡಿಯಾ - ಮ್ಯೂನಿಕ್ ಸಹಯೋಗ ನೀಡಿತ್ತು.

ಕನ್ನಡ ಸಂಸ್ಕೃತಿಯನ್ನು ಬಿಂಬಿಸುವ ಡೊಳ್ಳು ಕುಣಿತ, ನಾಡಗೀತೆ ಹಾಗೂ ಸಾಂಸ್ಕೃತಿಕ ನೃತ್ಯಗಳೊಂದಿಗೆ ಕಾರ್ಯಕ್ರಮವನ್ನು ಆರಂಭಿಸಲಾಯಿತು. ಡಿ ಫಾರ್ ಡಾನ್ಸ್, ಎಂಟಿಟಿ ಥಿಯೇಟರ್, ನಿತ್ಯಾ ಆರ್ಟ್ ಸೆಂಟರ್, ಸಂವೇದನ್ ಸ್ಟುಡಿಯೋ, ಕನ್ನಡ ಕಲಿ ಕಿಡ್ಸ್ ಕಾರ್ಯಕ್ರಮ ನಡೆಯಿತು. ಆಲ್ ಓಕೆ ಅಲೋಕ್ ಬಾಬು ಅವರ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಪುನೀತ್ ರಾಜ್‌ಕುಮಾರ್ ಅವರನ್ನು ನೆನೆಯುತ್ತ ಕಾರ್ಯಕ್ರಮ ನಡೆಯಿತು.

ಬೊಂಬೆ ಮನೆ, ಭುವನೇಶ್ವರಿಯ ಪಲ್ಲಕ್ಕಿ ಉತ್ಸವ ಹಾಗೂ ಮೈಸೂರು ದಸರೆಯ ಫೋಟೋ ಬೂತ್ ಎಲ್ಲರ ಗಮನ ಸೆಳೆದವು.

ಕಾರ್ಯಕ್ರಮಕ್ಕೆ ಪ್ರಾಯೋಜಕರಾದ ಪಾಟೀಲ್ ಫೈನಾನ್ಸ್, ಡೆಲಿ ತಡ್ಕ, ಸಿಜಿಐ ಮ್ಯುನಿಕ್, ಚಾನೆಲ್ ಸೋಲಾರ್ ಅವರನ್ನು ಸತ್ಕರಿಸಲಾಯಿತು. ❖



ಡೇಟಿಂಗ್ ನಡೆಸುತ್ತಿಲ್ಲ: ಸಾರಾ

ಭಾರತ ಕ್ರಿಕೆಟ್ ತಂಡದ ಆರಂಭಿಕ ಬ್ಯಾಟರ್ ಶುಭಮನ್ ಗಿಲ್ ಅವರೊಂದಿಗೆ ನಾನು ಡೇಟಿಂಗ್ ನಡೆಸುತ್ತಿಲ್ಲ ಎಂದು ಬಾಲಿವುಡ್ ನಟಿ ಸಾರಾ ಅಲಿ ಖಾನ್ ಸ್ಪಷ್ಟಪಡಿಸಿದ್ದಾರೆ.

ನಟ ಸೈಫ್ ಅಲಿ ಖಾನ್ ಅವರ ಪುತ್ರಿ ಹಾಗೂ 'ಕೇದಾರನಾಥ್' ಸಿನಿಮಾ ಖ್ಯಾತಿಯ ಸಾರಾ, ಹಿಂದಿ ಕಿರುತೆರೆಯ ಜನಪ್ರಿಯ 'ಕಾಫಿ ವಿತ್ ಕರಣ್' ಕಾರ್ಯಕ್ರಮದಲ್ಲಿ ಈ ಬಗ್ಗೆ ಮಾತನಾಡಿದ್ದಾರೆ. 8ನೇ ಆವೃತ್ತಿಯ ಈ ಕಾರ್ಯಕ್ರಮಕ್ಕೆ ಅವರು ನಟಿ ಅನನ್ಯಾ ಪಾಂಡೆ ಜೊತೆ ಭಾಗವಹಿಸಿದ್ದರು.

ಸದ್ಯ ಬಿಡುಗಡೆಯಾಗಿರುವ ಕಾರ್ಯಕ್ರಮದ ಪ್ರೊಮೊದಲ್ಲಿ ಗಿಲ್ ಕುರಿತು ಸಾರಾ ಹೇಳಿಕೆ ನೀಡಿದ್ದಾರೆ. ನಿರೂಪಕ ಕರಣ್ ಜೋಹರ್ ಅವರು ಗಿಲ್ ಜೊತೆಗಿನ ಡೇಟಿಂಗ್ ವದಂತಿ ಬಗ್ಗೆ ಪ್ರಶ್ನಿಸಿದ್ದಕ್ಕೆ, 'ನೀವು ಬೇರೊಬ್ಬ ಸಾರಾಳನ್ನು ನೋಡುತ್ತಿದ್ದೀರಿ ಗೆಳೆಯರೇ. ಸಾರಾಳ ಪೂರ್ಣ ಜಗತ್ತು ತಪ್ಪು ತಿಳಿಯಲಾದ ಸಾರಾ ಹಿಂದೆ ಬಿದ್ದಿದೆ' ಎಂದಿದ್ದಾರೆ.



ಸಾರಾ ಅಲಿಖಾನ್

ಗಿಲ್ ಹೆಸರಿನೊಂದಿಗೆ ಮತ್ತೊಬ್ಬಳು 'ಸಾರಾ' ಡೆಂಗಿ ಜ್ವರದಿಂದಿಂದಾಗಿ ಭಾರತ ತಂಡದ ಪರ ಟೂರ್ನಿಯ ಮೊದಲೆರಡು ಪಂದ್ಯಗಳಿಗೆ ಅಲಭ್ಯರಾಗಿದ್ದ ಗಿಲ್, ಇದೀಗ ನಾಯಕ ರೋಹಿತ್ ಶರ್ಮಾ ಜೊತೆಗೂಡಿ ತಂಡಕ್ಕೆ ಉತ್ತಮ ಆರಂಭ ಒದಗಿಸುತ್ತಿದ್ದಾರೆ. ಅವರು ದಿಗ್ಗಜ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಪುತ್ರಿ ಸಾರಾ ತೆಂಡೂಲ್ಕರ್ ಅವರೊಂದಿಗೆ ಡೇಟಿಂಗ್‌ನಲ್ಲಿದ್ದಾರೆ ಎಂಬ ಗುಸುಗುಸು ಕೇಳಿಬರುತ್ತಿದೆ.

ವಿಶ್ವಕಪ್ ಪಂದ್ಯವೊಂದರ ವೇಳೆ ಕ್ರಿಡಾಂಗಣದಲ್ಲಿ ಪ್ರೇಕ್ಷಕರು 'ಸಾರಾ.. ಸಾರಾ..' ಎನ್ನುತ್ತಾ, ಗಿಲ್ ಅವರನ್ನು ಕಿಚಾಯಿಸಿರುವುದು ಬೆಳಕಿಗೆ ಬಂದಿದೆ. ಆ ವೇಳೆ ವಿರಾಟ್ ಕೊಹ್ಲಿ, ಪ್ರೇಕ್ಷಕರತ್ತ ಕೈ ಬೀಸಿ, ಸಹ ಆಟಗಾರನ ಜೆರ್ಸಿ ಮೇಲಿನ ಹೆಸರು (ಗಿಲ್) ತೋರುತ್ತಾ.. ಗಿಲ್ ಎಂದು ಕರೆಯುವಂತೆ ಸನ್ನೆ ಮಾಡಿದ್ದಾರೆ.

ಗಿಲ್ ಸದ್ಯ ಈ ಬಾರಿಯ ವಿಶ್ವಕಪ್‌ನಲ್ಲಿ ಆಡಿರುವ 6 ಪಂದ್ಯಗಳ 6 ಇನಿಂಗ್ಸ್‌ಗಳಿಂದ 2 ಅರ್ಧಶತಕ ಸಹಿತ 219 ರನ್ ಗಳಿಸಿದ್ದಾರೆ. ❖

ಅನಿಯಮಿತ ಹೃದಯ ಬಡಿತ

ಆರೋಗ್ಯ

ಅತಿ ವೇಗದ ಅನಿಯಮಿತ ಹೃದಯ ಬಡಿತ ಪ್ರಕರಣಗಳು (Atrial Fibrillation (AF) ಹೆಚ್ಚುತ್ತಿದ್ದು, ಆರೋಗ್ಯದ ಮೇಲೆ ತೀವ್ರ ತೊಂದರೆಯನ್ನು ಉಂಟು ಮಾಡುತ್ತಿದೆ.

ಈ ಸಮಸ್ಯೆ ಇದ್ದವರಿಗೆ ರಕ್ತನಾಳಗಳಲ್ಲಿ ಸರಾಗವಾಗಿ ರಕ್ತದ ಹರಿವು ಆಗುವುದಿಲ್ಲ. ಹಾಗಾಗಿ ಹೃದಯ ಬಡಿತದಲ್ಲಿ ಏರುಪೇರು ಉಂಟಾಗಲು ಪ್ರಮುಖ ಕಾರಣವಾಗುತ್ತದೆ. ಈ ರೋಗದ ಗಂಭೀರತೆ ಪಾರ್ಶ್ವವಾಯುವಿಗಿಂತ ಐದು ಪಟ್ಟು ಹೆಚ್ಚಿರುತ್ತದೆ. ಹೀಗಾಗಿ ಇದು ರಕ್ತದ ಹೆಪ್ಪುಗಟ್ಟುವಿಕೆಯನ್ನು ಹೆಚ್ಚಿಸುತ್ತದೆ. ಇಂತಹ ಸಮಸ್ಯೆಯ ನಿವಾರಣೆಗೆ ರಕ್ತ ಹೆಪ್ಪುಗಟ್ಟುವಿಕೆಯನ್ನು ಕರಗಿಸುವ ಔಷಧಿಗಳನ್ನು ಬಳಸುವುದು ಸೂಕ್ತವಾಗಿದೆ. ಇದರಿಂದ ಪಾರ್ಶ್ವವಾಯುಗಳನ್ನು ತಡೆಯಲು ಸಾಧ್ಯವಿದೆ.

ಆರಂಭಿಕ ಹಂತದಲ್ಲಿಯೇ ಈ ಏಟ್ರಿಯಲ್ ಫಿಬ್ರಿಲೇಶನ್ ಅನ್ನು ಪತ್ತೆ ಮಾಡಿ ಅದಕ್ಕೆ ಸೂಕ್ತ ಔಷಧಿಗಳನ್ನು ಪಡೆದರೆ ಅಪಾಯದಿಂದ ಪಾರಾಗಬಹುದು. 60 ವರ್ಷಕ್ಕಿಂತ ಮೇಲ್ಪಟ್ಟವರಲ್ಲಿ, ಬೊಜ್ಜು, ಟೈಪ್ 2 ಮಧುಮೇಹ, ಹೃದ್ರೋಗ ಹಾಗೂ ಶ್ವಾಸಕೋಶ ಸಮಸ್ಯೆ, ಹೈಪರ್ ಥೈರಾಯ್ಡ್ ಸಮಸ್ಯೆಗಳಿಂದ ಬಳಲುತ್ತಿರುವವರಲ್ಲಿ ಏಟ್ರಿಯಲ್ ಫಿಬ್ರಿಲೇಷನ್ ಕಂಡುಬರುವ ಸಾಧ್ಯತೆ ಹೆಚ್ಚು.

ಈ ಬಗ್ಗೆ ಮಾತನಾಡಿದ ಬೆಂಗಳೂರಿನ ಮಣಿಪಾಲ್ ಹಾಸ್ಪಿಟಲ್ ನ ಎಚ್‌ಒಡಿ ಡಾ.ರಂಜನ್ ಶೆಟ್ಟಿ ಹೇಳುವುದಿಷ್ಟು 'ನಿತ್ಯ ಏಟ್ರಿಯಲ್ ಫಿಬ್ರಿಲೇಷನ್ ಲಕ್ಷಣವಿರುವ ಸುಮಾರು 5ರಿಂದ 10 ರೋಗಿಗಳ ತಪಾಸಣೆ ನಡೆಸಲಾಗುತ್ತದೆ. ಸಕಾಲದಲ್ಲಿ ರೋಗ ಪತ್ತೆ ಮಾಡದಿದ್ದರೆ ಪಾರ್ಶ್ವವಾಯು ಅಪಾಯವನ್ನು ಎದುರಿಸಬೇಕಾಗುತ್ತದೆ. ಕೆಲವೊಮ್ಮೆ ಮರಣಕ್ಕೆ ತುತ್ತಾಗಬಹುದು. ಅಧಿಕ ತೂಕ , ರಕ್ತದೊತ್ತಡ, ಮಧುಮೇಹ, ನಿದ್ರೆಯಲ್ಲಿ ಉಸಿರುಗಟ್ಟುವಿಕೆ ಅನುಭವ ಹೊಂದಿರುವವರು ಈ ತಪಾಸಣೆಗೆ ಒಳಗಾಗುವುದು ಮುಖ್ಯ. ಏಟ್ರಿಯಲ್ ಫಿಬ್ರಿಲೇಷನ್ ಹೊಂದಿರುವವರಲ್ಲಿ ಸಾಮಾನ್ಯ ಲಕ್ಷಣಗಳೆಂದರೆ, ಆಯಾಸ, ಅನಿಯಮಿತ ಹೃದಯ ಬಡಿತ, ತಲೆ ತಿರುಗುವಿಕೆ, ಮೂರ್ಛೆ, ಉಸಿರಾಟದ ತೊಂದರೆ, ಎದೆನೋವು. ಕೆಲವೊಮ್ಮೆ ಭಾಗಗಳಲ್ಲಿ ಮರಗಟ್ಟುವಿಕೆ, ದೌರ್ಬಲ್ಯ, ಗೊಂದಲ, ಮಾತಿನಲ್ಲಿ ಉಂಟಾಗುವ ತೊಂದರೆಗಳು, ದೃಷ್ಟಿ ಸಮಸ್ಯೆಗಳು, ನಡಿಗೆ ಸಮಸ್ಯೆಗಳು ಉಂಟಾಗಬಹುದು. ಏಟ್ರಿಯಲ್ ಫಿಬ್ರಿಲೇಶನ್ ಮೂರು ಪ್ರಮುಖವಾದ ಔಷಧಿಗಳಿವೆ. ರೇಟ್ ಕಂಟ್ರೋಲ್ ಮೆಡಿಕೇಶನ್ಸ್ (ಹೃದಯ ಬಡಿತದ ವೇಗ ನಿಯಂತ್ರಣಕ್ಕೆ ಸಹಾಯ ಮಾಡುತ್ತದೆ), ರಿದಂ ಕಂಟ್ರೋಲ್ ಮೆಡಿಕೇಶನ್ಸ್ (ಹೃದಯ ಬಡಿತದ ಲಯವನ್ನು ಪುನಃಸ್ಥಾಪಿಸಲು ಕೆಲಸ ಮಾಡುತ್ತದೆ) ಮತ್ತು ರಕ್ತವನ್ನು ತೆಳುವಾಗಿಸುವಂತಹ ಹೆಪ್ಪುನಿರೋಧಕ ಔಷಧಿಗಳು (ರಕ್ತ ಹೆಪ್ಪುಗಟ್ಟುವಿಕೆ ಮತ್ತು ಪಾರ್ಶ್ವ ವಾಯುವಿನ ಅಪಾಯ ಕಡಿಮೆ ಮಾಡಲು ಬಳಸಲಾಗುತ್ತದೆ).

ಮೆಗಾ ಉಳಿತಾಯ ಮತ್ತು ಮೆಗಾ ಬಹುಮಾನಗಳು

ಪೈ ಇಂಟರ್‌ನ್ಯಾಷನಲ್‌ನಲ್ಲಿ ಭರ್ಜರಿ ಹಬ್ಬದ ಮಾರಾಟ



ಬೆಂಗಳೂರು: ಈ ಹಬ್ಬದ ಋತುವಿನಲ್ಲಿಅದ್ಭುತ ಶಾಪಿಂಗ್ ಅನುಭವ ಪಡೆಯಲು ಸಿದ್ಧರಿದ್ದೀರಾ? ಹಾಗಿದ್ದಲ್ಲಿ ಪೈ ಇಂಟರ್‌ನ್ಯಾಷನಲ್‌ಗೆ ಬನ್ನಿ! ಇಲ್ಲಿದೆ ಮೆಗಾ ಹಬ್ಬದ ಮಾರಾಟ!!

ಗೃಹೋಪಯೋಗಿ ವಸ್ತುಗಳ ಮಾರಾಟ ಕ್ಷೇತ್ರದ ಹೆಸರಾಂತ ಪೈ ಇಂಟರ್‌ನ್ಯಾಷನಲ್, ದೀಪಾವಳಿ ಹಬ್ಬದ ಪ್ರಯುಕ್ತ ಗ್ಯಾಜೆಟ್‌ಗಳು, ಪೀಠೋಪಕರಣಗಳು ಮತ್ತು ಗೃಹೋಪಯೋಗಿ ಉಪಕರಣಗಳು ಸೇರಿದಂತೆ ಎಲ್ಲ ರೀತಿ ವಸ್ತುಗಳ ಮೇಲೆ ಉತ್ತಮ ಕೊಡುಗೆಗಳನ್ನು ಪ್ರಕಟಿಸಿದೆ.

ಅದ್ಭುತ ರಿಯಾಯಿತಿಗಳು: ಅತಿ ಕಡಿಮೆ ಬೆಲೆಯ ಮಾರಾಟಕ್ಕೆ ಖ್ಯಾತಿ ಪಡೆದ ಪೈ ಇಂಟರ್‌ನ್ಯಾಷನಲ್‌ನಲ್ಲಿ ಹೊಸ ಫೋನ್, ಸ್ಮಾರ್ಟ್ ಟಿವಿ ಅಥವಾ ಫ್ಯಾನ್ಸಿ ಅಲಂಕಾರಿಕ ಉಪಕರಣಗಳನ್ನು ಖರೀದಿಸಲು ಬಯಸಿದ್ದಲ್ಲಿ ನಿಮಗೆ ಅದ್ಭುತ ರಿಯಾಯಿತಿ ದೊರೆಯಲಿದೆ. ನಿಮಗಿರುವ ತಂತ್ರಜ್ಞಾನ ಬಗೆಗಿನ ಆಸಕ್ತಿ ಸಂಗತಿ ಅರಿತು, ನಿಮ್ಮಲ್ಲಿರುವ ವಸ್ತುಗಳನ್ನು ಅದ್ಭುತ ಡೀಲ್‌ನಲ್ಲಿ ತೆಗೆದುಕೊಂಡು, ಅಪ್‌ಗ್ರೇಡ್ ವಸ್ತುಗಳನ್ನು ಬದಲಿಸಿ ಕೊಡುವ ಮಾರಾಟ ಪದ್ಧತಿಯನ್ನೂ ಸಂಸ್ಥೆ ಅಳವಡಿಸಿಕೊಂಡಿದೆ.

20 ಹೊಸ ಕಾರನ್ನು ಗೆಲ್ಲಿರಿ: ದೀಪಾವಳಿ ಹಬ್ಬದ ವಿಶೇಷ ಮಾರಾಟದಲ್ಲಿ 20 ಹೊಚ್ಚ ಹೊಸ ಹ್ಯುಂಡೈ ಕಾರುಗಳನ್ನು ಗೆಲ್ಲುವ ಅವಕಾಶ ಸಂಸ್ಥೆ ಕಲ್ಪಿಸಿದೆ. ತನ್ನ ಯಾವುದೇ ಶೋರೂಂನಲ್ಲಿ ಖರೀದಿಸಿದ ವಸ್ತುಗಳ ಮೇಲೆ ಗ್ರಾಹಕರು ಕೂಪನ್ ಪಡೆಯಲಿದ್ದಾರೆ. ಲಕ್ಕಿ ಡ್ರಾನಲ್ಲಿ ಕಾರು ಗೆಲ್ಲಬಹುದಾಗಿದೆ.

ಇದು ಪ್ರತಿದಿನ ಮಾಡುವ ಕಾರ್ಯವಲ್ಲ. ಈ ಅವಕಾಶ ತಪ್ಪಿಸಿಕೊಳ್ಳಬೇಡಿ ಎಂದು ಸಂಸ್ಥೆ ಗ್ರಾಹಕರಿಗೆ ಸೂಚ್ಯವಾಗಿ ಹೇಳಿದೆ. ಕಾರನ್ನು ಗೆಲ್ಲದಿದ್ದರೂ ಸಹ ದೊಡ್ಡ ಬಹುಮಾನ ಗೆಲ್ಲುವ ಮತ್ತೊಂದು ಅವಕಾಶವನ್ನೂ ಕಲ್ಪಿಸಿದೆ. ಅದರ ಪ್ರಕಾರ ಒಟ್ಟು 60 ಮಂದಿ ಅದೃಷ್ಟಶಾಲಿಗಳನ್ನು ಲಕ್ಕಿ ಡ್ರಾ ಮೂಲಕ ಆಯ್ಕೆ ಮಾಡಲಾಗುವುದು. ವಿಜೇತ ಗ್ರಾಹಕ ₹ 50,000 ವರೆಗೆ ತಮಗಿಷ್ಟವಾದ ವಸ್ತುಗಳನ್ನು ಶಾಪಿಂಗ್ ಮಾಡುವ ಅದ್ಭುತ ಅವಕಾಶ ನೀಡಿದೆ. ಈ ಋತುವಿನ ಮಾರಾಟ ಅಂತ್ಯದ ವೇಳೆಗೆ ಸುಮಾರು 60 ಸಾವಿರಕ್ಕೂ ಹೆಚ್ಚು ಗ್ರಾಹಕರು ಒಂದಿಲ್ಲೊಂದು ವಸ್ತು ಪಡೆಯಲಿದ್ದಾರೆ.

ಒನ್-ಸ್ಟಾಪ್ ಶಾಪ್: ಅಗತ್ಯದ ಎಲ್ಲ ಎಲೆಕ್ಟ್ರಾನಿಕ್ ವಸ್ತುಗಳನ್ನು ಖರೀದಿಸಲು ಸೂಕ್ತವಾದ ಒನ್-ಸ್ಟಾಪ್ ಶಾಪ್ ಅಂದರೆ ಅದು ಪೈ ಇಂಟರ್‌ನ್ಯಾಷನಲ್ ಶೋರೂಂ. ನಿಮಗಾಗಿ ಖರೀದಿಸಲು, ಉಡುಗೊರೆಯಾಗಿ ನೀಡಲು ಅಥವಾ ನಿಮ್ಮ ಮನೆಯನ್ನು ಅಲಂಕರಿ ಸಲು ಬೇಕಾದ ವಸ್ತುಗಳಿಗೆ ಇದೊಂದು ಉತ್ತಮ ಸ್ಥಳ. ಒಟ್ಟಾರೆ, ಒಂದೇ ಸೂರಿನಡಿ ನಿಮಗಿಷ್ಟವಾದ ಟಾಪ್ ಬ್ರ್ಯಾಂಡ್‌ಗಳ ಎಲ್ಲ ವಸ್ತುಗಳನ್ನು ಖರೀದಿಸಬಹುದು.

ಗ್ರಾಹಕ ಸೇವೆ: ಇಲ್ಲಿ ಖರೀದಿಸಿದ ವಸ್ತುಗಳಿಂದ ಸಂತೋಷವಾಗಿದ್ದೀರಿ ಎಂದು ಖಚಿತ ಪಡಿಸಿಕೊಳ್ಳಲು ಸಂಸ್ಥೆ ಗ್ರಾಹಕ ಸೇವೆಯನ್ನು ಆರಂಭಿಸಿದೆ.

2 ಗಂಟೆಗಳಲ್ಲಿ ವಿತರಣೆ: ಗ್ರಾಹಕರು ತಮಗೆ ಬೇಕಾದ ಉತ್ಪನ್ನಗಳನ್ನು ವೆಬ್‌ಸೈಟ್ *www.paiinternational.in* ಮೂಲಕವೂ ಖರೀದಿಸಬಹುದಾಗಿದೆ. ಖರೀದಿಸಿದ 2 ಗಂಟೆಯಲ್ಲಿ ಉತ್ಪನ್ನಗಳನ್ನು ತಲುಪಿಸುವ ಭರವಸೆ ಸಂಸ್ಥೆ ನೀಡುತ್ತದೆ.

ಇಎಂಐ ಆಯ್ಕೆಗಳು: ಪೈ ಇಂಟರ್‌ನ್ಯಾಷನಲ್ ಗ್ರಾಹಕರು ಖರೀದಿಸುವ ಉತ್ಪನ್ನಗಳಿಗೆ ಸಾಲದ ಸೌಲಭ್ಯವನ್ನು ಕಲ್ಪಿಸಿದೆ. Bajaj Finance, TVS Cr, Shopse ಹಣಕಾಸು ಸಂಸ್ಥೆಗಳೊಡನೆ ಒಡಂಬಡಿಕೆ ಮಾಡಿಕೊಂಡಿದ್ದು, ಗ್ರಾಹಕರಿಂದ ಕನಿಷ್ಠ ದಾಖಲೆಗಳನ್ನು ಪಡೆದು ಯಾವುದೇ ವೆಚ್ಚವಿಲ್ಲದೆ ಸಾಲ ನೀಡಲಿವೆ.

ಕ್ಯಾಷ್ ಬ್ಯಾಕ್ ಆಯ್ಕೆಗಳು: ಹೆಚ್‌ಡಿಎಫ್‌ಸಿ, ಐಸಿಐಸಿಐ, ಎಸ್‌ಬಿಐ, ಅಮೆಕ್ಸ್, ಒನ್ ಕಾರ್ಡ್, ಐಡಿಎಫ್‌ಸಿ ಹಾಗೂ ಇತರ ಮಾನ್ಯತೆ ಪಡೆದ ಬ್ಯಾಂಕ್‌ಗಳ ಕಾರ್ಡ್‌ಗಳ ಮೂಲಕ ಖರೀದಿಸುವ ಗ್ರಾಹಕರು ಪ್ರತಿಶತ 10 ರಷ್ಟು ರಿಯಾಯಿತಿ ಪಡೆಯಲಿದ್ದಾರೆ. ಇವರು ಕೂಡ ಬಹುಮಾನ ಸ್ಪರ್ಧೆಗಳಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

ಡಿಸೆಂಬರ್ 11, 2023 ರಂದು ಪೈ ಇಂಟರ್‌ನ್ಯಾಷನಲ್‌ನ ಎಲ್ಲ ಮಳಿಗೆಗಳಲ್ಲೂ ಮತ್ತು ಸಾಮಾಜಿಕ ಜಾಲತಾಣದಲ್ಲೂ ಮೆಗಾ ಹಬ್ಬದ ಮಾರಾಟ ವಿಜೇತರ ಪಟ್ಟಿಯನ್ನು ಪ್ರಕಟಿಸಲಿದೆ. ಎಲೆಕ್ಟ್ರಾನಿಕ್ಸ್ ಉಪಕರಣ ಖರೀದಿಸುವವರಿಗೆ ಇದೊಂದು ಉತ್ತಮ ಅವಕಾಶ. ಅಲ್ಲದೆ, ಬೆಸ್ಟ್ ಡೀಲ್‌ನಲ್ಲಿ ವ್ಯವಹಾರ ಮುಗಿಸುವ ಸ್ಥಳ ಪೈ ಇಂಟರ್‌ನ್ಯಾಷನಲ್ ಆಗಿದೆ. ಅಷ್ಟೇ ಅಲ್ಲದೆ, ಕಾರನ್ನು ಗೆಲ್ಲುವ ಅವಕಾಶ ಹಾಗೂ ಉಚಿತ ಶಾಪಿಂಗ್ ಅವಕಾಶ ಕೂಡ ಒದಗಿಸಿದೆ. ❖

